₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶುಕ್ರವಾರ 01.05.2026 ಸಂಪುಟ: 68 ಸಂಚಿಕೆ: 287 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿಗೆ ಪಡಿಕ್ಕಲ್ ಆಸರೆ

ಕನ್ನಡಿಗ ದೇವದತ್ ಪಡಿಕ್ಕಲ್ ಅವರ ಸಮಯೋಚಿತ ಬ್ಯಾಟಿಂಗ್ (40 ರನ್, 24 ಬಾಲ್) ನೆರವಿನಿಂದ ಗುರುವಾರ ಅಹಮದಾಬಾದ್‌ನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ವಿರುದ್ಧ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 155 ರನ್ ಕಲೆ ಹಾಕಿತು.

ಸೊಂಪಾದ ಪುಟಗಳು

ಮರದ ವಿಮಾನ ಅರ್ಧ ಮೈಲಿ ಹಾರಿದ ಕಥೆ!

ಶಿಶಿರಕಾಲ
ಶಿಶಿರ್ ಹೆಗಡೆ 6

ಎಲ್ಲೆಲ್ಲೂ ಎಲ್ ನಿನೋ ತಂದಿಟ್ಟಿರುವ ಎಡವಟ್ಟು!

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಜೀವನದಲ್ಲಿ ಆಗಾಗ ಪಾಠಗಳನ್ನು ಕಲಿಯುತ್ತಲೇ ಇರಬೇಕು. ಇಲ್ಲದಿದ್ದರೆ ಅದು ಪುನರಾವರ್ತನೆ ಆಗುತ್ತಲೇ ಇರುತ್ತದೆ. ನೀವು ಎಲ್ಲಿ ತನಕ ಕಲಿಯುವುದಿಲ್ಲವೋ, ಅಲ್ಲಿಯ ತನಕ ಅದು ಮರುಕಳಿಸುವುದು ತಪ್ಪುವುದಿಲ್ಲ.

ವಕ್ರತುಂಡೋಕ್ತಿ

ಮನುಷ್ಯನಿಗೆ ಅಸಲಿ ಸೌಂದರ್ಯದ ಭರವಸೆ ಸಿಗುವುದು ಜಿಮ್‌ನಲ್ಲಲ್ಲ. ಆಧಾರ್ ಕಾರ್ಡ್ ಫೋಟೋ ನೋಡಿದಾಗ, ನಾನು ಇದಕ್ಕಿಂತ 'ಚೆನ್ನಾಗಿದ್ದೀನಿ' ಅಂತ ಅಂದುಕೊಂಡಾಗ!

ಒಂದು ವಾರದೊಳಗೆ ಎತ್ತಿನಹೊಳೆ ಶುರು

ಬೆಂಗಳೂರು: ಮುಂದಿನ ವಾರದೊಳಗೆ ಎತ್ತಿನಹೊಳೆ ನೀರು ಪೂರೈಕೆ ಯೋಜನೆ ಕಾಮಗಾರಿ ಕೆಲಸ ಪ್ರಾರಂಭಿಸಿ ಎಂದು ಗುತ್ತಿಗೆದಾರರಿಗೆ ಸೂಚಿಸಿದ್ದೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಕೇಂದ್ರ ಪರಿಸರ ಇಲಾಖೆಗೆ ದಂಡ , ಮಿಟಿಗೇಷನ್ ಪ್ಲಾನ್ ಸೇರಿ 257 ಕೋಟಿ ರು. ಸಂದಾಯ ಮಾಡಲಾಗುತ್ತದೆ. ಮೇಕೆದಾಟು ಯೋಜನೆಗೆ 5300 ಎಕರೆ ಬದಲಿ ಜಾಗ ನೀಡಲಾಗುವುದು ಎಂದಿದ್ದಾರೆ.

ಮಳೆ ಇನ್ನೂ ತೀವ್ರ: ಯೆಲ್ಲೋ ಅಲರ್ಟ್

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆಯ ತಾಪ ತಾರಕಕ್ಕೇರಿರುವ ಬೆನ್ನಲ್ಲೇ, ವರುಣನ ಆಗಮನವಾಗಿದೆ. ಪೂರ್ವ ಮುಂಗಾರು ಚುರುಕುಗೊಂಡಿದೆ. ಹವಾಮಾನ ಇಲಾಖೆಯು ಮುಂದಿನ ಐದು ದಿನ ರಾಜ್ಯಾದ್ಯಂತ ಮಳೆ ಮುನ್ಸೂಚನೆ ನೀಡಿದ್ದು, ಯೆಲ್ಲೋ ಅಲರ್ಟ್ ನೀಡಿದೆ.

ತಿಮರೋಡಿ ಅರ್ಜಿ ವಜಾ

ಬೆಂಗಳೂರು: ಬೆಳ್ತಂಗಡಿಯಿಂದ ಗಡಿಪಾರು ಆದೇಶ ಎದುರಿಸುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿಗೆ ಮತ್ತೆ ಸೋಲಾಗಿದೆ. ರಾಯಚೂರಿನ ಮಾನ್ವಿ ತಾಲೂಕಿಗೆ ಗಡಿಪಾರು ಮಾಡಿದ್ದ ಆದೇಶವನ್ನು ಪ್ರಶ್ನಿಸಿ ತಿಮರೋಡಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಸಿದ್ದು ಬಿಟ್ಟರೆ ಅನ್ಯರಿಂದ ಒಳಮೀಸಲಿಗೆ ಪರಿಹಾರ ಸಾಧ್ಯವಿರಲಿಲ್ಲ

ಎ.ಎಸ್.ಪೊನ್ನಣ್ಣ, ಶಾಸಕರು, ವಿರಾಜಪೇಟೆ

ಸಾಮಾನ್ಯರು ಹಾಗೂ ಸಾಮಾನ್ಯ ವರ್ಗದವರು ಅಂದುಕೊಂಡಂತೆ ಒಳಮೀಸಲಾತಿ ಎಂದರೆ ಅದೇನು ದಲಿತರು ಸರಕಾರದ ಸೌಲಭ್ಯಕ್ಕಾಗಿ ಸಲ್ಲಿಸಿದ್ದ ಬರೀ ಹಕ್ಕೊತ್ತಾಯವಲ್ಲ. ಅದೊಂದು ದಲಿತರ ಒಳಗೇ ಉರಿಯುತ್ತಿದ್ದ ನಾಲ್ಕು ದಶಕಗಳ ಹಳೆಯ ಜ್ವಾಲೆ. ಸಮಾಜದ ಮುಖ್ಯ ವಾಹಿನಿಯಿಂದ ದೂರ ಉಳಿದಿದ್ದ ಪರಿಶಿಷ್ಟರಿಗೆ ಸಂವಿಧಾನ ಬದ್ಧವಾಗಿ ಮೀಸಲಾತಿ ಸೌಲಭ್ಯವಿದೆ. ಆದರೂ ಒಳಮೀಸಲಾತಿ ಎಂಬ ವಿಚಾರ ವಿವಾದಕ್ಕೆ ತಿರುಗಿ ಅನೇಕ ವರ್ಷಗಳಿಂದ ಆ ಸಮಾಜದ ಒಳಗೇ ಹೊತ್ತಿ ಉರಿಯುತ್ತಾ ಬಂದಿತ್ತು ಎನ್ನುವುದು ಬಹುಶಃ ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ಪರಿಶಿಷ್ಟರ ಆಂತರ್ಯದಲ್ಲೇ ಕೆಂಡದಂತೆ ಕಾರುತ್ತಿದ್ದ ಇಷ್ಟು ದೀರ್ಘಕಾಲದ ಈ ವಿವಾದವನ್ನು ಇಷ್ಟು ಪರಿಣಾಮಕಾರಿಯಾಗಿ, ಕಾನೂನಾತ್ಮಕವಾಗಿ ಪರಿಹಾರ ಮಾಡಬಹುದು ಎನ್ನುವುದು ಗೊತ್ತಾಗಿದ್ದು ಇತ್ತೀಚೆಗೆ. ಅದೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರಂತರವಾಗಿ ನಡೆಸುತ್ತಿದ್ದ ಒಳಮೀಸ ಲಾತಿ ಕುರಿತ ಸಭೆಗಳಿಗೆ ನನ್ನನ್ನು ಕರೆದಿದ್ದಾಗ, ಆ ಸಭೆಗಳಲ್ಲಿ ಎದುರಾಗಬಹುದಾಗಿದ್ದ ಕಾನೂನು ತೊಡಕುಗಳಿಗೆ ಸೂಕ್ತ ಸಲಹೆಗಳನ್ನು ಕೇಳಿದಾಗ. ಹೀಗೆ ಸಿದ್ದರಾಮಯ್ಯ ಅವರ ಸುದೀರ್ಘ ಕಾಲದ ಸಭೆಗಳನ್ನು ಗಮನಿಸಿದಾಗ, ಅವರು ಕೈಗೊಳ್ಳುತ್ತಿದ್ದ ನಿರ್ಧಾರಗಳು, ಅವುಗಳನ್ನು ಕಾನೂನಾತ್ಮಕವಾಗಿ ವಿಮರ್ಶೆ ಮಾಡುತ್ತಿದ್ದ ರೀತಿ ಯನ್ನು ಗಮನಿಸಿದಾಗ, ನನಗೆ ಗೊತ್ತಾಗಿದ್ದು ಏನೆಂದರೆ, ಇಂಥ ಐತಿಹಾಸಿಕ ಅಸಮಾಧಾನದ ಅಗ್ನಿಯನ್ನು, ಸಿದ್ದರಾಮಯ್ಯ ಅಲ್ಲದೆ ಬೇರೆ ಯಾರಿಂದಲೂ ಆರಿಸಲು ಸಾಧ್ಯವಾಗುತ್ತಿರಲಿಲ್ಲ ಎನ್ನುವುದು.

ಇದು ಅತಿಶಯೋಕ್ತಿಯಾದರೂ ವಾಸ್ತವ. ನಾಲ್ಕು ದಶಕಗಳ ಈ ಒಳ ಕಗ್ಗಂಟನ್ನು ಈತನಕ ರಾಜ್ಯವನ್ನು ಆಳಿ ಹೋಗಿರುವ ಯಾವ ಒಬ್ಬ ನಾಯಕರೂ ಬಿಡಿಸಲಿಲ್ಲ. ಅವರಿಗೆ ಅದು ಸಾಧ್ಯವೂ ಆಗಿರಲಿಲ್ಲ. ಹೀಗಿರುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯಂತ ಸುಲಭ ಹಾಗೂ ಸರಳ ವಿಧಾನದಲ್ಲಿ ಒಳಮೀಸಲಾತಿ ಹಂಚಿಕೆ ಮಾಡಿ ಯಾರಿಂದಲೂ ಆಗದಿರುವುದನ್ನು ಸಾಧಿಸಿ ತೋರಿಸಿದ್ದಾರೆ. ಅದಕ್ಕೊಂದು ಕಾಯ್ದೆ ರೂಪವನ್ನೂ ನೀಡಿ ಸಂವಿಧಾನಬದ್ಧಗೊಳಿಸುವ ಪ್ರಯತ್ನದಲ್ಲೂ ಯಶಸ್ವಿಯಾಗಿ ದೇಶದಲ್ಲೇ ಮಾದರಿ ಮುಖ್ಯಮಂತ್ರಿ ಎನಿಸಿಕೊಂಡಿದ್ದಾರೆ.

ಇದು ಅತಿಶಯೋಕ್ತಿಯಾದರೂ ವಾಸ್ತವ. ನಾಲ್ಕು ದಶಕಗಳ ಈ ಒಳಮೀಸಲು ಕಗ್ಗಂಟನ್ನು ಈತನಕ ರಾಜ್ಯವನ್ನು ಆಳಿ ಹೋಗಿರುವ ಯಾವ ಒಬ್ಬ ನಾಯಕರೂ ಬಿಡಿಸಲಿಲ್ಲ. ಅವರಿಗೆ ಅದು ಸಾಧ್ಯವೂ ಆಗಿರಲಿಲ್ಲ. ಹೀಗಿರುವಾಗ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಅತ್ಯಂತ ಸುಲಭ ಹಾಗೂ ಸರಳ ವಿಧಾನದಲ್ಲಿ ಒಳಮೀಸಲಾತಿ ಹಂಚಿಕೆ ಮಾಡಿ ಯಾರಿಂದಲೂ ಆಗದಿರುವುದನ್ನು ಸಾಧಿಸಿ ತೋರಿಸಿದ್ದಾರೆ. ಕಾಯ್ದೆ ರೂಪವನ್ನೂ ನೀಡಿ ಸಂವಿಧಾನಬದ್ಧಗೊಳಿಸಿದ್ದಾರೆ.

ಹೀಗಾಗಿ ಕಳೆದ ಅನೇಕ ಸರಕಾರಗಳಿಗೆ, ಅದರಲ್ಲೂ ಈಗಿನ ಕಾಂಗ್ರೆಸ್ ಸರಕಾರಕ್ಕೆ ಕಳೆದೆರಡು ವರ್ಷಗಳಿಂದ ದೊಡ್ಡ ತಲೆನೋವಾಗಿದ್ದ ಈ ಒಳಮೀಸಲಾತಿ ವಿವಾದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಲದೆ ಬೇರೆ ಯಾರಿಂದಲೂ ಪರಿಹಾರ ಸಿಗುತ್ತಿರಲಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ನಾನು ಗಮನಿಸಿದಂತೆ ಸಿದ್ದರಾಮಯ್ಯ ಅವರು, ಒಳಮೀಸಲಾತಿ ವಿವಾದವನ್ನು ಸರಕಾರದ ಯಾವುದೇ ಒಂದು ಸಾಮಾನ್ಯ ಸಮಸ್ಯೆಯಂತಾಗಲಿ, ಕಾರ್ಯಕ್ರಮದಂತಾಗಲಿ ನೋಡಲಿಲ್ಲ. ಬದಲಾಗಿ ತಮ್ಮ ಆಡಳಿತ ಅವಧಿಯಲ್ಲಿ ಸಾಮಾಜಿಕ ಬದ್ಧತೆ ಪ್ರದರ್ಶಿಸಲು ಹಾಗೂ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ಸಿಕ್ಕ ಬಹುದೊಡ್ಡ ಅವಕಾಶ ಎನ್ನುವಂತೆ ಸ್ವೀಕರಿಸಿದ್ದರು. ಅಷ್ಟೇ ಏಕೆ? ಪರಿಶಿಷ್ಟರಲ್ಲೇ ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿದ್ದು ಅವರಿಗೆ ನ್ಯಾಯ ಕೊಡಿಸಲೇಬೇಕೆಂದು ಶಪಥಗೈದವರಂತೆ ಹೋರಾಡಿದ್ದರು. ಈ ಮಾರ್ಗದಲ್ಲಿ ಎದುರಾದ ಅನೇಕ ಸವಾಲುಗಳನ್ನು ಎದುರಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಇನ್ನು ಒಳಮೀಸಲಾತಿ ಹೋರಾಟದ ಹಾದಿ ನೋಡುವುದಾದರೆ 2005ರಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಅವರ ನೇತೃತ್ವದ ಆಯೋಗ ರಚಿಸಲಾಗಿತ್ತು. ಅನಂತರ 2012ರಲ್ಲಿ ಡಿ.ವಿ. ಸದಾನಂದಗೌಡರ ನೇತೃತ್ವದ ಬಿಜೆಪಿ ಸರಕಾರ, ನ್ಯಾ. ಎ.ಜೆ.ಸದಾಶಿವ ಅವರಿಂದ ವರದಿ ಸ್ವೀಕರಿಸಿತ್ತು. ಆದರೆ ವರದಿಯಲ್ಲಿದ್ದ ಶಿಫಾರಸುಗಳನ್ನು ಜಾರಿಗೊಳಿಸುವ ಬದ್ಧತೆಯನ್ನೇ ತೋರಿಸಲಿಲ್ಲ. ನಂತರ ಬಂದ ಕಾಂಗ್ರೆಸ್ ಸರಕಾರದಲ್ಲಿ ವಿವಾದವನ್ನು ಬಗೆಹರಿಸಲು ಯತ್ನಿಸಿತ್ತಾದರೂ ಯಶಸ್ಸು ಆಗಿರಲಿಲ್ಲ.

ಇದಾದ ನಂತರ ಅಧಿಕಾರ ಹಿಡಿದ ಬಿಜೆಪಿ ಸರಕಾರವಾದರೂ ಒಳಮೀಸಲಾತಿಯನ್ನು ಜಾರಿಗೊಳಿಸಬಹುದಿತ್ತಲ್ಲವೇ? ಅದೂ ಮಾಡಲಿಲ್ಲ. ಅಂದಿನ ಬಿಜೆಪಿ ಸರಕಾರ ಒಳಮೀಸಲಾತಿಗೆ ಆಧಾರವಾಗಿದ್ದ ನ್ಯಾ.ಸದಾಶಿವ ಆಯೋಗ ವರದಿಯನ್ನೇ ತಿರಸ್ಕರಿಸಿ ಬಿಟ್ಟಿತ್ತು. ಬದಲಾಗಿ ಪರಿಶಿಷ್ಟಜಾತಿ ಮೀಸಲಾತಿ ಪ್ರಮಾಣವನ್ನು ಶೇ.15ರಿಂದ ಶೇ.17ಕ್ಕೆ ಏರಿಸಿದ್ದೇವೆ ಎಂದು ವಿಚಿತ್ರ ಸಮರ್ಥನೆ ನೀಡಿತ್ತು. ಆದರೆ ಅದಕ್ಕೆ ಕೇಂದ್ರ ಸರಕಾರದ ಒಪ್ಪಿಗೆ ಸಿಗಲಿಲ್ಲ.

ಆಗಲೇ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಅಂಶವನ್ನು ಸೇರಿಸಿ, ಇದನ್ನು ಜಾರಿಗೆ ಮುಂದಾಗಿತ್ತು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ ಕೆಲವೇ ದಿನಗಳಲ್ಲೇ ಒಳಮೀಸಲಾತಿ ಭರವಸೆ ಈಡೇರಿಕೆಗೆ ಪ್ರಯತ್ನ ಆರಂಭಿಸಿದ್ದರು.

ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರು ಅನೇಕ ಸಭೆ, ಸಮಾಲೋಚನೆಗಳು ಹಾಗೂ ಕೇಂದ್ರ ಸರಕಾರದ ಜೊತೆ ಪತ್ರದ ವ್ಯವಹಾರಗಳನ್ನು ನಡೆಸಿ ನಿರಂತರ ಪ್ರಯತ್ನದಲ್ಲಿ ತೊಡಗಿದ್ದರು. ಈ ಮಧ್ಯೆ, 2024ರ ಆಗಸ್ಟ್‌ನಲ್ಲಿ ಸುಪ್ರೀಂಕೋರ್ಟ್‌ನ ಸಂವಿಧಾನ ಪೀಠ, ಒಳಮೀಸಲು ನೀಡುವ ಸಂಬಂಧ ರಾಜ್ಯ ಸರಕಾರಗಳ ಅಧಿಕಾರ ಮತ್ತು ಜವಾಬ್ದಾರಿಯ ಮೇಲೆ ಬೆಳಕು ಚೆಲ್ಲುವ ಮಹತ್ವದ ತೀರ್ಪು ನೀಡಿದ್ದು ರಾಜ್ಯ ಸರಕಾರದ ಪ್ರಯತ್ನಕ್ಕೆ ಪುಷ್ಟಿ ಸಿಕ್ಕಿದಂತಾಯಿತು. → 4

ಸಿಎಂ ಬದಲಿಲ್ಲ ಖರ್ಗೆ ಸಂದೇಶ

ಬದಲಾವಣೆ ಆಸೆಯಲ್ಲಿದ್ದವರಿಗೆ ತೀವ್ರ ಆಘಾತ
ಸಿದ್ದು ಸದ್ಯ ನಿರಾಳ, ದಲಿತ ಸಿಎಂ ಕೂಗು ಸ್ತಬ್ಧ

ಬೆಂಗಳೂರು/ಕಲಬುರಗಿ: ರಾಜ್ಯದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಬದಲಾವಣೆ ಇಲ್ಲ, ನಾಯಕತ್ವ ಬದಲಾವಣೆಯ ಗೊಂದಲ ಶೀಘ್ರದಲ್ಲಿಯೇ ಬಗೆಹರಿಯಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಈ ಮೂಲಕ ಕಳೆದ ವರ್ಷದಿಂದ ಕೇಳಿಬರುತ್ತಿರುವ ನಾಯಕತ್ವ ಬದಲಾವಣೆ ವದಂತಿಗೆ ಹೈಕಮಾಂಡ್ ತೆರೆ ಎಳೆದಂತಾಗಿದೆ. ಖರ್ಗೆಯವರ ಹೇಳಿಕೆಯಿಂದಾಗಿ ಮೇ 15ರೊಳಗೆ ಸಿಎಂ ಬದಲಾವಣೆ ಆಗಲಿದೆ ಎಂದು ಹೇಳುತ್ತಿದ್ದವರ ಆಸೆಗೆ ತಣ್ಣೀರೆರಚಿದಂತಾಗಿದೆ.

ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಗೊಂದಲಗಳಿರುವುದು ನಿಜ, ಅದು ಶೀಘ್ರವೇ ಬಗೆಹರಿಯಲಿದೆ. ನಾನು ಸಿಎಂ ಆಗಬೇಕೆಂದು ಕೆಲವರು ಹೇಳುತ್ತಾರೆ, ನೀವು ಮಾಧ್ಯಮದವರು ಕೂಡ ಆಗಾಗ ಆ ವಿಷಯ ಬಗ್ಗೆ ಮಾತನಾಡುತ್ತಿರುತ್ತೀರಿ ಎಂದರು.

ಪ್ರಸ್ತುತ ರಾಜ್ಯದಲ್ಲಿ ಮುಖ್ಯಮಂತ್ರಿಗಳಿದ್ದಾರೆ, ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಸದ್ಯಕ್ಕೆ ಉದ್ಭವಿಸುವುದಿಲ್ಲ. ಒಂದು ವೇಳೆ ಅಂತಹ ಸಂದರ್ಭ ಬಂದರೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ. ಅದಕ್ಕೆ ಸಮಯ ಹಿಡಿಯುತ್ತದೆ, ಆ ಸಮಯ ಬಂದಾಗ ನೋಡೋಣ ಎಂದರು.

ಗೊಂದಲವೇ ಇಲ್ಲ. ನೀವು ಏನಿದ್ದರೂ ಮಲ್ಲಿಕಾರ್ಜುನ ಖರ್ಗೆ ಸಾಹೇಬರನ್ನು ಕೇಳಿ. ನಾಯಕತ್ವ ಬದಲಾವಣೆ ವಿಚಾರದಲ್ಲಿ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಇದು ಪಕ್ಷ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಅವರು ತೀರ್ಮಾನ ಮಾಡುತ್ತಾರೆ.
-ಡಿ.ಕೆ.ಶಿವಕುಮಾರ್, ಡಿಸಿಎಂ

ಫಲಿತಾಂಶದ ನಂತರ ಇದೆ ದೊಡ್ಡ ಸವಾಲು

ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಮುಕ್ತಾಯವಾಗಿದೆ. ಮೇ 4ರಂದು ಫಲಿತಾಂಶ ಹೊರ ಬೀಳಲಿದೆ. ಇನ್ನು ಮುಂದೆ ಕಾಂಗ್ರೆಸ್ ಹೈಕಮಾಂಡ್‌ಗೆ ರಾಜ್ಯ ರಾಜಕಾರಣಕ್ಕೆ ಸಂಬಂಧಪಟ್ಟಂತೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿಗೆ ರಾಜ್ಯದ ಕಗ್ಗಂಟು ಬಿಡಿಸಬೇಕಾದ ಒತ್ತಡವಿದೆ.

ಬಿಜೆಪಿ ನಾಯಕನ ಹತ್ಯೆ: ಐವರಿಗೆ ಮರಣದಂಡನೆ

ಕೊಪ್ಪಳ: ಇಡೀ ರಾಜ್ಯದಲ್ಲಿ ಸುದ್ದಿಯಾಗಿದ್ದ, ಗಂಗಾವತಿಯ ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಹತ್ಯೆ ಪ್ರಕರಣದಲ್ಲಿ 6 ಅಪರಾಧಿಗಳಿಗೆ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಮರಣದಂಡನೆ ಶಿಕ್ಷೆ ನೀಡಿದೆ. ಕಳೆದ ಏ.23 ರಂದು ವಿಚಾರಣೆ ಮುಗಿಸಿ, ಒಟ್ಟು 6 ಮಂದಿಯನ್ನು ದೋಷಿಗಳು ಎಂದು ತೀರ್ಪು ನೀಡಲಾಗಿತ್ತು. ಹತ್ಯೆಯ ಸೂತ್ರಧಾರ ಗಂಗಾವತಿಯ ಲಿಂಗರಾಜ ಕ್ಯಾಂಪ್ ರವಿ, ಇಂದಿರಾನಗರದ ವಿಜಯ ಮೈಲಾರಿ, ಎಚ್‌ಆರ್‌ಎಸ್ ಕಾಲೋನಿಯ ಧನರಾಜ, ಅಮರ ಭಗತಸಿಂಗ್ ನಗರದ ಭರತ ಭೀಮ ಹಾಗೂ ಸಲೀಂ, ಗುಂಡಮ್ಮ ಕ್ಯಾಂಪ್‌ನ ಗಂಗಾಧರ ಗೌಳಿಗಗೆ ಮರಣದಂಡನೆ ಶಿಕ್ಷೆ ಪ್ರಕಟಿಸಲಾಯಿತು. ತೀರ್ಪು ನೀಡುವ ಮೊದಲು ನ್ಯಾಯಾಧೀಶರು ಅಪರಾಧಿಗಳಿಗೆ ಛೀಮಾರಿ ಹಾಕಿದರು.

ಇರಾನ್ ಜತೆ ಸಂಧಾನ ಅಸಾಧ್ಯ: ಟ್ರಂಪ್ ಕಿಡಿ

ವಾಷಿಂಗ್ಟನ್: ಇರಾನ್ ತನ್ನ ಬಿಗಿಪಟ್ಟನ್ನು ಸಡಿಲಿಸದಿದ್ದರೆ ಯಾವುದೇ ಶಾಂತಿ ಸಂಧಾನ ಸಾಧ್ಯವಿಲ್ಲ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿದ್ದಾರೆ. ತಮ್ಮದೇ ಸಾಮಾಜಿಕ ಜಾಲತಾಣವಾದ 'ಟ್ರುಥ್'ನಲ್ಲಿ ಹೀಗೆ ಹೇಳಿದ್ದು, 'ಸಂಧಾನ ಸಭೆಗಳಲ್ಲಿ ಇರಾನ್ ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅಣ್ವಸ್ತ್ರಗಳ ಮೇಲಿನ ಚರ್ಚೆಗಳನ್ನು ಪಕ್ಕಕ್ಕಿಟ್ಟು ಹೇಗೆ ತಾನೇ ಶಾಂತಿ ಒಪ್ಪಂದಗಳಿಗೆ ಸಹಿ ಹಾಕಲು ಸಾಧ್ಯ ಎಂಬುದು ಅವರಿಗೆ ಅರ್ಥವಾಗುತ್ತಿಲ್ಲ. ಈ ಸಂದರ್ಭದಲ್ಲಿ ಇರಾನ್ ಸ್ವಲ್ಪ ಸ್ಮಾರ್ಟ್ ಆಗಿ ಯೋಚಿಸಲಿ' ಎಂದು ಹೇಳಿದ್ದಾರೆ. ಇದೇ ವೇಳೆ ಇರಾನ್ ಗುರುವಾರ ತನ್ನಲ್ಲಿರುವ ರಹಸ್ಯ ಶಸ್ತ್ರವೊಂದರ ಬಗ್ಗೆ ಸುಳಿವು ನೀಡಿದೆ. ಹೂಟ್ ಹೆಸರಿನ ಅದು ಸಮುದ್ರದಾಳದಲ್ಲಿ ಸಿಡಿ ಗುಂಡಿನಂತೆ ಸಂಚರಿಸಿ ಯುದ್ಧಹಡಗುಗಳನ್ನು ಸೀಳಿ ಹಾಕುತ್ತದೆ ಎನ್ನಲಾಗಿದೆ.

ಬೆಂ-ಹೈ ಹೈಸ್ಪೀಡ್ ರೈಲಿಗೆ ಸಂಪುಟ ಅಸ್ತು

ಸಂಪುಟ ಸಭೆಯಲ್ಲಿ ಕೇಂದ್ರದ ಯೋಜನೆಗೆ ಸಮ್ಮತಿ | ಬೆಂಗಳೂರು ಉಪನಗರಕ್ಕೆ 18133 ಕೋಟಿ ರು.

ಬೆಂಗಳೂರು: ಕೇಂದ್ರ ಸರಕಾರದ ಹೈದರಾಬಾದ್-ಬೆಂಗಳೂರು ನಡುವಿನ ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆ ಅನುಷ್ಠಾನಗೊಳಿಸಲು ರಾಜ್ಯ ಸರಕಾರ ತಾತ್ವಿಕ ಅನುಮೋದನೆ ನೀಡಿದೆ. ಇದರೊಂದಿಗೆ ಬೆಂಗಳೂರು ಸಮಗ್ರ ಉಪನಗರ ಯೋಜನೆ ಸಂಬಂಧ 18,133 ಕೋಟಿ ರು.ಗೆ ಅನುಮೋದನೆ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ದಕ್ಷಿಣದ ಎರಡು ಮಹಾನಗರಗಳನ್ನು ಒಗ್ಗೂಡಿಸಿ ಆರ್ಥಿಕ ಬೆಳವಣಿಗೆಗೆ ದೊಡ್ಡ ಮಟ್ಟದಲ್ಲಿ ಬೂಸ್ಟ್ ನೀಡುವ ಮಹತ್ವಾಕಾಂಕ್ಷೆಯ ಯೋಜನೆ ಅನುಷ್ಠಾನಗೊಳಿಸಲು ಸರಕಾರ ತಾತ್ವಿಕ ಅನುಮೋದನೆ ಕೊಟ್ಟಿದೆ.

ಕೇಂದ್ರ ಸರಕಾರ 2026-27ನೇ ಸಾಲಿನ ಬಜೆಟ್ ಮಂಡನೆ ವೇಳೆ ಬೆಂಗಳೂರಿಗೆ ಸಂಬಂಧಿಸಿದ ಹೈಸ್ಪೀಡ್ ರೈಲು ಕಾರಿಡಾರ್ ಕುರಿತು ಮಹತ್ವದ ಘೋಷಣೆ ಮಾಡಿತ್ತು. ಇದೀಗ ರಾಜ್ಯ ಸರಕಾರ ಈ ಮಹತ್ವಾಕಾಂಕ್ಷೆಯ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿದೆ. ಸುಮಾರು 607 ಕಿಮೀ ಉದ್ದದ ಹೈದರಾಬಾದ್-ಬೆಂಗಳೂರು ನಡುವಿನ ಹೈಸ್ಪೀಡ್ ರೈಲು ಕಾರಿಡಾರ್ ಭಾಗವಾಗಿ ರಾಜ್ಯದಲ್ಲಿ 15 ನಿಲ್ದಾಣಗಳು ಇರಲಿವೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು ಮಾಹಿತಿ ನೀಡಿದರು.

ಅಲ್ಪಸಂಖ್ಯಾತ ಸಮುದಾಯಕ್ಕೆ ರಾಜ್ಯ ಸರಕಾರ ಬಂಪರ್ ಕೊಡುಗೆ ನೀಡಿದ್ದು, 600 ಕೋಟಿ ರುಪಾಯಿ ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. 2026-27 ಮತ್ತು 2027-28ನೇ ಸಾಲಿಗೆ 600 ಕೋಟಿ ರುಪಾಯಿಗಳ ಕ್ರಿಯಾಯೋಜನೆ ರೂಪಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ.

ಅನುದಾನಗಳು

- ಬೆಂಗಳೂರು-ಬೀದರ್, ಬೆಂಗಳೂರು-ಕಲಬುರಗಿ-ಬೆಂಗಳೂರು ಮಾರ್ಗಗಳಲ್ಲಿ ವಿಮಾನ ಸೇವೆ ನಿರ್ವಹಣೆಗೆ 28.47 ಕೋ.ರು.
- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗಾಗಿ ಪುಸ್ತಕ, ಲೇಖನ ಸಾಮಗ್ರಿಗೆ 115.84 ಕೋಟಿ ರು. 80 ಹೊಸ ನಗರ ಸಾರಿಗೆ ಬಸ್ ಖರೀದಿಗೆ 32 ಕೋಟಿ ರು.
- ಕಲಬುರಗಿ ಕೆಕೆಆರ್‌ಡಿಬಿ ನಿಧಿ ಹಾಗೂ ತರಬೇತಿ ಕೇಂದ್ರಕ್ಕೆ 73.75 ಕೋ.ರು. ಬಿಳಿಜೋಳ ಖರೀದಿಗೆ 21.35 ಕೋ.ರು.

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರಮಿಕರ ಶ್ರಮವೇ ರಾಜ್ಯದ ಶಕ್ತಿ
ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ಹಾರ್ದಿಕ ಶುಭಾಶಯಗಳು - 1 ಮೇ 2026

- ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಕಾಯ್ದೆ ಜಾರಿ
- 43 ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರಗಳ ಸ್ಥಾಪನೆ
- ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ 42 ಶ್ರಮಿಕ ವಸತಿ ಶಾಲೆಗಳ ನಿರ್ಮಾಣ
- ಕರ್ನಾಟಕ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಕ್ಷೇಮಾಭಿವೃದ್ಧಿ ಕಾಯ್ದೆ ಹಾಗೂ ಮಂಡಳಿಯ ರಚನೆ ಹಾಗೂ ಯೋಜನಾ ಸೌಲಭ್ಯಗಳು
- ಆಶಾದೀಪ ಯೋಜನೆ - ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ
- ಸಂಘಟಿತ ಕಾರ್ಮಿಕರಿಗಾಗಿ ಕರ್ನಾಟಕ ಕಡ್ಡಾಯ ಉಪಧನ ವಿಮಾ ನಿಯಮಗಳು ಜಾರಿ
- ಸಂಘಟಿತ ಕಾರ್ಮಿಕರಿಗಾಗಿ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ಕರ್ನಾಟಕ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ಜಾರಿ
- ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರಿಗಾಗಿ ವಿಮಾ ಯೋಜನೆ
- 100 ಹೈಟೆಕ್ ಸಂಚಾರಿ ಆರೋಗ್ಯ ಘಟಕಗಳ ಲೋಕಾರ್ಪಣೆ
- ಇಎಸ್‌ಐ ಆಸ್ಪತ್ರೆಗಳ ಉನ್ನತೀಕರಣ
- ಗಿಗ್ ಕಾರ್ಮಿಕರಿಗಾಗಿ ಕಲ್ಯಾಣ ವಿಧೇಯಕ ಹಾಗೂ ಮಂಡಳಿ ರಚನೆ ಹಾಗೂ ವಿಮಾ ಯೋಜನೆ ಸೌಲಭ್ಯ
- ವಲಸೆ ಕಟ್ಟಡ ಕಾರ್ಮಿಕರಿಗಾಗಿ ರಾಜ್ಯಾದ್ಯಂತ ವಸತಿ ಸಮುಚ್ಚಯಗಳ ನಿರ್ಮಾಣ
- ನಕಲಿ ಮತ್ತು ಅನರ್ಹ ಕಾರ್ಮಿಕರ ಕಾರ್ಡ್‌ಗಳ ರದ್ಧತಿ
- ಹೊರಗುತ್ತಿಗೆ ಕಾರ್ಮಿಕರ ನೇಮಕಕ್ಕೆ ರಚನಾತ್ಮಕ ಕ್ರಮ
- ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಣೆ
- ಕಟ್ಟಡ ಕಾರ್ಮಿಕರ ಅಪಘಾತ ಪರಿಹಾರ ಧನ ಏರಿಕೆ
- 102 ವಿವಿಧ ವರ್ಗದ ಅಸಂಘಟಿತ ಕಾರ್ಮಿಕರಿಗಾಗಿ "ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆ" ಜಾರಿ
- ಸುಂಕ ಸಂಗ್ರಹಣೆಗಾಗಿ ಸಮಗ್ರ ತಂತ್ರಾಂಶದ ಅಭಿವೃದ್ಧಿ
- ಕರ್ನಾಟಕ ಕಟ್ಟಡ ಕಾರ್ಮಿಕರ ಮಂಡಳಿಯಲ್ಲಿ ಖಾಲಿಯಿದ್ದ ವಿವಿಧ ವೃಂದದ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಾನುಸಾರ ಸಿಬ್ಬಂದಿಗಳ ನೇಮಕಾತಿ
- ಬಾಲ ಕಾರ್ಮಿಕರು ಮತ್ತು ಕಿಶೋರ ಕಾರ್ಮಿಕರ ರಕ್ಷಣೆ ಹಾಗೂ ಪುನರ್ವಸತಿ

ಶ್ರಮೇವ ಜಯತೇ
ಕಾರ್ಮಿಕ ಸಹಾಯವಾಣಿ - 155214

ಶ್ರೀಮತಿ ಸಲ್ಮಾ ಕೆ. ಫಹೀಮ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ
ಡಾ. ಎಚ್.ಎನ್. ಗೋಪಾಲಕೃಷ್ಣ, ಭಾ.ಆ.ಸೇ ಆಯುಕ್ತರು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀ ರವಿ ಡಿ. ಚನ್ನಣ್ಣವರ್, ಭಾ.ಪೊ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು, ಕರ್ನಾಟಕ ಸರ್ಕಾರ

ಆಸ್ಪತ್ರೆ ಮುಖ್ಯಸ್ಥರಿಗೆ ನೋಟಿಸ್, ಲೋಕಾ ಪ್ರಕರಣ ದಾಖಲು
ಪ್ರಕರಣದ ತನಿಖೆಗೆ ಆದೇಶ, 7 ದಿನಗಳೊಳಗೆ ವರದಿಗೆ ಸೂಚನೆ
ಬೌರಿಂಗ್ ಆಸ್ಪತ್ರೆ ದುರಂತ: ಎಇ ಅಮಾನತು

ಬೆಂಗಳೂರು: ಇಲ್ಲಿನ ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿದು ಬುಧವಾರ ಸಂಭವಿಸಿದ ಭೀಕರ ದುರಂತದ ಹಿನ್ನೆಲೆಯಲ್ಲಿ ಕರ್ತವ್ಯಲೋಪದ ಆರೋಪದ ಮೇಲೆ ಕಾರ್ಯಪಾಲಕ ಎಂಜಿನಿಯರ್‌ರನ್ನು ಅಮಾನತು ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಸಂಬಂಧ ಆದೇಶ ಹೊರಡಿಸಿದ್ದಾರೆ. ದುರಂತವನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಳೆಯಿಂದ ಸಂಭವಿಸಿದ ಬೇರೆಬೇರೆ ದುರಂತಗಳಲ್ಲಿ ಒಟ್ಟು ಮೃತರ ಸಂಖ್ಯೆ 10ಕ್ಕೇರಿದೆ. ಈ ಪ್ರಕರಣವನ್ನು ಇನ್ನು 7 ದಿನಗಳೊಳಗೆ ತನಿಖೆ ನಡೆಸಿ ವರದಿ ನೀಡುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ.

ಮಳೆ ಅನಾಹುತದ ಹಿನ್ನೆಲೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ಉನ್ನತಮಟ್ಟದ ಸಭೆ ನಡೆಸಿದ ಅವರು, ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಆಸ್ಪತ್ರೆಯ ಮುಖ್ಯಸ್ಥರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡುವಂತೆ ಹಿರಿಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಸಿಎಂ, ಜಿಬಿಎ ಆಯುಕ್ತರು ಹಾಗೂ ಉನ್ನತ ಅಧಿಕಾರಿಗಳ ಬೆವರಿಳಿಸಿದರು. → 4

ಇನ್ನು ಮುಂದೆ ಅಪಾಯಕಾರಿ ಗೋಡೆಗಳ ಪಕ್ಕ ಹಾಗೂ ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ನಡೆಸಲು ಅವಕಾಶ ನೀಡುವುದಿಲ್ಲ. ಈ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳಲಾಗುವುದು. ಸಾರ್ವಜನಿಕರ ಸುರಕ್ಷತೆ ನಮಗೆ ಮುಖ್ಯ. ಮಳೆಯಿಂದ ಹಾನಿಯಾಗಿರುವ ಎಲ್ಲ ಪ್ರದೇಶಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು.
-ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಸಮಾಚಾರ ಸಣ್ಣದಲ್ಲ

ಬಿಸಿಲಿನ ತೀವ್ರತೆ ಹೆಚ್ಚಳ: ಅನಾವಶ್ಯಕ ಸಂಚಾರ ಬೇಡ

ರಾಯಬಾಗ: ಕಳೆದ ಕೆಲವು ದಿನಗಳಿಂದ ತಾಪಮಾನದಲ್ಲಿ ಗಣನೀಯ ಏರಿಕೆಯಾಗಿದ್ದು, ಜನಜೀವನದ ಮೇಲೆ ಅದರ ಪರಿಣಾಮ ಕಾಣಿಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ತಹಸೀಲ್ದಾರ್ ಮಹಾದೇವ ಸನಮೂರಿ ಅವರು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದು, ಮಧ್ಯಾಹ್ನ ಸಮಯದಲ್ಲಿ ಅನಾವಶ್ಯಕವಾಗಿ ಹೊರಗಡೆ ಹೋಗುವುದನ್ನು ತಪ್ಪಿಸುವಂತೆ ಸೂಚಿಸಿದ್ದಾರೆ. ಬಿಸಿಲಿನ ತೀವ್ರತೆಯಿಂದ ಉಷ್ಣಾಘಾತದ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದ್ದು, ಹಿರಿಯರು, ಮಕ್ಕಳು ಹಾಗೂ ಆರೋಗ್ಯ ಸಮಸ್ಯೆಗಳಿರುವವರು ವಿಶೇಷ ಜಾಗ್ರತೆ ವಹಿಸಬೇಕು ಎಂದು ತಿಳಿಸಿದ್ದಾರೆ. ಹೆಚ್ಚಿನ ನೀರು ಸೇವನೆ, ಹಗುರವಾದ ಉಡುಪು ಧರಣೆ ಮತ್ತು ಸೂರ್ಯನ ತಾಪದಿಂದ ರಕ್ಷಣೆ ಪಡೆಯುವುದು ಅತ್ಯಗತ್ಯ. ಸಾರ್ವಜನಿಕರು ಅಗತ್ಯವಿದ್ದಾಗ ಮಾತ್ರ ಹೊರಗೆ ಹೋಗಿ, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಅಥಣಿ ಮಿಲಿಟರಿ ಬಾಲಕರ ವಸತಿ ನಿಲಯಕ್ಕೆ ಅರ್ಜಿ

ಬೆಳಗಾವಿ: ಸನ್ 2026-2027ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅಥಣಿ ಮಿಲಿಟರಿ ಬಾಲಕರ ವಸತಿ ನಿಲಯ ಪ್ರವೇಶಕ್ಕಾಗಿ ಯುದ್ಧ ಸಂತ್ರಸ್ಥರು ಮತ್ತು ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಅಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಅಥಣಿ ನಗರದ ಶೈಕ್ಷಣಿಕ ಸಂಸ್ಥೆಗಳಲ್ಲಿ 5ನೇ ತರಗತಿಯಿಂದ ಪಿಯುಸಿ, ಡಿಪ್ಲೋಮಾ ಹಾಗೂ ಐಟಿಐದಲ್ಲಿ ವ್ಯಾಸಾಂಗಕ್ಕಾಗಿ ಪ್ರವೇಶವನ್ನು ಪಡೆದಿರಬೇಕು. ನಿಲಯದಲ್ಲಿ ಊಟ, ಉಪಹಾರ ಹಾಗೂ ವಸತಿ ಉಚಿತವಾಗಿರುತ್ತದೆ. ಆಸಕ್ತ ಮಾಜಿ ಸೈನಿಕರು ಹಾಗೂ ಯುದ್ಧ ಸಂತ್ರಸ್ಥರು ತಮ್ಮ ಮಕ್ಕಳ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿ ನಮೂನೆಯನ್ನು ಅಥಣಿ ಮಿಲಿಟರಿ ಬಾಲಕರ ವಸತಿ ನಿಲಯ ಅಧೀಕ್ಷಕರ ಕಾರ್ಯಾಲಯದಿಂದ ಉಚಿತವಾಗಿ ಪಡೆಯಬಹುದಾಗಿದೆ. ಮೇ.10, 2026 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರ ಕಾರ್ಯಾಲಯಕ್ಕೆ ವಯಕ್ತಿಕವಾಗಿ ಭೇಟಿಯಾಗಿ ಅಥವಾ ನಿಲಯದ ಅಧೀಕ್ಷಕರ ಮೊಬೈಲ ಸಂಖ್ಯೆ 9592139991 ಯನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಿಕೆಟ್ ರಹಿತ ಪ್ರಯಾಣ ದಂಡಕ್ಕೆ ಆಹ್ವಾನ

ಬೆಳಗಾವಿ: ಸಾರ್ವಜನಿಕ ಪ್ರಯಾಣಿಕರು ಪ್ರತಿದಿನ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಮ್ಮ ತಮ್ಮ ಕರ್ತವ್ಯಕ್ಕಾಗಿ ಸುರಕ್ಷಿತವಾಗಿ ಸಂಚರಿಸಲು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುತ್ತಿದ್ದು (ಕರ್ನಾಟಕ ರಾಜ್ಯದ ಆಧಾರ ಕಾರ್ಡ ಹೊಂದಿರುವ ಮಹಿಳಾ ಪ್ರಯಾಣಿಕರನ್ನು ಆಧಾರ ಕಾರ್ಡ ನಿರ್ವಾಹಕರಿಗೆ ತೋರಿಸಿ ಶೂನ್ಯ ಟಿಕೇಟ್ ಪಡೆಯುವುದು) ಇದರೊಂದಿಗೆ ಪ್ರತಿಯೊಬ್ಬ ಪ್ರಯಾಣಿಕರು ತಮ್ಮ ಪ್ರಯಾಣದ ನಿಗದಿತ ಟಿಕೇಟ್ ದರದ ಮೊತ್ತವನ್ನು ಕರ್ತವ್ಯ ನಿರತ ನಿರ್ವಾಹಕರಿಗೆ ನೀಡಿ ಟಿಕೇಟ್ ಕೇಳಿ ಪಡೆದು ಪ್ರಯಾಣಿಸುವುದು ಅವರ ಜವಾಬ್ದಾರಿಯೊಂದಿಗೆ ಸಂಸ್ಥೆಯ ನಿಯಮಾವಳಿ ಇರುತ್ತದೆ. ಎಲ್ಲ ಸಾರ್ಜಜನಿಕ ಪ್ರಯಾಣಿಕರು ನಿಗದಿತ ಟಿಕೇಟ್ ಪಡೆದು ಪ್ರಯಾಣಿಸುತ್ತಿರುವ/ನಿರ್ವಾಹಕರು ಎಲ್ಲ ಪ್ರಯಾಣಿಕರಿಗೆ ಟಿಕೇಟ್ ನೀಡಿರುವ ಬಗ್ಗೆ ತನಿಖೆಗಾಗಿ ಸಂಸ್ಥೆಯ ವತಿಯಿಂದ ತನಿಖಾ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.

ಅಪಘಾತ : ಅಪರಾಧಿಗೆ ಶಿಕ್ಷೆ

ಬೆಳಗಾವಿ: ನಗರದ ಕೆ.ಪಿ.ಟಿ.ಸಿ.ಎಲ್ ಸಭಾಭವನದ ಹತ್ತಿರ 2016ರಲ್ಲಿ ಕಾರು ಡಿಕ್ಕಿ ಹೊಡೆಸಿ ಬಾಲಕಿ ಸಾವಿಗೆ ಕಾರಣವಾದ ಅಪರಾಧಿ ಡಾ.ಮೊಹಮ್ಮದ್ ಸಲ್ಮಾನ್ ಸಲೀಂ ಪಟೇಲಗೆ ಇಲ್ಲಿನ 2ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ನ್ಯಾಯಾದೀಶ ರಾದ ಗುರುಪ್ರಸಾದ ಅವರು 6 ತಿಂಗಳು ಜೈಲು ಶಿಕ್ಷೆ ಹಾಗೂ ಆರು ಸಾವಿರ ದಂಡ ವಿಧಿಸಿ ತೀರ್ಪು ನೀಡಿರುತ್ತಾರೆ. ಮಹಾಂತೇಶ ಚಳಕೊಪ್ಪ ವಾದ ಮಂಡಿಸಿದ್ದರು.

ಅಗಲಿದ ಜೀವ

ಶಕುಂತಲಾ ದೇವಮಾನೆ

ರಾಯಬಾಗ: ತಾಲೂಕಿನ ಬೆಕ್ಕೇರಿ ಗ್ರಾಮದ ಶಕುಂತಲಾ ದೇವಮಾನೆ(70) ನಿಧನರಾಗಿದ್ದಾರೆ. ಇವರಿಗೆ ಪತಿ ಬಂಧು ಬಳಗ ಇದ್ದಾರೆ.

{ಈಶ್ವರ್ ಬಿ.ಖಂಡ್ರೆ } ಅರಣ್ಯ ಸಚಿವ

ಒಂದು ಕಾಲದಲ್ಲಿ 'ನಿವೃತ್ತರ ಸ್ವರ್ಗ' ಹಾಗೂ 'ಹವಾನಿಯಂತ್ರಿತ ನಗರ' ಎಂದು ಖ್ಯಾತಿ ಪಡೆದಿದ್ದ ಬೆಂಗಳೂರು, ಈಗ ಕಾಂಕ್ರೀಟ್ ಜಂಗಲ್ ಆಗಿ ಮಾರ್ಪಡುತ್ತಿರುವುದು ಆತಂಕಕಾರಿ ವಿಷಯ. ಬೆಂಗಳೂರು ಇದೇ ರೀತಿಯ ಬೆಳವಣಿಗೆ ಹಾಗೂ ವಾಹನ ದಟ್ಟಣೆ ದಿನೇ ದಿನೇ ಹೆಚ್ಚಿಸಿಕೊಂಡಲ್ಲಿ ನವ ದೆಹಲಿಯಂತೆ 'ಗ್ಯಾಸ್ ಚೇಂಬರ್'' ಆಗುವುದನ್ನು ತಪ್ಪಿಸಲು ಹಸಿರು ಹೊದಿಕೆ ಹೆಚ್ಚಿಸುವ ತುರ್ತು ಕ್ರಮದ ಅಗತ್ಯವಿದೆ.

ಆರೋಗ್ಯ ಸಂಘದ ಪ್ರಗತಿ ಪರಿಶೀಲನಾ ಸಭೆ | : ಸಿಇಒ ರಾಹುಲ್ ಶಿಂಧೆ ಸೂಚನೆ

ಔಷಧಗಳು ಕೊರತೆಯಾಗದಿರಲಿ

ಬೆಳಗಾವಿ: ಜಿಲ್ಲಾ ಮತ್ತು ತಾಲೂಕು ಮಟ್ಟದ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಕಾರ್ಯಕ್ರಮದಡಿ ಎಲ್ಲ ಸಂಸ್ಥೆಗಳಲ್ಲಿ ಅನುದಾನ ಲಭ್ಯವಿದ್ದು, ಅದರಂತೆ ಜಿಲ್ಲೆಯಲ್ಲಿ ಔಷಧಿಗಳ ಕೊರತೆ ಇರುವುದಿಲ್ಲ, ಖರೀದಿಸಿದ ಔಷಧಿಗಳನ್ನು ಇ-ಪೋರ್ಟಲ್ ಮೂಲಕ ಸರಿಯಾಗಿ ದಾಖಲಿಸಿ ಹಾಗೂ ಸಾರ್ವಜನಿಕರಿಗೆ ಔಷಧಿಯ ಕೊರತೆ ಆಗದಂತೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಜಿಲ್ಲಾ ಪಂಚಾಯತಿ ಸಿಇಒ ರಾಹುಲ್ ಶಿಂಧೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಬುಧವಾರ ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ದಡಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಆರೋಗ್ಯ ಸಂಘದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್. ಬಿ. ಎಸ್.ಕೆ ತಂಡ(ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ) ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಪ್ರತಿ 2 ತಿಂಗಳಿಗೊಮ್ಮೆ ತಮ್ಮ ತಾಲೂಕಿನಲ್ಲಿರುವ ಎಲ್ಲ ವಸತಿ ನಿಲಯಗಳಿಗೆ ಭೇಟಿ ನೀಡಿ, ಕುಡಿಯುವ ನೀರಿನ ಮಾದರಿ ಪರೀಕ್ಷೆ ಮತ್ತು ಮಕ್ಕಳ ಮಾನಸಿಕ ಆರೋಗ್ಯ ಕುರಿತು ತಪಾಸಣೆ ಮತ್ತು ಅರಿವು ಮೂಡಿಸಿ, ವಸತಿ ನೀಲಯಗಳಿಗೆ ಭೇಟಿ ನೀಡಿದ ಬಗ್ಗೆ ಸಂದರ್ಶಕರ ಪುಸ್ತಕ ಮತ್ತು ತಮ್ಮ ದೈನಂದಿನ ದಿನಚರಿ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಸದರಿ ವಿಷಯದ ಕುರಿತು ಜಿಲ್ಲಾ ಸಮೀಕ್ಷಣಾಧಿಕಾರಿಗಳಿಗೆ ವರದಿ ಸಲ್ಲಿಸಲು ಮಾನ್ಯರು ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಬುಧವಾರ ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ದಡಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಆರೋಗ್ಯ ಸಂಘದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಪಂಚಾಯತಿ ಸಿಇಒ ರಾಹುಲ್ ಶಿಂಧೆ ಮಾತನಾಡಿದರು.

ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದಡಿಯಲ್ಲಿ ರಾಮದುರ್ಗ, ಸವದತ್ತಿ ಹಾಗೂ ಹುಕ್ಕೇರಿ ತಾಲೂಕುಗಳಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯ ಪ್ರಗತಿ ಕಡಿಮೆ ದಾಖಲಾಗಿದ್ದು, ಕಾರಣ ಖಾಸಗಿ ಸಂಘ-ಸಂಸ್ಥೆಗಳಿಗೆ ಕಡಿಮೆ ಗುರಿ ನಿಗಡಿಪಡಿಸಿರುವುದರಿಂದ ಮತ್ತು ಸದರಿ ತಾಲೂಕಿನಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ಮಾಡುವ ಆಸ್ಪತ್ರೆಗಳ ಇಲ್ಲದೇ ಇರುವುದರಿಂದ ಕಡಿಮೆ ಪ್ರಗತಿ ದಾಖಲಾತಿ ಆಗಿರುತ್ತದೆ.

-ರಾಹುಲ್ ಶಿಂಧೆ,
ಜಿಲ್ಲಾ ಪಂಚಾಯತಿ ಸಿಇಒ

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಐ.ಪಿ ಗಡಾದ, ಚಿಕ್ಕೋಡಿ ಅಪರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್.ಎಸ್.ಗಡೇದ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಶ್ರೀಕಾಂತ ಸುಣಧೋಳಿ, ಜಿಲ್ಲಾ ಆಸ್ಪತ್ರೆ ಶಸ್ತ್ರ ಚಿಕಿತ್ಸಕರಾದ ಡಾ. ಜಗದೀಶ ಗಾಣಿಗಿ, ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಡಾ. ಸಂಜಯ ದೊಡಮನಿ, ಡಾ. ಎಸ್. ಎಸ್. ಸಾಯನ್ನವರ, ಡಾ. ವಿಶ್ವನಾಥ ಭೋವಿ, ಡಾ. ಚಾಂದನಿ ದೇವಡಿ, ಡಾ. ವಿವೇಕ ಹೊನ್ನಳ್ಳಿ ಹಾಗೂ ಜಿಲ್ಲೆಯ ಎಲ್ಲ ತಾಲೂಕು ಆರೋಗ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸಭೆಯಲ್ಲಿ ಉಪಸ್ಥಿತರಿದ್ದರು.

ಖಾಲಿ ಹುದ್ದೆ ಭರ್ತಿಗೆ ಸೂಚನೆ

ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಖಾಲಿ ಇರುವ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು 3 ದಿನಗಳ ಒಳಗಾಗಿ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತಿ ಸಿಇಒ ರಾಹುಲ್ ಶಿಂಧೆ.

ಕ್ರೆಡಿಟ್ ಸಹಕಾರಿಗೆ 1 ಕೋಟಿ ಲಾಭ

ಇಂಗಳಿ ಗ್ರಾಮದ ಸಹಕಾರಿಯ ಮುಖ್ಯ ಶಾಖೆಯಲ್ಲಿ ಆಡಳಿತ ಮಂಡಳಿಯ ಸದಸ್ಯರ ಸಭೆಯಲ್ಲಿ ಅಪ್ಪಾಸಾಬ ಜತ್ರಾಟೆ ಮಾತನಾಡಿದರು.

ಕಾಗವಾಡ: ಸಮೀಪದ ಚಿಕ್ಕೋಡಿ ತಾಲೂಕಿನ ಇಂಗಳಿ ಗ್ರಾಮದ ಜೈ ಹುನಮಾನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು ಪ್ರಸಕ್ತ ಆರ್ಥಿಕ ವರ್ಷದ ಕೊನೆಯಲ್ಲಿ ರು. 1 ಕೋಟಿ 57 ಸಾವಿರದಾ 273 ನಿವ್ವಳ ಲಾಭ ಗಳಿಸಿದೆ ಎಂದು ಸಹಕಾರಿಯ ಅಧ್ಯಕ್ಷ ಅಪ್ಪಾಸಾಬ ಜತ್ರಾಟೆ ತಿಳಿಸಿದ್ದಾರೆ.

ಏ.29 ರಂದು ಇಂಗಳಿ ಗ್ರಾಮದ ಸಹಕಾರಿಯ ಮುಖ್ಯ ಶಾಖೆಯಲ್ಲಿ ಆಡಳಿತ ಮಂಡಳಿಯ ಸದಸ್ಯರ ಸಭೆಯಲ್ಲಿ ಮಾತನಾಡುತ್ತಿದ್ದರು.

ಸಹಕಾರಿಯ ಸಿಇಒ ಜಿ.ಬಿ. ಪಾಟೀಲ್ ಮಾತನಾಡಿ, 31 ಮಾರ್ಚ್ 2026 ರ ಕೊನೆಗೆ ಸಹಕಾರಿಯಲ್ಲಿ ಒಟ್ಟು 1755 ಸದಸ್ಯರಿದ್ದು, 38 ಕೋಟಿ 88 ಲಕ್ಷ 74 ಸಾವಿರದಾ 561 ರು. ಠೇವಣಿ ಸಂಗ್ರಹಿಸಿ, ಸಂಘದ ಸದಸ್ಯರಿಗೆ 28 ಕೋಟಿ 9 ಲಕ್ಷ 35 ಸಾವಿರದಾ 622 ರು. ಸಾಲ ವಿತರಿಸಿದೆ. ಇನ್ನೂ ಸಂಘವು ಒಟ್ಟು 24 ಲಕ್ಷ 19 ಸಾವಿರದಾ 300 ರು. ಶೇರ್ ಬಂಡವಾಳದೊಂದಿಗೆ 10 ಕೋಟಿ 22 ಲಕ್ಷ 16 ಸಾವಿರ ರು. ಗುಂತಾವಣೆಗಳನ್ನು ಹೊಂದಿದೆ. ಅದರಂತೆ ಸಂಘವು 1 ಕೋಟಿ 40 ಲಕ್ಷ 82 ಸಾವಿರ ರು. ಮೌಲ್ಯದ ಸ್ಥಿರಾಸ್ತಿ ಹೊಂದಿದೆ. ಈಗಾಗಲೇ ಸಹಕಾರಿಯು ಹೊಸ ಇಂಗಳಿ, ಶಿರಗುಪ್ಪಿ ಮತ್ತು ಅಥಣಿಗಳಲ್ಲಿ ಶಾಖೆಗಳನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ಕಾಗವಾಡ್ ತಾಲೂಕಿನ ಮಂಗಸೂಳಿಯಲ್ಲಿ ಮತ್ತು ರಾಯಬಾಗ್ ತಾಲೂಕಿನ ಜಲಾಲಪೂರ್ ಗ್ರಾಮಗಳಲ್ಲಿ ನೂತನ ಶಾಖೆಗಳನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಈ ಸಮಯದಲ್ಲಿ ಸಹಕಾರಿಯ ಉಪಾಧ್ಯಕ್ಷ ಅರುಣ ಪಾಟೋಳೆ, ಸದಸ್ಯರಾದ ಶ್ರೀಪತಿ ಜಾಧವ, ಶಂಕರ ಪವಾರ, ಮೋಹನ ಬಾಮನೆ, ಸುಕುಮಾರ ಶಿಂಧೆ, ಸತೀಶ ಬನೆ, ಪರಶುರಾಮ ಮಾನೆ, ನಂದಕುಮಾರ ಘಾಟಗೆ, ಬಾಳಾಸಾಬ ಅವಟಿ, ರಾಮಗೊಂಡಾ ಅಲತಗೆ, ರವಿ ಶಿರಹಟ್ಟಿ, ಪುಷ್ಪಾ ಚೌಗುಲೆ, ಮಾಲುತಾಯಿ ಧಾಬಡೆ, ಕಲ್ಲಪ್ಪಾ ಕಾಂಬಳೆ ಇದ್ದರು.

ಬಿಸಿಲಿನ ಶಾಖಾಘಾತದಿಂದ ಪಾರಾಗಲು ಟಿಪ್ಸ್ ಪಾಲಿಸಿ

ಗೋಕಾಕ: ಮೇ ತಿಂಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಲಿರುವ ಹಿನ್ನಲೆ ಸಾರ್ವಜನಿಕರು ಮಧ್ಯಾಹ್ನ 12ಘಂಟೆಯಿಂದ 3 ಘಂಟೆವರೆಗೆ ಮನೆಯಿಂದ ಹೊರಗಡೆ ಹೋಗುವದನ್ನು ತಪ್ಪಿಸಬೇಕು ಎಂದು ತಹಸೀಲ್ದಾರ ಡಾ.ಮೋಹನ ಭಸ್ಮೆ ಹೇಳಿದರು.

ಗುರುವಾರದಂದು ನಗರದಲ್ಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಹೊರಗಡೆ ಗರಿಷ್ಠ ತಾಪಮಾನ ಇರುವುದರಿಂದ ಬಿಸಿಲಿನಲ್ಲಿ ಏನಾದರು ತೊಂದರೆ ಉಂಟಾದರೆ, ಶಾಖಾಘಾತ ಉಂಟಾದರೆ ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಬೇಕು. ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕು. ಬಿಸಿಲಿನಲ್ಲಿ ಹೋಗುವಾಗ ರಕ್ಷಣೆಗಾಗಿ ಕನ್ನಡಕ, ಛತ್ರಿ, ಟೋಪಿ ಬಳಸಬೇಕು. ಹೊರಗಿನ ಉಷ್ಣತೆ ಅಧಿಕವಾಗಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸವುದು ಮಧ್ಯಾಹ್ನ 12 ರಿಂದ 3 ಘಂಟೆಯವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೊನೇಡ್ ತಂಪು ಪಾನೀಯಗಳನ್ನು ಕುಡಿಯುವುದನ್ನು ತಪ್ಪಿಸಬೇಕು ಒಟ್ಟಾರೆ ಅವಶ್ಯಕತೆ ಅನುಗುಣವಾಗಿ ಹೊರಗಡೆ ಹೋಗಬೇಕು ಹೋಗುವ ಸಂಧರ್ಭದಲ್ಲಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ನಗರದಲ್ಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ತಹಸೀಲ್ದಾರ ಡಾ.ಮೋಹನ ಭಸ್ಮೆ ಮಾತನಾಡಿದರು.

ಮುಖ್ಯ ವೈದ್ಯಾಧಿಕಾರಿ ಡಾ.ರವೀಂದ್ರ ಅಂಟಿನ ಮಾತನಾಡಿ, ಬಿಸಿಲಿಗೆ ಹೋಗುವಾಗ (ಕಾಟನ್) ಹತ್ತಿ ಬಟ್ಟೆ ಧರಿಸಬೇಕು. ಪ್ರತಿ ಘಂಟೆಗೆ ಒಮ್ಮೆ ನೀರು ಕುಡಿಯಬೇಕು. ಮುಂಜಾಗ್ರತವಾಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಐಸಿಯು ವಾರ್ಡ್‌ನಲ್ಲಿ 5 ಬೆಡ್‌ಗಳನ್ನು, ಐಸಿಯು ಹೊರಗಡೆ ಒಂದು ಬೇಡನ್ನು ರಿಸರ್ವ ಇಡಲಾಗಿದ್ದು, ಸಾರ್ವಜನಿಕರು ಆರೋಗ್ಯ ಇಲಾಖೆ ನೀಡುವ ಮುಂಜಾಗ್ರತ ಕ್ರಮಗಳನ್ನು ಪಾಲಿಸಿ ಗರಿಷ್ಠ ತಾಪಮಾನದಿಂದ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ವೈದ್ಯಾಧಿಕಾರಿ ಡಾ.ಎಂ.ಎಸ್. ಕೊಪ್ಪದ ಇದ್ದರು.

ರೌಡಿಸಂಗೆ ಬ್ರೇಕ್: ಪೊಲೀಸ್ ಇಲಾಖೆ ಗಡಿಪಾರು ಅಸ್ತ್ರ

ಯರಗಟ್ಟಿ: ಸಮೀಪದ ನುಗ್ಗಾನಟ್ಟಿ ಗ್ರಾಮದ ರೌಡಿಶೀಟರ್ ನೀಲಕಂಠ ಮುದಕಪ್ಪ ಮನವಾಡಕರ (26) ಎಂಬಾತನನ್ನು 6 ತಿಂಗಳ ಕಾಲ ಬೆಳಗಾವಿ ಜಿಲ್ಲೆಯಿಂದ ಗಡಿಪಾರು ಮಾಡಿ ಮಾನ್ಯ ಪೊಲೀಸ್ ಅಧೀಕ್ಷಕರು ಬೆಳಗಾವಿ ಜಿಲ್ಲೆ ಮತ್ತು ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಬೆಳಗಾವಿ ಆದೇಶ ಹೊರಡಿಸಿದ್ದಾರೆ.

ಆರೋಪಿತನು ಮಾಡಮಗೇರಿ ಗ್ರಾಮದ ಒಬ್ಬ ಮುಗ್ಧ ದಲಿತ ಮಹಿಳೆಗೆ ಹೆದರಿಸಿ ಜಮೀನು ಕಬಳಿಸಲು ಯತ್ನ, ನುಗ್ಗಾನಟ್ಟಿ ಗ್ರಾಮದ ಅಮಾಯಕ ಯುವಕ ರಾಜು ಮುದ್ದನ್ನವರನನ್ನು ರೌಡಿ ಸಹಚರರೊಂದಿಗೆ ಸೇರಿ ಕೊಲೆ ಮಾಡಿದ ಪ್ರಕರಣ ಮತ್ತು ಯರಝರ್ವಿ ಗ್ರಾಮದ ನಡು ರಸ್ತೆಯಲ್ಲಿ ಕುಟರನಟ್ಟಿ ಗ್ರಾಮದ ವ್ಯಕ್ತಿಯ ಮೇಲೆ ಹಲ್ಲೆ ಸೇರಿದಂತೆ ಅನೇಕರು ಕೃತ್ಯಗಳು ಆದರಿಸಿ ಇತನ್ನು ಆರು ತಿಂಗಳು ವರೆಗೆ ಜಿಲ್ಲೆಯಿಂದ ಗಡಿಪಾರು ಮಾಡಿದ್ದಾರೆ. ಈತನ ದೌರ್ಜನ್ಯದಿಂದ ನುಗ್ಗಾನಟ್ಟಿ, ಯರಗಟ್ಟಿ, ಬೂದಿಗೊಪ್ಪ, ಯರಝರ್ವಿ,ಕುಟರನಟ್ಟಿ, ಮಾಡಮಗೇರಿ, ಗೋಕಾಕ, ಖಿನಗಾಂವ, ಬೆಣಚಿನಮರಡಿ ಮತ್ತು ಗುಡ್ಡಟ್ಟಿ ಗ್ರಾಮಸ್ಥರು ನೆಮ್ಮದಿಯಿಂದ ಜೀವನ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಈತನ ಉಪಟಳ, ಸಾಮಾಜಿಕ ಜಾಲತಾಣದಲ್ಲಿ ಫೋಟೋ-ವಿಡಿಯೋ ಹರಿಬಿಟ್ಟು ಸಾರ್ವಜನಿಕರಲ್ಲಿ ಭಯ ಹುಟ್ಟಿಸುತ್ತಿದ್ದ. ಸಾಕ್ಷಿದಾರರಿಗೂ ಬೆದರಿಕೆ ಹಾಕುತ್ತಿದ್ದ ಪೊಲೀಸ್ ಇನ್ಸ್‌ಪೆಕ್ಟರ್‌ಮುರಗೋಡ ರವರ ವರದಿ ಆದರಿಸಿ ಮಾನ್ಯ ಪೊಲೀಸ್ ಅಧೀಕ್ಷಕರು ಬೆಳಗಾವಿ ಜಿಲ್ಲೆ ಮತ್ತು ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಬೆಳಗಾವಿ ರವರು ಈತನನ್ನು 6 ತಿಂಗಳ ಕಾಲ ಜಿಲ್ಲೆಯಿಂದ ಗಡಿಪಾರು ಮಾಡಿದ್ದಾರೆ. ಮುರಗೋಡ ಪೊಲೀಸರು ಆರೋಪಿಯನ್ನು ಧಾರವಾಡ ಜಿಲ್ಲೆಗೆ ಕರೆದೊಯ್ದು ಹಾಜರುಪಡಿಸಿದ್ದಾರೆ ರೌಡಿ ವ್ಯಕ್ತಿ ಗಡಿಪಾರು ಆದೇಶ ಎಲ್ಲ ರೌಡಿಗಳಿಗೆ ಎಚ್ಚರಿಕೆ ಘಂಟೆ ಪೋಲಿಸ್ ಇಲಾಖೆ ದಿಟ್ಟ ಹೆಜ್ಜೆ ರೌಡಿ ಶೀಟರ್‌ಗಳಿಗೆ ನಡುಕ ಹುಟ್ಟಿಸಿದ ಪೊಲೀಸರ ನಡೆ ಸಾರ್ವಜನಿಕರ ನೆಮ್ಮದಿಗೆ ದಿಟ್ಟ ಹೆಜ್ಜೆ ಇಟ್ಟ ಪೊಲೀಸ್ ಇಲಾಖೆಗೆ ಸಾರ್ವಜನಿಕರಿಂದ ಪ್ರಶಂಸೆಗೆ ಸುರಿಮಳೆ ಸುರಿಸಿದರು.

ಶಿಕ್ಷಣ ಇಲಾಖಾ ಕಾರ್ಯದರ್ಶಿಗೆ ಪತ್ರ: ಹೊರಟ್ಟಿ

ಭ್ರಷ್ಟಾಚಾರದಿಂದ ಶೈಕ್ಷಣಿಕ ವ್ಯವಸ್ಥೆ ಹಾಳು

ರಾಮದುರ್ಗಕ್ಕೆ ಆಗಮಿಸಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಶ್ವರೂಢ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ರಾಮದುರ್ಗ: ಅತೀಯಾದ ಬ್ರಷ್ಟಾಚಾರದಿಂದ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆ ಹಾಳಾಗಿದೆ. ಈ ಬಗ್ಗೆ ತಮ್ಮ ಗಮನಕ್ಕೂ ಬಂದಿದ್ದು, ಈ ಕುರಿತು ಸುಧಾರಣೆಗಾಗಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿದ್ದೇನೆಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಖಾಸಗಿ ಕಾರ್ಯಕ್ರಮದ ನಿಮಿತ್ಯ ಗುರುವಾರ ನಗರಕ್ಕೆ ಆಗಮಿಸಿದ್ದ ಅವರು, ಹೊರ ವಲಯದ ಬಸವ ವೃತ್ತದಲ್ಲಿ ಅಶ್ವರೂಢ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ ಮಾಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂತಹ ವಿಷಯಗಳನ್ನು ವೇದಿಕೆಯಲ್ಲಿ ಹಂಚಿಕೊಳ್ಳಲಾಗದು. ಅಧಿಕಾರಿಗಳ ಸಭೆ ಕರೆದು ಶಿಕ್ಷಣ ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗುವುದು ಎಂದು ಹೇಳಿದರು.

ತಾವು ಹಿಂದೆ ಶಿಕ್ಷಣ ಸಚಿವರಿದ್ದಾಗ 48 ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗಿತ್ತು. ಆದರೆ ಇಲ್ಲಿಯ ವರೆಗೆ ಪರಿಪೂರ್ಣವಾಗಿ ಶಿಕ್ಷಕರ ನೇಮಕ ಮಾಡಲಾಗುತ್ತಿಲ್ಲ. ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಿದರೆ ಮಾತ್ರ ಶಿಕ್ಷಣದಲ್ಲಿ ಸುಧಾರಣೆ ತರಲು ಸಾಧ್ಯವಿದೆ. ಈಗಾಗಲೆ 29 ಸಾವಿರ ಶಿಕ್ಷಕ ಹುದ್ದೆಗಳು ಖಾಲಿ ಇದ್ದು, ಶೀಘ್ರ ಭರ್ತಿ ಮಾಡಲು ಸರಕಾರ ಕ್ರಮ ವಹಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಮಲ್ಲಣ್ಣ ಯಾದವಾಡ, ಮುಖಂಡರಾದ ಚಂದ್ರಕಾಂತ ಹೊಸಮನಿ, ಜೆ.ವಿ. ನಾಡಗೌಡ, ವಿಠ್ಠಲ ಕಂಬಾರ, ದ್ಯಾಮಣ್ಣ ಹಳ್ಳಿ, ವಿಜಯ ಮಹೇಂದ್ರಕರ, ಶಂಕರ ಕುರಹಟ್ಟಿ, ಮಲ್ಲು ಹೂಗಾರ, ಪ್ರಜ್ವಲ ಮುಖಾರಿ, ನಾಗರಾಜ ಕಟ್ಟಿಮನಿ, ಶಿವಾನಂದ ಸಾಗಶೆಟ್ಟಿ ಇದ್ದರು.

ಸಮಾಧಾನ ಸಮಾರೋಹ ಅಭಿಯಾನ

ನಗರದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ ಜರುಗಿದ 'ಸಮಾಧಾನ ಸಮಾರೋಹ್-2026'' ಕುರಿತು ಜರುಗಿದ ವೀಡಿಯೋ ಸಂವಾದದಲ್ಲಿ ಅನು ಶಿವರಾಮ ಮಾತನಾಡಿದರು.

ಬೆಳಗಾವಿ: ರಾಷ್ಟ್ರದಾದ್ಯಂತ ವಿವಾದಗಳ ಸಮನ್ವಯತೆಗಾಗಿ ನ್ಯಾಯವನ್ನುಸರಳವಾಗಿ ಪ್ರತಿ ಮನೆಗೂ ಸುಲಭವಾಗಿಸುವ ಮತ್ತು ಪರಿಹಾರವನ್ನು ಒಪ್ಪಿಕೊಳ್ಳುವ ಮೂಲಕ ಜನರು ಒಟ್ಟಾಗಿ ವಿವಾದಗಳನ್ನು ಪರಿಹರಿಸಲು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ಭಾರತದ ಸರ್ವೋಚ್ಚ ನ್ಯಾಯಾಲಯವು 'ಸಮಾಧಾನ ಸಮಾರೋಹ 2026'' ಅಭಿಯಾನವನ್ನು ಆಯೋಜಿಸುತ್ತಿದೆ. 2026 ಏ.21 ರಿಂದ ಪ್ರಾರಂಭವಾಗಿ 2026ರ ಆಗಸ್ಟ್ 21, 22 ಮತ್ತು 23 ರಂದು ವಿಶೇಷ ಲೋಕ ಅದಾಲತ್ ನೊಂದಿಗೆ ಈ ಅಭಿಯಾನ ಮುಕ್ತಾಯಗೊಳ್ಳಲಿದೆ ಎಂದು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಅನು ಶಿವರಾಮ ತಿಳಿಸಿದರು. ನಗರದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ ಏ.30 ಜರುಗಿದ ''ಸಮಾಧಾನ ಸಮಾರೋಹ್- 2026'' ಕುರಿತು ಜರುಗಿದ ವೀಡಿಯೋ ಸಂವಾದ ಸುದ್ದಿ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಸರ್ವೋಚ್ಚ ನ್ಯಾಯಾಲಯ ತಲುಪಿದ ವ್ಯಾಜ್ಯಗಳ ಪರಿಹಾರಕ್ಕಾಗಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸರ್ವೋಚ್ಚ ನ್ಯಾಯಾಲಯವು ವಿಶೇಷ ಅಭಿಯಾನ ಹಮ್ಮಿಕೊಂಡಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯದ 4328 ಪ್ರಕರಣಗಳು ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಗುರುತಿಸಿ ಆಯಾ ರಾಜ್ಯಗಳಿಗೆ ವರ್ಗಾಯಿಸಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸಂದೀಪ ಪಾಟೀಲ ಮಾತನಾಡಿದರು. ರಾಷ್ಟ್ರಾದ್ಯಂತ ಜರುಗಲಿರುವ ಈ ಅಭಿಯಾನದಡಿ ಜಿಲ್ಲಾ, ತಾಲೂಕುವಾರು ಬಾಕಿ ಇರುವ ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗುವುದು. ರಾಜ್ಯದ 4328 ಪ್ರಕರಣಗಳನ್ನು ಗುರುತಿಸಲಾಗಿದ್ದು ಈ ಪೈಕಿ ಜಿಲ್ಲೆಯಲ್ಲಿ ಅಂದಾಜು ನಾಲ್ಕು ನೂರಕ್ಕೂ ಅಧಿಕ ಪ್ರಕರಣಗಳನ್ನು ಸಮಾಧಾನ ಸಮಾರೋಹ ಅಭಿಯಾನದಡಿ ಕೈಗೆತ್ತಿಕೊಂಡು ಜಿಲ್ಲಾ, ತಾಲೂಕು ನ್ಯಾಯಾಲಯಗಳಲ್ಲಿ ಲೋಕ ಅದಾಲತ್ ಅಡಿ ಮಧ್ಯಸ್ಥಿಕೆಗಾರರ ಜತೆ ರಾಜಿ ಮಾಡುವ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದಾಗಿದ್ದು ಪಕ್ಷದಾರರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ತಾಂತ್ರಿಕ ಜ್ಞಾನ ಅಳವಡಿಸಿಕೊಳ್ಳಿ

ಬೈಲಹೊಂಗಲದ ಕೆಎಲ್‌ಇ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಬೀಳ್ಕೊಡುಗೆ ಸಮಾರಂಭವನ್ನು ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಉದ್ಘಾಟಿಸಿದರು.

ಬೈಲಹೊಂಗಲ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ತಾಂತ್ರಿಕ ಜ್ಞಾನ, ಸಂವಹನ ಸಾಮರ್ಥ್ಯ ಹಾಗೂ ಪ್ರಾಯೋಗಿಕ ಅನುಭವ ಅತ್ಯವಶ್ಯಕವೆಂದು ಕೆಎಲ್‌ಇ ನಿರ್ದೇಶಕ ಹಾಗೂ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಹೇಳಿದರು. ನಗರದ ನಗರದ ಕೆಎಲ್‌ಇ ಸಂಸ್ಥೆಯ ಪಾಲಿಟೆಕ್ನಿಕ್ (ಡಿಪ್ಲೋಮಾ) ಮತ್ತು ಐಟಿಐ ಕಾಲೇಜಿನಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಪದವಿ ಪಡೆಯುವುದಷ್ಟೇ ಸಾಕಾಗುವುದಿಲ್ಲ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜತೆಗೆ ಉದ್ಯೋಗಕ್ಕೆ ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಐಪಿಎಸ್ ಅಧಿಕಾರಿ ಡಾ. ಭಾನುಪ್ರಕಾಶ ಅವರು, ವಿದ್ಯಾರ್ಥಿಗಳು ಕೇವಲ ಪುಸ್ತಕ ಜ್ಞಾನಕ್ಕೆ ಸೀಮಿತವಾಗದೆ ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಬೇಕು ಹಾಗೂ ನೈತಿಕ ಮೌಲ್ಯಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕೆಎಲ್‌ಇ ಸಂಸ್ಥೆಯ ಉಪಾಧ್ಯಕ್ಷ ಬಸವರಾಜ ತಟವಾಟಿ ವಹಿಸಿದ್ದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾಲೇಜಿನ ಅಭಿವೃದ್ಧಿಗೆ ಕೊಡುಗೆ ನೀಡಿದ ಆಡಳಿತ ಮಂಡಳಿ ಹಾಗೂ ಶಿಕ್ಷಕರ ಸೇವೆಯನ್ನು ಸ್ಮರಿಸಲಾಯಿತು. ಬೇವಿನಕೊಪ್ಪ ಆನಂದಾಶ್ರಮದ ವಿಜಯಾನಂದ ಸ್ವಾಮೀಜಿ ಸಾನಿಧ್ಯವಹಿಸಿ ಮಾತನಾಡಿದರು. ಅತಿಥಿಗಳಾಗಿ ತಾ.ಪಂ. ಇಒ ಸಂಜೀವ ಜುನ್ನೂರ ಹಾಗೂ ಗಣಾಚಾರಿ ಎಕ್ಸಲೆಂಟ್ ಎಜ್ಯುಕೇಶನ್ ಸಂಸ್ಥೆಯ ಅಧ್ಯಕ್ಷ ಬಿ.ಬಿ. ಗಣಾಚಾರಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಅನೇಕ ಗಣ್ಯರು, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿ ಸಾಧಕರಿಗೆ ಸನ್ಮಾನ

ರಾಮದುರ್ಗ: ಕೇವಲ ಭಾಷಣ ಮಾಡುವುದರಿಂದ ಅಭಿವೃದ್ಧಿ ಸಾಧ್ಯವಿಲ್ಲ, ಬದಲಿಗೆ ಪ್ರತಿಯೊಂದು ಹಂತದ ಚಟುವಟಿಕೆಗಳಲ್ಲಿ ಕಾರ್ಯಪ್ರವೃತ್ತರಾದಾಗ ಮಾತ್ರ ಉತ್ತಮ ಸಾಧನೆ ಮಾಡಲು ಸಾಧ್ಯ ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ ಹೇಳಿದರು. ನಗರದ ವಿದ್ಯಾಚೇತನ ಶಾಲಾ ಆವರಣದಲ್ಲಿರುವ ಗುರುಭವನದಲ್ಲಿ ಗುರುವಾರ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಸಾಧಕ ವಿದ್ಯಾರ್ಥಿಗಳು ಹಾಗೂ ಶೇ.100 ಫಲಿತಾಂಶ ಗಳಿಸಿದ ಶಾಲಾ ಮುಖ್ಯ ಶಿಕ್ಷಕರ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ತಾಲೂಕು ಉತ್ತಮ ಪ್ರಗತಿ ಸಾಧಿಸಿದ್ದು, ಜಿಲ್ಲೆಯಲ್ಲಿ 4ನೇ ಸ್ಥಾನ ಪಡೆದಿರುವುದು ಹೆಮ್ಮೆಯ ಸಂಗತಿಯಾಗಿದೆ. ಆದರೆ, ಎಸ್ ಎಸ್‌ಎಲ್‌ಸಿ ಟಾಪರ್‌ಗಳು ಪಿಯುಸಿಯಲ್ಲಿ ಹಿಂದೆ ಬೀಳುತ್ತಿರುವುದು ವಿಷಾದನೀಯವಾಗಿದ್ದು, ಈ ಬಗ್ಗೆ ಶಿಕ್ಷಕರು ಮತ್ತು ಪೋಷಕರು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಮಾತನಾಡಿ, ರಾಮದುರ್ಗ ತಾಲೂಕು ಶಿಕ್ಷಣದಲ್ಲಿ ಮುಂಚೂಣಿಯಲ್ಲಿರಬೇಕೆಂಬ ಇಲಾಖೆಯ ಕನಸಿಗೆ ಎಲ್ಲ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪಾಲಕರ ಶ್ರಮವೇ ಕಾರಣವಾಗಿದೆ ಎಂದರು. ವ್ಯವಸ್ಥಿತ ಯೋಜನೆಯ ಮೂಲಕ ನಿಶ್ಚಿತ ಗುರಿಯನ್ನು ತಲುಪಿದ್ದು ಸಂತಸ ತಂದಿದೆ ಎಂದು ಶ್ಲಾಘಿಸಿದರು. ಅಕ್ಷರ ದಾಸೋಹ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ಹಿರೇಮಠ ಮಾತನಾಡಿದರು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ರಾಮದುರ್ಗ ತಾಲೂಕು ಶೇ. 95.30 ಫಲಿತಾಂಶದೊಂದಿಗೆ ಬೆಳಗಾವಿ ಶೈಕ್ಷಣಿಕ ಜಿಲ್ಲೆಗೆ 4ನೇ ಸ್ಥಾನ ಪಡೆದಿದೆ. ಪರೀಕ್ಷೆಗೆ ಹಾಜರಾದ 3762 ವಿದ್ಯಾರ್ಥಿಗಳಲ್ಲಿ 3585 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಒಟ್ಟು 22 ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿವೆ. ತಾಲೂಕಿಗೆ ಟಾಪರ್‌ಆದ ಆಯುಷ್ ಶೆಲವಡಿ, ಸೃಷ್ಟಿ ಸತ್ತಿಗೇರಿ, ನಾಗರಾಜ ಮಿಂಚಲ, ವಿಜಯಲಕ್ಷ್ಮಿ ದದ್ದಿ, ರಂಜನಾ ಅಂಗಡಿ, ಸಂದೀಪ ಈಟಿ ಹಾಗೂ ಮಹಮ್ಮದ ಇಕ್ಬಾಲ ಪಡದಾರ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಇಲಾಖೆಯ ಪದಾಧಿಕಾರಿಗಳು, ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಂದ ಜಾನಪದ ಜಾತ್ರೆ | ಕಾಲೇಜಿನಲ್ಲಿ ಗ್ರಾಮೀಣ ಸೊಗಡು ಅನಾವರಣ

ಜಾನಪದ ಕೇವಲ ಕಲೆಯಲ್ಲ, ಅದು ಬದುಕಿನ ಮಾರ್ಗ

ಅಥಣಿ: ಜಾನಪದವು ಕೇವಲ ಕಲೆಯಲ್ಲ, ಅದು ನಮ್ಮ ಬದುಕಿನ ದಾರಿದೀಪವಾಗಿದೆ. ಹಳ್ಳಿಯ ಜನರ ಬೆವರಿನ ಹನಿಗಳಲ್ಲಿ ಹುಟ್ಟಿದ್ದ ಈ ಕಲೆಗಳು ಇಂದು ಆಧುನಿಕತೆ ಹಾಗೂ ನಗರದ ವ್ಯಾಮೋಹಕ್ಕೆ ಬಲಿಯಾಗುತ್ತಿವೆ ಎಂದು ಗೋಕಾಕದ ಹಿರಿಯ ಕಲಾವಿದ ಹಾಗೂ ಸಾಹಿತಿ ಈಶ್ವರಚಂದ್ರ, ಬೆಟಗೇರಿ ಕಳವಳ ವ್ಯಕ್ತಪಡಿಸಿದರು.

ಮಂಗಳವಾರ ಕೆ ಎಲ್ ಈ ಸಂಸ್ಥೆಯ ಎಸ್ ಎಸ್ ಎಮ್ ಎಸ್ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದಿಂದ ಹಮ್ಮಿಕೊಳ್ಳಲಾಗಿದ್ದ ಜಾನಪದ ಜಾತ್ರೆ -2026 ಅದ್ದೂರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಡಾ. ಮಲ್ಲಿಕಾರ್ಜುನ ಹಂಜಿ ಮಾತನಾಡಿ ಭಾರತೀಯ ಪರಂಪರೆಯಲ್ಲಿ ನಶಿಸುತ್ತಿರುವ ಜನಪದ ಸಂಸ್ಕೃತಿಗಳನ್ನು ಜೀವಂತವಾಗಿಸುವ ಸಂಕಲ್ಪದಿಂದ ಶಾಲಾ ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಭಾರತಿ ಎಸ್. ಗದ್ದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜನಪದ ಜಾತ್ರೆ ಅಥಣಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ವಲಯದಲ್ಲಿ ಹೊಸ ಸಂಚಲನ ಮೂಡಿಸಿದ್ದು, ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಾಂಪ್ರದಾಯಿಕ ಉಡುಪುಗಳು, ಹಳ್ಳಿ ಸೊಗಡಿನ ಊಟದ ವ್ಯವಸ್ಥೆ, ಜಾನಪದ ಕಲೆಗಳ ಅನಾವರಣ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದವು. ಒಟ್ಟಾರೆ ಜನಪದ ಕಲೆಗಳ ಪುನರುತ್ಥಾನಕ್ಕೆ ಉತ್ತಮ ನಾಂದಿ ಹಾಡಿತು.

ಇಡೀ ದಿನ ಕಾಲೇಜು ಆವರಣವು ಗ್ರಾಮೀಣ ಸೊಗಡಿನ ವೈಭವ ಕಂಡು ಬಂತು. ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ. ಪ್ರಶಾಂತ ಮಗದುಮ್ಮ, ಸಂಗಮೇಶ ತಳವಾರ, ಐ.ಜಿ. ಮುಲ್ಲಾ, ಲಕ್ಷ್ಮಿ ಎಲ್. ಪೂಜಾರಿ, ಸಂಗಪ್ಪ ಪಟ್ಟೇದ ಇದ್ದರು.

ಸಾಂಪ್ರದಾಯಿಕ ಉಡುಗೆಯಲ್ಲಿ ಮಿಂಚಿದ ವಿದ್ಯಾರ್ಥಿಗಳು

ಮಹಾವಿದ್ಯಾಲಯದ ಜಾನಪದ ಜಾತ್ರೆಯ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಜನಪದ ಶೈಲಿಯ ಉಡುಗೆ-ತೊಡುಗೆಗಳನ್ನು ಧರಿಸಿ ಬಂದಿದ್ದು ವಿಶೇಷವಾಗಿತ್ತು. ಹುಡುಗರು ಪಂಚೆ, ಶರ್ಟ್ ಹಾಗೂ ಪೇಟ ಧರಿಸಿ ಮಿಂಚಿದರೆ, ಹುಡುಗಿಯರು ಸಾಂಪ್ರದಾಯಿಕ ಸೀರೆ ಹಾಗೂ ಒಡವೆಗಳನ್ನು ತೊಟ್ಟು ಮಿಂಚಿದರು.

ಅಥಣಿಯ ಎಸ್ ಎಸ್ ಎಮ್ ಎಸ್ ಮಹಾವಿದ್ಯಾಲಯದಲ್ಲಿ ಕನ್ನಡ ಜಾನಪದ ಜಾತ್ರೆ -2026 ಕಾರ್ಯಕ್ರಮವನ್ನು ರಂಗಭೂಮಿ ಕಲಾವಿದ ಹಾಗೂ ಸಾಹಿತಿ ಈಶ್ವರಚಂದ್ರ, ಬೆಟಗೇರಿ ಉದ್ಘಾಟಿಸಿದರು.

ಸಮಾಚಾರ ಸಣ್ಣದಲ್ಲ

ರಾಜ್ಯಮಟ್ಟದ ಹೊನಲು ಬೆಳಕಿನ ಪಗಡಿ ಪಂದ್ಯಾವಳಿ

ಕಲಾದಗಿ : ಸಮೀಪದ ಖಜ್ಜಿಡೋಣಿ ಗ್ರಾಮದ ಶ್ರೀ ಮಹಾ ಸಾಧ್ವಿ ಹೇಮರೆಡ್ಡಿ ಮಲ್ಲಮಾಂಬಿ ಜಾತ್ರಾ ಮಹೋತ್ಸವದ ಅಂಗವಾಗಿ ಮೇ. 1 ರಂದು 55 ಎಚ್ಪಿ ಟ್ರ್ಯಾಕ್ಟರ್‌ಸ್ಪರ್ಧೆ ಹಾಗೂ ಮೇ. 6ರಂದು ರಾಜ್ಯಮಟ್ಟದ ಮುಕ್ತ ಹೊನಲು ಬೆಳಕಿನ ಪಗಡಿ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ. 55 ಎಚ್ ಪಿ ಸ್ಪರ್ಧೆ ಪ್ರಥಮ ಬಹುಮಾನ : ಹೀರೋ ಎಚ್ ಎಫ್ ಡೀಲಕ್ಸ್ ಬೈಕ್, ದ್ವಿತೀಯ ಬಹುಮಾನ ಸ್ಕೂಟರ್,ತೃತೀಯ ಬಹುಮಾನ 20,000. ಚತುರ್ಥ ಬಹುಮಾನ 10,000. ಪಂಚಮ ಬಹುಮಾನ 5,000. ಪಗಡಿ ಪಂದ್ಯಾವಳಿ ಪ್ರಥಮ ಬಹುಮಾನ 40,001. ದ್ವಿತೀಯ ಬಹುಮಾನ 30,001. ತೃತೀಯ ಬಹುಮಾನ 15,001. ಚತುರ್ಥ ಬಹುಮಾನ 10,001. 5ನೇ ಬಹುಮಾನ 5,001. 6ನೇ ಬಹುಮಾನ 5,001. ಏಳನೇ ಬಹುಮಾನ 5,001. ಎಂಟನೇ ಬಹುಮಾನ 5,001 ನಗದು ಬಹುಮಾನ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ 9483407060/7624959965 ಸಂಪರ್ಕಿಸಬಹುದು.

ನಗರ ಸೇವಕನಾಗಿ ನನ್ನ ಸೇವೆ ಅವಿಸ್ಮರಣೀಯ

ಬನಹಟ್ಟಿ: ಹಲವಾರು ಪುರಸಭೆ ಹಾಗೂ ನಗರಸಭೆಗಳಲ್ಲಿ ಸುಮಾರು ಮೂರು ದಶಕಗಳ ಕಾಲ ನಗರ ಸೇವಕನಾಗಿ ಕಾರ್ಯನಿರ್ವಹಿಸಿದ ನನಗೆ ತೃಪ್ತಿ ತಂದಿದೆ. ಇಂದಿಗೂ ಜನಸೇವೆಯಿಂದ ಮನಸ್ಸು ಹಾತೊರೆಯುತ್ತಿರುವದು ನಿಜಕ್ಕೂ ಜನರು ನನ್ನ ಮೇಲೆ ಇಟ್ಟ ಪ್ರೀತಿ, ವಿಶ್ವಾಸವೆಂದು ನಗರಸಭಾ ಪೌರಾಯುಕ್ತ ರಮೇಶ ಜಾಧವ ಹೇಳಿದರು.ಗುರುವಾರ ಸ್ಥಳೀಯ ನಗರಸಭೆ ಸಭಾಭವನದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ ಸೇವಾವಧಿಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ನಗರಸಭಾ ಸದಸ್ಯರು ಹಾಗೂ ಸಿಬ್ಬಂದಿಗಳ ಉತ್ತಮ ಬಾಂಧವ್ಯ ಹಾಗೂ ಸ್ಪಂದನೆ ಎಂದಿಗೂ ಅವಿಸ್ಮರಣೀಯವಾದುದು ಎಂದರು. ವೇದಿಕೆ ಮೇಲೆ ಜಮಖಂಡಿ ನಗರಸಭಾ ಪೌರಾಯುಕ್ತ ಜ್ಯೋತಿಗಿರೀಶ, ಸುಶೀಲಾ ರಮೇಶ ಜಾಧವ, ಪದ್ಮಾ ಕೋರೆನ್ನವರ, ಅಮೀರ ಖಲೀಫಾ, ಬಾಬುರಾವ್ ಕಮತಗಿ, ದೈಗೊಂಡ, ಅಭಿನಂದನ ಸೋನಾರ, ಶ್ರೀಶೈಲ ಬೀಳಗಿ, ನಂದು ಗಾಯಕವಾಡ, ಅಶೋಕ ರಾವಳ, ಅರುಣ ಬುದ್ನಿ, ಗೌರಿ ಮಿಳ್ಳಿ, ದುರ್ಗವ್ವ ಹರಿಜನ ಇದ್ದರು.

ವಿರಾಮ
ಪ್ರತಿ ಭಾನುವಾರ

52 ಶಾಲೆಗಳು ನೂರಕ್ಕೆ ನೂರರಷ್ಟು ಫಲಿತಾಂಶ| ರಾಜ್ಯಕ್ಕೆ 6 ವಿದ್ಯಾರ್ಥಿಗಳು ರ‍್ಯಾಂಕ್| ಜಿಲ್ಲೆಗೆ ತಪ್ಪಿದ ಪ್ರಥಮ ಸ್ಥಾನ

ಎಸ್ಸೆಸ್ಸೆಲ್ಸಿ: ಜಮಖಂಡಿ ಉತ್ತಮ ಸಾಧನೆ

ಹನಮಂತ.ರಾ. ಭೂಷಣ್ಣವರ ಜಮಖಂಡಿ

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಜಮಖಂಡಿ ತಾಲೂಕು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.95.85 ರಷ್ಟು ಅಂಕ ಪಡೆದು ಕೊಂಡಿದ್ದು, ಕೇವಲ ಶೇ.0.89ರಷ್ಟುಅಂಕ ಕಡಿಮೆಯಾಗುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ತಪ್ಪಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಬರತಕ್ಕ ಬದಾಮಿ ತಾಲೂಕ ಶೇ.96.74 ರಷ್ಟು, ಹುನಗುಂದ ತಾಲೂಕ ಶೇ.96.44 ರಷ್ಟು, ಜಮಖಂಡಿ ತಾಲೂಕ ಶೇ.95. 85ರಷ್ಟು, ಬಾಗಲಕೋಟ 94.59 ರಷ್ಟು, ಮುಧೋಳ 93.37ರಷ್ಟು ಮತ್ತು ಬೀಳಗಿ 89.31 ರಷ್ಟು ಫಲಿತಾಂಶ ಪಡೆದು ಕೊಂಡಿದೆ. ಒಟ್ಟಾರೆಯಾಗಿ ಬಾಗಲಕೋಟೆ ಜಿಲ್ಲೆ ಶೈಕ್ಷಣಿಕ ವರ್ಷದಲ್ಲಿ ಶೇ.95.42 ರಷ್ಟು ಫಲಿತಾಂಶ ಪಡೆದಿದೆ.**ನೂರಕ್ಕೆ ನೂರರಷ್ಟು ಫಲಿತಾಂಶ:** ಜಮಖಂಡಿ ತಾಲೂಕಿನ ವ್ಯಾಪ್ತಿಯ ರಬಕವಿ-ಬನಹಟ್ಟಿ, ತೇರದಾಳ ಮತ್ತು ಜಮಖಂಡಿ ತಾಲೂಕಿನಲ್ಲಿ ಸರಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳು ಸೇರಿದಂತೆ ಒಟ್ಟು 123 ಪ್ರೌಢಶಾಲೆಗಳಿದ್ದು, ಅದರಲ್ಲಿ 52 ಪ್ರೌಢಶಾಲೆಗಳು ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದು ಕೊಂಡಿವೆ. ಶೇ.99ರಷ್ಟು ಫಲಿತಾಂಶ ಪಡೆದ ಶಾಲೆಗಳು 2, ಶೇ.98ರಷ್ಟು ಫಲಿತಾಂಶ ಪಡೆದ ಶಾಲೆಗಳು 9, ಶೇ.97ರಷ್ಟು ಫಲಿತಾಂಶ ಪಡೆದ ಶಾಲೆಗಳು 14, ಶೇ.96ರಷ್ಟು ಫಲಿತಾಂಶ ಪಡೆದ ಶಾಲೆಗಳು 16, ಶೇ.95ರಷ್ಟು ಫಲಿತಾಂಶ ಪಡೆದ ಶಾಲೆಗಳು 4, ಶೇ.94 ರಷ್ಟು ಫಲಿತಾಂಶ ಪಡೆದ ಶಾಲೆಗಳು 5, ಶೇ.93ರಿಂದ 90 ರಷ್ಟುಫಲಿತಾಂಶ ಪಡೆದ ಶಾಲೆಗಳು 6, ಶೇ.89ರಿಂದ 80 ರಷ್ಟು ಫಲಿತಾಂಶ ಪಡೆದ ಶಾಲೆಗಳು 12 ಮತ್ತು ಶೇ.79ರಿಂದ 60ರಷ್ಟು ಫಲಿತಾಂಶವನ್ನು 3 ಶಾಲೆಗಳು ಪಡೆದಿವೆ.

ರಾಜ್ಯಕ್ಕೆ 6 ವಿದ್ಯಾರ್ಥಿಗಳು ರ‍್ಯಾಂಕ್: ತಾಲೂಕಿನ ವ್ಯಾಪ್ತಿಯಲ್ಲಿ ರಬಕವಿ-ಬನಹಟ್ಟಿ, ತೇರದಾಳ ಮತ್ತು ಜಮಖಂಡಿ ತಾಲೂಕಿನಲ್ಲಿ ಸರಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳ 18 ವಿದ್ಯಾರ್ಥಿಗಳು ವಿಶೇಷ ಸಾಧನೆ ಮಾಡುವ ಮೂಲಕ ರಾಜ್ಯ ಮತ್ತು ಜಿಲ್ಲೆಗೆ ಮತ್ತು ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಕೊಂಡಿದ್ದಾರೆ. ಪ್ರಸಕ್ತ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ರಾಜ್ಯಕ್ಕೆ 5ನೇ ರ‍್ಯಾಂಕ್, 6ನೇ, 7ನೇ, 8ನೇ, 9ನೇ ಮತ್ತು 10ನೇ ರ‍್ಯಾಂಕ ಪಡೆದು ಕೊಂಡಿದ್ದಾರೆ. ಜಿಲ್ಲೆಗೆ 1ರಿಂದ 6ಸ್ಥಾನವರೆಗೆ ರ‍್ಯಾಂಕ್ ಪಡೆದುಕೊಂಡಿದ್ದಾರೆ.

ಕೂದಲೆಳೆಯಲ್ಲಿ ಮಿಸ್ಸಾದ ಫಸ್ಟ್ ಪ್ಲೇಸ್

ಶಿಕ್ಷಕೆ ಕಲಿಕೆ ವಿಧಾನ ಮತ್ತು ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಪ್ರಸಕ್ತ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫಲಿತಾಂಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಏರಿಕೆ ಆಗಿದೆ. ಬಾಗಲಕೋಟ ಜಿಲ್ಲೆಗೆ ಜಮಖಂಡಿ ಪ್ರಥಮ ಸ್ಥಾನ ಪಡೆಯಬೇಕೆಂದು ಕ್ಷೇತ್ರಶಿಕ್ಷಣಾಧಿಕಾರಿ ಅಶೋಕ ಬಸನ್ನವರ ಅವರ ನೇತೃತ್ವದಲ್ಲಿ ಶಿಕ್ಷಕರ ತಂಡ ಬಹಳಷ್ಟು ಶ್ರಮವಹಿಸಿದ್ದರು. ಆದರೇ ಕೇವಲ ಶೇ.0.89ರಷ್ಟು ಫಲಿತಾಂಶ ಹಿನ್ನಲೆಯಾಗಿದ್ದು ಸಾಧನೆಗೆ ಒಂದುಮೆಟ್ಟಿಲು ಕಡಿಮೆಯಾಗಿದೆ. ಬರತಕ್ಕ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಸ್ಥಾನಪಡೆಯುವ ನಿಟ್ಟಿನಲ್ಲಿ ಕ್ಷೇತ್ರಶಿಕ್ಷಣಾಧಿಕಾರಿ ನೇತೃತ್ವ ಕೆಲಸ ಮಾಡುವ ಗುರಿತಲುಪವ ಉದ್ದೇಶ ಹೊಂದಲಾಗಿದೆ.

ಕಳೆದವರ್ಷ ಕ್ಕಿಂತ ಈ ವರ್ಷ ಫಲಿತಾಂಶ ಸಂಖ್ಯೆಹೆಚ್ಚಾಗಿದೆ, ಆದರೇ ಮತ್ತೇ ಜಿಲ್ಲೆಯಲ್ಲಿ3ನೇಸ್ಥಾನದಲ್ಲಿ ನಾವು ಗುರುತಿಸಿಕೊಂಡಿದ್ದೇವೆ. ಕೇವಲಶೇ.0.89ರಷ್ಟು ಅಂಕ ಕಡಿಮೆಯಾಗುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನದಿಂದ ವಂಚಿತರಾಗಿದ್ದೇವೆ. ಈ ಫಲಿತಾಂಶ ಹಿಂದೆ ಸಾಕಷ್ಟು ಶ್ರಮ ಬಹಳಷ್ಟು ಅಡಗಿದೆ. ಶೈಕ್ಷಣಿಕ ಆರಂಭ ವರ್ಷ ದಿಂದ ಪ್ರಸಕ್ತ ವರ್ಷದ ಫಲಿತಾಂಶ ಸುಧಾರಣೆಗಾಗಿ ಕಾರ್ಯಾಗಾರ, ತರಬೇತಿ, ಮನೆ ಮನೆಗೆ ಭೇಟಿ ಅಂತು ಹತ್ತಾರು ಕ್ರೀಯಾ ಯೋಜನೆಗಳಲ್ಲಿತಾಲೂಕಿನ ಎಲ್ಲ ಶಾಲೆಗಳ ಶಿಕ್ಷಕರು ಸಾಕಷ್ಟು ಶ್ರಮ ವಹಿಸಿದ್ದಾರೆ.

-ಅಶೋಕಬಸನ್ನವರ, ಕ್ಷೇತ್ರಶಿಕ್ಷಣಾಧಿಕಾರಿಗಳುಜಮಖಂಡಿ

ಕೆರೂರ ಪಟ್ಟಣದ ಆರಾಧ್ಯ ದೈವ ದ್ಯಾಮವ್ವ-ದುರಗವ್ವ ದೇವತೆಯರ ಜಾತ್ರೆ ನಿಮಿತ್ತ ಪ್ರಪ್ರಥಮ ಬಾರಿಗೆ ಹೆಲಿಕಾಪ್ಟರ್‌ಮೂಲಕ ಪುಷ್ಪಾರ್ಚನೆ ಸಂಭ್ರಮ ನೆರದ ಸಹಸ್ರಾರು ಭಕ್ತಗಣಕ್ಕೆ ಮುದು ನೀಡಿತಲ್ಲದೆ ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಗಿ ಜನೋತ್ಸವಕ್ಕೆ ಹೊಸ ಉಲ್ಲಾಸ ಉತ್ಸಾಹ ನೀಡಿ ಪುಳಕಿತರನ್ನಾಗಿ ಮಾಡಿತು.

ಕುಸ್ತಿ ಪಂದ್ಯಾವಳಿಯಲ್ಲಿ ಅಪ್ರತಿಮ ಸಾಧನೆ: ಸನ್ಮಾನ

ಮುಧೋಳ: ಹದಿನಾಲ್ಕು ವರ್ಷದೊಳಗಿನ ಕುಸ್ತಿ ಪಂದ್ಯಾವಳಿಗಳಲ್ಲಿ ಅಪ್ರತಿಮ ಸಾಧನೆ ಮಾಡುತ್ತಿರುವ ಪ್ರತಿಭಾವಂತ ಬಾಲಕ ಮಲ್ಲಿಕಾರ್ಜುನ ಚಿಂಚಲಿಗೆ ಸಚಿವ ಆರ್.ಬಿ.ತಿಮ್ಮಾಪೂರ ಗೃಹ ಕಚೇರಿಯಲ್ಲಿ ಅಭಿನಂದಿಸಲಾಯಿತು.

ರಾಜ್ಯ ಯುವ ಕಾಂಗ್ರೆಸ್ ಪ್ರ.ಕಾ. ವಿನಯ ತಿಮ್ಮಾಪೂರ, ಮಲ್ಲಿಕಾರ್ಜುನನ ಸಾಧನೆಯನ್ನು ಗುರುತಿಸಿ, ಶಾಲು ಹೊದಿಸಿ ಸನ್ಮಾನಿ, ಬಾಲಕನ ಕ್ರೀಡಾ ಭವಿಷ್ಯಕ್ಕೆ ನೆರವಾಗಲೆಂದು ವೈಯಕ್ತಿಕವಾಗಿ ಧನಸಹಾಯ ನೀಡಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಪ್ರತಿಭೆಗಳು ಕ್ರೀಡಾಕ್ಷೇತ್ರದಲ್ಲಿ ರಾಷ್ಟ್ರ ಮಟ್ಟದಲ್ಲಿ ಮಿಂಚುತ್ತಿರುವುದು ಹೆಮ್ಮೆಯ ವಿಷಯ.14 ವರ್ಷದ ಬಾಲಕ ಕುಸ್ತಿಯಲ್ಲಿ ತೋರುತ್ತಿರುವ ಚಾಕಚಕ್ಯತೆ ಅದ್ಭುತವಾಗಿದೆ.ಇಂತಹ ಕ್ರೀಡಾಪಟುಗಳಿಗೆ ಸೂಕ್ತ ತರಬೇತಿ ಮತ್ತು ಆರ್ಥಿಕ ನೆರವು ಸಿಕ್ಕರೆ ಬೆಳೆಯಬಲ್ಲರು ಎಂದರು.

ಪ್ರತಿಭಾವಂತ ಕ್ರೀಡಾಪಟುಗಳು ಆರ್ಥಿಕ ಮುಗ್ಗಟ್ಟಿನಿಂದ ಕ್ರೀಡೆಯಿಂದ ದೂರ ಉಳಿಯಬಾರದು.ಮಲ್ಲಿಕಾರ್ಜುನನ ಮುಂದಿನ ಕ್ರೀಡಾ ಪಯಣಕ್ಕೆ ನಮ್ಮ ಬೆಂಬಲ ಸದಾ ಇರಲಿದೆ.

ಈ ಸಂದರ್ಭದಲ್ಲಿ ಪಕ್ಷದ ಪ್ರಮುಖರು, ಕಾರ್ಯಕರ್ತರು ಹಾಗೂ ಕ್ರೀಡಾ ಆಭಿಮಾನಿಗಳು ಇತರರು ಇದ್ದರು.

ಸಾಧಕರಾಗಲು ಪ್ರಯತ್ನ ನಿಮ್ಮದಾಗಲಿ

ಬಾದಾಮಿ: ಈ ಬಾರಿಯ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಫಲಿತಾಂಶ ಈ ಕ್ಷೇತ್ರದ ಎರಡು ತಾಲೂಕಿನ ವಿದ್ಯಾರ್ಥಿಗಳ ಸಾಧನೆ ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಯನ್ನು ಬಿತ್ತರಿಸಿದೆ. ಆ ಮೂಲಕ ಈ ವರ್ಷದ ಶೈಕ್ಷಣಿಕ ಸಾಧಕ ವಿದ್ಯಾ ರ್ಥಿಗಳು ಭವಿಷ್ಯದಲ್ಲೂ ತಮ್ಮ ಗುರಿ ತಲುಪುವವರೆಗೆ ಟಾಪ್ ಲಿಷ್ಟನಲ್ಲೇ ಬರಬೇಕು ಈ ನಿಟ್ಟಿನಲ್ಲಿ ಸಾಧಕರಾಗಿ ಹೊರಹೊಮ್ಮುವ ಪ್ರಯತ್ನ ನಿಮ್ಮದಾಗಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ಗುರುವಾರ ಪಟ್ಟಣದ ಶ್ರೀ ಕಾಳಿದಾಸಶಿಕ್ಷಣ ಸಂಸ್ಥೆಯ ಸಭಾ ಭವನ ದಲ್ಲಿ ಹಮ್ಮಿಕೊಂಡಿದ್ದ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಮಾತನಾಡಿದರು. ನೀವು ಕಲಿಯುವ ಶಾಲೆ ಯಾವುದೇ ಆಗಿರಲಿ ಅಲ್ಲಿಯೇ ಸಾಧನೆ ಮಾಡಬಹುದು. ಈ ಸನ್ಮಾನ ತಮ್ಮ ಪ್ರತಿಭೆ ಮುಂದಿನ ಪುರಸ್ಕಾರಗಳು ನಿಮ್ಮದಾಗಲಿ.

ಅವರು ನಿಮ್ಮ ಶೈಕ್ಷಣಿಕ ಭವಿಷ್ಯದಲ್ಲೂ ನಿಮ್ಮ ಗುರಿ ತಲುಪುವ ವರೆಗೂ ನೀವು ಟಾಪ್ ಇರಬೇಕು.ಪಾಲಕರ ಮತ್ತು ಶಿಕ್ಷಕರ ಪ್ರೋತ್ಸಾಹ ದಿಂದ ಈ ವರ್ಷದ ಫಲಿತಾಂಶ ಉತ್ತಮವಾಗಲು ಕಾರಣ ವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖಂಡ ಅಶೋಕ ಕೋಟನಕರ, ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರನಗೌಡ ಕರಿಗೌಡ್ರ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹಿರೇಮಠ, ಪುರಸಭೆ ಮಾಜಿ ಸದಸ್ಯ ಮಂಜುನಾಥ ಹೊಸಮನಿ, ಕಾನಿಪ ತಾಲೂಕಾಧ್ಯಕ್ಷ ಅಡವೇಂದ್ರ ಇನಾಮದಾರ ಇದ್ದರು.

ಪಟ್ಟಣದ ಶ್ರೀ ಕಾಳಿದಾಸಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸನ್ಮಾನ ಕಾರ್ಯಕ್ರಮ ಜರುಗಿತು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಕ್ರಸಂ: ಪಿಬಿ/NDRF/SDRF/ಅಧಿಸೂಚನೆ:2026–27/299 ದಿನಾಂಕ: 24.04.2026

ಇ–ಟೆಂಡರ್ ಅಧಿಸೂಚನೆ IFT-KW-4

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 2 ಕಾಮಗಾರಿಗಳು

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 04–05–2026 (16.00 ಗಂಟೆವರೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 05–05–2026 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06–05–2026 (16.30 ಗಂಟೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 07–05–2026 (16.00 ಗಂಟೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/KWR/KSMCA/93/26-27 dt. 30.04.2026

ಕರ್ನಾಟಕ ಸರ್ಕಾರ

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 02/2026.27 ದಿನಾಂಕ: 28.04.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–2&3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.64.53ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.40.29 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 12–05–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/78/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eepwdmys21@gmail.com

ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:03/2026–27/2ನೇ ಕರೆ ದಿನಾಂಕ:27.04.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ : 5054–80–190–0–01–132–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿಯಲ್ಲಿ ಅನುಮೋದನೆಯಾಗಿರುವ ನಂಜನಗೂಡು ಉಪವಿಭಾಗ, ನಂಜನಗೂಡು ವ್ಯಾಪ್ತಿಯ **01** ಕಾಮಗಾರಿ, ಮತ್ತು 4059–80–051–0–60–ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ–423–ಗಿರಿಜನ ಉಪ ಯೋಜನೆಯ ಅನುಮೋದನೆಯಾಗಿರುವ ತಿ.ನರಸೀಪುರ ಉಪವಿಭಾಗ, ತಿ.ನರಸೀಪುರ ವ್ಯಾಪ್ತಿಯ **01 ಸಂಖ್ಯೆ** ಕಾಮಗಾರಿಗೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ **ಕೆ.ಡಬ್ಲ್ಯೂ 3 , & 4ರ** ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ **"ಅರ್ಹ"** ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ **(viz https://kppp.karnataka.gov.in/) :ದಿ:27.04.2026** ರಿಂದ **05.05.2026** ರ ಸಂಜೆ **17:00** ರವರೆಗೆ ಸಲ್ಲಿಸಬಹುದಾಗಿರುತ್ತದೆ. ಹಾಗೂ ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ **ರೂ.59.98** ಲಕ್ಷಗಳು ಹಾಗೂ ಇ.ಎಂ.ಡಿ **ರೂ.1.20** ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ **ರೂ.120.56** ಲಕ್ಷಗಳು ಹಾಗೂ ಇ.ಎಂ.ಡಿ **ರೂ.2.00** ಲಕ್ಷಗಳಾಗಿರುತ್ತದೆ. ಮತ್ತು ಕ್ರಮ ಸಂಖ್ಯೆ 01 ರ ಕಾಮಗಾರಿಯ ಪೂರ್ವಭಾವಿ ಸಭೆಯನ್ನು ದಿ:30.04.2026 ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

DIPR/DD/MYS/115/KSMCA/104/2026-27

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ.

No.EE/MID/VJP/AE-1/4702/TND/2026-27/287 Date: 27.04.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಚಡಚಣ ತಾಲ್ಲೂಕಿನ ಕೊಂಕಣಗಾಂವ ಗ್ರಾಮದ ಬೋರಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿ**(3ನೇ ಕರೆ)**, ಟೆಂಡರಿಗಿಟ್ಟ ಮೊತ್ತ: **ರೂ.799.79ಲಕ್ಷ**, ಇ.ಎಂ.ಡಿ. ಮೊತ್ತ: **ರೂ.12,00,000–00, ಮೇಲಿನ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು ಮಣ್ಣೂರ ಮತ್ತು ನಾಗವಾಡ ಗ್ರಾಮದ ಪರಿಶಿಷ್ಟ ಜಾತಿಯ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಸುಧಾರಣೆಗಾಗಿ ಸರಣಿ ಬಾಂದಾರ/ಬ್ಯಾರೇಜ್/ಬಿಸಿಬಿ ನಿರ್ಮಾಣ ಕಾಮಗಾರಿ**(2ನೇ ಕರೆ)**, ಟೆಂಡರಿಗಿಟ್ಟ ಮೊತ್ತ **ರೂ. 800.00ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https://kppp.karnataka.gov.in/#/portal/ portal-home** ನಲ್ಲಿ ಲಾಗಿನ್ ಆಗಿ **ದಿನಾಂಕ: 28.04.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟ್‌ನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮಾತ್ರ) "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https://kppp.karnataka.gov.in/#/portal/ portal-home**ನಲ್ಲಿ ಲಾಗಿನ್ ಆಗಿ **ದಿನಾಂಕ: 06.05.2026ರ 17:30 ಘಂಟೆವರೆಗೆ** ಸ್ವೀಕರಿಸಲಾಗುವದು. **ದಿನಾಂಕ: 04.05.2026ರಂದು** ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನುಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು **ದಿನಾಂಕ: 05.05.2026ರ 17:30 ಘಂಟೆವರೆಗೆ** ವಿಭಾಗ ಕಛೇರಿಯಲ್ಲಿ ಅಥವಾ " ಇ–ಪ್ರೋಕ್ಯರಮೆಂಟ್" ಹೆಲ್ಪಡೆಸ್ಕ್‌ನಿಂದ (ಫೋನ್: 080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರ್‌ಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ.

ವಾಸಸಂಇ/ವಿಜಯಪುರ/ಆರ್.ಓ.ಸಂಖ್ಯೆ 58/ಕೆಎಸ್‌ಎಂಸಿಎ/2026–27

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ ಃ+ ಗ್ರೇಡ್ – 2021) PM-USHA (MERU)

E-mail: registrar@rcub.ac.in Phone No.: 0831-2565242

ಕುಲಸಚಿವರ ಕಾರ್ಯಾಲಯ

ಸಂ: ರಾಚವಿ/ಬೆಳಗಾವಿ/ಕುಸಕಾ/2026-27/494 ದಿನಾಂಕ:30.04.2026

ಆಸಕ್ತಿ ಅಭಿವ್ಯಕ್ತಿಗೆ ಅಧಿಸೂಚನೆ (Expression of interest)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ ಮತ್ತು ತರಬೇತಿಗಳನ್ನು ನೀಡುವ ಕುರಿತಂತೆ **Development of Digital Repository and Competitive Exam Course Content Creation** ಸೇವೆಯನ್ನು ಒದಗಿಸಲು ಆಸಕ್ತಿ ಅಭಿವ್ಯಕ್ತಿಗೆ ಕೆ.ಪಿ.ಪಿ. ಮೂಲಕ ಅಧಿಸೂಚನೆ ಮಾಡಲಾಗಿದೆ. ಪೂರ್ವಾನುಭವ ಮತ್ತು ಪ್ರಸ್ತಾವಿತ ಕಾರ್ಯದ ಘೇರೆಯನ್ನು ಒಳಗೊಂಡು ಆಸಕ್ತ ಸಂಸ್ಥೆಗಳು ದಿನಾಂಕ **14.05.2026** ರ ಸಂಜೆ **5.00** ಗಂಟೆಯೊಳಗಾಗಿ **https://kppp.karnataka.gov.in/** ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **www.rcub.ac.in**ನಿಂದ ಅಥವಾ ಎಸ್ಟೇಟ್ ವಿಭಗದಿಂದ ಪಡೆಯಬಹುದಾಗಿದೆ.

ಸಹಿ/–
ಕುಲಸಚಿವರು
ರಾಣಿ ಚನ್ಮಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂಖ್ಯೆ: ಕಾಇಂ:ಗ್ರಾಕುನೀ&ನೈವಿ:ದಾ:ಕಿಇಂ–1:ಹೊ.ಗು.ಸಿ:2026–27/126
ದಿನಾಂಕ: 30/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ದಾವಣಗೆರೆ ಇವರ ವ್ಯಾಪ್ತಿಯಲ್ಲಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಸೇವಾ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಸಂಸ್ಥೆ/ಏಜೆನ್ಸಿಯಿಂದ KPPP ಪೋರ್ಟಲ್ ಮುಖಾಂತರ (1) ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ದಾವಣಗೆರೆ ಜಿಲ್ಲೆಯ ವೃತ್ತ ಕಛೇರಿ, ವಿಭಾಗ ಮತ್ತು ಉಪ–ವಿಭಾಗಗಳಲ್ಲಿ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಸಲುವಾಗಿ ಆರ್ಹ ಏಜೆನ್ಸಿಯನ್ನು ನೇಮಿಸಲು ಕಾಮಗಾರಿ, ಅಂದಾಜು ಮೊತ್ತ: 110.30 ಲಕ್ಷಗಳು (2) ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ದಾವಣಗೆರೆ ಜಿಲ್ಲೆಯ ಮತ್ತು ತಾಲ್ಲೂಕು ಮಟ್ಟದ ಪ್ರಯೋಗಾಲಯದ ಸಿಬ್ಬಂದಿಗಳ ಸೇವೆಯನ್ನು ಮಾನವ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಸಲುವಾಗಿ ಆರ್ಹ ಏಜೆನ್ಸಿಯನ್ನು ನೇಮಿಸಲು ಕಾಮಗಾರಿ. ಅಂದಾಜು ಮೊತ್ತ: 47.39 ಲಕ್ಷಗಳು (3) ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಜಲ್ ಜೀವನ್ ಮಿಷನ್ ಯೋಜನೆಯಡಿ ತಾವರಕೆರೆ ಗ್ರಾಮದಲ್ಲಿ ಮನೆ ಮನೆಗೆ ನಳ ಸಂಪರ್ಕ ಕಲ್ಪಿಸುವ ಕಾಮಗಾರಿ. ಅಂದಾಜು ಮೊತ್ತ: 165.64 ಲಕ್ಷಗಳು

ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 08–05–2026ರ ಸಂಜೆ 17–00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11–05–2026ರ ಸಂಜೆ 11–00ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ: 14–05–2026ರ ಬೆಳಿಗ್ಗೆ 11–00 ಗಂಟೆಗೆ

ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ವಿವರಗಳನ್ನು ಮತ್ತು ನಿಬಂಧನೆಗಳನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08192–262126 ಸಂಪರ್ಕಿಸಿ ಅಥವಾ http// kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/56/ ಕೆಎಸ್‌ಎಂಸಿಎ/2026–27

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ಜಂಟಿ ಕೃಷಿ ನಿರ್ದೇಶಕರವರ ಕಾರ್ಯಾಲಯ,

ಜಿಲ್ಲಾ ನ್ಯಾಯಾಲಯದ ಹತ್ತಿರ, ತುಮಕೂರು–572101

ಇಮೇಲ್ :– **jdagritmr@yahoo.com**

ಸಂಖ್ಯೆ:ಜ.ಕೃ.ನಿ/ತುಮ/ಆಡಳಿತ/ಇ–ಟೆಂಡರ್/CEPMIZ/2026–27
ದಿನಾಂಕ: 28.04.2026

ಇ–ಟೆಂಡರ್ ಪ್ರಕಟಣೆ

ಜಂಟಿ ಕೃಷಿ ನಿರ್ದೇಶಕರು, ತುಮಕೂರು, ಕೃಷಿ ಇಲಾಖೆಯಲ್ಲಿ Comprehensive Environment Plan for Mining Impact Zone (CEPMIZ PHASE II) ಯೋಜನೆಯಡಿ ಅನುಮೋದನೆಗೊಂಡ ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ತಿಪಟೂರು ತಾಲ್ಲೂಕಿನ ಯೋಜನೆಗಳಡಿ GOI ಮಾರ್ಗಸೂಚಿಯಂತೆ (Awareness Creation, Mobilization of people and Orientation, Base Line Survey, PRA Exercise, Traverse Survey, Net Planning, Beneficiary identification for Assisting in DPR preparation in mining affected taluks of Tumkur district) ಅರ್ಹ ಸರ್ಕಾರೇತರ ಸಂಸ್ಥೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ (Tender Number- AD/2025-26/SE0478). ನಿಯಮಾನುಸಾರ ಮುಂಗಡ ಠೇವಣಿ ಮೊತ್ತ ಮತ್ತು ಸದರಿ ಕಾರ್ಯಗಳನ್ನು ಕೈಗೊಳ್ಳಲು ಸಾಮರ್ಥ್ಯದ ಬಗ್ಗೆ ವಿವರಗಳನ್ನು ಸಲ್ಲಿಸಬೇಕಾಗಿರುತ್ತದೆ. ಸರ್ಕಾರೇತರ ಸಂಸ್ಥೆದಾರರು ಕರ್ನಾಟಕ ಸರ್ಕಾರದ "ಇ–ಪ್ರೊಕ್ಯೂರ್‌ಮೆಂಟ್" https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ದಿನಾಂಕ: 23.04.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಮ್.ಡಿ ಹಾಗೂ ಟೆಂಡರ್ ಶುಲ್ಕದೊಂದಿಗೆ ವೆಬ್‌ಸೈಟ್‌ನಲ್ಲಿ ನಿಗದಿಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮೂಲಕ ಮಾತ್ರ "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ https://kppp.karnataka.gov.in ನಲ್ಲಿ ಕೊನೆಯ ದಿನಾಂಕ: 06.05.2026 ರಂದು ಸಾಯಂಕಾಲ 5:00 ಗಂಟೆಯೊಳಗೆ ಸ್ವೀಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರು, ತುಮಕೂರು ಕಛೇರಿಯಿಂದ ಮಾಹಿತಿ ಪಡೆಯಬಹುದು.

ಸಹಿ/–ಜಂಟಿ ಕೃಷಿ ನಿರ್ದೇಶಕರು,
ತುಮಕೂರು ಜಿಲ್ಲೆ,

DIPR/TUM/43/KSMCA/2026-27

ಕರ್ನಾಟಕ ಸರಕಾರ

(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2026–27/523 ದಿನಾಂಕ:28/04/2026

ಅಲ್ಪಾವಧಿ ಇ–ಮರು ಟೆಂಡರ್ ಪ್ರಕಟಣೆ (Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059–ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು (CMIDP) ಅಡಿ 1 ಕಾಮಗಾರಿ ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ರೂ. 160.00 ಲಕ್ಷ ಇರುವ ಕಾಮಗಾರಿಗೆ ಮರುಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:05–05–2026 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:06–05–2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 08–05–2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 11–05–2026 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-176/KSMCA/2026-27

ಅತ್ತಿಬೆಲೆ ಪುರಸಭೆ ಕಾರ್ಯಾಲಯ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562107.
ದೂರವಾಣಿ ಸಂಖ್ಯೆ: 080–27821501, ಇ–ಮೇಲ್: itstaff_ulb_attibele@yahoo.com
ವೆಬ್‌ಸೈಟ್: www.attibeletown.mrc.gov.in

ಸಂಖ್ಯೆ: ಅಪುಸ:ಕಾವಿ:ಟೆಂಡರ್/01/2026–27 ದಿನಾಂಕ: 30.04.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 1999–2000 ಪ್ರಕಾರ ಆಕ್ಟ್ 2000ರ ನಿಯಮದಂತೆ ಅತ್ತಿಬೆಲೆ ಪುರಸಭೆಯ ವಿವಿಧ ಯೋಜನೆಯಡಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆ ಗುತ್ತಿಗೆದಾರರು / ಸರಬರಾಜುದಾರರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಕೆ.ಪಿ.ಪಿ.ಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ **http://kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ವಿವರಗಳನ್ನು ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದಾಗಿದೆ. ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

ಕ್ರ ಸಂ	ಇಂಡೆಂಟ್ ನಂ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇ.ಎಂ.ಡಿ ಮೊತ್ತ ರೂ	ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಂಕ
1	DMA/2026-27/ WS/WORK_ INDENT57700	5.50	11600.00	28.04.2026	12.05.2026

ಸಹಿ/–
ಆಡಳಿತಾಧಿಕಾರಿಗಳು,
ಪುರಸಭೆ, ಅತ್ತಿಬೆಲೆ

ವಾಸಾಸಂಇ/ವಾ.ಪ್ರ/451/ಶಿರಡಿ ಸಾಯಿ/2026–27

ಸಹಿ/–
ಮುಖ್ಯಾಧಿಕಾರಿ,
ಪುರಸಭೆ, ಅತ್ತಿಬೆಲೆ

ಕರ್ನಾಟಕ ಸರ್ಕಾರ

ಜಿಲ್ಲಾ ಆಯುಷ್ ಕಛೇರಿ

ಬೃಂದಾವನ ಬಡಾವಣೆ, ಕೆ.ಆರ್.ಎಸ್. ರಸ್ತೆ, ಮೈಸೂರು–570 020.
ಇಮೇಲ್: dao.mysore09@gmail.com ದೂರವಾಣಿ/ಫ್ಯಾಕ್ಸ್ : 0821–2512962

ಸಂಖ್ಯೆ: ಜಿಆಕಮೈ/61/ಹೊಗು/2025–26 ದಿನಾಂಕ: 29.04.2026

ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಕಛೇರಿ, ಮೈಸೂರು ಇಲ್ಲಿಗೆ 2025–2026ನೇ ಸಾಲಿನಿಂದ ಸರ್ಕಾರದಿಂದ ಮಾನ್ಯತೆ ಪಡೆದ ಮಾನವ ಸಂಪನ್ಮೂಲ ಸಂಸ್ಥೆ ವತಿಯಿಂದ 31 ಜನ ಗ್ರೂಪ್ "ಡಿ" ಹೊರಗುತ್ತಿಗೆ ಸಿಬ್ಬಂದಿ ಸೇವೆಯನ್ನು ಮರು ಇ–ಟೆಂಡರ್ ಮೂಲಕ ಆಸ್ಪತ್ರೆ /ಚಿಕಿತ್ಸಾಲಯಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ, ಟೆಂಡರ್ ಅವಧಿ ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಇರುತ್ತದೆ.

ಮರು ಟೆಂಡರ್ ವಿವರಗಳಿಗಾಗಿ ವೆಬ್‌ಸೈಟ್ http://www.kppp.karnataka.gov.in ನ್ನು ಗಮನಿಸುವುದು ಮರು ಟೆಂಡರ್ ವಿವರಗಳನ್ನು ಅಪ್ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 12.05.2026ರ ಸಂಜೆ 5.30 ಗಂಟೆವರೆಗೆ** ಕಾಲಾವಕಾಶವಿರುತ್ತದೆ. ಹಾಗೂ ಟೆಂಡರ್ ತೆರೆಯುವ **ದಿನಾಂಕ: 14.05.2026ರಂದು ಪೂರ್ವಾಹ್ನ 12.00 ಗಂಟೆಗೆ** ನಿಗದಿಪಡಿಸಿದೆ. ವಾರ್ಷಿಕ ಟೆಂಡರ್ ಮೊತ್ತವು ರೂ. 75.00 ಲಕ್ಷ (ರೂ ಎಪ್ಪತ್ತೈದು ಲಕ್ಷ ಮಾತ್ರ) ಮತ್ತು ಇ.ಎಂ.ಡಿ ಮೊತ್ತ ರೂ.1.50 ಲಕ್ಷಗಳು (ರೂ. ಒಂದು ಲಕ್ಷದ ಐವತ್ತು ಸಾವಿರ ಮಾತ್ರ)ಗಳನ್ನು ನಿಗದಿಪಡಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ **ಜಿಲ್ಲಾ ಆಯುಷ್ ಕಛೇರಿ,** ಎಸ್.ಬಿ.ಐ. ಬ್ಯಾಂಕ್ ಎದುರು, ಬೃಂದಾವನ ಬಡಾವಣೆ, ಮೈಸೂರು–20 ಇಲ್ಲಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
ಜಿಲ್ಲಾ ಆಯುಷ್ ಅಧಿಕಾರಿಗಳು
ಮೈಸೂರು

ವಾಸಾಸಂಇ/ಮೈಸೂರು/ಶಿರಡಿಸಾಯಿ/129/2026–27

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-487/433/2026–27(E-194540) ದಿನಾಂಕ: 30.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಎನ್. ಶ್ರೀಲತ ಕೋಂ ಎಂ. ನಾರಾಯಣರೆಡ್ಡಿ	ಬೆಂಗಳೂರು ಪೂರ್ವ	ವರ್ತೂರು	ಹಾಡೋ ಸಿದ್ದಾಪುರ	63/2	1–14	ವಸತಿ	ವಾಣಿಜ್ಯ
					63/4	0–7.50		
					63/7	0–2.50		
					ಒಟ್ಟು	1–24		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ. ಜಮೀನಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಮಿಶ್ರ ಅಭಿವೃದ್ಧಿಗಳು ಬಂದಿರುವುದರಿಂದ ವಾಣಿಜ್ಯ ಬೆಳವಣಿಗೆಗಳನ್ನು ಕೈಗೊಂಡಿದ್ದಲ್ಲಿ ಯೋಜಿತ ಬೆಳವಣಿಗೆಗೆ ಬೇಕಾಗುವ ಮೂಲಸೌಕರ್ಯಗಳು ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವಸತಿ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123
ಇ–ಮೇಲ್: nelamangala.pa@gmail.com Phone No: 96630 46622

ಸಂಖ್ಯೆ: ನೆಯೋಪ್ರಾ: CLU:131:2025-26 ದಿನಾಂಕ: 30–04–2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಭೈರಶೆಟ್ಟಿಹಳ್ಳಿ** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ 'ವಸತಿ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ.ಜನಾರ್ಧನ್.ಎಸ್.ಆರ್ ಬಿನ್ ರಾಮಕೃಷ್ಣಪ್ಪ, ಮತ್ತು ಶ್ರೀ.ವಿಜಯ್ ಬಪ್ನಾ ಬಿನ್ ಮನೋಹರ್ ಲಾಲ್ ಬಪ್ನಾ	ನೆಲಮಂಗಲ, ಕಸಬಾ, ಭೈರಶೆಟ್ಟಿಹಳ್ಳಿ	164/1	00–38	**ವ್ಯವಸಾಯ**	**ವಸತಿ**

ಷರಾ:– ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/452/ಆಕಾರ್/2026–27

...ಎಇ ಅಮಾನತಿಗೆ ಆದೇಶ

← ಮೊದಲಪುಟದಿಂದ

ಆಸ್ಪತ್ರೆಯ ಗೋಡೆ ಶಿಥಿಲಗೊಂಡು ದುರ್ಬಲವಾಗಿದೆ ಎಂಬುದು ತಿಳಿದಿದ್ದರೂ ಕಾಮಗಾರಿ ನಡೆಯುವಾಗ ಅದರ ಪಕ್ಕದಲ್ಲೇ ಮಣ್ಣು ಸುರಿದದ್ದು ಏಕೆ ಎಂದು ಮುಖ್ಯಮಂತ್ರಿ ಅಧಿಕಾರಿಗಳನ್ನು ಪ್ರಶ್ನಿಸಿದರು.

ಕಾಮಗಾರಿ ನಡೆಸುವಾಗ ಕನಿಷ್ಠ ಸುರಕ್ಷತಾ ಕ್ರಮ ಅನುಸರಿಸದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, ನಿಮ್ಮ ನಿರ್ಲಕ್ಷ್ಯದಿಂದಲೇ ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಮಣ್ಣಿನ ಒತ್ತಡಕ್ಕೆ ಹಳೆಯ ಗೋಡೆ ಬೀಳುತ್ತದೆ ಎಂಬ ಸಾಮಾನ್ಯ ಜ್ಞಾನ ನಿಮಗಿರಲಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು. ಕೇವಲ ಎಂಜಿನಿಯರ್‌ಗಳಷ್ಟೇ ಅಲ್ಲದೆ ಆಸ್ಪತ್ರೆ ಆಡಳಿತ ಮಂಡಳಿಯ ಮೇಲೂ ಸಿಎಂ ಕೆಂಡಾಮಂಡಲವಾದರು. ಆಸ್ಪತ್ರೆ ಆವರಣದಲ್ಲಿ ಇಷ್ಟೆಲ್ಲ ಅವಾಂತರ ನಡೆಯುತ್ತಿದ್ದರೂ ಏನು ಮಾಡುತ್ತಿದ್ದಿರಿ?, ಏಕೆ ಮೇಲ್ವಿಚಾರಣೆ ನಡೆಸಲಿಲ್ಲ? ಎಂದು ಆಸ್ಪತ್ರೆ ಮುಖ್ಯಸ್ಥರನ್ನು ಪ್ರಶ್ನಿಸಿದ ಅವರು, ತಕ್ಷಣವೇ ನೋಟಿಸ್ ನೀಡುವಂತೆ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗೆ ಆದೇಶಿಸಿದರು.

ಡೆತ್ ಆಡಿಟ್‌ಗೆ ಸೂಚನೆ: ನಗರದಾದ್ಯಂತ ಇರುವ ಹಳೆಯ ಮತ್ತು ಅಪಾಯಕಾರಿ ಗೋಡೆಗಳನ್ನು ಗುರುತಿಸಿ ಕೂಡಲೇ ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದರು. ಬುಧವಾರ ಬೆಂಗಳೂರಿನಲ್ಲಿ ಸುರಿದ ಮಳೆಗೆ ಸಾಕಷ್ಟು ಹಾನಿಯಾಗಿದ್ದು, 250ಕ್ಕೂ ಹೆಚ್ಚು ಮರಗಳು ಬಿದ್ದಿವೆ. ಏಳು ಜನ ಸಾವನ್ನಪ್ಪಿದ್ದಾರೆ. ಈಗಾಗಲೇ ಸತ್ತವರ ಕುಟುಂಬದವರಿಗೆ 5 ಲಕ್ಷ ರು. ಪರಿಹಾರ ಘೋಷಣೆ ಮಾಡಲಾಗಿದೆ. ಗಾಯಗೊಂಡವರಿಗೆ ಉಚಿತ ಚಿಕಿತ್ಸೆ ನೀಡುವಂತೆ ಸೂಚಿಸಿದರು.

ಮುಂಗಾರು ಆರಂಭಕ್ಕೂ ಮುನ್ನ ಸಿದ್ಧತೆ ಕೈಗೊಳ್ಳಲು ಸೂಚನೆ: ಮುಂಗಾರು ಮಳೆ ಪ್ರಾರಂಭವಾಗುವ ಮೊದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಬೆಂಗಳೂರಿನ ಐದೂ ವಲಯಗಳ ಆಯುಕ್ತರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಒಣಗಿರುವ ಅಪಾಯಕಾರಿ ಮರಗಳ ರೆಂಬೆಗಳನ್ನು ಕತ್ತರಿಸಬೇಕು. ಮುಂದಿನ ದಿನಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಗಳಿದ್ದು ರಾಜಕಾಲುವೆಗಳಲ್ಲಿ ಹೂಳು ತೆಗೆಯುವುದು, ಪ್ರವಾಹ ಉಂಟಾಗದಂತೆ ಕ್ರಮ ತೆಗೆದುಕೊಳ್ಳಬೇಕು. ಮಳೆಯಿಂದ ರಸ್ತೆಯಲ್ಲಿ ಬಿದ್ದಿರುವ ಕಸ, ರೆಂಬೆಗಳನ್ನು ಕೂಡಲೇ ತೆರವು ಮಾಡಬೇಕು. ಅಂಡರ್ ಪಾಸ್‌ಗಳಲ್ಲಿ ಮಳೆ ನೀರು ನಿಲ್ಲದಂತೆ ಹಾಗೂ ಜನ ಅಂಡರ್‌ಪಾಸ್ ಬಳಸದಂತೆ ಕೂಡಲೇ ಬ್ಯಾರಿಕೇಡ್ ಹಾಕಿ ಎಂದು ಮುಖ್ಯಮಂತ್ರ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ಮೋದಿ ಸಂತಾಪ, ತಲಾ 2 ಲಕ್ಷ ರು. ಪರಿಹಾರ

ಬೌರಿಂಗ್ ಆಸ್ಪತ್ರೆ ದುರಂತಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತೀವ್ರ ಸಂತಾಪ ಸೂಚಿಸಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಬೆಂಗಳೂರಿನಲ್ಲಿ ಗೋಡೆ ಕುಸಿತದಿಂದ ಸಂಭವಿಸಿದ ಅನಾಹುತವು ಅತ್ಯಂತ ದುರದೃಷ್ಟಕರ. ದುಃಖತಪ್ತ ಕುಟುಂಬಗಳಿಗೆ ನನ್ನ ಸಂತಾಪಗಳು ಎಂದಿದ್ದಾರೆ. ಘಟನೆಯಲ್ಲಿ ಸಾವನ್ನಪ್ಪಿದವರ ಕುಟುಂಬಕ್ಕೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರು. ಹಾಗೂ ಗಾಯಗೊಂಡವರಿಗೆ 50 ಸಾವಿರ ರು. ರೂಪಾಯಿ ಪರಿಹಾರ ನೀಡುವುದಾಗಿ ತಿಳಿಸಲಾಗಿದೆ.

...ಪರಿಹಾರ ಸಾಧ್ಯವಿರಲಿಲ್ಲ

← ಮೊದಲಪುಟದಿಂದ

ಹೀಗಾಗಿ ಸಿದ್ದರಾಮಯ್ಯ ಅವರು ನ್ಯಾ.ನಾಗಮೋಹನ್ ದಾಸ್ ಅವರ ಆಯೋಗ ರಚಿಸಿ ಅವರಿಂದ ಸುಪ್ರೀಂಕೋರ್ಟ್ ಆದೇಶದಂತೆ ಸಮಗ್ರ ಮಾಹಿತಿ ಇರುವ ವೈಜ್ಞಾನಿಕ ವರದಿ ಪಡೆದು ಶೇ.17ರಂತೆ ಒಳಮೀಸಲಾತಿ ಕಲ್ಪಿಸಲು ನಿರ್ಧರಿಸಿದ್ದರು.

ಈ ಮಧ್ಯೆ, ಖಾಲಿ ಇರುವ 56 ಸಾವಿರ ಹುದ್ದೆಗಳ ಭರ್ತಿಗಾಗಿ ನಡೆದ ನಿರುದ್ಯೋಗಿಗಳ ಹೋರಾಟ ಮತ್ತು ಹೈ ತೀರ್ಪು ಒಳಮೀಸಲಾತಿ ಜಾರಿಗೆ ಕೊಂಚ ಹಿನ್ನಡೆಯಾಗಿತ್ತಾದರೂ ನಂತರ ದಲ್ಲಿ ಸಿದ್ದರಾ ಮಯ್ಯ ಅವರ ಸಾಮಾಜಿಕ ನ್ಯಾಯದಸೂತ್ರದ ಪರಿಣಾಮ ಶೇ.15ರಲ್ಲಿ ಒಳ ಮೀಸಲಾತಿ ಹಂಚಿಕೆ ಯ ಮಹತ್ವದ ತೀರ್ಮಾನ ಪ್ರಕಟವಾಯಿತು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರಿಗೆ ಸರಕಾರದ ಒಳಗೆ ಹಾಗೂ ಹೊರಗೆ ಸಾಕಷ್ಟು ಪರ, ವಿರೋಧಗಳು ಎದುರಾಗಿದ್ದರೂ ಇದೆಲ್ಲವನ್ನೂ ಸಾಧಿಸಲು ಸಿದ್ದರಾಮಯ್ಯ ಅವರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಪೂರ್ಣ ಸಹಕಾರ ನೀಡಿದ್ದರು.

ಜತೆಗೆ ಎಲ್ಲಾ ಮಂತ್ರಿಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಳಮೀಸಲಾತಿ ಹಂಚಿಕೆ ಸರ್ವಾನುಮತದ ನಿರ್ಣಯ ವಾಗುವಂತೆ ಮಾಡಿದ್ದಾಗ ನಿಜಕ್ಕೂ ಸಿದ್ದರಾಮಯ್ಯ ಅವರಲ್ಲಿದ್ದ ರಾಜಕೀಯ ಮುತ್ಸದ್ದಿತನ ಎದ್ದುಕಾಣಿಸಿತು. ಹೀಗಾಗಿ ಎಡಗೈ ಮತ್ತು ಬಲಗೈ ಸಮುದಾಯಕ್ಕೆ ತಲಾ ಶೇ.5.25ರಷ್ಟು ಹಾಗೂ ಸ್ಪೃಶ್ಯ ಹಾಗೂ ಅಲೆಮಾರಿ ಸಮುದಾಯಕ್ಕೆ ಶೇ.4ರಷ್ಟು ಮೀಸಲಾತಿ ನೀಡಿ ಪರಿಶಿಷ್ಟರ ಒಳಗಿನ ಐತಿಹಾಸಿಕ ಹೋರಾಟಕ್ಕೆ ಒಂದು ಅಂತ್ಯ ಹಾಡುವಲ್ಲಿ ಸಿದ್ದರಾಮಯ್ಯ ಅವರು ನಿಜವಾದ ನೊಂದ ಸಮಾಜದ ನ್ಯಾಯವಿತರಕ ರಾದರು. ಜೊತೆಗೆ ನೇಮಕಕ್ಕೆ ಸಂಬಂಧಿಸಿದ ರೋಸ್ಟರ್ ಬಿಂದು ಸಮಸ್ಯೆಗೂ ವೈಜ್ಞಾನಿಕ ಪರಿಹಾರ ಕಂಡುಕೊಳ್ಳುತ್ತಿದ್ದಾರೆ.

ಒಟ್ಟಾರೆ ಒಳಮೀಸಲಾತಿ ವಿಚಾರದಲ್ಲಿ ಸಿದ್ದರಾಮಯ್ಯ ಅವರು ಸದಾ ಕೋಮು ಗೊಂದಲ ಕಾವು ಪಡೆಯುತ್ತಿದ್ದ ಒಳಮೀಸಲಾತಿ ಹೋರಾಟದ ಕಿಡಿಯನ್ನು ಇಷ್ಟು ಸುಲಭವಾಗಿ ಬಗೆಹರಿಸುತ್ತಾರೆ ಎಂದು ಯಾರೂ ಭಾವಿಸಿರಲಿಲ್ಲ, ಆದ್ದರಿಂದ ಈ ವಿವಾದವನ್ನು ಬಹುಶಃ ಸಿದ್ದರಾಮಯ್ಯ ಅವರ ಬಿಟ್ಟರೆ ಬೇರೆ ಯಾರಿಂದಲೂ ಬಗೆಹರಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಸ್ಥಾನದಲ್ಲಿ ಬೇರೆ ಯಾವುದೇ ನಾಯಕರಿದ್ದರೂ ಪರಿಸ್ಥಿತಿ ಬೇರೆಯೇ ಆಗಿರುತ್ತಿತ್ತೇನೋ? ಏಕೆಂದರೆ, ಒಳಮೀಸಲಾತಿ ಹೋರಾಟಗಳನ್ನು ಸಾಕಷ್ಟು ಧೀಮಂತ, ದಿಗ್ಗಜರು, ಮುಖ್ಯಮಂತ್ರಿಗಳು, ನಾಯಕರು ನೋಡಿಕೊಂಡೇ ಸಾಗಿ ಹೋಗಿದ್ದಾರೆ.

ಆದರೆ ಇಷ್ಟು ಪ್ರಯತ್ನ ಮಾಡಲಿಲ್ಲ. ಮಾಡಿದ್ದ ಪ್ರಯತ್ನಕ್ಕೆ ಯಶಸ್ಸೂ ಸಿಗಲಿಲ್ಲ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳಮೀಸಲಾತಿ ಹಂಚಿಕೆಯ ವಿಚಾರದಲ್ಲಿ ಬರೀ ರಾಜ್ಯಕ್ಕೆ ಮಾತ್ರವಲ್ಲ, ಇಡೀ ದೇಶಕ್ಕೇ ಮಾದರಿ ಎಂದರೆ ತಪ್ಪಾಗಲಾರದು.

ಸಮಾಚಾರ ಸಣ್ಣದಲ್ಲ

ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಪುರಾಣ ಪ್ರಸಿದ್ಧ ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವವು ಅತ್ಯಂತ ಸಂಭ್ರಮದಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಗುರುವಾರ ಜರುಗಿತು. ರಥೋತ್ಸವ ಕಂಡು ಭಕ್ತರು ಗೋವಿಂದಾ.. ಗೋವಿಂದಾ ಎಂದು ಜಯಘೋಷ ಮೊಳಗಿಸಿದರು.

ರಾಯಚೂರು: ಬಿಸಿಲ ಬೇಗೆಗೆ ಕಾರ್ಮಿಕ ಬಲಿ

ರಾಯಚೂರು: ಉದ್ಯೋಗ ಖಾತ್ರಿ ಕೆಲಸಕ್ಕೆ ತೆರಳಿದ್ದ ವೇಳೆ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಸಿಂಧನೂರು ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ನಡೆದಿದೆ. 65 ವರ್ಷದ ಅಂಬಣ್ಣ ಮೃತಪಟ್ಟ ನರೇಗಾ ಕೂಲಿಕಾರ್ಮಿಕ. ಎದೆ ನೋವು ಕಾಣಿಸಿಕೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ವೇಳೆ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾನೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ, ಬಿರು ಬಿಸಿಲಿನ ತಾಪಮಾನಕ್ಕೆ ಸುಸ್ತಾಗಿ ಕುಸಿದು ಬಿದ್ದು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ. ಸಿಂಧನೂರು ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಬೌದ್ಧ ಬಿಕ್ಕುವಿನ ಶವ ಪತ್ತೆ, ಕೊಲೆ ಶಂಕೆ

ಧಾರವಾಡ: ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆ ಬಳಿ ಇರುವ ಧಾರವಾಡ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುವ ಹಳಿಯಾಳ ಕೆಳ ಸೇತುವೆ ಬಳಿ ಟಿಬೆಟಿಯನ್ ಮೂಲದ ಬೌದ್ಧ ಬಿಕ್ಕು ಒಬ್ಬರ ಶವ ಪತ್ತೆಯಾಗಿದ್ದು, ಇದರಲ್ಲಿ ಕೊಲೆ ಶಂಕೆ ವ್ಯಕ್ತ ವಾಗಿದೆ. ಟಿಬೆಟಿಯನ್ ಮೂಲದ ಥಾಶಿದೊಂಡು (39) ಎಂಬ ವ್ಯಕ್ತಿಯೇ ಸಾವಿಗೀಡಾದರು.ಈತ ಮುಂಡಗೋಡದಲ್ಲಿ ವಾಸವಾಗಿದ್ದರು ಎನ್ನಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
01.05.2026
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ. ಪಿ.ಕೆ. ನಂದೀಶ
ವಿಷಯ
ಅರವಿಂದರ ಸಾವಿತ್ರಿ 22

vishwavani.news

ದಿನ ವಿಶೇಷ

01 ಮೇ 2026 ಶುಕ್ರವಾರ

» ಸೂರ್ಯೋದಯ	5-57
» ಸೂರ್ಯಾಸ್ತ	6-51
» ತಿಥಿ	ಹುಣ್ಣಿಮೆ
» ನಕ್ಷತ್ರ	ಸ್ವಾತಿ
» ಸಂವತ್ಸರ	ಪರಾಭವ
» ಅಯನ	ಉತ್ತರಾಯನ
» ಋತು	ಗ್ರೀಷ್ಮ
» ಮಾಸ	ವೈಶಾಖ
» ಪಕ್ಷ	ಶುಕ್ಲಪಕ್ಷ

ಫನ್‌ತರಂಗ

- ರಘುಪತಿ ಶೃಂಗೇರಿ -

ಬೇಸಿಗೆಯಿಂದ ಪಾರಾಗಲು ಜೇಬಿನಲ್ಲಿ ಈರುಳ್ಳಿ ಇಟ್ಟುಕೊಳ್ಳಿ – ಕೇಂದ್ರಸಚಿವ



ದರ್ಗಾ ಸುತ್ತಮುತ್ತ ರಹಸ್ಯವಾಗಿ ಮಾರಾಟದ ಶಂಕೆ | ವಿದ್ಯಾರ್ಥಿಗಳು, ಯುವಕರೇ ದಂಧೆಕೋರರ ಟಾರ್ಗೆಟ್

ಕಲಬುರಗಿಯಲ್ಲಿ ಇ-ಸಿಗರೇಟ್ ಮಾಫಿಯಾ?

ದೇವೇಂದ್ರ ಜಾಡಿ ಕಲಬುರಗಿ

ದೇಶಾದ್ಯಂತ ಸಂಚಲನ ಮೂಡಿಸಿದ್ದ ರಾಜಸ್ಥಾನ್ ರಾಯಲ್ಸ್ ತಂಡದ ಆಟಗಾರ ರಿಯಾನ್ ಪರಾಗ್ ಅವರ ಇ-ಸಿಗರೇಟ್ (ವೇಪಿಂಗ್) ವಿಡಿಯೊ ವೈರಲ್ ಬೆನ್ನಲ್ಲೇ, ಈಗ ಅಂತಹದ್ದೇ ಒಂದು ಕರಾಳ ಜಾಲದ ನೆರಳು ಕಲಬುರಗಿಯ ಮೇಲೂ ಬಿದ್ದಿರುವ ಶಂಕೆ ವ್ಯಕ್ತವಾಗುತ್ತಿದೆ. ನಗರದ ಪ್ರಮುಖ ಐತಿಹಾಸಿಕ ಕೇಂದ್ರವಾದ ಹಜ್ರತ್ ಖ್ವಾಜಾ ಬಂದಾನವಾಜ್ ದರ್ಗಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಷೇಧಿತ ಇ-ಸಿಗರೇಟ್‌ಗಳು ಅಕ್ರಮವಾಗಿ ಮಾರಾಟವಾಗುತ್ತಿರುವ ಗಂಭೀರ ಆರೋಪಗಳು ಕೇಳಿಬರುತ್ತಿವೆ.

ವಿದ್ಯಾರ್ಥಿಗಳೇ ಟಾರ್ಗೆಟ್?

ನಗರದ ಶಿಕ್ಷಣ ಸಂಸ್ಥೆಗಳ ಆಸುಪಾಸು ಮತ್ತು ದರ್ಗಾ ಆವರಣದ ಸಣ್ಣಪುಟ್ಟ ಅಂಗಡಿಗಳ ಮರೆಯಲ್ಲಿ ಈ ಮಾರಾಟ ನಡೆಯುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ಒಂದೊಂದು ಇ-ಸಿಗರೇಟ್ ಸಾಧನಕ್ಕೆ ಸರಿಸುಮಾರು 3,000 ದಿಂದ 3,500 ರುಪಾಯಿ ವರೆಗೆ ಬೆಲೆ ನಿಗದಿಪಡಿಸಲಾಗುತ್ತಿದ್ದು, ಯುವಕರು ಹಾಗೂ ವಿದ್ಯಾರ್ಥಿಗಳೇ ಈ ಜಾಲದ ಪ್ರಮುಖ ಗುರಿಯಾಗಿದ್ದಾರೆ. ಕಣ್ಣಿಗೆ ಕಾಣದಂತೆ, ಕದ್ದುಮುಚ್ಚಿ ನಡೆಯುವ ಈ ವ್ಯಾಪಾರ ಸದ್ದಿಲ್ಲದೆ ನಗರದ ಯುವ ಪೀಳಿಗೆಯನ್ನು ವ್ಯಸನದ ಕೂಪಕ್ಕೆ ತಳ್ಳುತ್ತಿದೆಯೇ ಎಂಬ ಅನುಮಾನ ಕಾಡುತ್ತಿದೆ.

ನಿಷೇಧಿತ ಇಸಿಗರೇಟ್.

ಸರಕಾರದ ನಿಷೇಧಕ್ಕೂ ಡೋಂಟ್ ಕೇರ್!: ಭಾರತ ಸರಕಾರವು 2019 ರಲ್ಲೇ ಇ-ಸಿಗರೇಟ್‌ಗಳ ಮಾರಾಟ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಇಷ್ಟಿದ್ದರೂ ಕಲಬುರಗಿಯಂತಹ ನಗರದಲ್ಲಿ ಇಷ್ಟು ದುಬಾರಿ ಬೆಲೆಯ ಸಾಧನಗಳು ಹೇಗೆ ಲಭ್ಯವಾಗುತ್ತಿವೆ? ಇದರ ಹಿಂದೆ ಯಾವುದಾದರೂ ದೊಡ್ಡ ಅಂತರರಾಜ್ಯ ಜಾಲ ಕೆಲಸ ಮಾಡುತ್ತಿದೆಯೇ? ಎಂಬ ಪ್ರಶ್ನೆಗಳು ಈಗ ಎದ್ದಿವೆ. ರಿಯಾನ್ ಪರಾಗ್ ಅವರ ವಿಡಿಯೊ ಚರ್ಚೆಯಾದ ಬೆನ್ನಲ್ಲೇ ಸ್ಥಳೀಯವಾಗಿಯೂ ಇದರ ಬಗ್ಗೆ ಆತಂಕ ಹೆಚ್ಚಾಗಿದೆ.

ಪೊಲೀಸ್ ಇಲಾಖೆಯ ಗಮನಕ್ಕೆ ಇದೆಯೇ?: ದರ್ಗಾ ಸುತ್ತಮುತ್ತಲಿನ ಸಂಕೀರ್ಣ ಪ್ರದೇಶಗಳಲ್ಲಿ ಇಂತಹ ಚಟುವಟಿಕೆಗಳು ನಡೆಯುತ್ತಿರುವುದು ಪೊಲೀಸರ ಗಮನಕ್ಕೆ ಬಂದಿದೆಯೇ ಅಥವಾ ಅಧಿಕಾರಿಗಳ ಕಣ್ಣು ತಪ್ಪಿಸಿ ಈ ದಂಧೆ ನಡೆಯುತ್ತಿದೆಯೇ ಎಂಬುದು ನಿಗೂಢವಾಗಿದೆ. 622ನೇ ಉರ್ಸ್ ಶರೀಫ್ ಹಿನ್ನೆಲೆಯಲ್ಲಿ ಈಗಾಗಲೇ ಭದ್ರತೆ ಹೆಚ್ಚಾಗಿರುವ ಈ ಸಂದರ್ಭದಲ್ಲಿ, ಇಂತಹ ಅಕ್ರಮ ವ್ಯಸನಕಾರಿ ವಸ್ತುಗಳ ಮಾರಾಟದ ಮೇಲೆ ನಿಗಾ ಇಡುವುದು ಅತ್ಯಗತ್ಯವಾಗಿದೆ.

ಶ್ವಾಸಕೋಶ ಸಂಬಂಧಿ ಖಾಯಿಲೆ: ಇ-ಸಿಗರೇಟ್ ಅಥವಾ ವೇಪಿಂಗ್ ಕೇವಲ ಫ್ಯಾಷನ್ ಅಲ್ಲ, ಅದು ಆರೋಗ್ಯಕ್ಕೆ ಮಾರಕ. ಇದರಲ್ಲಿರುವ ನಿಕೋಟಿನ್ ಮೆದುಳಿನ ಬೆಳವಣಿಗೆ ಕುಂಠಿತಗೊಳಿಸುವುದಲ್ಲದೆ, ಏಕಾಗ್ರತೆಯನ್ನು ನಾಶಪಡಿಸುತ್ತದೆ. ಸುಗಂಧಿತ ಹಬೆಯ ಹೆಸರಿನಲ್ಲಿ ಶ್ವಾಸಕೋಶಕ್ಕೆ ಸೇರುವ ವಿಷಕಾರಿ ರಾಸಾಯನಿಕಗಳು ಪಾಪ್‌ಕಾರ್ನ್ ಲಂಗ್ಸ್ ಎಂಬ ಗಂಭೀರ ಕಾಯಿಲೆಗೆ ಕಾರಣವಾಗುತ್ತವೆ. ಸಾಮಾನ್ಯ ಸಿಗರೇಟ್‌ಗಿಂತ ಸುರಕ್ಷಿತ ಎಂಬ ತಪ್ಪು ಕಲ್ಪನೆಯಿಂದ ಯುವಕರು ಈ ವ್ಯಸನಕ್ಕೆ ಬಲಿಯಾಗುತ್ತಿದ್ದು, ಅಲ್ಪವಯಸ್ಸಿನಲ್ಲೇ ಹೃದಯಾಘಾತ ಹಾಗೂ ಖಿನ್ನತೆಯ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ಇದರ ಮಾರಾಟ ಮತ್ತು ಸಂಗ್ರಹಣೆ ದೇಶದಲ್ಲಿ ಕಾನೂನುಬಾಹಿರ ಕೃತ್ಯವಾಗಿದೆ.

ಕಾನೂನು ಹೇಗಿದೆ?

- 2019ರ ಕಾಯ್ದೆಯಡಿ ಇ-ಸಿಗರೇಟ್‌ಗಳ ಉತ್ಪಾದನೆ, ಆಮದು, ಮಾರಾಟ, ವಿತರಣೆ ದೇಶದಲ್ಲಿ ಸಂಪೂರ್ಣ ನಿಷೇಧ
- ನಿಯಮ ಉಲ್ಲಂಘಿಸಿ ಮಾರಾಟ ಮಾಡಿದರೆ ಮೊದಲ ಬಾರಿಗೆ 1 ವರ್ಷ ಜೈಲು ಶಿಕ್ಷೆ ಅಥವಾ 1 ಲಕ್ಷ ರು. ದಂಡ ಶಿಕ್ಷೆ
- 2ನೇ ಬಾರಿ ಅಪರಾಧ ಎಸಗಿದಲ್ಲಿ ಶಿಕ್ಷೆಯ ಪ್ರಮಾಣ 3 ವರ್ಷ ಜೈಲು ಮತ್ತು 5 ಲಕ್ಷ ರು. ವರೆಗೆ ದಂಡ
- ಇ-ಸಿಗರೇಟ್‌ಗಳನ್ನು ಸಂಗ್ರಹಿಸಿಡುವುದು ಅಪರಾಧವಾಗಿದ್ದು, ಇದಕ್ಕೆ 6 ತಿಂಗಳ ಜೈಲು ಅಥವಾ 50,000 ರು. ದಂಡ
- ಇ-ಸಿಗರೇಟ್‌ಗಳ ಪ್ರಚಾರ ಅಥವಾ ಆನ್‌ಲೈನ್ ಜಾಹೀರಾತು ನೀಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ
- ಸಬ್‌ಇನ್‌ಸ್ಪೆಕ್ಟರ್ ದರ್ಜೆಯ ಅಧಿಕಾರಿಗೆ ವಾರೆಂಟ್ ಇಲ್ಲದೆಯೇ ಅಕ್ರಮ ಇ-ಸಿಗರೇಟ್ ದಾಸ್ತಾನುಗಳನ್ನು ತಪಾಸಣೆ ಮಾಡುವ ಮತ್ತು ವಶಪಡಿಸಿಕೊಳ್ಳುವ ಅಧಿಕಾರವಿದೆ.

ಕೆಬಿಎನ್ ದರ್ಗಾ ಸುತ್ತಮುತ್ತಲಿನ ಗಲ್ಲಿಗಳ ಸಣ್ಣ ಅಂಗಡಿಗಳಲ್ಲಿ, ಕಣ್ಣು ಸನ್ನೆ ಮಾಡಿದರೆ ಸಾಕು ಈ 'ಇ-ಸಿಗರೇಟ್' ಕೈ ಸೇರುತ್ತೆ. ಎಲ್ಲಿ ಸಿಗುತ್ತೆ ಅಂತ ಯಾರಿಗೂ ಸುಳಿವು ಸಿಗದಂತೆ ನಡೆಯುವ ಈ ಗುಪ್ತ ವ್ಯಾಪಾರಕ್ಕೆ ನಾವು ವಿದ್ಯಾರ್ಥಿಗಳೇ ಟಾರ್ಗೆಟ್. ಪರಿಚಯಸ್ಥರಿಗೆ ಮಾತ್ರ ನೀಡುತ್ತಾರೆ. ಮೂರೂವರೆ ಸಾವಿರ ಕೊಟ್ಟರೆ ಸಾಕು, ನಿಷೇಧಿತ ವಿಷ ನಮ್ಮ ಜೇಬು ಸೇರುತ್ತೆ.

-ಹೆಸರು ಹೇಳಲು ಇಚ್ಛಿಸಿದ ಯುವಕ

ಕೇರಳ, ತ.ನಾಡಲ್ಲಿ ನಮ್ಮ ಮೈತ್ರಿ ಗೆಲ್ಲಲಿದೆ

ಕಲಬುರಗಿ: ಸಮೀಕ್ಷೆಗಳು ಏನೇ ಹೇಳಿದರೂ ತಮಿಳುನಾಡು ಮತ್ತು ಕೇರಳದಲ್ಲಿ ನಮ್ಮ ಮೈತ್ರಿಕೂಟ ಅಧಿಕಾರ ಹಿಡಿಯುವುದು ನಿಶ್ಚಿತ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅಸ್ಸಾಂನಲ್ಲಿ ಎಕ್ಸಿಟ್‌ಪೋಲ್ ಭವಿಷ್ಯಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಲಿದೆ. ಪ.ಬಂಗಾಳದಲ್ಲಿ ಬಿಜೆಪಿ ದಬ್ಬಾಳಿಕೆ ನಡೆಸಿದ್ದರೂ ಟಿಎಂಸಿ ಮುನ್ನಡೆ ಸಾಧಿಸಲಿದೆ. ಫಲಿತಾಂಶದ ಬಳಿಕ ಮಮತಾ ಬ್ಯಾನರ್ಜಿಗೆ ಬೆಂಬಲ ನೀಡುವ ಕುರಿತು ಹೈಕಮಾಂಡ್ ತೀರ್ಮಾನಿಸಲಿದೆ ಎಂದರು.

ಕಾಂಪೌಂಡ್ ದುರಂತದ ಅತ್ಯಂತ ದುರದೃಷ್ಟಕರ. ರಸ್ತೆ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಿದರೆ ಹೊಟ್ಟೆಯ ಮೇಲೆ ಹೊಡೆಯುತ್ತೀರಿ ಎನ್ನುತ್ತಾರೆ. ಆದರೆ ಜನರ ಪ್ರಾಣ ರಕ್ಷಣೆ ಮಾಡುವುದು ಸರಕಾರದ ಆದ್ಯತೆಯಾಗ ಬೇಕು. ಅಪಾಯಕಾರಿ ಸ್ಥಳಗಳಲ್ಲಿ ವ್ಯಾಪಾರಕ್ಕೆ ಅವಕಾಶ ನೀಡದೆ ಅವರಿಗೆ ಪರ್ಯಾಯ ಸುರಕ್ಷಿತ ಜಾಗ ಕಲ್ಪಿಸಬೇಕು ಎಂದರು.

ಮಠದಲ್ಲಿ ಶಾಂತಿಭಂಗ: 20 ಮಂದಿ ವಿರುದ್ಧ ಪ್ರಕರಣ

ಹರಿಹರ: ಪಂಚಮಸಾಲಿ ಪೀಠದ ವಿವಾದಕ್ಕೆ ಸಂಬಂಧಪಟ್ಟಂತೆ ಏ.24ರಂದು ಮಠದ ಆವರಣದಲ್ಲಿ ಶಾಂತಿ ಭಂಗ ಉಂಟಾಗುವ ಮುನ್ಸೂಚನೆ ಹಿನ್ನೆಲೆಯಲ್ಲಿ ಗ್ರಾಮಾಂತರ ಠಾಣೆಯ ಪೊಲೀಸರು ಏ.22ರಂದು ಉಭಯ ಬಣಗಳ ಒಟ್ಟು 20 ಮುಖಂಡರ ವಿರುದ್ಧ ಬಿಎನ್‌ಎಸ್‌ಎಸ್ ಕಲಂ 126ರಡಿ ಪ್ರಕರಣ ದಾಖಲಿಸಿದ್ದಾರೆ.

ಏ.24ರಂದು ಮಠದಲ್ಲಿ ಬಸವೋತ್ಸವ ಹಾಗೂ ರಾಜ್ಯ ಸಮಾವೇಶ ಆಯೋಜಿಸಲು ಮುಂದಾಗಿದ್ದ ಉಚ್ಚಾಟಿತ ವಚನಾನಂದ ಸ್ವಾಮೀಜಿ ಬಣದ 10 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅದೇ ರೀತಿ ಮಠವು ಟ್ರಸ್ಟ್‌ನ ಒಡೆತನದಲ್ಲಿದ್ದು, ಟ್ರಸ್ಟ್‌ನವರಿಂದ ಶಾಂತಿ ಕದಡುವ ವಾತಾವರಣ ಸಾಧ್ಯತೆ ಯಿರುವ ಹಿನ್ನೆಲೆ ಟ್ರಸ್ಟ್ ಪರವಾಗಿರುವ 10 ಜನರ ವಿರುದ್ಧವೂ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ. ಈ ಎರಡೂ ಗುಂಪುಗಳ ವಿರುದ್ಧ ಪೊಲೀಸರು ಕ್ರಮ ಕೈಗೊಂಡ ವರದಿಯನ್ನು ತಹಸೀಲ್ದಾರ್‌ಗೆ ಸಲ್ಲಿಸಿದ್ದಾರೆ.

ಇದರ ಮುಂದಿನ ಪ್ರಕ್ರಿಯೆಯಾಗಿ ತಹಸೀಲ್ದಾರರು, ಕೇಸ್ ದಾಖಲಾದ ವ್ಯಕ್ತಿಗಳಿಗೆ ಕಾರಣ ಕೇಳುವ ನೋಟಿಸ್ ನೀಡಲಿದ್ದಾರೆ. ನಂತರ ಸಾರ್ವಜನಿಕ ಶಾಂತಿ ಕದಡದಂತೆ ಏಕೆ ಮುಚ್ಚಳಿಕೆ ಪತ್ರ ಬರೆಯಿಸ ಬಾರದು ಎಂಬ ಬಗ್ಗೆ ವಿಚಾರಣೆ ನಡೆಸಲಿದ್ದಾರೆ. ಆಗ ಗರಿಷ್ಠ 1 ವರ್ಷದ ಅವಧಿಗೆ ಶಾಂತಿ ಪಾಲನೆಯ ಬಾಂಡ್ ಅನ್ನು ಶ್ಯೂರಿಟಿ ಸಮೇತ ಅಥವಾ ಇಲ್ಲದೆಯೇ ಬರೆಯಿಸಿಕೊಳ್ಳಲಾಗುತ್ತದೆ. ಒಂದುವೇಳೆ ಈ ಅವಧಿಯಲ್ಲಿ ಶಾಂತಿ ಪಾಲನೆಯಲ್ಲಿ ವೈಫಲ್ಯ ಉಂಟಾದಲ್ಲಿ, ಬರೆಯಿಸಿಕೊಂಡ ಬಾಂಡ್ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ಕಾನೂನು ರೀತ್ಯಾ ಶಿಕ್ಷಿಸಲು ಅವಕಾಶವಿದೆ.

ಪರಮೇಶ ವಿರುದ್ಧ ಆರೋಪ: ಪರಮೇಶ ಪಟ್ಟಣಶೆಟ್ಟಿ ವಿರುದ್ಧ ಹಲವು ಆರೋಪಗಳು ಕೇಳಿ ಬಂದಿವೆ. ರಾಜ್ಯಾಧ್ಯಕ್ಷರ ಹೆಸರನ್ನು ಬಳಸಿಕೊಂಡು ಏಪ್ರಿಲ್ 27ರಂದು ನಡೆದ ಸಭೆಗೆ ಸದಸ್ಯರನ್ನು ಆಹ್ವಾನಿಸಿದ್ದರೆಂಬ ಆರೋಪವಿದ್ದು, ಇದನ್ನು ಸಂಘದ ನಿಯಮ ಉಲ್ಲಂಘನೆ ಎಂದು ಪರಿಗಣಿಸಲಾಗಿದೆ. ಅಲ್ಲದೆ, ಸುದ್ದಿಗೋಷ್ಠಿ ನಡೆಸಿ ರಾಜ್ಯಾಧ್ಯಕ್ಷರ ವಿರುದ್ಧ ಇಲ್ಲಸಲ್ಲದ ಹೇಳಿಕೆಗಳನ್ನು ನೀಡಿರುವುದೂ ಅವರ ವಿರುದ್ಧದ ಪ್ರಮುಖ ಆರೋಪಗಳಲ್ಲಿ ಒಂದಾಗಿದೆ.

ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದಲ್ಲೂ ಒಳಗಜಗಳ

ರಾಜ್ಯ ಪ್ರ. ಕಾರ್ಯದರ್ಶಿ ಪರಮೇಶಿ ವಜಾ

ದಾವಣಗೆರೆ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಉಂಟಾದ ಒಳಜಗಳ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮ ಸಾಲಿ ಸಂಘದೊಳಗೂ ಹರಡಿದ್ದು, ಸಂಘದ ಒಳಗೇ ಪ್ರಮುಖ ಬದಲಾವಣೆಗಳು ನಡೆಯುತ್ತಿವೆ. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಪರಮೇಶ ಪಟ್ಟಣಶೆಟ್ಟಿ ಅವರನ್ನು ಹುದ್ದೆಯಿಂದ ವಜಾಗೊಳಿಸಲಾ ಗಿದ್ದು, ಅವರ ಸ್ಥಾನಕ್ಕೆ ಹಾವೇರಿ ಜಿಲ್ಲೆಯ ಬ್ಯಾಡಗಿ ಮೂಲದ ಶಂಕರಗೌಡ ಪಾಟೀಲ್ ಅವರನ್ನು ನೂತನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡ ಲಾಗಿದೆ. ಈ ಸಂಬಂಧ ಸಂಘದ ರಾಜ್ಯಾಧ್ಯಕ್ಷ ಸೋಮನಗೌಡ ಎಂ. ಪಾಟೀಲ್ ಆದೇಶ ಹೊರಡಿಸಿದ್ದು, ಸಂಘಟನೆಯಲ್ಲಿ ಶಿಸ್ತಿನ ನಿರ್ವಹಣೆ ಮತ್ತು ವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಮೇಕೆದಾಟು ಯೋಜನೆಗಾಗಿ ಅರಣ್ಯ ಇಲಾಖೆಗೆ 5,300 ಎಕರೆ ಬದಲಿ ಜಾಗ

ಶೀಘ್ರ ಎತ್ತಿನಹೊಳೆ ಕಾಮಗಾರಿ

ಬೆಂಗಳೂರು: ಕೇಂದ್ರ ಪರಿಸರ ಇಲಾಖೆಯವರು ದಂಡ ಹಾಗೂ ಮಿಟಿ ಗೇಷನ್ ಪ್ಲಾನ್ ಸೇರಿ 257 ಕೋಟಿ ರುಪಾಯಿ ಹಣ ಸಂದಾಯ ಮಾಡಬೇಕು ಎಂದು ಸೂಚಿಸಿದ್ದಾರೆ. ಇಂದೇ ಈ ಹಣ ಪಾವತಿ ಮಾಡಿ ಎಂದು ಮಾರ್ಗದರ್ಶನ ನೀಡಿದ್ದೇನೆ. ಕಟ್ಟಿದ ಕೂಡಲೇ ಈ ವಾರದೊಳಗೆ ಎತ್ತಿನಹೊಳೆ ಕೆಲಸ ಪ್ರಾರಂಭ ಮಾಡಿ ಎಂದು ಗುತ್ತಿಗೆದಾರರಿಗೆ ಸೂಚಿಸಿದ್ದೇವೆ ಎಂದು ಡಿಸಿಎಂ ಡಿ.ಕೆ.ಶಿವ ಕುಮಾರ್ ಹೇಳಿದರು. ಎತ್ತಿನಹೊಳೆ, ಮೇಕೆ ದಾಟು, ಭದ್ರಾ, ಮೇಲ್ದಂಡೆ ವಿಚಾರವಾಗಿ ವಿಧಾನ ಸೌಧದಲ್ಲಿ ನಡೆದ ಸಭೆಯ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿ, ತುಮಕೂರು ಭಾಗದಲ್ಲೂ ಭೂಸ್ವಾಧೀನಕ್ಕೆ ಸರ್ವೆ ನಡೆಸಲು ಕ್ರಮ ತೆಗೆದು ಕೊಳ್ಳಲಾಗುವುದು. ಆದಷ್ಟು ಬೇಗ ಚಿಕ್ಕಬಳ್ಳಾಪುರ ಹಾಗೂ ಕೋಲಾರಕ್ಕೆ ನೀರನ್ನು ತೆಗೆದುಕೊಂಡು ಹೋಗಲಾಗುವುದು. ಎತ್ತಿನಹೊಳೆ ಯೋಜನೆಗೆ ಕೇಂದ್ರ ಪರಿಸರ ಇಲಾಖೆಯವರು ಒಂದಷ್ಟು ಷರತ್ತುಗಳನ್ನು ವಿಧಿಸಿ ಕಡತ ವಾಪಸ್ ಕಳುಹಿಸಿದ್ದರು. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಬದಲಿ ಭೂಮಿ ಹಸ್ತಾಂತರ ಮಾಡಲಾಗುತ್ತಿದೆ. ಶೇ.10ರಷ್ಟು ಭೂಮಿ ವರ್ಗಾವಣೆ ಬಾಕಿಯಿತ್ತು. ಮುಂದಿನ ಒಂದು ವಾರದೊಳಗೆ ಈ ಪ್ರಕ್ರಿಯೆ ನಡೆಯಲಿದೆ ಎಂದರು. ಎತ್ತಿನಹೊಳೆ, ಭದ್ರಾ, ಮೇಲ್ದಂಡೆ ಹಾಗೂ ಮೇಕೆದಾಟು ವಿಚಾರವಾಗಿ ಸಂಬಂಧಪಟ್ಟ ಶಾಸಕರ, ಅಧಿಕಾರಿಗಳ ಸಭೆ ನಡೆಸಲಾಯಿತು. ಕಂದಾಯ, ಅರಣ್ಯ ಹಾಗೂ ಗೃಹಸಚಿವರು ಭಾಗವಹಿಸಿದ್ದರು. ಎತ್ತಿನಹೊಳೆ ವಿಚಾರವಾಗಿ ಕೇಂದ್ರ ಸರಕಾರದ ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿದ್ದೆ. ನಾವು ಅವರ ಷರತ್ತು ಒಪ್ಪಿಕೊಂಡು ಮುಂದುವರೆದಿದ್ದೇವೆ ಎಂದರು.

ಮೇಕೆದಾಟು ವಿಚಾರವಾಗಿ ಡಿಪಿಆರ್ ಸಿದ್ಧವಾಗಿದ್ದು ಅದನ್ನು ಸಹ ಸಮಿತಿ ಮುಂದೆ ಸಲ್ಲಿಕೆ ಮಾಡಲಾಗುವುದು. ಮತ್ತೊಮ್ಮೆ ವೆಚ್ಚ ಪರಿಷ್ಕರಣೆ ಮಾಡಿದ್ದೇವೆ. ಸುಮಾರು 5,300 ಎಕರೆ ಜಮೀನನ್ನು ನಾವು ಅರಣ್ಯ ಇಲಾಖೆಗೆ ನೀಡಬೇಕಿದೆ. ಇದರ ಬಗ್ಗೆಯೂ ಕಂದಾಯ ಇಲಾಖೆ ಜೊತೆ ಮಾತನಾಡಲಾಗುವುದು.

-ಡಿ.ಕೆ.ಶಿವಕುಮಾರ್, ಡಿಸಿಎಂ

ರಾಜ್ಯಾದ್ಯಂತ 5 ದಿನ ಮಳೆ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆಯ ತಾಪ ತಾರಕಕ್ಕೇರಿರುವ ಬೆನ್ನಲ್ಲೇ, ವರುಣನ ಆಗಮನವಾಗುತ್ತಿದೆ. ಪೂರ್ವ ಮುಂಗಾರು ಚುರುಕುಗೊಂಡಿದ್ದು, ಹವಾಮಾನ ಇಲಾಖೆಯು ಮುಂದಿನ ಐದು ದಿನ ರಾಜ್ಯದಾದ್ಯಂತ ಮಳೆ ಮುನ್ಸೂಚನೆ ನೀಡಿದೆ.

ಹಾಸನದಲ್ಲಿ 61.5 ಮಿ.ಮೀ. ದಾಖಲೆ ಮಳೆಯಾಗಿದ್ದು, ರಾಜ್ಯದ ಇತರೆ ಜಿಲ್ಲೆಗಳಲ್ಲೂ ಮಳೆಯ ಆತಂಕ ಶುರುವಾಗಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೋಡಕವಿದ ವಾತಾವರಣ ಇರಲಿದೆ. ಮೇ.1 ರಿಂದ ಇಲ್ಲಿ ಮಳೆಯ ತೀವ್ರತೆ ಹೆಚ್ಚಾಗಲಿದೆ. ಇನ್ನು ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಳೆಯ ಲಕ್ಷಣಗಳಿದ್ದು, ಮೇ ಮೊದಲ ವಾರದಲ್ಲಿ ನಂತರ ಮಳೆಯ ಅಬ್ಬರ ಜೋರಾಗಲಿದೆ. ಬೀದರ್, ಕಲಬುರಗಿ, ವಿಜಯಪುರ, ಬೆಳಗಾವಿ, ಉತ್ತರ ಕನ್ನಡ ಹಾಗೂ ಬೆಂಗಳೂರು ಸೇರಿದಂತೆ ಒಟ್ಟು 25 ಜಿಲ್ಲೆಗಳಿಗೆ 'ಎಲ್ಲೋ ಅಲರ್ಟ್' ಘೋಷಿಸಲಾಗಿದ್ದು, ಮೇ.1 ರಂದು 24 ಜಿಲ್ಲೆಗಳಿಗೆ ಅಲರ್ಟ್ ಮುಂದುವರಿಯಲಿದ್ದು, ಬೀದರ್, ಬೆಳಗಾವಿ, ಬಾಗಲಕೋಟೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಳೆ ಸುರಿಯುವ ಸಾಧ್ಯತೆಯಿದೆ.

ಬೆಂಗಳೂರಿನಲ್ಲಿ 110 ಮಿ.ಮೀಟರ್ ಮಳೆ

ಬೆಂಗಳೂರು ನಗರ ಕೇಂದ್ರ ಭಾಗದಲ್ಲಿ ಬುಧವಾರ ಸಂಜೆ ಬರೋಬ್ಬರಿ 110 ಮಿಲಿ ಮೀಟರ್ ಮಳೆಯಾಗಿದೆ. ಇದು ಕಳೆದ 25 ವರ್ಷಗಳ ದಾಖಲೆಯನ್ನು ಅಳಿಸಿಹಾಕಿದೆ. ಈ ಹಿಂದೆ 2018 ರ ಏಪ್ರಿಲ್ 19 ರಂದು 108.6 ಮಿಲಿ ಮೀಟರ್ ಮಳೆಯಾಗಿದ್ದೆ ದೊಡ್ಡ ದಾಖಲೆಯಾಗಿತ್ತು. ಈಗ ಆ ದಾಖಲೆ ಸರಿಗಟ್ಟಿದೆ. ಮಳೆಯಬ್ಬರಕ್ಕೆ ತಾಪಮಾನವೂ 18 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ. ಮಳೆಯ ಜತೆಗೆ ಬಿರುಗಾಳಿ ಬೀಸಿದ್ದರಿಂದ ಒಂದೇ ದಿನ ಮಳೆಗೆ 10 ಮಂದಿ ಬಲಿಯಾಗಿದ್ದಾರೆ.

ದಿವಂಗತ ರಾಮಕೃಷ್ಣ ಹೆಗಡೆ ಅವರ ಸದಾಶಿವನಗರ ನಿವಾಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ನೀಡಿ, ರಾಮಕೃಷ್ಣ ಹೆಗಡೆ ಅವರ ಪತ್ನಿ 94 ವರ್ಷದ ಶಕುಂತಲಾ ಹೆಗಡೆ ಅವರ ಆರೋಗ್ಯ ವಿಚಾರಿಸಿದರು. ಈ ವೇಳೆ ಹೆಗಡೆ ಅವರ ಪುತ್ರಿಯರಾದ ಮಮತಾ, ಸಮತಾ, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಮಾಜಿ ಸಚಿವ ಬಿ.ಎಲ್.ಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಆಡಳಿತದ ಮೇಲೆ ಹಿಡಿತವಿಲ್ಲದ ಸಿಎಂ

ರಾಯಚೂರು: ರಾಜ್ಯದಲ್ಲಿ ಸರಕಾರ ಇದ್ದು ಇಲ್ಲದಂತಿದೆ. ಜನರ ಸಮಸ್ಯೆಗಳನ್ನ ಕೇಳುವವರಿಲ್ಲದಂತಾಗಿದೆ ಸಿಎಂ ಸಿದ್ದರಾಮಯ್ಯ ಆಡಳಿತದ ಮೇಲೆ ಹಿಡಿತ ಕಳೆದುಕೊಂಡಿದ್ದಾರೆ ಎಂದು ಎಂಎಲ್‌ಸಿ ರವಿಕುಮಾರ್ ಕಿಡಿಕಾರಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯ ಆಡಳಿತದ ಹಳಿ ತಪ್ಪಿದೆ. ಸರಕಾರದ ಖಜಾನೆ ಖಾಲಿಯಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ್‍ಯಾರು ಜಿಲ್ಲೆಗಳಿಗೆ ಭೇಟಿ ನೀಡುತ್ತಿಲ್ಲ. ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದ್ದು, ಗೃಹ ಸಚಿವರು ನಾಮಕಾವಸ್ತೆ ಸಚಿವರಾಗಿದ್ದಾರೆ. ಇನ್ನೂ ಒಳ ಮೀಸಲಾತಿಯ ಅಸಮಾಧಾನ ಶಮನವಾಗಿಲ್ಲ ಎಂದು ಆರೋಪಿಸಿದರು.

ಜೂ.26ರಿಂದ 4 ದಿನ ತುಮಕೂರಲ್ಲಿ ವೀರಲೋಕದಿಂದ ಪುಸ್ತಕ ಸಂತೆ

ತುಮಕೂರು: ವೀರಲೋಕ ಪುಸ್ತಕ ಸಂತೆಯ 5ನೇ ಆವೃತ್ತಿಯನ್ನು ಜೂ.26ರಿಂದ 29ರ ವರೆಗೆ 4 ದಿನಗಳ ಕಾಲ ನಗರದ ಸರಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಏರ್ಪಡಿಸಲಾಗಿದೆ. ಇದು ಕೇವಲ ಒಂದು ಪುಸ್ತಕ ಮೇಳವಲ್ಲ, ಕನ್ನಡ ಸಾಹಿತ್ಯ ಲೋಕದಲ್ಲಿ ಒಂದು ಹೊಸ ಸಂಚಲನವನ್ನು ಉಂಟು ಮಾಡಿದ ಪುಸ್ತಕ ಚಳವಳಿ. ಪ್ರತಿಯೊಂದು ಜಿಲ್ಲೆಯಲ್ಲೂ ಇಂತಹ ಕಾರ್ಯಕ್ರಮ ಆಯೋಜಿಸಬೇಕು ಎಂಬ ಬೇಡಿಕೆ ಹೆಚ್ಚುತ್ತಿದೆ ಎಂದು ಪುಸ್ತಕ ಸಂತೆಯ ರೂವಾರಿ, ಪ್ರಕಾಶಕ ವೀರಕಪುತ್ರ ಶ್ರೀನಿವಾಸ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಮಕೂರಿನ ಪುಸ್ತಕ ಸಂತೆಯಲ್ಲಿ 20 ಗೋಷ್ಠಿಗಳಿರುತ್ತವೆ. ಪ್ರಕಾಶಕರು ಸುಮಾರು 60ಕ್ಕೂ ಹೆಚ್ಚು ಮಳಿಗೆ ತೆರೆಯುವರು. ಒಂದು ಲಕ್ಷಕ್ಕೂ ಹೆಚ್ಚು ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಮಾಡಲಾಗಿದೆ. ಪ್ರಮುಖ ಲೇಖಕರೊಂದಿಗೆ ಚರ್ಚೆಗಳು ನಡೆಯುತ್ತವೆ ಎಂದರು.

ತುಮಕೂರಿನಲ್ಲಿ ನಡೆಯಲಿರುವ ವೀರಲೋಕ ಪುಸ್ತಕಸಂತೆ ಬಗ್ಗೆ ಪ್ರಕಾಶಕ ವೀರಕಪುತ್ರ ಶ್ರೀನಿವಾಸ್ ಸುದ್ದಿಗೋಷ್ಠಿ ನಡೆಸಿ, ಮಾಹಿತಿ ನೀಡಿದರು.

ಮೊದಲ ಪುಸ್ತಕ ಸಂತೆಯನ್ನು ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದ್ದರು. ಎರಡು ಮತ್ತು ಮೂರನೇ ಸಂತೆಯು ಬೆಂಗಳೂರಿನ ಜಯನಗರದಲ್ಲಿ ನಡೆಯಿತು. ಅದರಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಮೂರು ಕೋಟಿಗೂ ಹೆಚ್ಚು ಮೌಲ್ಯದ ಪುಸ್ತಕಗಳು ಮಾರಾಟವಾಗಿದ್ದು, ಪ್ರಕಾಶಕರು ಅತ್ಯಂತ ಸಂತೋಷಪಟ್ಟರು. ನಾಲ್ಕನೇ ಪುಸ್ತಕ ಸಂತೆಯು ಗಡಿಭಾಗದ ಜಿಲ್ಲೆಯಾದ ಬೀದರಿನಲ್ಲಿ ನಡೆಯಿತು. ಕಳೆದ 30 ವರ್ಷಗಳಲ್ಲಿ ಅಲ್ಲಿ ಯಾವುದೇ ದೊಡ್ಡ ಸಾಹಿತ್ಯ ಕಾರ್ಯಕ್ರಮ ನಡೆದಿರಲಿಲ್ಲ. ಆದರೆ ಪುಸ್ತಕ ಸಂತೆಯಿಂದ 50,000ಕ್ಕೂ ಹೆಚ್ಚು ಜನರನ್ನು ಸೆಳೆದಿದ್ದೇವೆ. ಇದು ಆ ಜಿಲ್ಲೆಗೆ ತಂದ ಬದಲಾವಣೆ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ, ತುಮಕೂರು ಪುಸ್ತಕ ಸಂತೆ ಸಂಘಟಕ ಆರ್.ಕೆ.ಶ್ರೀನಿವಾಸ್, ಪೃಥ್ವಿ ಕುಮಾರ್, ಗುರುನಾಥ ರಾಜಗೀರಾ, ವೀರಲೋಕದ ವ್ಯವಸ್ಥಾಪಕ ಅನಂತ ಕುಣಿಗಲ್, ನವೀನ್, ಕಿರಣ್‌ಕೃಷ್ಣ ಹಾಜರಿದ್ದರು.

ಅಭಿಮಾನೋತ್ಸವ ವೇದಿಕೆ ಪರಿಶೀಲಿಸಿದ ಕಾರಜೋಳ

ಚಿತ್ರದುರ್ಗ: ಇಂದಿನ ಯುವ ರಾಜಕಾರಣಿಗಳಿಗೆ ಹಾಗೂ ಯುವ ಪೀಳಿಗೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ದಾರಿ ದೀಪವಾಗಿದ್ದಾರೆ. ಅವರ 50 ವರ್ಷದ ರಾಜಕೀಯ ಜೀವನ ಬೇರೆಯವರಿಗೆ ಮಾರ್ಗದರ್ಶನವಾಗಬೇಕಿದೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು. ನಗರದ ಶ್ರೀಮಾದರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ಮೇ 9 ರಂದು ನಡೆಯುತ್ತಿರುವ ಕಾರ್ಯಕ್ರಮದ ವೇದಿಕೆ ನಿರ್ಮಾಣ ಕಾಮಗಾರಿ ಪರಿಶೀಲಿಸಿ ಗುರುವಾರ ಮಾತನಾಡಿದರು. ಯಡಿಯೂರಪ್ಪರವರೆಂದರೆ ರಾಜ್ಯದಲ್ಲಿ ಹೋರಾಟವನ್ನು ನಡೆಸುವ ವ್ಯಕ್ತಿ ಎಂದು ಗುರುತಿಸಲಾಗಿದೆ. ಜನ ಸೇವೆಗಾಗಿಯೇ ತಮ್ಮ ಜೀವನನ್ನೇ ಮುಡುಪಾಗಿ ಇಟ್ಟಿದ್ದಾರೆ. ದಲಿತರು, ಪರಿಶಿಷ್ಟ ಜಾತಿ ಮತ್ತು ಪಂಗಡ, ಮಹಿಳೆಯರಿಗೆ ಧ್ವನಿಯಾಗಿ ಕೆಲಸವನ್ನು ಮಾಡಿದ್ದಾರೆ. ಅಧಿಕಾರಕ್ಕಾಗಿ ಎಂದು ಸಹ ಹೋರಾಟವನ್ನು ಮಾಡಲಿಲ್ಲ, ಬಡವರ ಕಣ್ಣೀರನ್ನು ಒರೆಸುವ ಸಲುವಾಗಿ ಕೆಲಸವನ್ನು ಮಾಡಿದ್ದಾರೆ 50 ವರ್ಷ ಬಡವರ ಪರವಾಗಿ ಕೆಲಸವನ್ನು ಮಾಡಿದ್ದಾರೆ ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ, ಪಕ್ಷವನ್ನು ಕಟ್ಟಿ ಬೆಳೆಸಿದ ಅವರ ಹೋರಾಟ ಮುಂದಿನ ಪೀಳಿಗೆಗೆ ಪ್ರೇರಣೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ಖನಿಜ ನಿಮದ ಮಾಜಿ ಅಧ್ಯಕ್ಷ ಲಿಂಗಮೂರ್ತಿ, ಮಾಜಿ ಪ್ರಧಾನ ಕಾರ್ಯದರ್ಶಿ ಗಳಾದ ಸಂಪತ್ ಕುಮಾರ್, ಜಿಲ್ಲಾ ವಕ್ತಾರ ನಾಗರಾಜ್, ಎಸ್.ಸಿ.ಮೋರ್ಚಾದ ಅಧ್ಯಕ್ಷ ಪರಶುರಾಮ್, ನಂದಿ ನಾಗರಾಜ್, ರಾಜ್ಯ ರೈತ ಮೋರ್ಚಾದ ಮಲ್ಲಿಕಾರ್ಜುನ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಅಭಿಮಾನೋತ್ಸವ ಬೇಡ ಎಂದು ಯಡಿಯೂರಪ್ಪ ಹೇಳಿದ್ದರು. ಆದರೆ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಲು, ಕಾಂಗ್ರೆಸ್ ಸರಕಾರದ ದುರಾಡಳಿತ, ಕುರ್ಚಿ ಕಾದಾಟದ ವಿರುದ್ಧ ಜನರನ್ನು ಜಾಗೃತಿಗೊಳಿಸಲು ಅಭಿಮಾನೋತ್ಸವ ಅಗತ್ಯವಿದೆ. ಅದ್ದೂರಿಯಾಗಿ ನಡೆದು ಯಶಸ್ವಿಯೂ ಆಗುತ್ತದೆ.

-ಗೋವಿಂದ ಕಾರಜೋಳ, ಸಂಸದ



ವೇದಿಕೆ ನಿರ್ಮಾಣದ ಕಾಮಗಾರಿಯನ್ನು ಸಂಸದ ಗೋವಿಂದ ಕಾರಜೋಳ ಪರಿಶೀಲನೆ ನಡೆಸಿದರು.

ಅಭಿಮಾನೋತ್ಸವ ಕಾರ್ಯಕ್ರಮದ ಪ್ರಚಾರ ಪತ್ರಿಕೆ ಬಿಡುಗಡೆಗೊಳಿಸಿದ ಬಿ.ವೈ.ವಿಜಯೇಂದ್ರ

ಪಕ್ಷಾತೀತವಾಗಿ ಲಕ್ಷಾಂತರ ಜನ ಸೇರಲಿ

ತುಮಕೂರು: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಎಂದರೆ ಹೋರಾಟದ, ಪರಿಶ್ರಮದ, ತ್ಯಾಗದ ಸಂಕೇತ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಯಡಿಯೂರಪ್ಪ ಅವರು ರಾಜಕೀಯ ಪ್ರವೇಶಿಸಿ 50 ವರ್ಷ ಪೂರೈಸುತ್ತಿರುವ ಹಿನ್ನೆಲೆ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ ಸಮಾರಂಭದ ನಿಮಿತ್ತ ತುಮಕೂರಿನಲ್ಲಿ ಗುರುವಾರ ನಡೆದ ಬಿಜೆಪಿ ಮುಖಂಡರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರೈತರ, ಬಡವರ, ಮಹಿಳೆಯರ ಪರ 50 ವರ್ಷಗಳಿಂದ ನಿರಂತರ ಹೋರಾಟ ಮಾಡಿಕೊಂಡು ಬಂದ ಯಡಿಯೂರಪ್ಪನವರು ಅಧಿಕಾರ ಅನುಭವಿಸಿದ್ದು, ಕೇವಲ 5 ವರ್ಷ ಮಾತ್ರ. ನಗರಭಾಗದಲ್ಲಿ ಸೀಮಿತವಾಗಿದ್ದ ಬಿಜೆಪಿಯನ್ನು ಹಳ್ಳಿ ಹಳ್ಳಿಗೆ ತಲುಪಿಸಿ ಪಕ್ಷವನ್ನು ಬೆಳೆಸಿದ್ದರಲ್ಲಿ ಇವರ ಶ್ರಮ ಸಾಕಷ್ಟಿದೆ ಎಂಬುದು ಎಲ್ಲರಿಗೂ ಗೊತ್ತು. ಇಂತಹ ನಾಯಕನ 50 ವರ್ಷಗಳ ಹೋರಾಟದ ಬದುಕು ಸಂಭ್ರಮಿಸುವ ಬಿಎಸ್‌ವೈ ಅಭಿಮಾನೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಅಭಿಮಾನೋತ್ಸವ ಆಚರಣೆ ಯಡಿಯೂರಪ್ಪನವರಿಗೆ ಇಷ್ಟವಿರಲಿಲ್ಲ. ಆದರೆ, ರಾಜ್ಯದ ಲಕ್ಷಾಂತರ ಕಾರ್ಯಕರ್ತರು, ಅವರ ಅಭಿಮಾನಿಗಳ ಅಪೇಕ್ಷೆಯಂತೆ ಚಿತ್ರದುರ್ಗದಲ್ಲಿ ಅವರ ಅಭಿಮಾನೋತ್ಸವ ಆಚರಿಸಲಾಗುತ್ತಿದೆ. ಪಕ್ಷಾತೀತವಾಗಿ ಯಡಿಯೂರಪ್ಪನವರ ಅಭಿಮಾನಿಗಳು ಹತ್ತು ಲಕ್ಷ ಜನ ಸೇರುವ ನಿರೀಕ್ಷೆ ಇದ್ದು, ಯಶಸ್ವಿಗೊಳಿಸಿ, ಜನಪರವಾಗಿ ದುಡಿದ ನಾಯಕ ಯಡಿಯೂರಪ್ಪನವರಿಗೆ ಗೌರವ ಸಲ್ಲಿಸೋಣ ಎಂದು ಹೇಳಿದರು.

ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮದ ಪ್ರಚಾರ ಪೋಸ್ಟರ್ ಅನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತುಮಕೂರಿನಲ್ಲಿ ಬಿಡುಗಡೆ ಮಾಡಿದರು. ಈ ವೇಳೆ ಸಂಸದ ಗೋವಿಂದ ಕಾರಜೋಳ ಸೇರಿ ಇತರರಿದ್ದರು.

ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅವರಿಗೆ ನ್ಯಾಯ ದೊರಕಿಸಲು ನಿರಂತರ ಹೋರಾಟ ಮಾಡುತ್ತ, ಜನರ ಸೇವೆಗೆ ತಮ್ಮನ್ನು ತಾವು ಅರ್ಪಣೆ ಮಾಡಿಕೊಂಡ ಅಪರೂಪದ ನಾಯಕ ಯಡಿಯೂರಪ್ಪನವರು. ಇಂದು ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿಯುವ ಮಟ್ಟಕ್ಕೆ ಬೆಳೆದಿದೆಯೆಂದರೆ ಅದರ ಹಿಂದೆ ಯಡಿಯೂರಪ್ಪನವರ ದೊಡ್ಡ ಶ್ರಮ, ತ್ಯಾಗ ಇದೆ.

-ಗೋಪಾಲಯ್ಯ, ಮಾಜಿ ಸಚಿವ

ವಿಶ್ವವಾಣಿ

ಸಂಪಾದಕೀಯ

‘ಕಾಯಕ’ ಜೀವಿಗಳ ಕಷ್ಟ ತಪ್ಪಲಿ

ಇಂದು ಮೇ 1, ವಿಶ್ವ ಕಾರ್ಮಿಕರ ದಿನ. ಬೆವರು ಸುರಿಸುವ ಕೈಗಳಿಗೆ ಗೌರವ ಸಲ್ಲಿಸಬೇಕಾದ ಈ ದಿನದಂದು, ಕಾರ್ಮಿಕರ ಬದುಕು ಮಾತ್ರ ಹಿಂದೆಂದಿಗಿಂತಲೂ ಹೆಚ್ಚು ಅಸುರಕ್ಷಿತವಾಗಿದೆ. ಒಂದು ಕಾಲದಲ್ಲಿ ಬಲಿಷ್ಠ ಕಾರ್ಮಿಕ ಸಂಘಟನೆಗಳು ಸರಕಾರದ ನಿರ್ಧಾರಗಳನ್ನೇ ಬದಲಿಸುವ ತಾಕತ್ತು ಹೊಂದಿದ್ದವು. ಆದರೆ ಇಂದು ಜಾಗತೀಕರಣ ಮತ್ತು ಉದಾರೀಕರಣದ ಸುಳಿಯಲ್ಲಿ ಕಾರ್ಮಿಕ ಕಾಯಿದೆಗಳು ಕೇವಲ ಕಾಗದದ ಹುಲಿಗಳಾಗಿ ಉಳಿದಿವೆ. ಇಂದು ಸರಕಾರಿ ಇಲಾಖೆಗಳಿಂದ ಹಿಡಿದು ಖಾಸಗಿ ವಲಯದವರೆಗೆ ‘ಗುತ್ತಿಗೆ ಆಧಾರಿತ ನೇಮಕಾತಿ’ ಎಂಬ ಪಿಡುಗು ವ್ಯಾಪಿಸಿದೆ. ಕಾಯಂ ನೌಕರರಿಗಿಂತ ಹಂಗಾಮಿ ನೌಕರರ ಸಂಖ್ಯೆಯೇ ಹೆಚ್ಚಾಗುತ್ತಿರುವುದು ಆತಂಕಕಾರಿ. ಇವರಿಗೆ ಯಾವುದೇ ಉದ್ಯೋಗ ಭದ್ರತೆಯಿಲ್ಲ, ಪಿಂಚಣಿಯಿಲ್ಲ, ಕನಿಷ್ಠ ವಿಮೆಯ ಸೌಲಭ್ಯವೂ ಇಲ್ಲ. ‘ಬಳಸಿ ಬಿಸಾಡುವ’ (Hire and Fire) ಸಂಸ್ಕೃತಿ ಇಂದು ಆಡಳಿತದ ಮಂತ್ರವಾಗಿದೆ. ಐಟಿ ಉದ್ಯಮದಲ್ಲಿ ರಾತ್ರೋರಾತ್ರಿ ಉದ್ಯೋಗಿಗಳನ್ನು ಕಿತ್ತುಹಾಕುವುದು ಸಾಮಾನ್ಯವಾಗಿದೆ. ಕಳೆದ ಒಂದು ವರ್ಷದ (2025–26) ಅಂಕಿಅಂಶಗಳನ್ನು ಗಮನಿಸಿದರೆ, ದೇಶದ ನಿರುದ್ಯೋಗ ದರವು 2026ರ ಮಾರ್ಚ್ ವೇಳೆಗೆ 5.1% ಕ್ಕೆ ಏರಿಕೆಯಾಗಿದೆ. ಐಟಿ, ಎಡ್ಯುಟೆಕ್ ಮತ್ತು ಇ-ಕಾಮರ್ಸ್ ವಲಯಗಳಲ್ಲಿ ಲಕ್ಷಾಂತರ ನೌಕರರನ್ನು ಯಾವುದೇ ಮುನ್ಸೂಚನೆ ನೀಡದೆ ರಾತ್ರೋರಾತ್ರಿ ಮನೆಗೆ ಕಳುಹಿಸಲಾಗಿದೆ. ಕೃತಕ ಬುದ್ಧಿಮತ್ತೆ ಮತ್ತು ಆಟೋಮೇಷನ್ ನೆಪದಲ್ಲಿ ನುರಿತ ನೌಕರರೂ ಬೀದಿಗೆ ಬೀಳುತ್ತಿದ್ದಾರೆ. ಮತ್ತೊಂದೆಡೆ, ಬಹುರಾಷ್ಟ್ರೀಯ ಕಂಪನಿಗಳು ದೇಶದ ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರುತ್ತಿವೆ. ತಮ್ಮ ಲಾಭಕ್ಕಾಗಿ ಉದ್ಯೋಗಿಗಳನ್ನು ‘ಪಾಲುದಾರರು’ ಅಥವಾ ‘ಫ್ರೀಲ್ಯಾನ್ಸರ್‌ಗಳು’ ಎಂದು ಕರೆದು, ಅವರಿಗೆ ಸಿಗಬೇಕಾದ ಶಾಸನಬದ್ಧ ಸೌಲಭ್ಯಗಳನ್ನು ನಾಜೂಕಾಗಿ ತಪ್ಪಿಸುತ್ತಿವೆ. ಸರಕಾರದ ಹೊಸ ಕಾರ್ಮಿಕ ಸಂಹಿತೆಗಳು (Labour Codes 2025) ಜಾರಿಗೆ ಬಂದಿದ್ದರೂ, ಅವು ಕಾರ್ಮಿಕರ ಹಿತ ಕಾಯುವಲ್ಲಿ ಸೋಲುತ್ತಿವೆ ಎಂಬ ಮಾತು ಕೇಳಿ ಬರುತ್ತಿದೆ. ಕಾರ್ಮಿಕ ಕಾಯಿದೆಗಳು ಕಾಲಕ್ಕೆ ತಕ್ಕಂತೆ ಪರಿಷ್ಕರಣೆಯಾಗಬೇಕಾಗಿದೆ. ಜಾಗ ತೀಕರಣದ ತಲ್ಲಣಗಳಿಗೂ ಇವು ಸ್ಪಂದಿಸಬೇಕಾಗಿದೆ. ಕಾರ್ಮಿಕರ ದಿನ ಕೇವಲ ಆಚರಣೆಯಾಗದೆ, ಅವರ ಹಕ್ಕುಗಳ ಮರುಸ್ಥಾಪನೆಯ ಸಂಕಲ್ಪವಾಗಲಿ.

ಸೊಂಪಾದಕೀಯ

ನಾ ಹ್ಯಾಂಗ ನೋಡಲಿ ನಿನ್ನ

90ರ ದಶಕದ ಬಾಲಿವುಡ್ ಸ್ಟಾರ್ ಮಮತಾ ಕುಲಕರ್ಣಿ ಮತ್ತೆ ಸುದ್ದಿಯಾಗಿದ್ದಾರೆ. ಹೀಗೆ ಹೇಳುತ್ತಿದ್ದಂತೆ, ‘ಏನು... ಮಮತಾ ಮತ್ತೆ ಬಂದ್ಲಾ...? ಯಾವುದಾದರೂ ಸಿನಿಮಾದಲ್ಲಿ ನಟಿಸ್ತಾಳಾ’ ಅಂತ ಅವತ್ತಿನ ಆಕೆಯ ಅಭಿಮಾನಿಗಳು, ಈಗೆಲ್ಲಾ ಅಂಕಲ್‌ಗಳಾಗಿರುವವರು ಕೇಳ್ತಿದ್ದಾರೆ. ವಿಚಾರ ಏನಂದ್ರೆ, ಆಕೆ ಈಗ ಭಾರತದಾದ್ಯಂತ ಪ್ರವಾಸ ಮಾಡಿ, ದೇಶದ ಜನತೆಗೆ ಅಧ್ಯಾತ್ಮ ಪ್ರವಚನ ನೀಡಲು ಮುಂದಾಗಿದ್ದಾರಂತೆ. ಅಷ್ಟೇ ಅಲ್ಲ, ದಕ್ಷಿಣ ಭಾರತದಲ್ಲೇ ತಮ್ಮದೊಂದು ಆಶ್ರಮ ಕಟ್ಟಲು ಸಿದ್ಧವಾಗಿದ್ದಾರಂತೆ. ಬಾಲಿವುಡ್‌ನಲ್ಲಿ ಸ್ಟಾರ್ ಆಗಿದ್ದಾಗಲೇ ದೇಶ ತೊರೆದು ಹೋಗಿದ್ದ ಆಕೆ ಸುಮಾರು 20 ವರ್ಷಗಳ ನಂತರ 2025ರಲ್ಲಿ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದಿದ್ದ ಕುಂಭಮೇಳದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿದ್ದಳು. ಆದರೆ, ನಟಿಯಾಗಿ ಅಲ್ಲ.. ಓರ್ವ ಸನ್ಯಾಸಿನಿಯಾಗಿ! ಅದನ್ನು ನೋಡಿದ ಆಕೆಯ ಅಭಿಮಾನಿಗಳು ಶಾಕ್ ಆಗಿದ್ದರು! ಕುಂಭಮೇಳಕ್ಕಾಗಿ ಭಾರತಕ್ಕೆ ಬಂದಿದ್ದ ಆಕೆ, ಉತ್ತರ ಭಾರತದ ಅಧ್ಯಾತ್ಮಿಕ ಸಾಧಕರ ‘ಕಿನ್ನರ್ ಅಖಾಡಾ’ದ ಮಹಮಂಡಲೇಶ್ವರಿಯಾಗಿ ಅಧಿಕಾರ ಸ್ವೀಕರಿಸಿದರು. ಶ್ರೀಮಯಿ ಮಮತಾನಂದಗಿರಿ ಎಂದು ಹೆಸರು ಬದಲಿಸಿಕೊಂಡಿದ್ದರು. ಆದರೆ, ಆ ಪಟ್ಟ ಬೇಗ ಉಳಿಯಲಿಲ್ಲ. ಆಕೆಯನ್ನು ಆ ಪೀಠದಿಂದ ಉಚ್ಚಾಟಿಸಲಾಯಿತು. ಈಗ ತಮ್ಮದೇ ಆದ ಆಶ್ರಮವನ್ನು ನಿರ್ಮಿಸಿ ಅಧ್ಯಾತ್ಮ ಗುರುವಾಗಿ ರಾರಾಜಿಸಲು ಮುಂದಾಗಿದ್ದಾರಂತೆ ಮಮತಾ. ಆದರೆ, ಇದು ಆಕೆಯ ಅಭಿಮಾನಿಗಳಿಗೆ ಇಷ್ಟವಾಗುತ್ತಿಲ್ಲ. ಸುಂದರವಾದ ತರುಣಿಯರು ಬೇಗನೇ ಮದ್ವೆ ಮಾಡಿಕೊಂಡು ಹೋದ್ರೆ ಶ್ಯಾನೇ ಬೇಜಾರು ಮಾಡಿಕೊಳ್ಳುವ ಹುಡುಗರು, ಆಗಿನ ಕಾಲದಲ್ಲಿ ತಮ್ಮ ನಿದ್ದೆಗೆಡಿಸಿದ್ದ ಮಮತಾ ಕುಲಕರ್ಣಿಯ ಈ ಹೊಸ ಅವತಾರಗಳನ್ನು ಸಹಿಸಿಕೊಳ್ತಾರೆಯೇ? ‘ಈಗ್ಲೂ ಕಾಲ ಮಿಂಚಿಲ್ಲ. ನಡೆದಿದ್ದನ್ನೆಲ್ಲಾ ಮರತು ಮದುವೆಯಾಗಿ ಸುಖವಾಗಿರು. ಕಾವಿ ಬಟ್ಟೆಯಲ್ಲಿ ನಾ ಹ್ಯಾಂಗ ನೋಡಲೇ ನಿನ್ನ’ ಅಂತ ಹಲುಬುತ್ತಿದ್ದಾರಂತೆ!

ಸಂಪಾದಕರ ಸದ್ಯಶೋಧನೆ

ಹಠಾತ್ ಆಕ್ಸಿಜನ್ ಮಾಸ್ಕ್ ಬಿದ್ದರೆ..

ವಿಮಾನಯಾನದಲ್ಲಿ ಸುರಕ್ಷತೆ ಎಂಬುದು ಕೇವಲ ನಿಯಮವಲ್ಲ, ಅದೊಂದು ವ್ಯವಸ್ಥಿತ ವಿಜ್ಞಾನ. ಎತ್ತರದಲ್ಲಿ ಹಾರುವಾಗ ವಿಮಾನದೊಳಗಿನ ಗಾಳಿಯ ಒತ್ತಡ (Cabin Pressure) ಕಡಿಮೆಯಾದಾಗ ಆಮ್ಲಜನಕದ ಮುಖವಾಡಗಳು (Oxygen Masks) ತಾವಾಗಿಯೇ ಕೆಳಕ್ಕೆ ಬೀಳುತ್ತವೆ. ಇಂಥ ತುರ್ತು ಪರಿಸ್ಥಿತಿಯಲ್ಲಿ ಪ್ರಯಾಣಿಕರು ಮೊದಲು ಏನು ಮಾಡಬೇಕು? ಅದರ ಹಿಂದಿನ ವೈಜ್ಞಾನಿಕ ಕಾರಣಗಳೇನು? ಆಮ್ಲಜನಕದ ಮುಖವಾಡಗಳು ಕೆಳಕ್ಕೆ ಬಿದ್ದ ತಕ್ಷಣ, ಪೈಲಟ್‌ಗಳು ಅಥವಾ ಗಗನಸಖಿಯರು ನೀಡುವ ಪ್ರಮುಖ ಸೂಚನೆ ಎಂದರೆ ‘ಬೇರೆಯವರಿಗೆ ಸಹಾಯ ಮಾಡುವ ಮೊದಲು ನಿಮ್ಮ ಬಗ್ಗೆ ಯೋಚಿಸಿ. ಮೊದಲು ನಿಮ್ಮ ಮುಖವಾಡವನ್ನು ಧರಿಸಿಕೊಳ್ಳಿ.’ ಇದು ಸ್ವಾರ್ಥದ ಮಾತಲ್ಲ, ಬದಲಾಗಿ ಇದೊಂದು ಅತ್ಯಂತ ವೈಜ್ಞಾನಿಕ ಮತ್ತು ಜೀವ ಉಳಿಸುವ ಕ್ರಮ. ವಿಮಾನವು ಸುಮಾರು 30,000 ದಿಂದ 40,000 ಅಡಿ ಎತ್ತರದಲ್ಲಿ ಹಾರುತ್ತಿರುವಾಗ ಹೊರಗಿನ ಗಾಳಿಯ ಒತ್ತಡ ತೀರಾ ಕಡಿಮೆ ಇರುತ್ತದೆ. ವಿಮಾನದ ಕ್ಯಾಬಿನ್ ಒತ್ತಡ ಕುಸಿದಾಗ, ನಮ್ಮ ಮಿದುಳಿಗೆ ಅಗತ್ಯವಿರುವ ಆಮ್ಲಜನಕ ಸಿಗುವುದಿಲ್ಲ. ಇದನ್ನು ‘ಹೈಪೋಕ್ಸಿಯಾ’ ಎಂದು ಕರೆಯುತ್ತಾರೆ. ಅತಿ ಎತ್ತರದಲ್ಲಿ ಆಮ್ಲಜನಕದ ಕೊರತೆಯಾದಾಗ ಒಬ್ಬ ಮನುಷ್ಯ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಅಥವಾ ಕೆಲಸ ಮಾಡಲು ಕೇವಲ 15 ರಿಂದ 30 ಸೆಕೆಂಡುಗಳ ಕಾಲ ಮಾತ್ರ ಪ್ರಜ್ಞೆ ಇರುತ್ತದೆ. ನೀವು ಮೊದಲು ಮಗುವಿಗೋ ಅಥವಾ ಪಕ್ಕದವರಿಗೋ ಮುಖವಾಡ ಹಾಕಲು ಹೋದರೆ, ಆ ಸಮಯದಲ್ಲಿ ನೀವು ಪ್ರಜ್ಞೆ ತಪ್ಪುವ ಸಾಧ್ಯತೆ ಇರುತ್ತದೆ. ಆಗ ಇಬ್ಬರ ಜೀವವೂ ಅಪಾಯಕ್ಕೆ ಸಿಲುಕುತ್ತದೆ. ನೀವು ಮೊದಲು ಸುರಕ್ಷಿತವಾಗಿದ್ದರೆ ಮಾತ್ರ ಇನ್ನೊಬ್ಬರನ್ನು ಉಳಿಸಲು ಸಾಧ್ಯ. ಮುಖವಾಡ ಕೆಳಗೆ ಬಿದ್ದ ತಕ್ಷಣ ಏನು ಮಾಡಬೇಕು? ಮುಖವಾಡವನ್ನು ನಮ್ಮ ಕಡೆಗೆ ಬಲವಾಗಿ ಎಳೆಯಬೇಕು. ಇದು ಆಮ್ಲಜನಕದ ಹರಿವನ್ನು (Oxygen Flow) ಪ್ರಾರಂಭಿಸುತ್ತದೆ. ಮುಖವಾಡವು ನಮ್ಮ ಮೂಗು ಮತ್ತು ಬಾಯಿ ಎರಡನ್ನೂ ಸಂಪೂರ್ಣವಾಗಿ ಮುಚ್ಚುವಂತೆ ನೋಡಿಕೊಳ್ಳಬೇಕು. ಎಲಾಸ್ಟಿಕ್ ಪಟ್ಟಿಯನ್ನು ತಲೆಯ ಹಿಂಭಾಗಕ್ಕೆ ಎಳೆದು ಮುಖವಾಡವನ್ನು ಗಟ್ಟಿಯಾಗಿ ಕೂರಿಸಬೇಕು. ಗಾಬರಿಯಾಗದೆ ಸಾಮಾನ್ಯ ರೀತಿಯಲ್ಲಿ ಉಸಿರಾಡಬೇಕು. ಬ್ಯಾಗ್ ಉಬ್ಬದಿದ್ದರೂ ಚಿಂತಿಸಬೇಡಿ, ಆಮ್ಲಜನಕ ಹರಿಯುತ್ತಿರುತ್ತದೆ. ಪೈಲಟ್‌ಗಳು ಏನು ಮಾಡುತ್ತಾರೆ? ಕ್ಯಾಬಿನ್ ಒತ್ತಡ ಕಡಿಮೆಯಾದ ತಕ್ಷಣ ಕಾಕ್‌ಪಿಟ್‌ನಲ್ಲಿ ಪೈಲಟ್‌ಗಳಿಗೂ ಆಮ್ಲಜನಕದ ಮುಖವಾಡಗಳು ಲಭ್ಯವಿರುತ್ತವೆ. ಅವರು ಮೊದಲು ಅದನ್ನು ಧರಿಸಿ, ತಕ್ಷಣ ವಿಮಾನವನ್ನು ಸುರಕ್ಷಿತ ಎತ್ತರಕ್ಕೆ (ಸಾಮಾನ್ಯವಾಗಿ 10,000 ಅಡಿ ಅಥವಾ ಅದಕ್ಕಿಂತ ಕಡಿಮೆ) ಇಳಿಸಲು ಪ್ರಯತ್ನಿಸುತ್ತಾರೆ. ಏಕೆಂದರೆ 10,000 ಅಡಿ ಎತ್ತರದಲ್ಲಿ ಮನುಷ್ಯ ಮುಖವಾಡವಿಲ್ಲದೆಯೂ ಉಸಿರಾಡಬಹುದು. ಆಮ್ಲಜನಕ ಹೇಗೆ ಉತ್ಪತ್ತಿಯಾಗುತ್ತದೆ? ವಿಮಾನಗಳಲ್ಲಿ ಮುಖವಾಡಗಳಿಗೆ ಆಮ್ಲಜನಕವು ಸಿಲಿಂಡರ್‌ಗಳಿಂದ ಬರುವುದಿಲ್ಲ (ಅದು ತೂಕ ಹೆಚ್ಚಿಸುತ್ತದೆ). ಬದಲಾಗಿ, ‘ಪ್ರತಿ ಸೀಟಿನ ಮೇಲ್ಭಾಗದಲ್ಲಿ ಕೆಮಿಕಲ್ ಆಕ್ಸಿಜನ್ ಜನರೇಟರ್’ ಇರುತ್ತದೆ. ನೀವು ಮುಖವಾಡವನ್ನು ಎಳೆದಾಗ, ಒಂದು ಸಣ್ಣ ಸ್ಫೋಟಕ ಪ್ರಕ್ರಿಯೆಯು ರಾಸಾಯನಿಕಗಳನ್ನು (ಸಾಮಾನ್ಯವಾಗಿ ಸೋಡಿಯಂ ಕ್ಲೋರೇಟ್ ಮತ್ತು ಕಬ್ಬಿಣದ ಪುಡಿ) ಸಂಯೋಜಿಸುತ್ತದೆ. ಈ ರಾಸಾಯನಿಕ ಕ್ರಿಯೆಯಿಂದ ಆಮ್ಲಜನಕ ಬಿಡುಗಡೆಯಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಶಾಖ ಉತ್ಪತ್ತಿಯಾಗುವುದರಿಂದ ಸೀಟಿನ ಮೇಲೆ ಸ್ವಲ್ಪ ಸುಟ್ಟ ವಾಸನೆ ಬರಬಹುದು, ಆದರೆ ಇದು ಸಾಮಾನ್ಯ. ಈ ವ್ಯವಸ್ಥೆಯು ಸುಮಾರು 12 ರಿಂದ 20 ನಿಮಿಷಗಳ ಕಾಲ ಆಮ್ಲಜನಕವನ್ನು ನೀಡುತ್ತದೆ, ಅಷ್ಟರಲ್ಲಿ ಪೈಲಟ್‌ಗಳು ವಿಮಾನವನ್ನು ಕೆಳಗಿನ ಎತ್ತರಕ್ಕೆ ತಂದಿರುತ್ತಾರೆ. ಇಂಥ ಘಟನೆಗಳು ಅಪರೂಪ, ಆದರೆ ಇವುಗಳನ್ನು ಎದುರಿಸಲು ವಿಮಾನಗಳು ಸುಸಜ್ಜಿತವಾಗಿರುತ್ತವೆ. ತುರ್ತು ಸಂದರ್ಭದಲ್ಲಿ ವಿಡಿಯೋ ಮಾಡುವುದು ಅಥವಾ ಫೋಟೋ ತೆಗೆಯುವುದಕ್ಕಿಂತ ಮುಖವಾಡ ಧರಿಸುವುದು ಮುಖ್ಯ. ಮುಖವಾಡ ಧರಿಸಿದ ನಂತರ ಸೀಟ್ ಬೆಲ್ಟ್ ಧರಿಸಿರುವುದು ಅತ್ಯಗತ್ಯ, ಏಕೆಂದರೆ ವಿಮಾನವು ವೇಗವಾಗಿ ಕೆಳಕ್ಕೆ ಇಳಿಯುವಾಗ ಕುಲುಕಾಟ ಹೆಚ್ಚಿರಬಹುದು. ವಿಮಾನದಲ್ಲಿ ಆಮ್ಲಜನಕದ ಮುಖವಾಡಗಳು ಕೆಳಕ್ಕೆ ಬಿದ್ದರೆ, ನಿಮ್ಮ ಮೊದಲ ಕೆಲಸ ನಿಮ್ಮ ಸುರಕ್ಷತೆ. ನೀವು ಸುರಕ್ಷಿತವಾಗಿದ್ದರೆ ಮಾತ್ರ ನಿಮ್ಮ ಪ್ರೀತಿಪಾತ್ರರನ್ನು ಮತ್ತು ಸಹ-ಪ್ರಯಾಣಿಕರನ್ನು ರಕ್ಷಿಸಲು ಸಾಧ್ಯ. ಇದು ವಿಮಾನಯಾನದ ಅತ್ಯಂತ ಕಟ್ಟುನಿಟ್ಟಾದ ಮತ್ತು ತರ್ಕಬದ್ಧವಾದ ಸುರಕ್ಷತಾ ಸೂತ್ರವಾಗಿದೆ.

ಮರದ ವಿಮಾನ ಅರ್ಧ ಮೈಲಿ ಹಾರಿದ ಕಥೆ!

ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಹಾ! ನಾನಿವತ್ತು ನಿಮಗೊಂದು ಕಥೆ ಹೇಳಬೇಕು. ಕಥೆ ಸ್ವಲ್ಪ ಹಳೆಯದು, ಅಮೆರಿಕದ್ದು. ಮಜವಾಗಿದೆ. ಆದರೆ ಕಥೆಗಿಂತ ಮೊದಲು ಒಂದು ಚಿಕ್ಕ ಪೀಠಿಕೆ ಬೇಕಲ್ಲ. ನಿಮಗೆ ಗೊತ್ತಿರಬಹುದು, ಅಮೆರಿಕ ದೇಶಕ್ಕೆ ನಮ್ಮ ದೇಶದಂತೆ ಸಾವಿರಾರು ವರ್ಷದ ಇತಿಹಾಸವಿಲ್ಲ. ಯುರೋಪಿಯನ್ನರು ಅಮೆರಿಕಕ್ಕೆ ಬಂದದ್ದೇ 1492ರಲ್ಲಿ. ಹಾಗಾಗಿ ಅಮೆರಿಕದ ಇತಿಹಾಸವೇನಿದ್ದರೂ ಅದರಿಂದೀಚೆಯದ್ದು. ಅದಕ್ಕಿಂತ ಮೊದಲಿದ್ದ ಮೂಲ ನಿವಾಸಿಗಳು ಬುಡಕಟ್ಟು ಬದುಕಿನವರಾಗಿದ್ದರು ಎನ್ನುತ್ತಾರೆ. ಅವರ ಇತಿಹಾಸವಂತೂ ಕುರುಹಿಲ್ಲದಂತೆ ಬಹುತೇಕ ಅಳಿಸಿಹೋಗಿದೆ, ಅಳಿಸಲಾಗಿದೆ. ಹಾಗಾಗಿ ಇಲ್ಲಿ ಯಾವುದೇ ಐತಿಹಾಸಿಕ ಸ್ಮಾರಕ ತೆಗೆದುಕೊಂಡರೂ ಅದರ ಇತಿಹಾಸ ಇನ್ನೂರು- ಮುನ್ನೂರು ವರ್ಷ ದಾಟುವುದಿಲ್ಲ. ಆದರೆ, ಅಮೆರಿಕನ್ನರು ಅವರ ಈ ಸೀಮಿತ ಇತಿಹಾಸವನ್ನು ಕಾಪಿಟ್ಟ ರೀತಿ ಮಾತ್ರ ಅನನ್ಯ. ಇವರು ಪ್ರತೀ ಊರು, ಬೀದಿಯಲ್ಲೆಲ್ಲ ಮ್ಯೂಸಿಯಂ ಮಾಡಿಟ್ಟಿದ್ದಾರೆ. ಅಲ್ಲಿ ಆ ಊರಿನ ಇತಿಹಾಸ, ಮೊದಲು ಅಲ್ಲಿಗೆ ಬಂದು ಸ್ಥಾಪನೆಯಾದದ್ದು ಯಾರು ಇತ್ಯಾದಿ ಐತಿಹಾಸಿಕ ವಿವರಗಳು. ಅವರು ಬಳಸಿದ ಪಾತ್ರೆ, ಪಗಡೆ, ಆ ಊರಿನಲ್ಲಿ ನಡೆದ ಯುರೋಪಿಯನ್ನರ ನಡುವಿನ ಯುದ್ಧಗಳು, ಆ ಯುದ್ಧಕ್ಕೆ ಸಂಬಂಧಿಸಿದ ಬಂದೂಕು, ಚಾಕು, ಛತ್ರಿ, ಚೀಲ ಇತ್ಯಾದಿ ಅಲ್ಲಿ ಇಟ್ಟಿರುತ್ತಾರೆ. ಅಮೆರಿಕದಲ್ಲಿ ಇಂತಹ ಎಷ್ಟು ವಸ್ತುಸಂಗ್ರಹಾಲಯಗಳಿರಬಹುದು ಹೇಳಿ? ಒಬ್ಬನ ಜೀವಮಾನದಲ್ಲಿ ನೋಡಿ ಮುಗಿಸಲಿಕ್ಕಾಗದಷ್ಟು. ಎಷ್ಟು? 35 ಸಾವಿರ..! ಹೌದು- ಅಷ್ಟು. ಜಗತ್ತಿನ ಅತ್ಯಂತ ಹೆಚ್ಚು ವಸ್ತುಸಂಗ್ರಹಾಲಯವಿರುವ ದೇಶ ಅಮೆರಿಕ. ಅದರಲ್ಲಿ ಚಿಕ್ಕ ಮನೆಯ ಗಾತ್ರದ ಸುಮಾರು 25 ಸಾವಿರ, ಮಧ್ಯಮ ಗಾತ್ರದ 7–8 ಸಾವಿರ ಮತ್ತು ಅಂತಾರಾಷ್ಟ್ರೀಯ ಮಟ್ಟದ – ಬೃಹದ್ ಗಾತ್ರದ ಸುಮಾರು ಒಂದು ಸಾವಿರ ವಸ್ತುಸಂಗ್ರಹಾಲಯಗಳಿವೆ. ಅವುಗಳಲ್ಲೊಂದಿಷ್ಟು ಯುದ್ಧ ಸಂಬಂಧಿ ಸಂಗ್ರಹಾಲಯಗಳು. ಅಮೆರಿಕದ ಯುದ್ಧಗಳಲ್ಲಿ ಬಳಸಿದ ಸಲಕರಣೆಗಳು, ವಾಹನ, ಟ್ಯಾಂಕರ್, ವಿಮಾನಗಳು, ಫೈಟರ್ ಜೆಟ್ ಇತ್ಯಾದಿ.

ಹಾಗಾಗಿ ಅಮೆರಿಕದ ಯಾವುದೇ ಊರಿಗೆ ಹೋದರೂ, ಅಲ್ಲಿ ನೋಡಲೇಬೇಕಾದ ಸ್ಥಳಗಳಲ್ಲಿ ಆ ಊರಿನ ಒಂದೆರಡು ಮ್ಯೂಸಿಯಂ ಆ ಪಟ್ಟಿಯಲ್ಲಿ ಇದ್ದೇ ಇರುತ್ತದೆ. ಬೇರಿನ್ನೇನೂ ಇರುವುದಿಲ್ಲ. ನಾನು ಇತ್ತೀಚೆಗೆ ಅಮೆರಿಕದ ಒರೆಗಾನ್ ರಾಜ್ಯದ ಮ್ಯಾಕ್ಮಿನ್ವಿಲ್ (McMinnville)' ಅನ್ನುವ ಊರಿಗೆ ವೃತ್ತಿ ನಿಮಿತ್ತ ಹೋಗಿದ್ದೆ. ‘ಊರಿಗೆ ಬಂದವನು ಮ್ಯೂಸಿಯಂಗೆ ಬರದಿರುತ್ತಾನೆಯೇ?’ ಎಂಬಂತೆ ಆ ಊರಿನಲ್ಲೊಂದು ವಿಶೇಷ ವಿಮಾನ ಸಂಗ್ರಹಾಲಯಕ್ಕೆ (Evergreen Aviation Space Museum) ಹೋಗುವ ಅವಕಾಶ ಸಿಕ್ಕಿತು. ಅಲ್ಲಿ ನನ್ನ ಗಮನ ಸೆಳೆದದ್ದು ಅಲ್ಲಿದ್ದ ಒಂದು ಅಸಾಮಾನ್ಯ ಗಾತ್ರದ ವಿಚಿತ್ರ ವಿಮಾನ. ಇವತ್ತಿನ ಕಥೆ ಆ ವಿಮಾನದ್ದು, ಅದನ್ನು ನಿರ್ಮಿಸಿದವನದ್ದು.

1942. ಎರಡನೇ ವಿಶ್ವಯುದ್ಧ ತುರಿಸಿನಲ್ಲಿತ್ತು. ಅಮೆರಿಕ, ಯುನೈಟೆಡ್ ಕಿಂಗ್‌ಡಮ್, ಸೋವಿಯತ್ ಯೂನಿಯನ್, ಚೀನಾ, ಫ್ರಾನ್ಸ್ ಮತ್ತು ಭಾರತ ಇತ್ಯಾದಿ ಬ್ರಿಟಿಷ್ ಆಳ್ವಿಕೆಯ ಪ್ರಾಂತ್ಯಗಳು ಯುದ್ಧದ ಒಂದು ಕಡೆ. ಇನ್ನೊಂದು ಕಡೆ ಜರ್ಮನಿ, ಇಟಲಿ, ಜಪಾನ್ ಮತ್ತಿತರ ದೇಶಗಳು. ಹೀಗಿರುವ ಯುದ್ಧ ಬಹುತೇಕ ನಡೆದದ್ದು ಯುರೋಪಿಯನ್ ನೆಲದಲ್ಲಿ. ಅಮೆರಿಕದವರು ಹಾಗೆಯೇ ಅಲ್ಲವೇ? ಇವರು ಇವರ ಜಾಗದಲ್ಲಿ ಯುದ್ಧ ಮಾಡುವುದಿಲ್ಲ! ಹಾಗಾಗಿ ಅಮೆರಿಕ ಮತ್ತು ಉಳಿದ ದೇಶಗಳ ಯುದ್ಧ ಸೈನಿಕರಿಗೆ ಆಹಾರ ಇತ್ಯಾದಿ ಹಡಗಿನಲ್ಲಿ ಸಾಗಾಣಿಕೆಯಾಗಬೇಕಿತ್ತು. ಅವು ಬೇರೆ ಬೇರೆ ಯುರೋಪಿಯನ್ ಬಂದರಿಗೆ ತಲುಪಿ, ಅಲ್ಲಿಂದ ರಣಕಣದಲ್ಲಿದ್ದ ಸೈನಿಕರಿಗೆ ತಲುಪುತ್ತಿದ್ದವು. ಆದರೆ ಈ ಹಡಗಿನ ಮಾರ್ಗದಲ್ಲಿ ಒಂದು ಹೊಸ ಸಮಸ್ಯೆ ಬಂತು. ಜರ್ಮನ್ನರ ಬಳಿ, ಹಿಟ್ಲರ್‌ನ ಹತ್ತಿರ ಸಬ್ ಮರೀನ್‌ಗಳಿದ್ದವು. ಅವು ಈ ಆಹಾರ, ಮದ್ದುಗುಂಡಿನ ಹಡಗನ್ನು ನೀರೊಳಗಿಂದ ಬಂದು ಧ್ವಂಸಮಾಡುತ್ತಿದ್ದವು. ಹೀಗಿರುವಾಗ ಅಮೆರಿಕ ಯುದ್ಧ ಅವಶ್ಯಕತೆಗಳನ್ನು ತನ್ನ ಸೈನಿಕರಿಗೆ ಸರಬರಾಜು ಮಾಡುವುದು ಹೇಗೆ? ಗಂಭೀರ.

ಸಬ್ ಮರೀನ್ ಕಾರಣದಿಂದ ಸಮುದ್ರದಲ್ಲಿ ಹಡಗಿನ ಮೂಲಕ ತೇಲಿ ಹೋಗಲಾಗುತ್ತಿಲ್ಲ, ಆದರೆ ಹಾರಿ ಸಮುದ್ರದ ಮೇಲೆ ಹೋಗಬಹುದಲ್ಲ? ಆದರೆ ವಿಮಾನಕ್ಕೆ ಇಳಿಯಲು ಶತ್ರು ನೆಲದಲ್ಲಿ ರನ್–ವೇ ಬೇಕು. ಅದು ಸಾಧ್ಯವಿಲ್ಲ. ಹೀಗೊಂದು ಸಮಸ್ಯೆಯನ್ನಿಟ್ಟುಕೊಂಡ ಅಮೆರಿಕದ ಸರಕಾರ ‘ಹೆನ್ರಿ ಕೈಸರ್’ ಎಂಬ ಆಗಿನ ಕಾಲದಲ್ಲಿ ಅಮೆರಿಕದಲ್ಲಿ ಹಡಗು ನಿರ್ಮಾಣ ಮಾಡುತ್ತಿದ್ದ ಆವಿಷ್ಕಾರೀ ಉದ್ಯಮಿಯನ್ನು ಸಂಪರ್ಕಿಸಿತು. ಅವನಲ್ಲಿ ಏನಾದರೂ ಪರಿಹಾರವಿದೆಯೇ ಎಂದು ಕೇಳಿತು. ಅವನಿಗೊಂದು ಹೊಸ ಆಲೋಚನೆ ಬಂತು. ವಿಮಾನವನ್ನೇ ರನ್–ವೇ ಬದಲಿಗೆ ಸಮುದ್ರದ ನೀರಲ್ಲಿ ಇಳಿಸುವಂತೆ ಮಾಡಿದರೆ ಹೇಗೆ? ಅವನು ‘ಹಾವರ್ಡ್ ಹ್ಯೂಸ್’ ಎನ್ನುವ ಇನ್ನೊಬ್ಬ ಉದ್ಯಮಿಯ ಜತೆ ಒಂದು ಯೋಜನೆ ರೂಪಿಸಿದ. ಹಾವರ್ಡ್ ಹ್ಯೂಸ್ ಕೂಡ ಸಾಮಾನ್ಯದ ವ್ಯಕ್ತಿಯಲ್ಲ. ಹಾವರ್ಡ್ ಹ್ಯೂಸ್- ಅವನೇ ನಮ್ಮ ಇಂದಿನ ಕಥಾ ನಾಯಕ. ಅವರಿಬ್ಬರೂ ಸೇರಿ, ಒಂದು ಹಡಗಿನ ಗಾತ್ರದ, ಸಮುದ್ರದ ನೀರಿನ ಮೇಲೆ ಇಳಿಯುವ ವಿಮಾನ ತಯಾರಿಸುತ್ತೇವೆ ಎಂದು ಅಮೆರಿಕನ್ ಸರಕಾರಕ್ಕೊಂದು ಅರ್ಜಿ ಸಲ್ಲಿಸಿದರು. ಅಮೆರಿಕದ ಯುದ್ಧ ಇಲಾಖೆ (Department of War)ಗೆ ಇದೊಂದು ಒಳ್ಳೆಯ ಯೋಚನೆ ಎಂದೆನಿಸಿತು. ದೊಡ್ಡ ಹಡಗಿನಷ್ಟು ಗಾತ್ರದ, ಸಾಮಾನುಗಳನ್ನು ಒಯ್ದು ಬಂದರಿನ ಸಮೀಪದ ಸಮುದ್ರದ ನೀರಿನ ಮೇಲೆ ಇಳಿಯುವಂತಹ ವಿಮಾನ!

ನಮ್ಮ ಕಥಾ ನಾಯಕ ಹಾವರ್ಡ್ ಹ್ಯೂಸ್ ಸಾಮಾನ್ಯನಲ್ಲ. 1938ರಲ್ಲಿ ವಿಮಾನ ಹಾರಿಸಿಕೊಂಡು ಜಗತ್ತನ್ನು ನಾಲ್ಕೇ ದಿನದಲ್ಲಿ ಒಂದು ಸುತ್ತು ಹಾಕಿ ಬಂದು ಪ್ರಸಿದ್ಧಿ ಪಡೆದಿದ್ದ. ಅವನು ಕೇವಲ ವಿಮಾನ ಚಾಲಕನಷ್ಟೇ ಆಗಿರಲಿಲ್ಲ. ಬದಲಿಗೆ ವಿಮಾನ ತಜ್ಞನಾಗಿದ್ದ. ಆಗಿನ ಕಾಲದ ಕೌಶಲ ಏರೋನಾಟಿಕಲ್ ಎಂಜಿನಿಯರ್. ಅವನಿಗೆ ವಿಮಾನದ ಬಗ್ಗೆ ಯಾರಿಗೂ ತಿಳಿಯದಷ್ಟು ಗೊತ್ತಿತ್ತು. ಸುಮಾರು ಇಪ್ಪತ್ತು ವರ್ಷ ವಿಮಾನ ತಯಾರಿಕೆಯಲ್ಲಿ ಪರಿಣಿತಿಯಿದ್ದವ. ಜತೆಯಲ್ಲಿ ಅನ್ವೇಷಕ ಮತ್ತು ಉದ್ಯಮಪತಿ, ಸಿನಿಮಾ ಪ್ರೊಡ್ಯೂಸರ್, ಅಮೆರಿಕದ ಶ್ರೀಮಂತರಲ್ಲಿ ಒಬ್ಬ ಇತ್ಯಾದಿ. ಹಿಡಿದ ಕೆಲಸವನ್ನು ಹುಚ್ಚನಂತೆ ಬೆಂಬಿದ್ದು ಮುಗಿಸಿಯೇ ತೀರಿಸುವ ಕಬ್ಬಿಣದ ಗಟ್ಟಿಗ. ಫೇಮಸ್.

ವಿಮಾನ ತಂತ್ರಜ್ಞಾನ ಬಲ್ಲ ‘ಹಾವರ್ಡ್ ಹ್ಯೂಸ್’ ಮತ್ತು ಹಡಗು ಕಟ್ಟ ಬಲ್ಲ ‘ಹೆನ್ರಿ ಕೈಸರ್’ ಸೇರಿ ನೀಡಿದ ಅರ್ಜಿ ಸ್ವೀಕಾರವಾಯಿತು. ಅಮೆರಿಕ ಸರಕಾರ ಸಮುದ್ರದ ಮೇಲೆ ಇಳಿಯಬಹುದಾದ ಒಂದು ದೊಡ್ಡ ವಿಮಾನ ತಯಾರಿಕೆಗೆ ಒಪ್ಪಿಗೆ ಸೂಚಿಸಿತು. ಚಿಕ್ಕಪುಟ್ಟ ವಿಮಾನಗಳಿದ್ದ ಕಾಲ ಅದು. ಹಡಗಿನ ಗಾತ್ರದ ವಿಮಾನ ಹೇಗೆ ಕಟ್ಟುವುದು? ಸ್ಟೀಲ್‌ನಿಂದ ಅಷ್ಟು ದೊಡ್ಡ ವಿಮಾನ ನಿರ್ಮಿಸಲು ಹೊರಟರೆ ಅಷ್ಟೆಲ್ಲಾ ಪ್ರಮಾಣದ ಉಕ್ಕು ಬೇಕು. ಉಕ್ಕು ತುಟ್ಟಿ, ಕೊರತೆ. ಇದ್ದದ್ದೆಲ್ಲ ಟ್ಯಾಂಕರ್, ವಾಹನ, ಜೀಪು ಇತ್ಯಾದಿ ಯುದ್ಧ ತಯಾರಿಕೆಗೆ ಬೇಕು. ಅಲ್ಲದೆ ಅಷ್ಟು ಗಾತ್ರದ ಉಕ್ಕಿನ ವಿಮಾನ ಸಮುದ್ರದಲ್ಲಿ ಮುಳುಗಿಹೋದರೆ? ಏನೆಲ್ಲಾ ಲೆಕ್ಕಾಚಾರ ಮಾಡಿದ ಅಮೆರಿಕನ್ ಸರಕಾರ, ಹಡಗನ್ನು ಮರದಲ್ಲಿ ಕಟ್ಟಿದಂತೆ ವಿಮಾನವನ್ನು ಕೂಡ ಮರದಿಂದ ಕಟ್ಟಬಹುದೇ ಎಂದು ಕೇಳಿತು. ಅಮೆರಿಕದಲ್ಲಿ ಯಾವತ್ತೂ ಮರದ ಕೊರತೆ ಇರಲಿಲ್ಲ. ಮರದ ಮೊದಲ ವಿಮಾನ, ವಿಮಾನದ ಮೂಲ ಮಾದರಿ (prototype) ತಯಾರಿಸಲು, ಅಭಿವೃದ್ಧಿಪಡಿಸಲು ಅಮೆರಿಕನ್ ಸರಕಾರ ಮತ್ತು ಇವರಿಬ್ಬರು ಗುತ್ತಿಗೆ ಕರಾರು ಮಾಡಿಕೊಂಡರು. ಸರಕಾರ ಇದಕ್ಕಾಗಿ ಒಂದು ಬೃಹತ್ ಮೊತ್ತ ಇವರಿಗೆ ಕೊಟ್ಟಿತು. ಲೆಕ್ಕದಂತೆ 22 ತಿಂಗಳೊಳಗೆ ಮೊದಲ ವಿಮಾನ ತಯಾರಾಗಬೇಕು ಎಂಬ ನಿಬಂಧನೆಯ ಮೇಲೆ ಮರದ ವಿಮಾನದ ನಿರ್ಮಾಣದ ಕೆಲಸ ಶುರುವಾಗಿಯೇಬಿಟ್ಟಿತು.

ಸರಿ. ಮರದಲ್ಲಿ ಉಳಿದ ವಿಮಾನಕ್ಕಿಂತ ಐದಾರುಪಟ್ಟು ದೊಡ್ಡ ಮರದ ವಿಮಾನ ಮಾಡಬೇಕೆಂದರೆ ಅಷ್ಟು ಮರಗೆಲಸದವರು ಬೇಕಾಯ್ತಲ್ಲ. ಅಮೆರಿಕದ ಕೆಲವು ಸಾವಿರ ಮರಗೆಲಸದವರನ್ನು ದೇಶದೆಲ್ಲೆಡೆಯಿಂದ ಕರೆಸಿಕೊಂಡರು. ಎಲ್ಲ ವ್ಯವಸ್ಥೆ ಹಡಗು ಕಟ್ಟುವ ‘ಹೆನ್ರಿ ಕೈಸರ್’ ನದು. ಆದರೆ ವಿಮಾನ ನಿರ್ಮಾಣದ ಜವಾಬ್ದಾರಿ, ದೇಖ್ರೇಕಿ ‘ಹಾವರ್ಡ್ ಹ್ಯೂಸ್’ನದು. ಹ್ಯೂಸ್ ಸ್ವಲ್ಪ ವಿಲಕ್ಷಣ ಮನುಷ್ಯ. ಅವನಿಗೊಂದು ಚಾಳಿಯಿತ್ತು. ಅವನು ಯಾವುದೇ ಕೆಲಸ ಹಿಡಿಯಲಿ, ಅದನ್ನು ಮಾಡಿಯೇ ಶುದ್ಧ. ಅವನು ಈ ಮರದ ವಿಮಾನದ ತಯಾರಿಕೆಯಲ್ಲಿ ಹಗಲಿರುಳು ಮುನ್ನಡೆಸಿದ. ಅವನು ಪರಿಪೂರ್ಣತಾವಾದಿ (Perfectionist). ಅವನಿಗೆ ಮಾಡಿದ್ದೆಲ್ಲ ಸರಿಯಾಗಿಯೇ ಆಗಬೇಕು. ಮಾಡಿದ್ದು ಸರಿಯಾಗದಿದ್ದರೆ ಕೆಲಸದವರಿಗೆ ಎರಡು ಪೆಟ್ಟು ಬಾರಿಸಲು ಕೂಡ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಅವನ ಜತೆ ಕೆಲಸ ಮಾಡುವುದು, ವ್ಯವಹರಿಸುವುದು ಅಲ್ಲಿನ ಕೆಲಸಗಾರರಿಗೆ ಸುಲಭವಿರಲಿಲ್ಲ. ಆದರೆ ಯುದ್ಧಕಾಲ, ಅವರಿಗೂ ದುಡಿಮೆಯ ಅನಿವಾರ್ಯ! ಹಾಗಾಗಿ ಕೆಲಸ ಮುಂದುವರಿದಿತ್ತು.

ಹಾಗೆ ಹೀಗೆ ನೋಡುವಾಗ ಅಮೆರಿಕದ ಸರಕಾರ ಕೊಟ್ಟ 22 ತಿಂಗಳ ಕಾಲಾವಕಾಶ ಮುಗಿಯಲು ಬಂದೇಬಿಟ್ಟಿತು. ಆದರೆ ವಾಯ್ದೆಯೊಳಗೆ ಮರದ ವಿಮಾನ ನಿರ್ಮಿಸಿ ಮುಗಿಯುವ ಲಕ್ಷಣ ಕಾಣಿಸಲಿಲ್ಲ. ಸರಕಾರ ವಿಮಾನ ನಿರ್ಮಾಣಕ್ಕೆ ಕೊಟ್ಟ ಹಣವೂ ಹೆಚ್ಚುಕಡಿಮೆ ಖಾಲಿಯಾಗಿ ಆಗಿತ್ತು. ಈ ನಡುವೆ ಹಡಗಿನ ಉದ್ಯಮಿ ಹೆನ್ರಿ ಕೈಸರ್‌ಗೆ – ಅಂಡೆ ಪಿರ್ಕಿ ‘ಹಾವರ್ಡ್ ಹ್ಯೂಸ್’ ಜತೆ ವ್ಯವಹರಿಸುವುದು ಕಷ್ಟವಾಯಿತು. ಅವನು ಪಾಲುದಾರಿಕೆ (partnership) ಮುರಿದುಕೊಂಡು ಹೋಗಿಬಿಟ್ಟ. ಅದೇ ಸಂದರ್ಭದಲ್ಲಿ ಅಮೆರಿಕ ವಿಶ್ವಯುದ್ಧದಲ್ಲಿ ಮುನ್ನಡೆ ಸಾಧಿಸಿತ್ತು. ಹಾಗಾಗಿ ಈ ಸಮುದ್ರದಲ್ಲಿಳಿಯುವ Sea Plane ನ ಅವಶ್ಯಕತೆ ಇರಲಿಲ್ಲ. ಹಾಗಾಗಿ ಅಮೆರಿಕನ್ ಸರಕಾರ – ಈ ಮರದ ವಿಮಾನ ಮಾಡಿದ್ದು ಸಾಕು ಎಂದು ಅದಕ್ಕೆ ಕೊಡುತ್ತಿದ್ದ ಹಣವನ್ನು ಕೂಡ ನಿಲ್ಲಿಸಿಬಿಟ್ಟಿತು.

ಆದರೆ ಎಕ್ಕಡಪನ್ನಾಸ್ ‘ಹಾವರ್ಡ್ ಹ್ಯೂಸ್’ – ಹಿಡಿದ ಕೆಲಸ ಮುಗಿಸದೇ ಬಿಡುವುದುಂಟೆ? ಅಮೆರಿಕನ್ ಸರಕಾರ ಸಾಕು, ನಿಲ್ಲಿಸಿ, ನಮಗಿದು ಬೇಕಾಗಿಯೇ ಇಲ್ಲ ಎಂದರೂ ಹ್ಯೂಸ್ ಮಾತು ಕೇಳಲಿಲ್ಲ. ಪತ್ರಿಕೆಗಳು ಮರದ ವಿಮಾನದ ಪ್ರಾಜೆಕ್ಟ್ ಅನ್ನು ಹಿಯಾಳಿಸಿದವು, ಲೇವಡಿ ಮಾಡಿದವು. ಅದನ್ನು Spruce Goose – ಮರದ ಬಾತುಕೋಳಿ ಎಂದು ಕರೆದವು. ಅತ್ತ ವಿಶ್ವಯುದ್ಧವೇ ಮುಗಿದು ಹೋಯಿತು. ಆದರೆ ಹಾವರ್ಡ್ ಹ್ಯೂಸ್ ಮರದ ವಿಮಾನದ ನಿರ್ಮಾಣ ಮಾತ್ರ ಬಿಡಲೇ ಇಲ್ಲ. ಅವನಿಗೆ ಇಷ್ಟು ಕಾಲ ವ್ಯಯಿಸಿದ ಹಣ, ಶ್ರಮ ಮತ್ತು ಸಮಯ ವ್ಯರ್ಥವಾಗಿಸಲು ಒಪ್ಪಿಗೆಯೇ ಇಲ್ಲ. ಅವನು ಆಗಲೇ ಕೆಲಸ ನಿಲ್ಲಿಸಿಬಿಡಬಹುದಿತ್ತು. ಎಂಟಾಣೆ ನಷ್ಟವಿರಲಿಲ್ಲ. ನಿಲ್ಲಿಸಿ ತನ್ನ ಉಕ್ಕಿನ ವಿಮಾನದ ಕೆಲಸವನ್ನು ಮುಂದುವರಿಸಿ ಬೇಕಾದಷ್ಟು ಹಣ ಸಂಪಾದಿಸಬಹುದಿತ್ತು. ಇನ್ನೇನೋ ಆವಿಷ್ಕರಿಸಬಹುದಿತ್ತು – ಆದರೆ ಅವನು ಈ ಬೇಡದ ಕೆಲಸ ನಿಲ್ಲಿಸಲು ಬಿಲ್ಕುಲ್ ಒಪ್ಪಲೇ ಇಲ್ಲ.

80 ಮಿಲಿಯನ್ ಡಾಲರ್ ಸರಕಾರಿ ಪ್ರಾಜೆಕ್ಟ್ – ಮುಗಿಯುವಾಗ ಸರಿಸುಮಾರು ಮುನ್ನೂರು ಮಿಲಿಯನ್ ಡಾಲರ್‌ನಷ್ಟು ಇವನ ಕಿಸೆಯಿಂದ ಖರ್ಚಾಯಿತು. ಯಾರಿಗೂ ಮರದ ವಿಮಾನ ಈಗ ಬೇಕಾಗಿರಲಿಲ್ಲ. ಆದರೂ ಕೊನೆಗೊಂದು ದಿನ ಬಹುನಿರೀಕ್ಷಿತ ದಿನ ಬಂದೇ ಬಿಟ್ಟಿತು. ವಿಮಾನ ತಯಾರಾಯ್ತು. ಪ್ರೆಸ್‌ನವರೆಲ್ಲ ಸೇರಿದರು. ಕ್ಯಾಲಿಫೋರ್ನಿಯಾದ ದಂಡೆಯಂಚಿನ ಸಮುದ್ರದಲ್ಲಿ ವಿಮಾನ ನೀರಿನ ಮೇಲೆ ತೇಲುತ್ತಾ ನಿಂತಿತು. ಖುದ್ದು ಹಾವರ್ಡ್ ಹ್ಯೂಸ್ ಅದರ ಚಾಲನೆಗೆ ಕೂತಿದ್ದ. ಆ ದಿನ ಕೇವಲ ನೀರಿನ ಮೇಲೆ ಒಂದಿಷ್ಟು ದೂರ ಸಾಗಲಷ್ಟೇ ಆ ವಿಮಾನಕ್ಕೆ ಅನುಮತಿಯಿತ್ತು. ಆದರೆ ಹಾವರ್ಡ್ ಹ್ಯೂಸ್ ವಿಮಾನವನ್ನು ಓಡಿಸಿದ, ಮತ್ತು ಪ್ರೆಸ್‌ನವರೆದುರು ನೀರಿನಿಂದ ಮೇಲಕ್ಕೆ ಹಾರಿಸಿಯೇ ಬಿಟ್ಟ. ಹಾರಿದ್ದು ಎಷ್ಟು? ಸುಮಾರು ಮೂವತ್ತು ಸೆಕೆಂಡ್ – ಎರಡರಿಂದ ಮೂರು ಮೈಲಿ. ಆಮೇಲೆ ಕೆಳಗೆ ಸಮುದ್ರಕ್ಕೆ ಇಳಿಯಿತು ವಿಮಾನ.

ಅಷ್ಟೇ. ಅದು ಹಾರಿದ್ದು ಕೆಲವೇ ಕೆಲವು ಸೆಕೆಂಡ್. ಅಲ್ಲಿಂದ ಮುಂದೆ ಅದನ್ನು ಲಂಗರು ಹಾಕಿ ನೀರಿನಲ್ಲಿ ನಿಲ್ಲಿಸಲಾಯಿತು. ಇದೆಲ್ಲ ಆಗುವಾಗ ಹಾವರ್ಡ್ ಹ್ಯೂಸ್ ದೇಶಕ್ಕೇ ಶ್ರೀಮಂತನಿದ್ದವನು ದಿವಾಳಿಯಂಚಿಗೆ ಬಂದಿದ್ದ, ಆದರೆ ಮರದ ವಿಮಾನವನ್ನು ಬಿಡಲಿಲ್ಲ, ಅದನ್ನು ಇಟ್ಟುಕೊಳ್ಳಲು, ಹಾರುವ ಪರವಾನಗಿ ಚಾಲ್ತಿಯಲ್ಲಿಡಲು, ದುರಸ್ತಿಗೆ ಇನ್ನೆಷ್ಟೋ ಮಿಲಿಯನ್ ಹಣ ವ್ಯಯಿಸಿದ. ಕೊನೆಗೊಂದು ದಿನ ಸತ್ತೇ ಹೋದ. ಅವನು ಸಾಯುತ್ತಿದ್ದಂತೆ ಅವನ ಮರದ ವಿಮಾನವನ್ನು ತುಂಡು ತುಂಡು ಮಾಡಿ ಬೇರೆ ಬೇರೆ ವಸ್ತುಸಂಗ್ರಹಾಲಯಗಳಿಗೆ ಸಾಗಿಸಲಾಯಿತು. ಅಲ್ಲಿಗೆ ಮರದ ವಿಮಾನದ ಕಥೆ ಇತಿಹಾಸವಾಗಿ ಹೀಗೆ ಮುಗಿಯಿತು! What a waste !!

ಒರೆಗಾನ್‌ನ ವಸ್ತುಸಂಗ್ರಹಾಲಯದ ಆ ದೊಡ್ಡ ಕಟ್ಟಡದ ಬಹು ಭಾಗ ಆವರಿಸಿದ್ದ ಅದೇ ‘ಮರದ ವಿಮಾನ’ದ ದೊಡ್ಡ ತುಂಡಿನ ಎದುರು ನಿಂತು ಈ ಕಥೆ ಕೇಳಿದಾಗ ಒಮ್ಮೆ ಎದೆ ಭಾರವಾಯಿತು. ಅಷ್ಟೊಂದು ಜನರ ವ್ಯರ್ಥವಾದ ಶ್ರಮ, ಹಾವರ್ಡ್ ಹ್ಯೂಸ್‌ನ ಹುಚ್ಚು ಪ್ರತಿಷ್ಠೆ ಎಲ್ಲವೂ ಕಣ್ಣೆದುರು ಪಟಪಟನೆ ಹಾದು ಹೋಯಿತು. ಒಂದು ವೇಳೆ ಹಾವರ್ಡ್ ಹ್ಯೂಸ್ ಸರಕಾರ ನಿಲ್ಲಿಸಿ ಎಂದಾಗ ನಿಲ್ಲಿಸಿದ್ದರೆ? ವ್ಯರ್ಥ ಯಾರಿಗೂ ಬೇಡದ ಮರದ ವಿಮಾನ ತಯಾರಿಸುವುದನ್ನು ಬಿಟ್ಟು ಇನ್ನೇನೋ ಆವಿಷ್ಕರಿಸಲು ಮುಂದಾಗಿದ್ದಾರೆ? ಅವನದೇ ಉಕ್ಕಿನ ವಿಮಾನ ಕಾರ್ಖಾನೆ ಇತ್ತು, ಅದನ್ನು ಮುಂದುವರಿಸಿಕೊಂಡು ಹೋದರೂ ಆರಾಮಾಗಿ ಶ್ರೀಮಂತನಾಗಿಯೇ ಇರಬಹುದಿತ್ತು. ಆದರೆ ಹಾವರ್ಡ್ ಹ್ಯೂಸ್‌ನಿಗೆ ತಾನು ವ್ಯಯಿಸಿದ ಸಮಯ, ಹಣ, ಶ್ರಮ ಮತ್ತು ಭಾವನೆಯನ್ನು ಮೀರಲಿಕ್ಕಾಗಲೇ ಇಲ್ಲ, ಸಾಯುವ ವರೆಗೂ. ಕಳೆದುಕೊಳ್ಳುವುದಕ್ಕಿಂತ ತಾನು ವ್ಯಯಿಸಿದ್ದೇ ಮೌಲ್ಯಯುತವೆನಿಸುತ್ತಾ ಹೋಯಿತು.

ಈ ರೀತಿ ವ್ಯಯಿಸಿದ ಹಣ, ಸಮಯ, ಶ್ರಮ, ಭಾವನೆಗಳಿಗೆ ಜೋತುಬಿದ್ದು ಇನ್ನಷ್ಟು ನಷ್ಟಕ್ಕೊಳಗಾಗುವ ಬುದ್ಧಿಗೊಂದು ಹೆಸರಿದೆ. Sunk cost fallacy – ಹಿಂದೆ ವ್ಯಯಿಸಿದ್ದರ ಮೇಲಿನ ಮೋಹದ ಭ್ರಮೆ. ಮೇಲ್ನೋಟಕ್ಕೆ ಇದೆಲ್ಲ ಅದ್ಯಾವುದೋ ಕಾಲದ, ಅದೆಲ್ಲಿಯೋ ಅಮೆರಿಕದ, ಅದೆಷ್ಟೋ ಮಿಲಿಯನ್ ಡಾಲರ್ ಕಳೆದುಕೊಂಡ ಯಾರೋ ಒಬ್ಬ ಹುಚ್ಚು ಪ್ಯಾಲಿ ಕಥೆ ಎಂದೆನಿಸಬಹುದು. ಆದರೆ ಇವತ್ತಿಗೂ ನಮ್ಮ ನಡುವಿನ ಅದೆಷ್ಟೋ ವ್ಯಾಪಾರಸ್ಥರದ್ದು ಇದೇ ಕಥೆ. ಏನೋ ಒಂದು ವ್ಯವಹಾರ ಕೈ ಹತ್ತಲಿಲ್ಲ ಎಂದು ಬಿಡುವುದು ಕೂಡ ವ್ಯಾಪಾರೀ ಜಾಣತನ. ಆದರೆ ಇಂಥದ್ದೊಂದು ಮೋಹದ ಕುರುಡಿನಿಂದ ಅದೆಷ್ಟೋ ಮಂದಿ ದಿವಾಳಿಯಾದವರಿದ್ದಾರೆ. ಇದೆಲ್ಲ ವ್ಯಾಪಾರ ವ್ಯವಹಾರಕ್ಕಷ್ಟೇ ಸೀಮಿತವಲ್ಲ.

ಇಂತಹುದೇ ಅವಗುಣ ನಮ್ಮ ನಿತ್ಯಜೀವನದಲ್ಲಿಯೂ ನಾವು ಅರಿವಿಲ್ಲದಂತೆ ಪಾಲಿಸುತ್ತಿರುತ್ತೇವೆ. ಹಣವಷ್ಟೇ ಅಲ್ಲ, ಎಲ್ಲೆಲ್ಲಿ ಶ್ರಮ, ಸಮಯ, ಮತ್ತು ಭಾವನೆಗಳನ್ನು ವ್ಯಯಿಸಿರುತ್ತೇವೋ ಅಲ್ಲೆಲ್ಲ. ನಾನೇ ಅದೆಷ್ಟೋ ಬಾರಿ ಯಾವುದೋ ಒಂದು ಪುಸ್ತಕವನ್ನು ಓದಲು ಶುರುಮಾಡಿಕೊಂಡಿರುತ್ತೇನೆ. ಅರ್ಧದಷ್ಟು ಓದಿ ಮುಗಿಸುವಾಗ ಸುಸ್ತಾಗಿ ಹೋಗಿರುತ್ತದೆ. ಸಾಕು ಬಿಡೋಣ ಎಂದೆನಿಸುತ್ತಿರುತ್ತದೆ. ಆದರೆ ಅರ್ಧ ಓದಿ ಆಗಿದೆಯಲ್ಲ! ಈಗ ಬಿಟ್ಟರೆ ಮುಗಿಸಿದ ಹಾಗೆ ಆಗುವುದಿಲ್ಲವಲ್ಲ, ಪೈಸವಸೂಲ್ ಆಗಬೇಕಲ್ಲ ಎಂದು ಇನ್ನಷ್ಟು ತ್ರಾಸುಪಟ್ಟು ಉಳಿದ ಪೇಜುಗಳನ್ನು ಮುಗಿಸಿರುತ್ತೇನೆ. ಇನ್ನೊಂದು ಅನುಭವ ನಿಮಗೂ ಆಗಿರಬಹುದು–ಹೋಟೆಲ್‌ನಲ್ಲಿ ಊಟ ಮುಗಿಸಿ ಒಂದು ಐಸ್ ಕ್ರೀಮ್ ತಿನ್ನೋಣ ಎಂದಾಗುತ್ತದೆ. ಆರ್ಡರ್ ಮಾಡಿ ಸುಮಾರು ಹೊತ್ತಾದರೂ ಐಸ್ ಕ್ರೀಮ್ ತಂದೇ ಕೊಡುವುದಿಲ್ಲ, ಅಷ್ಟರೊಳಗೆ ನಮಗೆ ಇನ್ನಷ್ಟು ಹೊಟ್ಟೆ ತುಂಬಿದ್ದು ಗೊತ್ತಾಗಿ ಐಸ್ ಕ್ರೀಮ್ ಬೇಡವಾಗಿರುತ್ತದೆ. ಆದರೂ ದುಡ್ಡು ಕೊಟ್ಟಾಗಿದೆ ಇಂದು ತಿಂದೇ ಬರುತ್ತೇವೆ. ಸಂಬಂಧಗಳ ವಿಷಯದಲ್ಲೂ ಹಾಗೆಯೇ. ಕೆಲವು ಸಂಬಂಧಗಳು ಕುಲಗೆಟ್ಟುಹೋಗಿರುತ್ತವೆ. ಅದೆಷ್ಟೇ ಪ್ರಯತ್ನಿಸಿದರೂ ಇನ್ನೊಂದು ಕಡೆಯಿಂದ ಸರಿಯಾಗುವ ಲಕ್ಷಣವಿರುವುದಿಲ್ಲ. ಆದರೂ ಇಷ್ಟು ವರ್ಷ ಜತೆಯಲ್ಲಿದ್ದೇವೆ, ಹಾಗಾಗಿ ಈಗ ಬಿಡಲು ಆಗುವುದಿಲ್ಲ ಎಂದು ಜೋತುಬೀಳುತ್ತೇವೆ. ಇಷ್ಟು ವರ್ಷ ಒಂದೇ ಕಂಪನಿಯಲ್ಲಿದ್ದೇನೆ ಎಂಬ ಕಾರಣಕ್ಕೆ ಕೆಲಸದಲ್ಲಿ, ಸಂಬಳದಲ್ಲಿ ತೃಪ್ತಿಯಿಲ್ಲದಿದ್ದರೂ – ಕೆಲಸ ಬದಲಿಸದವರು ಎಷ್ಟು ಮಂದಿ ಬೇಕು? ಸಿನಿಮಾ ಅದೆಷ್ಟೇ ಕೆಟ್ಟದಾಗಿರಲಿ, ದುಡ್ಡು ಕೊಟ್ಟದ್ದಕ್ಕೆ ಹಿಂಸೆಯಾದರೂ ಪರವಾಗಿಲ್ಲ, ಪೂರ್ತಿ ನೀಡಬೇಕು! ಗೌರವ, ನಂಬಿಕೆ ಕಳೆದುಕೊಂಡ ನಂತರವೂ ಸ್ನೇಹ, ಪ್ರೀತಿ ಇತ್ಯಾದಿ ಮುಂದುವರಿಸುವ ಒದ್ದಾಟ ಇದೇ ಚಾಳಿಯ ರೂಪಾಂತರ.. ನಾವೆಲ್ಲರೂ ಎಷ್ಟೋ ಕಡೆ ಹಳೆಯ ಹೂಡಿಕೆಯನ್ನು ಪ್ರಸ್ತುತ ಮೌಲ್ಯದಂತೆ ತಪ್ಪಾಗಿ ಭಾವಿಸಿ ವ್ಯವಹರಿಸುತ್ತಿರುತ್ತೇವೆ. ಈಗ ಹೇಳಿ– ನಿಮ್ಮ ಮರದ ವಿಮಾನ ಯಾವುದು?

ಬ್ಯಾಂಕ್ ಸೇವೆ ಹೇಗಿರಬೇಕು? ಜನ ಯಾವುದನ್ನು ಮರೆಯುವಂತಿಲ್ಲ?

ಮನಿಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಒಡಿಶಾದಲ್ಲಿ ವ್ಯಕ್ತಿಯೊಬ್ಬ ಮೃತಪಟ್ಟಿದ್ದ ತನ್ನ ಸೋದರಿಯ ಬ್ಯಾಂಕ್ ಖಾತೆಯಿಂದ 19,000 ರುಪಾಯಿಗಳನ್ನು ಹಿಂತೆಗೆದುಕೊಳ್ಳಲು ಪಟ್ಟ ಪಡಿಪಾಟಲು ಕಂಡು ಅನೇಕ ಮಂದಿ ಮರುಗಿದ್ದಾರೆ. ಗ್ರಾಮೀಣ ಭಾಗದ ಬಡವನಿಗೆ ಸಹೋದರಿಯ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ಹೇಗೆ ಹಿಂತೆಗೆದುಕೊಳ್ಳುವುದು ಎಂದು ತಿಳಿದಿರಲಿಲ್ಲ. ಬ್ಯಾಂಕ್ ಸಿಬ್ಬಂದಿ ಹೇಳಿದರೂ, ಅರ್ಥವಾಗಿರಲಿಲ್ಲ. ಕೊನೆಗೆ ಬೇಸತ್ತು ಸೋದರಿಯ ಅಸ್ಥಿ ಪಂಜರವನ್ನೇ ಹೊತ್ತು ಬ್ಯಾಂಕ್‌ಗೆ ಬಂದಿದ್ದ! ಈ ಘಟನೆ ಬ್ಯಾಂಕಿಂಗ್ ಸೇವೆಯ ಲೋಪ–ದೋಷಗಳ ಬಗ್ಗೆ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಬ್ಯಾಂಕ್‌ಗಳು ಗ್ರಾಹಕರಿಗೆ ಸರಿಯಾಗಿ ಸ್ಪಂದಿಸದಿರುವುದೇ ಇಂಥ ಅನಾಹುತಗಳಿಗೆ ಕಾರಣ ಎಂದು ಬಹುತೇಕ ಮಂದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ, ಇಂಡಿಯನ್ ಓವರ್ ಸೀಸ್ ಬ್ಯಾಂಕ್ ನೀಡಿರುವ ಸ್ಪಷ್ಟೀಕರಣವೇ ಬೇರೆ ಆಯಾಮದಲ್ಲಿದೆ.

ಒಡಿಶಾ ಗ್ರಾಮೀಣ ಬ್ಯಾಂಕ್‌ನಲ್ಲಿ ಸಾವಿನ ದೃಢೀಕರಣಕ್ಕೆ ಸಹೋದರಿಯ ಅಸ್ಥಿ ಪಂಜರವನ್ನು ತಂದಿರುವ ಘಟನೆ ವರದಿಯಾಗಿದೆ. ಈಗ ಸರಕಾರಿ ಅಧಿಕಾರಿಗಳು ಮರಣ ಪತ್ರವನ್ನು ಮತ್ತು ಕಾನೂನಾತ್ಮಕ ಉತ್ತರಾಧಿಕಾರತ್ವದ ದೃಢೀಕರಣ ದಾಖಲೆಗಳನ್ನು ಕೊಟ್ಟಿದ್ದಾರೆ. ಇವುಗಳನ್ನು ಸ್ವೀಕರಿಸಿದ ಒಡನೆಯೇ ಬ್ಯಾಂಕ್, 19,402 ರುಪಾಯಿಗಳ ಕ್ಲೈಮ್ ಅನ್ನು ಇತ್ಯರ್ಥಪಡಿಸಿದ್ದು, ಹಣವನ್ನು ಮೂವರು ವಾರಸುದಾರರಿಗೆ ನಿಯಮಾವಳಿಗಳ ಪ್ರಕಾರ ವಿತರಿಸಿದೆ.

ಜಿತು ಮುಂಡಾ ಎಂಬುವರು ಸಹೋದರಿಯ ಬ್ಯಾಂಕ್ ಖಾತೆಯಿಂದ ಹಣ ಹಿಂಪಡೆಯಲು ಬಂದಾಗ, ಅಧಿಕಾರಿಗಳು ಕ್ಲೇಮ್ ಸೆಟ್ಲ್‌ಮೆಂಟ್ ಮಾಡಲು ಮೃತಪಟ್ಟಿರುವ ಸಹೋದರಿಯೇ ಹಾಜರಾಗಬೇಕು ಎಂದು ಹೇಳಿದ್ದಾರೆ ಎಂಬ ವರದಿಗಳು ನಿರಾಧಾರ. ‘ಘಟನೆ ನಡೆದಾಗ ಜಿತು ಮದ್ಯ ಸೇವಿಸಿದ ಅಮಲಿನಲ್ಲಿದ್ದರು. ಬ್ಯಾಂಕ್ ಮ್ಯಾನೇಜರ್ ಕ್ಲೈಮ್ ಮಾಡಿಕೊಳ್ಳುವ ಪ್ರಕ್ರಿಯೆಗಳನ್ನು ವಿವರಿಸಿದ್ದರೂ, ಅದನ್ನು ಸ್ವೀಕರಿಸಿಕೊಳ್ಳದೆಯೇ, ಈ ರೀತಿ ಮಾಡಿದ್ದಾರೆ’ ಎಂದು ಐಒಬಿ ತಿಳಿಸಿದೆ. ಸಹೋದರಿಯ ಬ್ಯಾಂಕ್ ಖಾತೆಯಲ್ಲಿ ನಾಮಿನಿಯ ಹೆಸರನ್ನು ಸರಿಯಾಗಿ ನಮೂದಿಸಿರಲಿಲ್ಲ, ಹೀಗಾಗಿ ಬ್ಯಾಂಕ್ ವಿಳಂಬಿಸಿತ್ತು. ಮರಣ ಪ್ರಮಾಣಪತ್ರದ ಅಗತ್ಯವೂ ಇತ್ತು. ಆದರೆ, ಇದರಿಂದ ಹತಾಶೆಗೀಡಾದ ಜಿತು ಮುಂಡಾ, ಅಸ್ಥಿಪಂಜರವನ್ನೇ ತಂದಿದ್ದ.

ಬ್ಯಾಂಕುಗಳು ಗ್ರಾಹಕರೊಂದಿಗೆ ವ್ಯವಹರಿಸುವಾಗ RBI ರೂಪಿಸಿರುವ ‘ಗ್ರಾಹಕ ಸೇವಾ ಗುಣಮಟ್ಟ’ದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಗ್ರಾಹಕರಿಗೆ ಗೌರವಯುತ ಸೇವೆ ನೀಡುವುದು ಮತ್ತು ಅವರ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವುದು ಬ್ಯಾಂಕುಗಳ ಆದ್ಯತೆಯಾಗಿರಬೇಕು. ಆದರೆ, ಪ್ರತಿ ವರ್ಷ ಬ್ಯಾಂಕಿಂಗ್ ಸೇವೆಗಳಲ್ಲಿ ಉಂಟಾಗುವ ಲೋಪ ದೋಷಗಳ ಬಗ್ಗೆ ದೂರುಗಳು ಹೆಚ್ಚುತ್ತಿವೆ. ಖಾತೆದಾರರು ಮೃತಪಟ್ಟಾಗ ಅವರ ಅಕೌಂಟ್‌ನಲ್ಲಿರುವ ಹಣವನ್ನು ಹಿಂಪಡೆಯಲು ಕೆಲವು ಕಾರಣಗಳಿಂದ ಸಮಸ್ಯೆಯಾಗಬಹುದು. ಅವುಗಳೆಂದರೆ– ನಾಮಿನಿ ಇಲ್ಲದಿರುವುದು. ಖಾತೆದಾರರು ತಮ್ಮ ಖಾತೆಗೆ ‘ನಾಮಿನಿ’ ಹೆಸರನ್ನು ಸೇರಿಸಿರದಿದ್ದರೆ ಸಮಸ್ಯೆ ಆರಂಭವಾಗುತ್ತದೆ. ಅಂತಹ ಸಮಯದಲ್ಲಿ ಬ್ಯಾಂಕ್ ಕಾನೂನುಬದ್ಧ ವಾರಸುದಾರರು ಯಾರು ಎಂಬುದನ್ನು ಖಚಿತಪಡಿಸಿಕೊಳ್ಳಲು ಹೆಚ್ಚಿನ ದಾಖಲೆಗಳನ್ನು ಕೇಳುತ್ತದೆ.

ಒಂದು ವೇಳೆ, ಖಾತೆದಾರರು ನಾಮಿನಿ ಯಾರೆಂಬುದನ್ನು ಹೆಸರಿಸದಿದ್ದರೆ, ಬ್ಯಾಂಕ್‌ಗಳು Succession Certificate (ಉತ್ತರಾಧಿಕಾರ ಪ್ರಮಾಣಪತ್ರ) ಅಥವಾ Letter of Administration ಕೇಳುತ್ತವೆ. ಇವುಗಳನ್ನು ಪಡೆಯುವುದಕ್ಕೆ ಕಾಲಾವಕಾಶ ಬೇಕಾಗಬಹುದು. ಒಂದಕ್ಕಿಂತ ಹೆಚ್ಚು ವಾರಸುದಾರರು ಇದ್ದು, ಅವರಲ್ಲಿ ಒಮ್ಮತ ಇಲ್ಲದಿದ್ದರೆ ಕೂಡ ಹಣ ಬಿಡುಗಡೆ ಮಾಡಲು ಬ್ಯಾಂಕ್ ಹಿಂದೇಟುಹಾಕಬಹುದು. ಮರಣ ಪ್ರಮಾಣಪತ್ರ, ಕೆವೈಸಿ ದಾಖಲೆಗಳು, ಸರಿಯಾದ ಗುರುತಿನ ಚೀಟಿಗಳಿಲ್ಲದಿದ್ದಾಗ ವಿಳಂಬವಾಗಬಹುದು.

ಬ್ಯಾಂಕ್‌ಗಳಿಗೆ ಆರ್‌ಬಿಐ ಕೆಲವೊಂದು ಸೂಚನೆಗಳನ್ನು ನೀಡಿದೆ. ಖಾತೆಗೆ ನಾಮಿನಿ ಇದ್ದರೆ ಮರಣ ಪ್ರಮಾಣಪತ್ರ, ನಾಮಿನಿಯ ಗುರುತಿನ ಚೀಟಿ ಸಲ್ಲಿಸಿದ 15 ದಿನಗಳ ಒಳಗೆ ಬ್ಯಾಂಕ್ ಹಣವನ್ನು ಹಸ್ತಾಂತರಿಸಬೇಕು. ಜಂಟಿ ಖಾತೆಯಾಗಿದ್ದರೆ ಉಳಿದಿರುವ ಖಾತೆದಾರರು ಸುಲಭವಾಗಿ ಖಾತೆಯನ್ನು ಮುಂದುವರಿಸಬಹುದು. ಅಥವಾ ಹಣವನ್ನು ಹಿಂಪಡೆಯಬಹುದು. ಒಂದು ವೇಳೆ ನಾಮಿನಿ ಇರದಿದ್ದರೂ, 15 ಲಕ್ಷ ರುಪಾಯಿ ತನಕದ ಮೊತ್ತ ಹಿಂತೆಗೆಯಲು ಸಾಧ್ಯವಿದೆ. ಅದಕ್ಕೆ ಡೆತ್ ಸರ್ಟಿಫಿಕೇಟ್, ಮುಚ್ಚಳಿಕೆ ಪತ್ರ ಸಾಕಾಗುತ್ತದೆ.

ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಬ್ಯಾಂಕ್ ಖಾತೆ, ನಿಶ್ಚಿತ ಠೇವಣಿ ಮತ್ತು ಲಾಕರ್‌ಗಳಿಗೆ ನಾಮಿನಿಯನ್ನು ಹೆಸರಿಸುವುದು ಅವಶ್ಯಕ. ಹೂಡಿಕೆಗಳು ಮತ್ತು ಬ್ಯಾಂಕ್, ವಿಮೆಗಳ ವಿವರಗಳನ್ನು ಕುಟುಂಬದ ಸದಸ್ಯರಿಗೆ ತಿಳಿಸಿರಬೇಕು. ಆಧಾರ್–ಪಾನ್‌ಕಾರ್ಡ್‌ಗಳಲ್ಲಿ ಹೆಸರು ಮತ್ತು ವಿಳಾಸಗಳು ಬ್ಯಾಂಕ್ ಖಾತೆಯ ದಾಖಲೆಯೊಂದಿಗೆ ತಾಳೆಯಾಗುವಂತೆ ನೋಡಿಕೊಳ್ಳಬೇಕು. ಬ್ಯಾಂಕ್‌ಗಳು ವಂಚನೆಯನ್ನು ತಡೆಯುವ ಮತ್ತು ಸರಿಯಾದ ವ್ಯಕ್ತಿಗೇ ಹಣವು ಸೇರಬೇಕು ಎಂಬ ಉದ್ದೇಶದಿಂದ ಕಟ್ಟುನಿಟ್ಟಾದ ದಾಖಲೆಗಳನ್ನು ಕೇಳುತ್ತವೆ. ಆದರೆ ನಾಮಿನಿಯ ಹೆಸರನ್ನು ನಮೂದಿಸದಿದ್ದರೆ ಸಮಸ್ಯೆಯಾಗಬಹುದು.

ವಾಸ್ತವವಾಗಿ ಬ್ಯಾಂಕುಗಳು ಗ್ರಾಹಕರೊಂದಿಗೆ ಹೇಗೆ ವ್ಯವಹರಿಸಬೇಕು ಎಂಬುದರ ಕುರಿತು ಅತ್ಯಂತ ಸ್ಪಷ್ಟವಾದ ಮತ್ತು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ಆರ್‌ಬಿಐ ರೂಪಿಸಿದೆ. ಬ್ಯಾಂಕ್ ಸಿಬ್ಬಂದಿ ಗ್ರಾಹಕರೊಂದಿಗೆ ಗೌರವ ಮತ್ತು ವಿನಯದಿಂದ ವರ್ತಿಸಬೇಕು. ವಯಸ್ಸು, ಲಿಂಗ, ಧರ್ಮ ಅಥವಾ ಜಾತಿಯ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ. ವಿಶೇಷವಾಗಿ ಹಿರಿಯ ನಾಗರಿಕರು ಮತ್ತು ವಿಕಲಚೇತನರಿಗೆ ಆದ್ಯತೆಯ ಸೇವೆ ನೀಡಬೇಕು. ಬಡ್ಡಿದರಗಳು, ಸೇವಾ ಶುಲ್ಕಗಳು/ ದಂಡದ ಬಗ್ಗೆ ಗ್ರಾಹಕರಿಗೆ ಮುಂಚಿತವಾಗಿಯೇ ಸ್ಪಷ್ಟ ಮಾಹಿತಿ ನೀಡಬೇಕು. ಯಾವುದೇ ಗುಪ್ತ ಶುಲ್ಕಗಳನ್ನು(HiddenCharges)ವಿಧಿಸುವಂತಿಲ್ಲ. ನಿಯಮಗಳು ಮತ್ತು ಷರತ್ತುಗಳನ್ನು ಗ್ರಾಹಕರಿಗೆ ಅರ್ಥವಾಗುವ ಭಾಷೆಯಲ್ಲಿ, ಸ್ಥಳೀಯ ಭಾಷೆಯಲ್ಲಿ ವಿವರಿಸಬೇಕು.

ಗ್ರಾಹಕರ ವೈಯಕ್ತಿಕ ಮಾಹಿತಿ ಮತ್ತು ಹಣಕಾಸಿನ ವಿವರಗಳನ್ನು ಬ್ಯಾಂಕ್ ಅತ್ಯಂತ ಗೌಪ್ಯವಾಗಿ ಇಡಬೇಕು. ಗ್ರಾಹಕರ ಅನುಮತಿ ಇಲ್ಲದೆ ಅವರ ಮಾಹಿತಿಯನ್ನು ಯಾವುದೇ ಮೂರನೇ ವ್ಯಕ್ತಿಗೆ ಅಥವಾ ಮಾರ್ಕೆಟಿಂಗ್ ಕಂಪನಿಗಳಿಗೆ ನೀಡುವಂತಿಲ್ಲ. ಪ್ರತಿಯೊಂದು ಬ್ಯಾಂಕ್ ಶಾಖೆಯಲ್ಲೂ ದೂರು ಪುಸ್ತಕ, ಆನ್ಲೈನ್ ವ್ಯವಸ್ಥೆ ಇರಲೇಬೇಕು. ಗ್ರಾಹಕರು ನೀಡಿದ ದೂರನ್ನು ಒಂದು ತಿಂಗಳ ಒಳಗಾಗಿ ಬ್ಯಾಂಕ್ ಬಗೆಹರಿಸಬೇಕು. ಒಂದು ವೇಳೆ ಬ್ಯಾಂಕ್‌ನಿಂದ ಸರಿಯಾದ ಸ್ಪಂದನೆ ಸಿಗದಿದ್ದರೆ, ಗ್ರಾಹಕರು ಆರ್‌ಬಿಐ ವ್ಯಾಪ್ತಿಯಲ್ಲಿರುವ ಒಂಬಡ್ಸ್ಮನ್‌ಗೆ ದೂರು ನೀಡಬಹುದು.

ಗ್ರಾಹಕರಿಗೆ ಅಗತ್ಯವಿಲ್ಲದ ವಿಮೆ ಅಥವಾ ಹೂಡಿಕೆ ಯೋಜನೆಗಳನ್ನು ಬಲವಂತವಾಗಿ ಮಾರಾಟ ಮಾಡುವಂತಿಲ್ಲ (Misselling). ಗ್ರಾಹಕರ ಆರ್ಥಿಕ ಸ್ಥಿತಿಗೆ ಸೂಕ್ತವಾದ ಉತ್ಪನ್ನಗಳನ್ನು ಮಾತ್ರ ಶಿಫಾರಸು ಮಾಡಬೇಕು. ದಾಖಲೆಗಳ ಪರಿಶೀಲನೆ ಮುಖ್ಯವಾದರೂ, ತುರ್ತು ಸಂದರ್ಭಗಳಲ್ಲಿ (ಉದಾಹರಣೆಗೆ ಅಂತ್ಯಕ್ರಿಯೆ) ಬ್ಯಾಂಕುಗಳು ವಿವೇಚನಾ ಅಧಿಕಾರ ಬಳಸಿ ಸಹಾಯ ಮಾಡಬೇಕು. ಮರಣ ಹೊಂದಿದ ವ್ಯಕ್ತಿಯ ಖಾತೆಯಿಂದ ಹಣ ಬಿಡುಗಡೆ ಮಾಡಲು ಗ್ರಾಹಕರಿಗೆ ಅನಗತ್ಯ ತೊಂದರೆ ನೀಡಬಾರದು ಮತ್ತು ನಿಗದಿತ ಅವಧಿಯೊಳಗೆ ಕ್ಲೈಮ್ ಇತ್ಯರ್ಥಪಡಿಸಬೇಕು ಎಂದು ಆರ್‌ಬಿಐ ಸೂಚಿಸಿದೆ.

ಹೀಗಿದ್ದರೂ, ಆರ್‌ಬಿಐ ವರದಿಯ ಪ್ರಕಾರ ಒಂಬಡ್ಸ್ಮನ್ ಅಡಿಯಲ್ಲಿ 2024–25ರಲ್ಲಿ ಒಟ್ಟು 13 ಲಕ್ಷಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ. 2023–24ರಲ್ಲಿ 11 ಲಕ್ಷದ 75 ಸಾವಿರ ದೂರುಗಳು ದಾಖಲಾಗಿತ್ತು. ಬ್ಯಾಂಕ್‌ಗಳಲ್ಲಿನ ಸೇವೆಗಳಿಗೆ ಸಂಬಂಧಿಸಿ ಹೆಚ್ಚಿನ ದೂರುಗಳು ಬಂದಿವೆ. ಸಾಲ, ಕ್ರೆಡಿಟ್ ಕಾರ್ಡ್, ಡಿಜಿಟಲ್ ಬ್ಯಾಂಕಿಂಗ್ ಕುರಿತ ದೂರುಗಳು ಸಾಕಷ್ಟಿವೆ.

ಭಾರತದಲ್ಲಿ ಶೇ.91ಮಂದಿ ಬ್ಯಾಂಕ್ ಖಾತೆಗಳನ್ನು ಹೊಂದಿದ್ದಾರೆ. 58 ಕೋಟಿ ಪ್ರಧಾನ ಮಂತ್ರಿ ಜನ್‌ಧನ್ ಖಾತೆಗಳು ಇವೆ. ಜನ್ ಧನ್, ಆಧಾರ್ ಮತ್ತು ಮೊಬೈಲ್ ಲಿಂಕ್ ಆಗಿರುವುದರಿಂದ ಸರಕಾರದ ಸವಲತ್ತುಗಳು, ನೇರ ನಗದು ವರ್ಗಾವಣೆಗಳು ಜನಪ್ರಿಯವಾಗಿವೆ. ಹಾಗಾದರೆ ಪ್ರತಿ ವರ್ಷ ಬ್ಯಾಂಕ್‌ಗಳ ವಿರುದ್ಧ ದೂರುಗಳು ಹೆಚ್ಚುತ್ತಿರುವುದಕ್ಕೆ ಕಾರಣವೇನು? ಯುಪಿಐ, ನೆಟ್ ಬ್ಯಾಂಕಿಂಗ್, ಎಟಿಎಂ ವಹಿವಾಟು ನಡೆಸುವಾಗ ಹಣ ಕಟ್ ಆಗಿ ಫಲಾನುಭವಿಗೆ ತಲುಪದೆ ಇರುವ ಪ್ರಕರಣಗಳು ಹೆಚ್ಚುತ್ತಿವೆ. ಇವುಗಳನ್ನು ಸರಿಪಡಿಸಲು ಬ್ಯಾಂಕುಗಳು ವಿಳಂಬ ಮಾಡುವುದು ದೂರುಗಳಿಗೆ ಕಾರಣಗಳಲ್ಲೊಂದಾಗಿದೆ.

ಬ್ಯಾಂಕ್ ಸಿಬ್ಬಂದಿ ತಮ್ಮ ಟಾರ್ಗೆಟ್ ಪೂರೈಸಲು ಗ್ರಾಹಕರಿಗೆ ಅಗತ್ಯವಿಲ್ಲದ ವಿಮೆ ಅಥವಾ ಮ್ಯೂಚುಯಲ್ ಫಂಡ್ ಯೋಜನೆ ದಾಟಿಸುವುದು ಕೂಡ ದೂರುಗಳಿಗೆ ಕಾರಣವಾಗಬಹುದು. ಕನಿಷ್ಠ ಬ್ಯಾಲೆನ್ಸ್ ಇಲ್ಲದಿರುವುದು, ಎಸ್‌ಎಂಎಸ್ ಶುಲ್ಕ ಅಥವಾ ಎಟಿಎಂ ಬಳಕೆಯ ಶುಲ್ಕಗಳ ಹೆಸರಿನಲ್ಲಿ ಹಣ ಕಡಿತಗೊಳಿಸುವುದು ಗ್ರಾಹಕರ ಅಸಮಾಧಾನಕ್ಕೆ ಕಾರಣವಾಗುತ್ತಿದೆ. ಆನ್ಲೈನ್ ವಂಚನೆಗೆ ಒಳಗಾದ ಗ್ರಾಹಕರು ಬ್ಯಾಂಕಿಗೆ ಹೋದಾಗ, ಬ್ಯಾಂಕ್‌ಗಳು ತಕ್ಷಣವೇ ಕ್ರಮ ಕೈಗೊಳ್ಳದೆ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಕೂಡ ದೂರುಗಳ ಸಂಖ್ಯೆ ಹೆಚ್ಚಲು ಕಾರಣವಾಗಿದೆ. ಕೆಲಸದ ಒತ್ತಡದಿಂದ ಸಿಬ್ಬಂದಿ ಗ್ರಾಹಕರೊಂದಿಗೆ ಒರಟಾಗಿ ನಡೆದುಕೊಂಡು ದೂರಿನ ತನಕ ಹೋಗಬಹುದು.

ಗ್ರಾಹಕರೂ ಓಟಿಪಿ, ಪಿನ್ ಅಥವಾ ಪಾಸ್‌ವರ್ಡ್‌ಅನ್ನು ಬ್ಯಾಂಕ್ ಸಿಬ್ಬಂದಿ ಸೇರಿದಂತೆ ಯಾರೊಂದಿಗೂ ಹಂಚಿಕೊಳ್ಳಬಾರದು. ಸೈಬರ್ ವಂಚಕರ ಬಗ್ಗೆ ಸದಾ ಎಚ್ಚರವಾಗಿರಬೇಕು. ಕೆವೈಸಿ ದಾಖಲೆಗಳ ಅಪ್ಡೇಟ್ ಮಾಡಿಕೊಳ್ಳಬೇಕು. ವಿಳಾಸ, ಫೋನ್ ಸಂಖ್ಯೆ ಅಥವಾ ಇಮೇಲ್ ಬದಲಾದಾಗ ಬ್ಯಾಂಕಿನಲ್ಲಿ ಅಪ್ಡೇಟ್ ಮಾಡಬೇಕು. ಬ್ಯಾಂಕಿಂಗ್ ಸೇವೆ ಎಂದರೆ ದೇಶದ ಆರ್ಥಿಕತೆಯನ್ನು ಕಟ್ಟುವ ಕೆಲಸವೂ ಹೌದು.

2025ರಜೂನ್30ರ ವೇಳೆಗೆ ಭಾರತೀಯ ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದಿರುವ ಠೇವಣಿಗಳ ಮೊತ್ತ 74,580 ಕೋಟಿ ರುಪಾಯಿಗೆ ಏರಿಕೆಯಾಗಿದೆ! ಎಸ್‌ಬಿಐ, ಪಿಎನ್‌ಬಿ, ಐಸಿಐಸಿಐ ಮೊದಲಾದ ಬ್ಯಾಂಕ್‌ಗಳಲ್ಲಿ ಈ ರೀತಿ ಅನ್ ಕ್ಲೈಮ್ಡ್ ಡೆಪಾಸಿಟ್‌ಗಳು ಇವೆ! ಪರ್ಸನಲ್ ಫೈನಾನ್ಸ್ ವಿಚಾರದಲ್ಲಿ ಜನ ಎಷ್ಟೊಂದು ಹಿಂದುಳಿದಿದ್ದಾರೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಅಮೆರಿಕ, ಯುರೋಪ್‌ನಂತಹ ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಅನ್‌ಕ್ಲೈಮ್ಡ್ ಡೆಪಾಸಿಟ್‌ಗಳ ದೊಡ್ಡ ಮೊತ್ತವಿದೆ. ಆದರೂ, ಸೇವೆಯ ಸುಧಾರಣೆಗೆ ಅದು ನೆಪವಾಗಬಾರದು.

ಬ್ಯಾಂಕ್ ಸೇವೆ ಎಂಬುದು ಕೇವಲ ಹಣದ ವ್ಯವಹಾರವಲ್ಲ, ಅದು ಜನ ಸಾಮಾನ್ಯರು ಬ್ಯಾಂಕಿನ ಮೇಲೆ ಇಟ್ಟಿರುವ ‘ನಂಬಿಕೆ’. ತಂತ್ರಜ್ಞಾನದ ನೆರವಿನಿಂದಾಗಿ ಇವತ್ತು ಎಷ್ಟೋ ಬ್ಯಾಂಕಿಂಗ್ ಸೇವೆಗಳನ್ನು ಆನ್ಲೈನ್ ಮೂಲಕವೇ ಪಡೆಯಬಹುದು. ಬ್ಯಾಂಕ್ ಶಾಖೆಗೆ ಹೇಗಲೇಬೇಕೆಂದೇನಿಲ್ಲ. ಈ ಕುರಿತ ಹಣಕಾಸು ಸಾಕ್ಷರತೆಯನ್ನು ಹೆಚ್ಚಿಸುವ ಜವಾಬ್ದಾರಿಯೂ ಬ್ಯಾಂಕ್‌ಗಳ ಮೇಲಿದೆ. ಬ್ಯಾಂಕ್‌ಗಳು ಸಾಲದ ಮೇಲಿನ ಬಡ್ಡಿ ಮಾತ್ರವಲ್ಲದೆ, ಸೇವಾ ಶುಲ್ಕಗಳ ಮೂಲಕವೂ ಆದಾಯಗಳಿಸುತ್ತವೆ. ಮಿನಿಮಮ್ ಬ್ಯಾಲೆನ್ಸ್,ಎಟಿಎಂ,ಎಸ್‌ಎಂಎಸ್ ಅಲರ್ಟ್, ಚೆಕ್ ಬುಕ್, ಕಾರ್ಡ್ ಶುಲ್ಕ ಇರುತ್ತವೆ. ಹೀಗಿರುವಾಗ ಸೇವೆಯ ಗುಣಮಟ್ಟ ವೃದ್ಧಿಯೂ ಮುಖ್ಯವಾಗುತ್ತದೆ.

ಭಟ್ಟರ್ ಸ್ಕಾಚ್

- **ಪ್ರಕಾಶ ಕಾವಲಿ, ಗದಗ**
ಭಟ್ರೇ, ಕಚೇರಿಗಳಲ್ಲಿ ಕೆಲಸ ಮಾಡುವವರಿಗೆ ಇರುವ ಏಕೈಕ ದೊಡ್ಡ ಕಾಯಿಲೆ ಯಾವುದು?
– **'ಸೋಮವಾರ'ದ ಅಲರ್ಜಿ ಮತ್ತು 'ಶನಿವಾರ'ದ ಜ್ವರ!**

- **ಶಿಶಿರ ನಾಯಕ, ಅಂಕೋಲಾ**
ಭಟ್ರೇ, ಬುದ್ಧಿವಂತರಿಗೂ ಮತ್ತು ಅದೃಷ್ಟವಂತರಿಗೂ ಏನು ಸಂಬಂಧ?
– **ಬುದ್ಧಿವಂತರು ಯೋಜನೆ ಹಾಕುತ್ತಲೇ ಇರುತ್ತಾರೆ, ಅದೃಷ್ಟವಂತರು ಆ ಯೋಜನೆಯನ್ನೇ ತಮಗೆ ಲಾಭವಾಗಿಸಿಕೊಳ್ಳುತ್ತಾರೆ!**

- **ಮೈತ್ರೇಯಿ, (ಇಮೇಲ್ ಮೂಲಕ)**
ಭಟ್ರೇ, ಈ ಕಾಲದಲ್ಲಿ 'ಸತ್ಯ' ಎಲ್ಲಿ ಅಡಗಿದೆ?
– **ಕೋರ್ಟಿನ ಕಟಕಟೆಯಲ್ಲಿ ಮತ್ತು ಹಳೆಯ ಇತಿಹಾಸದ ಪುಸ್ತಕಗಳಲ್ಲಿ ಮಾತ್ರ!**

- **ಮುರಳಿ ನಾಡಿಗ, ಮೈಸೂರು**
ಭಟ್ರೇ, ಒಬ್ಬ ವ್ಯಕ್ತಿ ಅತಿಯಾಗಿ ಮಾತನಾಡುತ್ತಿದ್ದಾನೆ ಎಂದರೆ ಅದರ ಅರ್ಥವೇನು?
– **ಅವನಿಗೆ ಕೇಳಿಸಿಕೊಳ್ಳುವವರು ಸಿಕ್ಕಿದ್ದಾರೆ ಅಥವಾ ಅವನ ಹೆಂಡತಿ ಮನೆಯಲ್ಲಿಲ್ಲ ಎಂದು!**

- **ವಿನೋದ ಶೀಲವಂತರ, ಧಾರವಾಡ**
ಭಟ್ರೇ, ಮನುಷ್ಯನಿಗೆ ಅತಿ ಹೆಚ್ಚು ಜ್ಞಾನೋದಯವಾಗುವುದು ಎಲ್ಲಿ?
– **ಪರೀಕ್ಷಾ ಹಾಲ್‌ನಿಂದ ಹೊರಬಂದ ಮೇಲೆ ಮತ್ತು ಸಾಲ ಕೊಟ್ಟವನು ಮನೆ ಬಾಗಿಲಿಗೆ ಬಂದಾಗ!**

- **ಸುಷ್ಮಾ ಹೊನ್ನೆ, ಶಿವಮೊಗ್ಗ**
ಭಟ್ರೇ, ಒಬ್ಬ ವ್ಯಕ್ತಿ ತನ್ನ ಫೋನ್ ಅನ್ನು ಅತಿಯಾಗಿ ಪ್ರೀತಿಸುತ್ತಿದ್ದಾನೆ ಎಂದರೆ ಅರ್ಥವೇನು?
– **ಆತನಿಗೆ ಬೇರೆಯವರ ಜತೆ ಮಾತಾಡಲು ಇಷ್ಟವಿಲ್ಲ ಎಂದರ್ಥ!**

- **ಶಾರದಾ ಭಟ್, ಮಂಗಳೂರು**
ಭಟ್ರೇ, ಈ ಜಗತ್ತಿನಲ್ಲಿ ಅತಿ ವೇಗವಾಗಿ ಹರಡುವ ವಸ್ತು ಯಾವುದು?
– **'ಗಾಸಿಪ್' ಮತ್ತು ಗಂಡ-ಹೆಂಡತಿಯ ನಡುವಿನ ಜಗಳ!**

- **ಭಾರತಿ ಸುಂದರ, ಜಿಗಣಿ**
ಭಟ್ರೇ, ಡಯಟ್ ಮಾಡುವುದು ಅಂದರೆ ಏನು?
– **ಇಡೀ ದಿನ ಹಸಿವಿನಿಂದಿದ್ದು, ರಾತ್ರಿ ಹಸಿವು ತಡೆಯಲಾರದೆ ಫ್ರಿಜ್ ಖಾಲಿ ಮಾಡುವುದು!**

- **ಜಯಂತ ಕುಲಕರ್ಣಿ, ಹೊಸದುರ್ಗ**
ಭಟ್ರೇ, ಒಬ್ಬ ಮನುಷ್ಯ ಸಮಾಧಾನವಾಗಿ ಸುಳ್ಳು ಹೇಳುವುದು ಯಾವಾಗ?
– **ಆಫೀಸಿಗೆ ತಡವಾಗಿ ಹೋದಾಗ ಮತ್ತು ಬೈಕ್ ಸವಾರ ಟ್ರಾಫಿಕ್ ಪೊಲೀಸ್ ಕೈಗೆ ಸಿಕ್ಕಿಬಿದ್ದಾಗ!**

- **ಪಿ. ನಟರಾಜ, ಹೆಜಮಾಡಿ**
ಭಟ್ರೇ, ಭವಿಷ್ಯದ ಬಗ್ಗೆ ನಮಗೆ ಅತಿ ಹೆಚ್ಚು ಕಾಳಜಿ ಹುಟ್ಟುವುದು ಯಾವಾಗ?
– **ಜೇಬಿನಲ್ಲಿ ಹಣ ಖಾಲಿಯಾದಾಗ ಮತ್ತು ಮೊಬೈಲ್ ಬ್ಯಾಟರಿ ಶೇ.1ಕ್ಕೆ ಬಂದಾಗ!**

ಎಲ್ಲೆಲ್ಲೂ ಎಲ್ ನಿನೋ ತಂದಿಟ್ಟಿರುವ ಎಡವಟ್ಟು!

ಶಶಾಂಕಣ

ಶಶಿಧರ ಹಾಲಾಡಿ

vveditoped@gmail.com

ನಮ್ಮ ಹಳ್ಳಿಯಲ್ಲಿ ವಾಸವಿರುವ ಕೃಷಿಕರೊಬ್ಬರು ಇತ್ತೀಚೆಗೆ ಮಾತುಕತೆಗೆ ಸಿಕ್ಕಿದ್ದರು; ಪ್ರತಿದಿನ ದಿನಪತ್ರಿಕೆಯನ್ನೋದುವ, ಸಾಕಷ್ಟು ತಿಳಿವಳಿಕೆ ಇರುವ ಅವರು, ಈ ವರ್ಷದ ಮಳೆಯ ಕುರಿತು ತುಸು ಕಳವಳ ವ್ಯಕ್ತಪಡಿಸಿದರು. 'ಯಾಕೆ?' ಎಂದೆ. 'ಈ ವರ್ಷ ಎಲ್ ನಿನೋ ಪ್ರಭಾವ ಉಂಟು ಎಂದು ಟಿವಿಯಲ್ಲಿ ಹೇಳುತ್ತಿದ್ದಾರಲ್ಲ, ಅದರಿಂದ, ಮಳೆ ಏರುಪೇರಾಗುತ್ತದೆಂತೆ. ಸೆಖೆ ಜಾಸ್ತಿಯಾಗುತ್ತದಂತೆ; ನಮ್ಮ ಕೃಷಿ ಕೆಲಸ ಹೇಗಾಗುತ್ತದೋ ಎಂಬ ಚಿಂತೆ ಮಾರಾಯ್ರೆ,' ಎಂದು ಅವರು ಹೇಳಿದಾಗ, ತುಸು ಅಚ್ಚರಿಯಾಯಿತು; ಈಚಿನ ದಿನಗಳಲ್ಲಿ ಹಳ್ಳಿಯಲ್ಲಿರುವವರು ಸಹ ಎಲ್‌ನಿನೋ ಕುರಿತು ತಲೆಕೆಡಿಸಿಕೊಂಡು, ಆ ಕುರಿತು ಚರ್ಚಿಸುತ್ತಿದ್ದಾರಲ್ಲ ಎಂಬ ಅಚ್ಚರಿ ಅದು.

'ಎಲ್‌ನಿನೋ' ಎಂದರೇನು? ಕಳೆದ ಕೆಲವು ತಿಂಗಳುಗಳಿಂದ ನಮ್ಮ ಮಾಧ್ಯಮಗಳು ಆಗಾಗ ಎಲ್‌ನಿನೋ ಪರಿಣಾಮದ ಕುರಿತು ವರದಿಗಳನ್ನು ಪ್ರಸಾರ ಮಾಡುತ್ತಿವೆ. ಇದು ಹವಾಮಾನಕ್ಕೆ ಸಂಬಂಧಿಸಿದ ವಿದ್ಯಮಾನ; ಹಾಗೆ ನೋಡಿದರೆ, ಇಡೀ ಜಗತ್ತಿನ ಹವಾಮಾನವನ್ನು ಮತ್ತು ಆ ಮೂಲಕ ಕೃಷಿಯನ್ನು, ಜನರ ಬದುಕನ್ನು ಏರುಪೇರು ಮಾಡುವ ತಾಕತ್ತು ಹೊಂದಿರುವ ವಿದ್ಯಮಾನವಿದು. ನಮ್ಮ ದೇಶದಲ್ಲಿ ಕೆಲವು ದಶಕಗಳ ಹಿಂದೆ, ಕಳೆದ ಶತಮಾನದಲ್ಲಿ ಸಹ, 'ಬರಗಾಲ' ಒಕ್ಕರಿಸಿದ್ದು, ಅದರಿಂದಾಗಿ, ದೇಶದಲ್ಲಿ ಆಹಾರದ ಕೊರತೆಯುಂಟಾಗಿ, ತೀವ್ರ ಸಂಕಷ್ಟ ಎದುರಾಗಿದ್ದನ್ನು ಗಮನಿಸಿದ್ದೇವೆ; ಅಂತಹ ಕೆಲವು ಬರಗಾಲಗಳು ಎಲ್‌ನಿನೋ ಅಥವಾ ಅಂತಹದ್ದೇ ಇತರ ವಾತಾವರಣದ ಏರುಪೇರು ಎಂದೇ ಹೇಳಬಹುದು. ಈಚಿನ ದಶಕಗಳಲ್ಲಿ, ಅದರಲ್ಲೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ, ಬರಗಾಲಗಳು ಆಗಾಗ ಬಂದಿದ್ದರೂ, ಸರಕಾರ ಮತ್ತು ಪ್ರಭುತ್ವವು ಜನರ ನೆರವಿಗೆ ಒದಗಿ, ಬರಗಾಲದ ತೀವ್ರತೆಯು ಜನಸಾಮಾನ್ಯರನ್ನು ಹೆಚ್ಚು ಕಾಡದಂತೆ ನೋಡಿಕೊಂಡಿದ್ದರಿಂದಾಗಿ, ಅಷ್ಟರ ಮಟ್ಟಿಗೆ ಕಷ್ಟಗಳು ಕಡಿಮೆಯಾದವು; ಆದರೂ, ಈ ವರ್ಷದ ಎಲ್ ನಿನೋ ಸಾಕಷ್ಟು ತೀವ್ರವಾಗಿರುತ್ತದೆ ಎಂದು ಹವಾಮಾನ ತಜ್ಞರು ಅದಾಗಲೇ ಎಚ್ಚರಿಸಿದ್ದಾರೆ.

ಎಲ್‌ನಿನೋ ಎಂಬುದು ಸ್ಪಾನಿಷ್ ಪದ; ಪೆರು ಮತ್ತು ಈಕ್ವೆಡಾರ್ ದೇಶಗಳಲ್ಲಿ, ಹವಾಮಾನದ ಏರುಪೇರನ್ನು ವರ್ಣಿಸಲು ಅಲ್ಲಿನ ಜನಸಾಮಾನ್ಯರು ಬಹು ಹಿಂದಿನಿಂದಲೂ ಬಳಸುತ್ತಿದ್ದ ಪದ ಅದು; ಅಲ್ಲಿ ಚಳಿಗಾಲದಲ್ಲಿ, ಕ್ರಿಸ್ಮಸ್ ಸಮಯದಲ್ಲಿ ಒಂದೊಂದು ವರ್ಷ ಕಾಣಿಸುತ್ತಿದ್ದ ಹೆಚ್ಚಿನ ತಾಪಮಾನವನ್ನು, ಹವಾಮಾನದ ಏರುಪೇರನ್ನು ಗುರುತಿಸಲು ಆ ಪದವನ್ನು ಬಳಸುತ್ತಿದ್ದರು. ಅದೇ ಪದವು ಈಗ ಜಗತ್ತಿನ ತಾಪಮಾನದ ಏರುಪೇರನ್ನು ಪ್ರತಿನಿಧಿಸುವ ವಿದ್ಯಮಾನ ಎನಿಸಿದೆ.

ವಿಶೇಷವೆಂದರೆ, ಅಮೆರಿಕ ಖಂಡಗಳನ್ನು ಪೂರ್ವದಲ್ಲಿ ಆವರಿಸಿರುವ ಶಾಂತ ಮಹಾಸಾಗರದ ಉಷ್ಣವಲಯದ ಭಾಗಗಳಲ್ಲಿ, ಸಮುದ್ರದ ಮೇಲ್ಮೈ ತಾಪಮಾನವು ಅತಿ ಹೆಚ್ಚು ಕಂಡುಬರುವುದನ್ನು ಎಲ್‌ನಿನೋ ಎಂದು ಕರೆದಿದ್ದಾರೆ. ಅಮೆರಿಕ ಖಂಡಗಳ ಬಳಿ ಕಾಣಬರುವ ಈ ಹವಾಮಾನ ವೈಪರಿತ್ಯವು, ಇಡೀ ಜಗತ್ತನ್ನು, ಅದರಲ್ಲೂ ಮುಖ್ಯವಾಗಿ ಏಷ್ಯಾದ ಹಲವು ದೇಶಗಳನ್ನು ಮತ್ತು ನಮ್ಮ ದೇಶವನ್ನು ಕಾಡುವುದು ವಿಶೇಷ. ಎಲ್ಲಿಯ ಪೆರು, ಎಲ್ಲಿಯ ಈಕ್ವೆಡಾರ್, ಎಲ್ಲಿಯ ಕರ್ನಾಟಕ! ಆದರೇನು ಮಾಡುವುದು, ಎಲ್-ನೀನೋ ವ್ಯತ್ಯಯವು ಈ ವರ್ಷ ನಮ್ಮ ರಾಜ್ಯದ ಕೃಷಿಕರನ್ನು, ಅದರಲ್ಲೂ ಮುಖ್ಯವಾಗಿ, ನೀರಾವರಿ ವ್ಯವಸ್ಥೆ ಹೆಚ್ಚು ಲಭ್ಯವಿಲ್ಲದ ಉತ್ತರ ಮತ್ತು ಮಧ್ಯ ಕರ್ನಾಟಕದ ಕೃಷಿಕರನ್ನು ಕಾಡುತ್ತದೆ ಎಂದೇ ತಜ್ಞರು ಅದಾಗಲೇ ಹೇಳಿದ್ದಾರೆ. ಜತೆಗೆ, ಮಳೆ ಕಡಿಮೆಯಾಗುವುದರಿಂದಾಗಿ, ನಮ್ಮ ರಾಜ್ಯದ ಇತರ ಭಾಗಗಳಲ್ಲಿರುವ ಅಣೆಕಟ್ಟುಗಳಿಗೆ ನೀರು ಸಾಕಷ್ಟು ಬರದೇ ಇರುವುದರಿಂದ, ವಿದ್ಯುತ್ ಸಮಸ್ಯೆ ಮತ್ತು ನೀರಾವರಿಯನ್ನು ಅವಲಂಬಿಸಿದ ಬೆಳೆಗಳಿಗೆ ನೀರು ದೊರಕದೇ ಉಂಟಾಗುವ ಸಮಸ್ಯೆ ಮೊದಲಾದವುಗಳನ್ನು, 2026-27ರಲ್ಲಿ ಕಾಣಬೇಕಾದೀತು ಎಂದೇ ಎಚ್ಚರಿಸಿದ್ದಾರೆ.

ಮತ್ತೂ ಗಮನಿಸಬೇಕಾದ ವಿಚಾರವೆಂದರೆ, 2026ರ ಎಲ್‌ನಿನೋ ಹೆಚ್ಚು ತೀವ್ರವಾಗಿರುವುದಂತೆ. ಎಲ್‌ನಿನೋ ಎಂದರೆ ಬರಗಾಲದ ಛಾಯೆ ಎಂದು ಹೇಳಿದರೆ ತಪ್ಪಿಲ್ಲ; ಏಕೆಂದರೆ, ಎಲ್‌ನಿನೋ ಪರಿಣಾಮ ಇರುವ ವರ್ಷಗಳಲ್ಲಿ, ಸಾಮಾನ್ಯವಾಗಿ ಏಷ್ಯಾ ಮತ್ತು ಆಸ್ಟ್ರೇಲಿಯಾದ ವಿವಿಧ ಭಾಗಗಳಲ್ಲಿ ಹೆಚ್ಚಿನ ಬಿಸಿಲು ಇರುತ್ತದೆ; ಮಳೆಯು ಕಡಿಯಾಗುತ್ತದೆ. ಈ ವರ್ಷದ ಎಲ್ ನಿನೋ ತೀವ್ರವಾಗಿರುವುದರಿಂದ, 2026 ಮುಗಿಯುವುದರೊಳಗೆ, ಸಾಕಷ್ಟು ಕ್ಷೋಭೆ ಎದುರಾಗಲಿದ್ದು, ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿರುವವರಿಗೆ ಬೇಗನೆ ನೇರ ಪರಿಣಾಮವನ್ನುಂಟುಮಾಡಬಲ್ಲದು.

ದೂರದ ಅಮೆರಿಕದ ಒಂದು ತೀರದಲ್ಲಿರುವ ಶಾಂತ ಸಾಗರದಲ್ಲಿನ ತಾಪಮಾನ ಹೆಚ್ಚಳವು, ನಮ್ಮಲ್ಲಿ ತೀವ್ರ ಬರಗಾಲ ಸೃಷ್ಟಿಸಿದರೂ, ಅಮೆರಿಕದ ಖಂಡಗಳಲ್ಲಿ ಮಾತ್ರ ಮಳೆ ಜಾಸ್ತಿಯಾಗಬಹುದಂತೆ! ಆದರೆ, ಅದರಿಂದ, ನಾವು ಹೊಟ್ಟೆ ಉರಿ ಪಟ್ಟುಕೊಳ್ಳಬೇಕಿಲ್ಲ; ಏಕೆಂದರೆ, ಅಮೆರಿಕದ ಹಲವು ದೇಶಗಳಲ್ಲಿ ಅಧಿಕ ಮಳೆ ಎಂದರೆ, ಇನ್ನಷ್ಟು ಪ್ರಾಕೃತಿಕ ಸಮಸ್ಯೆಗಳೇ ಹೊರತು, ಹೆಚ್ಚಿನ ಲಾಭವಿರಲಾರದು.

ಎಲ್‌ನಿನೋ ನೇರವಾಗಿ ಪರಿಣಾಮ ಬೀರುವುದು ಕೃಷಿ ಕ್ಷೇತ್ರದ ಮೇಲೆ; ಜತೆಗೆ, ಹಲವು ಕಡೆ ಕುಡಿಯುವ ನೀರಿನ ಲಭ್ಯತೆಯ ಮೇಲೂ ಪರಿಣಾಮ ಬೀರಬಲ್ಲದು. ಮಳೆಯ ಕೊರತೆಯಿಂದಾಗಿ, ಆಹಾರ ಉತ್ಪಾದನೆ ಕಡಿಮೆಯಾಗಬಲ್ಲದು; ನೀರಾವರಿ ವ್ಯವಸ್ಥೆಯು ಏರುಪೇರಾದೀತು; ಉದಾಹರಣೆಗೆ ನೀರಾವರಿ ಬೆಳೆ ಬೆಳೆಯುವ ರೈತರು, ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತಿದ್ದವರು, ಮುಂದಿನ ವರ್ಷ ಒಂದೇ ಬೆಳೆ ಬೆಳೆಯಬೇಕಾದ ಅನಿವಾರ್ಯ ಸ್ಥಿತಿ ಎದುರಾದೀತು. ಇವೆಲ್ಲವುಗಳ ಒಟ್ಟು ಪರಿಣಾಮವಾಗಿ, ಜಾಗತಿಕ ಆಹಾರ ಸರಬರಾಜು ಮತ್ತು ಬೆಲೆಗಳಲ್ಲಿ ಅಸ್ಥಿರತೆ ಉಂಟಾಗಬಹುದು. ಈಗಾಗಲೇ, 2026ರ ಆರಂಭದ ತಿಂಗಳುಗಳಲ್ಲಿ, ಇರಾನ್ ಸುತ್ತಲೂ ಯುದ್ಧ ನಡೆಯುತ್ತಿರುವುದರಿಂದಾಗಿ, ಕಚ್ಚಾ ತೈಲದ ಬೆಲೆ ಏರಿಕೆಯಾಗಿದ್ದು, ಇಡೀ ಜಗತ್ತಿನ ತೈಲ ಕ್ಷೇತ್ರವೇ ಸಣ್ಣ ಭೂಕಂಪವನ್ನು ಎದುರಿಸಿದಂತಾಗಿದೆ; ನಮ್ಮ ದೇಶದಲ್ಲಿ ಈ ತನಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚು ಏರಿಕೆ ಕಂಡಿಲ್ಲವಾದರೂ, ಯುದ್ಧದ ಸ್ಥಿತಿ ಮುಂದುವರಿದರೆ, ಹೊರ್ಮುಜ್ ಜಲಸಂಧಿಯಲ್ಲಿನ ದಿಗ್ಬಂಧನ ಮತ್ತು ಕಲ್ಲೋಗಳು ಮುಂದುವರಿದರೆ, ಎಲ್ಲ ತೈಲೋತ್ಪನ್ನಗಳ ಬೆಲೆ ನಮ್ಮಲ್ಲೂ ಏರುವುದು ಖಚಿತ. 2026ರ ಆರಂಭದಲ್ಲಿ ಹೀಗಿರುವಾಗ, ಈ ವರ್ಷದ ಮುಂದಿನ ತಿಂಗಳುಗಳಲ್ಲಿ, ಎಲ್‌ನಿನೋ ಪರಿಣಾಮದಿಂದ, ಮಳೆ ಕಡಿಯಾದರೆ, ಆಹಾರ ಪದಾರ್ಥಗಳ ಉತ್ಪನ್ನವೂ ಕುಂಠಿತಗೊಂಡು, ಒಟ್ಟಾರೆ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಬಹುದು.

ನಮ್ಮ ದೇಶಕ್ಕೆ ಮಾನ್ಸೂನ್ ಮಾರುತಗಳು ತರುವ ಮಳೆ ಅತಿ ಅಮೂಲ್ಯ; ಬಹುಪಾಲು ರಾಜ್ಯಗಳು ಮಾನ್ಸೂನ್ ಮಳೆಯನ್ನೇ ಅವಲಂಬಿಸಿ, ಕೃಷಿ ಚಟುವಟಿಕೆ ನಡೆಸುತ್ತಿವೆ; ಮಾನ್ಸೂನ್ ಮಾರುತ ತಂದು ಮಳೆಯು, ಅಣೆಕಟ್ಟುಗಳಲ್ಲಿ ಸಂಗ್ರಹಗೊಂಡು ಕೃಷಿ ಮತ್ತು ವಿದ್ಯುತ್ ಉತ್ಪಾದನೆಗೆ ಒದಗಿಬರುತ್ತದೆ. ಆದ್ದರಿಂದ, ಮಾನ್ಸೂನ್ ಏರುಪೇರಾದರೆ, ಕಷ್ಟ ಖಚಿತ; ಈ ವರ್ಷ, ಎಲ್ -ನೀನೋ ವಿದ್ಯಮಾನವು, ಈ ಮಳೆಯ ಮೇಲೆ ತೀವ್ರ ಮತ್ತು ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದಿದ್ದಾರೆ ತಜ್ಞರು. 2026ರಲ್ಲಿ ಭಾರತದಲ್ಲಿ ಮಳೆ ಸರಾಸರಿಗಿಂತ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ತಜ್ಞರು ಅದಾಗಲೇ ಹೇಳಿದ್ದಾರೆ. ವಾಡಿಕೆಗಿಂತ ಶೇ.8ರಿಂದ 10ರಷ್ಟು ಕಡಿಮೆ ಮಳೆಯಾಗುವ ಸಾಧ್ಯತೆ ಇದೆ; ಇದು ಗಮನಾರ್ಹ ಇಳಿಕೆ ಎಂಬುದರಲ್ಲಿ ಎರಡು ಮಾತಿಲ್ಲ.

ಆದ್ದರಿಂದಲೇ ಎಲ್ ನಿನೋ ಎದುರಾದ ವರ್ಷಗಳೆಂದರೆ, ಎಲ್ಲರಿಗೂ ತುಸು ನಡುಕ, ಹೆಚ್ಚು ಸಂಕಷ್ಟ. ಎಲ್ ನಿನೋದಿಂದಾಗಿ, ಮಳೆ ಕಡಿಮೆಯಾಗುತ್ತದೆ, ಬರುವ ಮಳೆಯು ಅಕಾಲದಲ್ಲಿ ಸುರಿದೀತು ಅಥವಾ ಎಲ್ಲೆಲ್ಲೋ ಸುರಿದೀತು (ಅಂದರೆ, ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ಹೆಚ್ಚು ಮಳೆಯಾದೀತು), ಬರಗಾಲದ ಅವಧಿ ದೀರ್ಘವೂ ಆಗಿರಬಹುದು, ಆ ಮೂಲಕ ಒಟ್ಟಾರೆ ಕೃಷಿ ಕ್ಷೇತ್ರಕ್ಕೆ ತೀವ್ರ ಹಾನಿ, ಸಂಕಷ್ಟ.

ಎಲ್‌ನಿನೋದಿಂದ ಎದುರಾಗುವ ಇನ್ನೊಂದು ಸಂಕಷ್ಟ ಎಂದರೆ, ಹೀಟ್ ವೇವ್! ಈ ವರ್ಷ ಬಿಸಿಲಿನ ತಾಪ ಅಧಿಕವಿರುತ್ತದೆ ಎಂದು ನಮ್ಮ ದೇಶದ ಹವಾಮಾನ ತಜ್ಞರು ಅದಾಗಲೇ ಎಚ್ಚರಿಸಿದ್ದಾರೆ; ಅವರ ಭವಿಷ್ಯ ನಿಜವಾಗಿದೆಯೋ ಎಂಬಂತೆ, ಬೆಂಗಳೂರಿನಂತಹ ತಂಪು ನಗರಗಳಲ್ಲಿ ಈ ವರ್ಷ ಏಪ್ರಿಲ್‌ನಲ್ಲಿ 37 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿ, ಉದ್ಯಾನಗಳ ನಗರವು, 'ಬಿಸಿಲಿನ ನಗರ' ಎಂದು ಉದ್ಗಾರಗಳನ್ನು ಹೊರಡಿಸಿತು! ಬೆಂಗಳೂರಿನ ಕಥೆ ಇಷ್ಟಾದರೆ, ನಮ್ಮದೇ ರಾಜ್ಯದ ವಿಜಯಪುರ, ಶಿವಮೊಗ್ಗ, ಮಂಗಳೂರು ಮೊದಲಾದ ಕಡೆ 40 ಡಿಗ್ರಿ ತಾಪಮಾನ ದಾಖಲಾಗಿ, ಜನಜೀವನವೇ ನಲುಗಿತು; ಹೆಚ್ಚು ಹೆಚ್ಚು ಜನ ಫ್ಯಾನ್, ಫ್ರಿಜ್, ಏರ್ ಕಂಡಿಷನರ್‌ಗಳನ್ನು ಖರೀದಿಸಿ, ಹಗಲು ರಾತ್ರಿ ಅವುಗಳನ್ನು ಓಡಿಸಿದ್ದರಿಂದ, ವಿದ್ಯುತ್ ಬಳಕೆಯೂ ದಾಖಲೆ ಮಟ್ಟಕ್ಕೆ ಏರಿತು! ಅವುಗಳಿಂದ ಹೊರಬರುವ ಬಿಸಿಯು, ಸುತ್ತಲಿನ ಉಷ್ಣತೆಯನ್ನು ಇನ್ನಷ್ಟು ಹೆಚ್ಚಿಸುತ್ತಿದೆ!

ಈ ವರ್ಷದ ಎಲ್‌ನಿನೋ ಪ್ರಭಾವವೋ ಎಂಬಂತೆ, ಇದೇ ಮೊದಲ ಬಾರಿ, ಬೆಂಗಳೂರಿನಂತಹ ತಂಪು ನಗರಗಳಲ್ಲಿ ಹೀಟ್‌ವೇವ್ ಬರಬಹುದು ಎಂದು ಮುನ್ಸೂಚನೆ ನೀಡಲಾಗಿದೆ. ನಮ್ಮ ದೇಶದಲ್ಲಿ ಒಡಿಶಾ, ಆಂಧ್ರಪ್ರದೇಶ, ಉತ್ತರ ಪ್ರದೇಶದ ಕೆಲವು ಭಾಗಗಳು ಆಗಾಗ ಹೀಟ್ ವೇವ್ ಸಂಕಷ್ಟಕ್ಕೆ ಗುರಿಯಾಗುವುದು ವರದಿಯಾಗುತ್ತಲೇ ಇರುತ್ತದೆ; ಈ ವರ್ಷ, ಎಲ್ ನಿನೋ ಪ್ರಭಾವದಿಂದಾಗಿ, ಅಲ್ಲೆಲ್ಲಾ, ಜತೆಗೆ, ದೇಶದ ಹಲವು ಭಾಗಗಳಲ್ಲಿ ಹೀಟ್‌ವೇವ್ ತಾಪ ತೀವ್ರವಾಗಲಿದ್ದು, ಹಲವು ಜನರು ಪ್ರಾಣಹಾನಿಗೊಳಗಾಲೂಬಹುದು.

'ಸರಿಯಪ್ಪ, ಎಲ್‌ನಿನೋದಿಂದಾಗಿ, ಬರಗಾಲ ಬರುತ್ತದೆ, ಅದಕ್ಕೆ ನಾವೇನು ಮಾಡಬೇಕು, ಯಾವ ರೀತಿಯ ಸಿದ್ಧತೆ ಮಾಡಿಕೊಳ್ಳಬೇಕು?' ಎಂದು ನೀವು ಪ್ರಶ್ನೆ ಮಾಡಬಹುದು. ಇದು ಬಹಳ ಮಹತ್ವದ ಪ್ರಶ್ನೆ. 2026ರಲ್ಲಿ ಎಲ್‌ನಿನೋ ಪರಿಣಾಮ ಉಂಟಾಗಿದ್ದು, ಅದು ನಮ್ಮ ದೇಶದ ಮತ್ತು ರಾಜ್ಯದ ಮೇಲೆ ತೀವ್ರ ಪರಿಣಾಮ ಉಂಟುಮಾಡುತ್ತದೆ ಎಂದು ಈಗಾಗಲೇ ಹವಾಮಾನ ತಜ್ಞರು ಹೇಳಿದ್ದಾರೆ, ಮಾತ್ರವಲ್ಲ ಎಚ್ಚರಿಸಿಯೂ ಇದ್ದಾರೆ. ಆದ್ದರಿಂದ ಎಲ್‌ನಿನೋ ಎದುರಿಸಲು ಸೂಕ್ತ ತಯಾರಿ ಮಾಡಿಕೊಳ್ಳಲು ನಮಗೀಗ ಸಾಕಷ್ಟು ಕಾಲಾವಕಾಶ ಇದೆ ಎಂದೇ ಹೇಳಬಹುದು.

ಸರಳವಾದ ಭಾಷೆಯಲ್ಲಿ ಹೇಳುವುದಾದರೆ, ಎಲ್‌ನಿನೋ ವಿದ್ಯಮಾನ ಉಂಟಾದ ವರ್ಷಗಳಲ್ಲಿ ಮಳೆ ಕಡಿಮೆಯಾಗುತ್ತದೆ, ಬಿಸಿಲು ಅಧಿಕವಾದೀತು ಮತ್ತು ಮಳೆ ಬಂದಾಗ ಸಹಜವಾಗಿ ಬರದೇ, ಎಲ್ಲೆಲ್ಲೋ, ಹೇಗ್ಹೇಗೋ ಬರುತ್ತದೆ. ಇಂತಹ ವಿಚಾರಗಳನ್ನು ಟಾರ್ಗೆಟ್ ಮಾಡಿಕೊಂಡು, ತಕ್ಕ ಸಿದ್ಧತೆ ಮಾಡಿಕೊಳ್ಳುವುದು ಸೂಕ್ತ. ಎಲ್‌ನಿನೋ ಎದುರಿಸಲು ವೈಯಕ್ತಿಕ ಮಟ್ಟದ ಸಿದ್ಧತೆಯ ಜತೆಗೆ, ಪ್ರಭುತ್ವದ ವಿವಿಧ ಇಲಾಖೆಗಳು ಸಮನ್ವಯದೊಂದಿಗೆ ಕೆಲಸ ಮಾಡಿ, ಜನರಿಗೆ ಮಾರ್ಗದರ್ಶನ ನೀಡಬೇಕು ಮತ್ತು ಲಭ್ಯವಿರುವ ನೀರನ್ನು ವೈಜ್ಞಾನಿಕವಾಗಿ ವಿತರಿಸಿ, ಕೃಷಿಕರಿಗೆ ಮತ್ತು ಜನಸಾಮಾನ್ಯರಿಗೆ ಹೆಚ್ಚು ತೊಂದರೆಯಾಗದಂತೆ ನೋಡಕೊಳ್ಳಬೇಕು ಎನ್ನುತ್ತಾರೆ ತಜ್ಞರು. ಇಂದಿನ ವ್ಯವಸ್ಥೆಯಲ್ಲಿ ಎಲ್ ನಿನೋ ದಂತಹ ವಾತಾವರಣ ವ್ಯತ್ಯಯವನ್ನು ಎದುರಿಸಲು ಪ್ರಭುತ್ವದ ವಿವಿಧ ಇಲಾಖೆಗಳ ಕೊಡುಗೆ ಅತಿ ಮಹತ್ವದ್ದು!

ಸಣ್ಣ ಮತ್ತು ಮಧ್ಯಮ ಪ್ರಮಾಣದ ಜಮೀನು ಇರುವ ಕೃಷಿಕರು, ವೈಯಕ್ತಿಕ ನೆಲೆಯಲ್ಲಿ ಕೈಗೊಳ್ಳಬಹುದಾದ ಒಂದು ಕ್ರಮವೆಂದರೆ, ಹೆಚ್ಚು ನೀರು ಅಗತ್ಯವಿಲ್ಲದ ಬೆಳೆಗಳಿಗೆ ಪ್ರಾಮುಖ್ಯತೆ ನೀಡಬೇಕು; ಮತ್ತು ಈಗ ಲಭ್ಯವಿರುವ ನೀರನ್ನು ಮಿತವಾಗಿ ಬಳಸಿ, ಸಂರಕ್ಷಿಸಿಕೊಳ್ಳಬೇಕು. ಆದರೆ ಈ ಕುರಿತು ಮಾಹಿತಿ, ಮಾರ್ಗದರ್ಶನ ಮತ್ತು ನೀತಿನಿಯಮಗಳನ್ನು ರೂಪಿಸುವುದು ಪ್ರಭುತ್ವದ ಕೈಕೆಳಗಿರುವ ಇಲಾಖೆಗಳು! ಉದಾಹರಣೆಗೆ, ಮುಂದಿನ ಆರೆಂಟು ತಿಂಗಳುಗಳಲ್ಲಿ 'ಇಂತಹ ಬೆಳೆಯು ನಮ್ಮ ರಾಜ್ಯಕ್ಕೆ ಸೂಕ್ತ, ಇದರಿಂದಾಗಿ, ಕಡಿಮೆ ನೀರನ್ನು ಬಳಸಿಯೂ, ತಕ್ಕಮಟ್ಟಿಗಿನ ಆದಾಯ ಪಡೆಯಬಹುದು' ಎಂದು ಅಧ್ಯಯನ ಮಾಡಿ, ಶಿಫಾರಸು ಮಾಡುವುದು, ಇಂತಹ ಇಲಾಖೆಗಳಿಂದ ಮಾತ್ರ ಸಾಧ್ಯ; ಅದು ಅವುಗಳ ಕರ್ತವ್ಯವೂ ಹೌದು. ಈ ಇಲಾಖೆಗಳು ಜನಸ್ನೇಹಿಯಾಗಿ ಕೆಲಸ ಮಾಡಲು, ಸೂಕ್ತ ಕಾಲದಲ್ಲಿ ಸಮನ್ವಯದಿಂದ ನಿರ್ಧಾರ ತೆಗೆದುಕೊಳ್ಳಲು ರಾಜಕಾರಣಿಗಳು ಮತ್ತು ಅಧಿಕಾರದ ಸೂತ್ರ ಹಿಡಿದವರು ಸಹಕರಿಸಬೇಕು, ನಿರ್ಧಾರ ತೆಗೆದುಕೊಳ್ಳಬೇಕು ಮತ್ತು ಅದು ಅವರ ಕರ್ತವ್ಯವೂ ಹೌದು. ಏಕೆಂದರೆ, ಎಲ್ಲ ನಾಗರಿಕರ ಹಿತ ಕಾಯುವುದು ಪ್ರಭುತ್ವದ ಕೆಲಸ ತಾನೆ? ಇಲ್ಲಿ ಇನ್ನೂ ಒಂದು ಸೂಕ್ಷ್ಮ ಸಮಸ್ಯೆಯನ್ನು ಗುರುತಿಸಲೇಬೇಕು: ಪ್ರಭುತ್ವವು ಜನರ ಹಿತ ಕಾಯಬೇಕಾದರೆ, ಅದರ ಸೂತ್ರ ಹಿಡಿದವರು ಸಕಾಲದಲ್ಲಿ ತಕ್ಕ ನಿರ್ಣಯ ತೆಗೆದುಕೊಳ್ಳಬೇಕು; ಅದಕ್ಕೆ ರಾಜಕೀಯ ಸ್ಥಿರತೆಯೂ ಮುಖ್ಯ! ರಾಜಕೀಯ ಸ್ಥಿರತೆ ಇಲ್ಲದೇ ಹೋದಾಗ, ವಿವಿಧ ಇಲಾಖೆಗಳ ನಿರ್ಣಯಗಳ ನಡುವೆ ಸಮನ್ವಯ ಸಾಧಿಸುವಲ್ಲಿ ತೊಡಕುಂಟಾಗಿ, ಜನರ ಮೇಲೆ ನೇರ ಪರಿಣಾಮ ಬೀರಬಲ್ಲದು.

2026ರಲ್ಲಿ ಅಧಿಕ ತಾಪಮಾನ, ಹೀಟ್‌ವೇವ್ ಮತ್ತು ಕಡಿಮೆ ಮಳೆ ಎಂದು ಈಗಾಗಲೇ ಹವಾಮಾನ ತಜ್ಞರು ಎಚ್ಚರಿಸಿದ್ದಾರೆ; ನಿಜ ಹೇಳಬೇಕೆಂದರೆ, 'ಎಲ್ ನಿನೋ ಎಂಬ ಗುಮ್ಮ ಎಲ್ಲರನ್ನೂ ಕಾಡುತ್ತದೆ' ಎಂದೇ ಸ್ಪಷ್ಟವಾಗಿ ಹೇಳಿದ್ದಾರೆ. ಅದೃಷ್ಟವೆಂದರೆ, ಎಲ್‌ನಿನೋ ವಿದ್ಯಮಾನವು ನಮ್ಮನ್ನೆಲ್ಲಾ ಈ ವರ್ಷದ ಇನ್ನುಳಿದ ತಿಂಗಳುಗಳಲ್ಲಿ ಕಾಡುತ್ತದೆ ಎಂದು ಮುಂಚಿತವಾಗಿಯೇ, ಈಗಾಗಲೇ ತಿಳಿದಿದೆ; ವಾತಾವರಣದ ವ್ಯತ್ಯಯದ ಈ ಪ್ರಮುಖ ಮತ್ತು ಖಚಿತ ಮಾಹಿತಿಯನ್ನು ಸೂಕ್ತವಾಗಿ ಬಳಸಿಕೊಂಡು, ಜನಸಾಮಾನ್ಯರ ಮತ್ತು ನಾಗರಿಕರ ಹಿತ ಕಾಯುವ ಕೆಲಸವನ್ನು ಜನನಾಯಕರು, ಪ್ರಾಜ್ಞರು ಮತ್ತು ಪ್ರಭುತ್ವದ ವಿವಿಧ ಇಲಾಖೆಗಳು ಮಾಡಬೇಕಾಗಿದೆ. ಎಲ್ಲರೂ ಎದ್ದೇಳಿ, 2026ರ ಎಲ್-ನೀನೋ ತರಲಿರುವ ಸಂಕಷ್ಟ ಎದುರಿಸಲು ಸಿದ್ಧರಾಗಿ, ಪ್ಲೀಸ್!

ವಿಶ್ವ ಕಾರ್ಮಿಕರ ದಿನ

ರವೀ ಸಜಂಗದ್ದೆ

ಕಾರ್ಮಿಕರ ಬವಣೆ ತೀರಲಿ !

ಭಾರತವೂ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳಲ್ಲಿ, ಪ್ರತಿ ವರ್ಷ ಮೇ 1ರಂದು 'ಕಾರ್ಮಿಕ ದಿನಾಚರಣೆ'ಯನ್ನು ಆಚರಿಸಲಾಗುತ್ತದೆ. ಜಗತ್ತಿನ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತು, ತಮ್ಮ ದುಡಿಮೆ ಮತ್ತು ಬೆವರಿನ ಹನಿಗಳಿಂದ ಅಭಿವೃದ್ಧಿಯ ರಥವನ್ನು ಎಳೆಯುವ ಕೋಟ್ಯಂತರ ಶ್ರಮಿಕರಿಗೆ ಆಯಾ ದೇಶಗಳು ಅಭಿಮಾನದಿಂದ ಗೌರವ ಸಲ್ಲಿಸುವ ವಿಶೇಷ ದಿನ. 1886ರಲ್ಲಿ ಅಮೆರಿಕದ ಶಿಕಾಗೋದಲ್ಲಿ '8 ಗಂಟೆ ಕೆಲಸ, 8 ಗಂಟೆ ವಿಶ್ರಾಂತಿ ಮತ್ತು 8 ಗಂಟೆ ಮನರಂಜನೆ' ಎಂಬ ಧ್ಯೇಯ ವಾಕ್ಯದೊಂದಿಗೆ ತಮ್ಮ ಹಕ್ಕಿಗಾಗಿ ಕಾರ್ಮಿಕರು ನಡೆಸಿದ ರಕ್ತಸಿಕ್ತ ಹೋರಾಟದ ಸ್ಮರಣಾರ್ಥವಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಯಾವುದೇ ದೇಶದ ಆರ್ಥಿಕ ಪ್ರಗತಿ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಾಮಾಜಿಕ ಸಮತೋಲನದ ಅಡಿಪಾಯ ನಿಸ್ಸಂಶಯವಾಗಿ ಆಯಾ ದೇಶದ ಕಾರ್ಮಿಕ ವರ್ಗ. ಕೃಷಿ ಭೂಮಿಯಿಂದ ಹಿಡಿದು, ಗಗನಚುಂಬಿ ಕಟ್ಟಡಗಳ ನಿರ್ಮಾಣದವರೆಗೆ, ಬ್ಯಾಂಕ್‌ನಿಂದ ಹಿಡಿದು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕೆಲಸಗಳ ಹಿಂದೆಯೂ ಈ ದೊಡ್ಡ ಸಂಖ್ಯೆಯ ಕಾರ್ಮಿಕರ ಅವಿರತ ಶ್ರಮ ಅಡಗಿದೆ.

ಹದಿನೆಂಟನೆಯ ಶತಮಾನದಲ್ಲಿ ಬಂಡವಾಳಶಾಹಿ ವ್ಯವಸ್ಥೆಯಡಿಯಲ್ಲಿ ತೀವ್ರ ಶೋಷಣೆಗೆ ಒಳಗಾಗುತ್ತಿದ್ದ ಕಾರ್ಮಿಕರ ದನಿಯಾಗಿ ಅವರೊಡನೆ ನಿಂತು ಆಸರೆಯಾದದ್ದು ಆಯಾ ಭಾಗಗಳ ಮತ್ತು ಆಯಾ ವಿಭಾಗಗಳ ಶಕ್ತಿಶಾಲಿ ಕಾರ್ಮಿಕ ಸಂಘಟನೆಗಳು. ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವಲ್ಲಿ, ಉದ್ಯೋಗದ ಭದ್ರತೆಯ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಸುಸ್ಥಿತಿಯನ್ನು ಕಾರ್ಮಿಕರಿಗೆ ಒದಗಿಸುವಲ್ಲಿ ಮತ್ತು ನ್ಯಾಯಯುತ ವೇತನ ಮತ್ತು ಕಾಲಾನುಕ್ರಮದಲ್ಲಿ ಅದರ ಪರಿಷ್ಕರಣೆಗಾಗಿ ಆಗ್ರಹಿಸುವ ವಿಚಾರದಲ್ಲಿ ಈ ಸಂಘಟನೆಗಳು ನಿರ್ವಹಿಸಿದ ಪಾತ್ರ ದೊಡ್ಡದು. ವ್ಯವಹಾರ ಮತ್ತು ಕೈಗಾರಿಕಾ ಮಾಲೀಕರು ಮತ್ತು ಕಾರ್ಮಿಕರ ನಡುವಿನ ಸೇತುವೆ-ಕೊಂಡಿಯಾಗಿ ಈ ಕಾರ್ಮಿಕ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಶೋಷಣೆ, ವಿವಿಧ ದೌರ್ಜನ್ಯಗಳನ್ನು ತಡೆಯುವುದು ಇವರ ಪ್ರಮುಖ ಗುರಿ. ಇದರೊಂದಿಗೆ ಕಾರ್ಮಿಕರಿಗೆ ಆರೋಗ್ಯ, ಸುರಕ್ಷತೆ, ವಿಮೆ ಮತ್ತು ಮಹಿಳಾ ಉದ್ಯೋಗಿಗಳಿಗೆ ಹೆರಿಗೆ ರಜೆಯಂತಹ ಮೂಲಭೂತ ಸೌಲಭ್ಯಗಳನ್ನು ಕಾನೂನಾತ್ಮಕವಾಗಿ ಒದಗಿಸುವಲ್ಲಿ ಈ ಸಂಘಟನೆಗಳ ಹೋರಾಟ ಮಹತ್ವದ್ದಾಗಿದೆ. ಇಂತಹ ಪ್ರಾಥಮಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಈ ಕಾರ್ಮಿಕ ಸಂಘಟನೆಗಳು ಯಶಸ್ವಿಯಾಗಿವೆ.

ಕಳೆದ ಕೆಲವು ವರ್ಷಗಳಿಂದ ಭಾರತದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆಯಾದರೂ, ಕಾರ್ಮಿಕ ವರ್ಗದ ಎಲ್ಲರ ಬದುಕು ಇನ್ನೂ ಹಸನಾಗಿಲ್ಲ. ಒಂದು ವಿವರಣೆ ಪ್ರಕಾರ, ಭಾರತದ ಒಟ್ಟು ಕಾರ್ಮಿಕ ಶಕ್ತಿಯಲ್ಲಿ ಶೇ.75ಕ್ಕೂ ಹೆಚ್ಚು ಜನರು 'ಅಸಂಘಟಿತ ವಲಯ'ದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೆಲ್ಲರೂ ದೈನಂದಿನ ಕೆಲಸಕಾರ್ಯಗಳಲ್ಲಿ ಹಲವಾರು ಗಂಭೀರ ಸವಾಲುಗಳನ್ನು ಎದುರಿಸುತ್ತಿದ್ದಾರೆ. ದಿನಗೂಲಿ ನೌಕರರು, ಕಟ್ಟಡ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರಿಗೆ ಖಾಯಂ ಉದ್ಯೋಗದ ಭದ್ರತೆ ಇಲ್ಲ. ಕೇಂದ್ರ ಸರ್ಕಾರದ 'ಜಿರಾಮ್‌ಜಿ ಯೋಜನೆ'ಯು ಒಂದಷ್ಟು ದಿನಗಳ ಉದ್ಯೋಗ ಖಾತ್ರಿ ಒದಗಿಸುತ್ತಿದೆಯಾದರೂ ಕಾರ್ಮಿಕರ ಬವಣೆಗಳು ಇನ್ನೂ ಕಡಿಮೆ ಆಗಿಲ್ಲ. ಉತ್ತರ ಭಾರತ ಮತ್ತು ಒಂದಷ್ಟು ಹಿಂದುಳಿದಿರುವ ಈಶಾನ್ಯ ರಾಜ್ಯಗಳ ಕಾರ್ಮಿಕರು ದೈನಂದಿನ ಜೀವನ ಸಾಗಿಸಲು ಬಹಳ ತ್ರಾಸ ಪಡುತ್ತಿದ್ದಾರೆ. ಕೆಲಸ ಸಿಕ್ಕ ದಿನವಷ್ಟೇ ಇವರ ಮನೆಯಲ್ಲಿ ಒಲೆ ಉರಿಯುವ ಪರಿಸ್ಥಿತಿ ಇಂದಿಗೂ ಇದೆ!

ದುಬಾರಿಯಾಗುತ್ತಿರುವ ಅಗತ್ಯ ವಸ್ತುಗಳ ಬೆಲೆ ಮತ್ತು ಕಾರ್ಮಿಕರಿಗೆ ಸಿಗುತ್ತಿರುವ ದಿನಗೂಲಿಗೆ ವ್ಯತ್ಯಾಸ ಅಜಗಜಾಂತರ! 'ಕನಿಷ್ಠ ವೇತನ ಕಾಯ್ದೆ' ಹೆಚ್ಚಿನ ಪ್ರದೇಶಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿಲ್ಲ. ಉದ್ಯೋಗವನ್ನರಸಿ ಹಳ್ಳಿಗಳಿಂದ ನಗರಗಳಿಗೆ, ಹಿಂದುಳಿದ ರಾಜ್ಯಗಳಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ವಲಸೆ ಬರುವ ಕಾರ್ಮಿಕರು ಸಮರ್ಪಕ ವಸತಿ, ನೈರ್ಮಲ್ಯ ಮತ್ತು ಆರೋಗ್ಯ ಸೌಲಭ್ಯಗಳಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಇಂದಿನ ಡಿಜಿಟಲ್ ಯುಗದಲ್ಲಿ ಡೆಲಿವರಿ ಕೆಲಸಗಾರರು, ಬಾಡಿಗೆ ಕಾರು ಚಾಲಕರಂತಹ 'ಗಿಗ್ ಕಾರ್ಮಿಕರ' ಸಂಖ್ಯೆ ಹೆಚ್ಚಾಗುತ್ತಿದೆ. ಅವರಿಗೆ ಉದ್ಯೋಗ ಕಲ್ಪಿಸುವ ಕಂಪನಿಗಳು, ಇವರನ್ನು 'ಪಾಲುದಾರರು' ಎಂದು ಪರಿಗಣಿಸಿ, 'ಉದ್ಯೋಗಿ'ಗಳಾಗಿರುವ ಇವರಿಗೆಲ್ಲ ಸಿಗಬೇಕಾದ ಭವಿಷ್ಯ ನಿಧಿ, ಆರೋಗ್ಯ ವಿಮೆ ಮುಂತಾದ ಸೌಲಭ್ಯಗಳಿಂದ ನಯವಾಗಿ ವಂಚಿಸುತ್ತಿವೆ. ಆರೋಗ್ಯ ರಕ್ಷೆ ಮತ್ತು ಆರ್ಥಿಕ ಸದೃಢತೆ ಇನ್ನೂ ಮರೀಚಿಕೆಯಾಗಿದೆ. ಪುರುಷರಿಗೆ ಸಮಾನವಾದ ಕೆಲಸ ಮಾಡುತ್ತಿದ್ದರೂ ಮಹಿಳೆಯರಿಗೆ ಕಡಿಮೆ ವೇತನ ನೀಡುವುದು, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ಮತ್ತು ಹೆರಿಗೆ ಭತ್ಯೆಯ ನಿರಾಕರಣೆ ಮುಂತಾದ ಸಂಕಷ್ಟಗಳನ್ನು ಮಹಿಳಾ ಉದ್ಯೋಗಿಗಳು ಬಹುತೇಕ ಕಡೆಗಳಲ್ಲಿ ಎದುರಿಸುತ್ತಿದ್ದಾರೆ. ಈ ಸಮಸ್ಯೆಯ ನಿವಾರಣೆಗೆ ಮತ್ತು ನಿರ್ಮೂಲನೆಯ ದಿಸೆಯಲ್ಲಿ ಕೇಂದ್ರ ಕಾರ್ಮಿಕ ಇಲಾಖೆ ಕಠಿಣ ಕಾನೂನು ತಂದಿದೆ. ಕೆಲವು ಕಡೆಗಳಲ್ಲಿ ಈ ಕಾನೂನು ಅನುಷ್ಠಾನ ಇನ್ನಷ್ಟು ಕಟ್ಟುನಿಟ್ಟಾಗಿ ಆಗಬೇಕಿದೆ.

ಕಾರ್ಮಿಕರ ಜೀವನ ಮಟ್ಟವನ್ನು ಸುಧಾರಿಸಲು ಮತ್ತು ಅವರ ಭವಿಷ್ಯವನ್ನು ಭದ್ರವಾಗಿಸುವ ನಿಟ್ಟಿನಲ್ಲಿ ಈವರೆಗೆ ಬಂದಿರುವ ಸರ್ಕಾರಗಳು ಹಲವಾರು ಮಹತ್ವದ ಹೆಜ್ಜೆಗಳನ್ನು ಇಟ್ಟಿರುವುದು ಸತ್ಯ. ಬೀದಿ ಬದಿ ವ್ಯಾಪಾರಿಗಳು, ಕೃಷಿ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು ಮುಂತಾದ ಅಸಂಘಟಿತ ವಲಯದ ಕಾರ್ಮಿಕರ ರಾಷ್ಟ್ರೀಯ ಡೇಟಾಬೇಸ್ ಸೃಷ್ಟಿಸಲು ಇ-ಶ್ರಮ್ ಪೋರ್ಟಲ್ ಅದಾಗಲೇ ಚಾಲನೆಯಲ್ಲಿದೆ. ಇದರಲ್ಲಿ ನೋಂದಾಯಿತ ಕಾರ್ಮಿಕರಿಗೆ ಎರಡು ಲಕ್ಷ ರೂಪಾಯಿಗಳ ಉಚಿತ ಅಪಘಾತ ವಿಮೆ ಮತ್ತು ಸರ್ಕಾರದ ವಿವಿಧ ಯೋಜನೆಗಳ ನೆರವು ನೇರವಾಗಿ ಅವರ ಬ್ಯಾಂಕ್ ಖಾತೆಗೆ ತಲುಪುತ್ತದೆ. ಅಸಂಘಟಿತ ಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ಆರ್ಥಿಕ ಭದ್ರತೆ ಒದಗಿಸುವ ಸದುದ್ದೇಶದಿಂದ 'ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್-ಧನ್ ಯೋಜನೆ' ಜಾರಿಯಲ್ಲಿದೆ. ಈ ಯೋಜನೆಯಡಿ, 60 ವರ್ಷಗಳ ನಂತರ ಪ್ರತಿ ತಿಂಗಳು ಕನಿಷ್ಠ ರೂಪಾಯಿ 3,000 ಪಿಂಚಣಿ ನೀಡಲಾಗುತ್ತದೆ. ಒಬೀರಾಯನ ಕಾಲದ 44 ಕಾರ್ಮಿಕ ಕಾನೂನುಗಳನ್ನು ಪರಿಶೀಲಿಸಿ, ಪರಾಂಬರಿಸಿ ವೇತನ, ಕೈಗಾರಿಕಾ ಸಂಬಂಧಗಳು, ಸಾಮಾಜಿಕ ಭದ್ರತೆ ಮತ್ತು ಔದ್ಯೋಗಿಕ ಸುರಕ್ಷತೆ ಎಂಬ ನಾಲ್ಕು ಹೊಸ ಕಾರ್ಮಿಕ ಕಾಯಿದೆಗಳನ್ನು ಕೇಂದ್ರ ಸರಕಾರ ಇತ್ತೀಚೆಗೆ ಜಾರಿಗೆ ತಂದಿದೆ. ಇದು ಕಾರ್ಮಿಕರ ಹಕ್ಕುಗಳನ್ನು ದೇಶದೆಲ್ಲೆಡೆ ಸಮಾನವಾಗಿ ಕಾಪಿಡುವ ಗುರಿ ಹೊಂದಿದೆ.

ರಾಜ್ಯದಲ್ಲಿ 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ'ಯು ಅತ್ಯಂತ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ನೋಂದಾಯಿತ ಕಾರ್ಮಿಕರ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ 'ವಿದ್ಯಾನಿಧಿ', ಮದುವೆ ಸಹಾಯಧನ, ಮತ್ತು ಹೆರಿಗೆ ಭತ್ಯೆಯನ್ನು ನೀಡಲಾಗುತ್ತಿದೆ. ಕಾರ್ಮಿಕರ ಕೆಲಸದ ಸ್ಥಳಕ್ಕೆ ತೆರಳಿ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸೂಕ್ತ ಚಿಕಿತ್ಸೆ ಒದಗಿಸುವ 'ಶ್ರಮಿಕ ಸಂಜೀವಿನಿ' ಕ್ಲಿನಿಕ್‌ಗಳು ರಾಜ್ಯಾದ್ಯಂತ ಕಾರ್ಯಾಚರಿಸುತ್ತಿವೆ. ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ನಗರ ಸಾರಿಗೆಯಲ್ಲಿ ಉಚಿತ ಬಸ್ ಪಾಸ್ ಸೌಲಭ್ಯ ಒದಗಿಸಲಾಗಿದೆ. ಜೊತೆಯಲ್ಲಿ 'ಕಾರ್ಮಿಕ ಗೃಹ ಭಾಗ್ಯ' ಯೋಜನೆಯಡಿ ಸ್ವಂತ ಮನೆ ನಿರ್ಮಾಣ ಮಾಡಿಕೊಳ್ಳಲು ಅಥವಾ ಮನೆ ಖರೀದಿಸಲು ಕಾರ್ಮಿಕರಿಗೆ ಆರ್ಥಿಕ ಸಹಾಯಧನವನ್ನು ರಾಜ್ಯ ಸರಕಾರ ನೀಡುತ್ತಿದೆ. ದೇಶದಲ್ಲಿ 140 ಕೋಟಿ ಜನಸಂಖ್ಯೆ ಇದ್ದರೂ ಎಲ್ಲಾ ಕ್ಷೇತ್ರಗಳಲ್ಲೂ ನುರಿತ ಮತ್ತು ಅನುಭವಿ ಕಾರ್ಮಿಕರ ಕೊರತೆಯನ್ನು ಅನುಭವಿಸುತ್ತಿದ್ದೇವೆ. ಒಂದು ಕೆಲಸಕ್ಕೆ ಸೂಕ್ತವಾದ ಅಭ್ಯರ್ಥಿ ಆಯ್ಕೆ, ಅದಕ್ಕೆ ಹೊಂದುವ ಮತ್ತು ದೀರ್ಘಕಾಲ ಆ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡುವ ಸಿದ್ಧತೆ ಮತ್ತು ಬದ್ಧತೆಯ ಕೊರತೆಯನ್ನು ಎಲ್ಲೆಡೆ ಕಾಣುತ್ತಿದ್ದೇವೆ. ನುರಿತ ಕಾರ್ಮಿಕರ ಸಂಖ್ಯೆ ಹೆಚ್ಚಬೇಕಿದೆ ಮತ್ತು ಈಗಿನ ಯುವಜನತೆ ದುಡ್ಡಿನ ಹಿಂದೆ ಹೋಗುವ ಬದಲಾಗಿ ಕೌಶಲ್ಯಾಭಿವೃದ್ಧಿಯ ಕಡೆಗೂ ಗಮನ ನೀಡಬೇಕಿದೆ. ಪ್ರತಿಭಾವಂತರಿಗೆ ವಿದೇಶಗಳಲ್ಲಿ ಸಿಗುವ ಸಂಬಳ, ಸ್ಥಾನಮಾನ ನಮ್ಮ ದೇಶದಲ್ಲಿ ಕೊಡುವ ಮೂಲಕ ದೇಶದ ಕೋಟ್ಯಂತರ ಪ್ರತಿಭೆಗಳನ್ನು ದೇಶಕ್ಕಾಗಿ ದುಡಿಯುವ ಯೋಜನೆಗಳನ್ನು ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಕಾರ್ಯಪ್ರವೃತ್ತವಾಗಬೇಕಾದದ್ದು ಸದ್ಯದ ತುರ್ತು.

ಮೇ ಒಂದರ ಕಾರ್ಮಿಕ ದಿನಾಚರಣೆಯು ಕೇವಲ ವೇದಿಕೆಯ ಮೇಲಿನಿಂದ ನೇತಾರರು, ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಮತ್ತು ರಾಜಕಾರಣಿಗಳು ಮಾಡುವ ಭಾಷಣಗಳಿಗೆ ಅಥವಾ ಪರಸ್ಪರ ಶುಭಾಶಯ ವಿನಿಮಯಕ್ಕೆ ಮಾತ್ರ ಸೀಮಿತವಾಗದಿರಲಿ!

ಸರ್ವರಿಗೂ ಕಾರ್ಮಿಕ ದಿನಾಚರಣೆಯ ಶುಭ ಹಾರ್ದೈಕೆಗಳು.

ಬುದ್ಧ ಪೂರ್ಣಿಮೆ: ಕರುಣೆಯ ಆತ್ಮಸಾಕ್ಷಾತ್ಕಾರ

ಸಾಂದರ್ಭಿಕ

ಸಿ. ಪಿ. ರಾಧಾಕೃಷ್ಣನ್

vveditoped@gmail.com

ದೇವಾಲಯಗಳಲ್ಲಿ ಉತ್ಸವಗಳನ್ನು ಆಚರಿಸಲಾಗುವ ಚಿತ್ರಾ ಪೌರ್ಣಮಿಯ ಈ ಶುಭ ದಿನದಂದು, ಪ್ರತಿ ಮನೆಯಲ್ಲೂ ಸಮೃದ್ಧಿ ಬೆಳೆಯಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲ ಸಹೋದರ-ಸಹೋದರಿಯರಿಗೆ ಬುದ್ಧ ಪೂರ್ಣಿಮೆಯ ಹೃತ್ಪೂರ್ವಕ ಶುಭಾಶಯಗಳು.

ಭಾರತವು ಜಗತ್ತಿಗೆ ನೀಡಿದ ಅನೇಕ ಶ್ರೇಷ್ಠ ಕೊಡುಗೆಗಳಲ್ಲಿ ಬೌದ್ಧಧರ್ಮವು ಪ್ರಮುಖವಾದುದು. ಭಗವಾನ್ ಬುದ್ಧನ ಜೀವನ ಮತ್ತು ಅಮೂಲ್ಯ ಬೋಧನೆಗಳು ಪ್ರಪಂಚದಾದ್ಯಂತ ಕೋಟ್ಯಂತರ ಜನರ ಬದುಕಿಗೆ ಬೆಳಕಾಗಿವೆ.

'ತನ್ನನ್ನು ತಾನು ಅರಿಯುವುದು' ಅಥವಾ ಆತ್ಮಸಾಕ್ಷಾತ್ಕಾರದ ಮಹತ್ವವನ್ನು ಭಾರತವು ಇಡೀ ಜಗತ್ತಿಗೆ ಕಲಿಸಿಕೊಟ್ಟಿದೆ. ಬುದ್ಧ ಎಂಬ ಪದದ ಅರ್ಥವೇ ಜಾಗೃತಗೊಂಡವನು ಅಥವಾ ಅರಿವು ಪಡೆದವನು ಎಂದಾಗಿದೆ. ಮಾನವಕುಲಕ್ಕೆ ಆತ್ಮದ ಅರಿವು ಮೂಡಿಸಲು ಶ್ರಮಿಸಿದ ಈ ಮಹಾತ್ಮನ ಜನನ ಮತ್ತು ಜ್ಞಾನೋದಯ ಎರಡೂ ಒಂದೇ ದಿನದಂದು ಸಂಭವಿಸಿರುವುದು ಅತ್ಯಂತ ವಿಶೇಷವಾಗಿದೆ. ರಾಜಕುಮಾರ ಸಿದ್ಧಾರ್ಥ ಎಲ್ಲ ಸುಖ-ಸೌಲಭ್ಯಗಳ ನಡುವೆ ಬೆಳೆದವರು. ಆದರೆ, ತಮ್ಮ 29ನೇ ವಯಸ್ಸಿನಲ್ಲಿ ಅರಮನೆಯ ವೈಭೋಗ, ಪತ್ನಿ, ಮಗ ಮತ್ತು ಸಕಲ ಸಂಪತ್ತನ್ನು ತ್ಯಜಿಸಿ ಸತ್ಯದ ಹುಡುಕಾಟಕ್ಕೆ ಹೊರಟರು. ಆರು ವರ್ಷಗಳ ಕಠಿಣ ತಪಸ್ಸಿನ ನಂತರ, ಬೋಧಗಯಾದ ಬೋಧಿ ವೃಕ್ಷದ ಅಡಿಯಲ್ಲಿ ಅವರಿಗೆ ಪರಮ ಜ್ಞಾನೋದಯವಾಯಿತು. ಅಂದಿನಿಂದ ಅವರು 'ಬುದ್ಧ' ಎಂದು ಪ್ರಸಿದ್ಧರಾದರು.

ಬೌದ್ಧ ಧರ್ಮದ ನಾಲ್ಕು 'ಉದಾತ್ತ ಸತ್ಯಗಳು' ಮತ್ತು ನೈತಿಕ ಜೀವನದ ಹಾದಿಯು ಒಂದು ಹೊಸ ತತ್ವಶಾಸ್ತ್ರಕ್ಕೆ ನಾಂದಿ ಹಾಡಿತು. ಇದು ವಿಶ್ವ ಇತಿಹಾಸದಲ್ಲಿ ಭಾರತದ ಗೌರವವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ವಾರಾಣಸಿಯ ಸಮೀಪವಿರುವ ಸಾರನಾಥದಲ್ಲಿ, ಅವರು ಐವರು ಬಿಕ್ಕುಗಳಿಗೆ ತಮ್ಮ ಮೊದಲ ಬೋಧನೆಯನ್ನು ನೀಡಿದರು. ಧರ್ಮಚಕ್ರ ಪ್ರವರ್ತನ ಎಂದು ಕರೆಯಲ್ಪಡುವ ಈ ಬೋಧನೆಯು ಬೌದ್ಧಧರ್ಮದ ಅಡಿಪಾಯವಾಯಿತು ಮತ್ತು ಬೌದ್ಧಧರ್ಮದ ಔಪಚಾರಿಕ ಆರಂಭಕ್ಕೆ ದಾರಿಯಾಯಿತು. ಕಾಲಾನಂತರದಲ್ಲಿ, ಬುದ್ಧನ ಬೋಧನೆಗಳಿಗೆ ಮಾರುಹೋಗಿ ಅನೇಕರು ಅನುಯಾಯಿಗಳಾದರು. ಮಗಧದ ರಾಜ ಬಿಂಬಿಸಾರನು ರಾಜಗೃಹದ 'ವೇಣುವನ' (ಬಿದಿರಿನ ತೋಪು) ವನ್ನು ದಾನವಾಗಿ ನೀಡಿದರೆ, ಅನಾಥಪಿಂಡಿಕ ಎಂಬ ಶ್ರೀಮಂತ ವ್ಯಾಪಾರಿಯು ಇಡೀ ಜೇತವನವನ್ನು ಚಿನ್ನದ ನಾಣ್ಯಗಳಿಂದ ಮುಚ್ಚಿ ಬೌದ್ಧವಿಹಾರವನ್ನು ನಿರ್ಮಿಸಿಕೊಟ್ಟನು. ಇಂತಹ ಕಾರ್ಯಗಳು ಅಂದಿನ ಭಾರತದಲ್ಲಿದ್ದ ಧರ್ಮದ ಮೇಲಿನ ಅಚಲ ನಂಬಿಕೆಯನ್ನು ತೋರಿಸುತ್ತವೆ.

ಬೌದ್ಧವಿಹಾರಗಳು ನಾಲ್ಕು ಉದಾತ್ತ ಸತ್ಯಗಳನ್ನು ಪ್ರಚಾರ ಮಾಡಿದವು: ಆಸೆಯೇ ದುಃಖಕ್ಕೆ ಮೂಲ ಕಾರಣ; ಆಸೆಯನ್ನು ಗೆದ್ದರೆ ಮಾತ್ರ ದುಃಖದಿಂದ ಮುಕ್ತಿ ಸಾಧ್ಯ; ಮತ್ತು ಅಷ್ಟಾಂಗ ಮಾರ್ಗವನ್ನು ಅನುಸರಿಸುವ ಮೂಲಕ ಮನುಷ್ಯನು ನೆಮ್ಮದಿ ಪಡೆಯಬಹುದು.

ಬುದ್ಧನ ಬೋಧನೆಗಳು ಹೀಗಿವೆ: ಭೂತಕಾಲದ ಬಗ್ಗೆ ಚಿಂತಿಸಬೇಡಿ - ವರ್ತಮಾನದಲ್ಲಿ ಬದುಕಿ. ಸತ್ಯಕ್ಕೆ ಹೆಚ್ಚಿನ ಶಕ್ತಿಯಿದೆ. ಮನಸ್ಸು ಎಲ್ಲ ಕ್ರಿಯೆಗಳ ಮೂಲವಾಗಿದೆ, ಆದ್ದರಿಂದ ಸಕಾರಾತ್ಮಕ ಆಲೋಚನೆಗಳನ್ನು ಬೆಳೆಸಿಕೊಳ್ಳಿ. ಕಷ್ಟ ಬಂದಾಗ ಹೆದರಿ ಓಡಬೇಡಿ. ಜೀವನದ ಪಯಣವು ಅಂತಿಮವಾಗಿ ವೈಯಕ್ತಿಕವಾದುದು - ಅದನ್ನು ಆಧ್ಯಾತ್ಮಿಕ ಹಾದಿಯಲ್ಲಿ ಮುನ್ನಡೆಸಿ. ಮಾತುಗಳು ನೋಯಿಸಬಹುದು, ಆದ್ದರಿಂದ ಮೃದುವಾಗಿ ಮಾತನಾಡಿ. ಪ್ರೀತಿ ಮತ್ತು ಅಹಿಂಸೆ ಅತ್ಯಗತ್ಯ. ಯಾವಾಗಲೂ ಕಲಿಕೆಯನ್ನು ಮುಂದುವರಿಸಿ - ಎಂದಿಗೂ ನಿಲ್ಲಿಸಬೇಡಿ. ತಮಿಳು ಸಾಹಿತ್ಯದ ಶ್ರೇಷ್ಠ ಕೃತಿಗಳಾದ ಮಣಿಮೇಖಲೈ ಮತ್ತು ಕುಂಡಲಕೇಸಿ ಬೌದ್ಧ ತತ್ವಶಾಸ್ತ್ರವನ್ನು ಸುಂದರವಾಗಿ ಚಿತ್ರಿಸಿವೆ. ಕಾಲಗತಿಯಲ್ಲಿ ಅನೇಕ ಗ್ರಂಥಗಳು ನಾಶವಾಗಿದ್ದರೂ, ಅವು ನೀಡಿದ ಸಂದೇಶಗಳು ಇಂದಿಗೂ ಅಮೂಲ್ಯವಾಗಿವೆ.



ಬುದ್ಧಿಯನ್ನು ಮಬ್ಬುಗೊಳಿಸುವ ಮಾದಕ ದ್ರವ್ಯಗಳು ಮತ್ತು ಜೀವಹಿಂಸೆಯನ್ನು ಜ್ಞಾನಿಗಳು ಯಾವತ್ತೂ ಒಪ್ಪುವುದಿಲ್ಲ; ಅರಿವುಳ್ಳವರು ಇವುಗಳಿಂದ ದೂರವಿರುತ್ತಾರೆ. ಹುಟ್ಟು-ಸಾವುಗಳು ಮತ್ತು ಸಾವಿನ ನಂತರದ ಮರುಜನ್ಮವು ನಿದ್ರೆ ಮತ್ತು ಎಚ್ಚರದಷ್ಟೇ ಸಹಜವಾದ ಸತ್ಯ. ಯಾರು ಸತ್ಕರ್ಮಗಳನ್ನು ಮಾಡುತ್ತಾರೋ ಅವರು ಉನ್ನತ ಗತಿಯನ್ನು ಪಡೆಯುತ್ತಾರೆ, ಕೆಟ್ಟ ಕೆಲಸ ಮಾಡುವವರು ಅಪಾರ ಸಂಕಟಕ್ಕೆ ಗುರಿಯಾಗುತ್ತಾರೆ. ಈ ಸತ್ಯವನ್ನು ಅರಿತ ವಿವೇಚನಾಶೀಲರು ಲೌಕಿಕ ವ್ಯಾಮೋಹಗಳನ್ನು ಕಡಿದುಕೊಳ್ಳುತ್ತಾರೆ. ಹೀಗೆ ತಮಿಳು ಮಹಾಕಾವ್ಯ ಮಣಿಮೇಖಲೈ ಬೌದ್ಧಧರ್ಮದ ಸಾರವನ್ನು ವಿವರಿಸುತ್ತದೆ. (ಆಧಿರೈ ಪಿಚ್ಚೈಯಿಟ್ಟ ಕಾದೈ: 84-90)

ಬುದ್ಧನು ಐದು ಪ್ರಮುಖ ನೈತಿಕ ಸೂತ್ರಗಳನ್ನು (ಪಂಚಶೀಲ) ಬೋಧಿಸಿದನು: ಅಹಿಂಸೆ, ಕಳ್ಳತನ ಮಾಡದಿರುವುದು, ನೈತಿಕ ನಡವಳಿಕೆ, ಸತ್ಯಸಂಧತೆ ಮತ್ತು ಮಾದಕ ವಸ್ತುಗಳಿಂದ ದೂರವಿರುವುದು. ಕೇವಲ ಧರ್ಮವನ್ನಷ್ಟೇ ಅಲ್ಲದೆ, ಮನಸ್ಸೇ ಎಲ್ಲದಕ್ಕೂ ಮೂಲ ಎಂಬ ಮನೋವೈಜ್ಞಾನಿಕ ಸತ್ಯವನ್ನು ಅವರು ತಿಳಿಸಿಕೊಟ್ಟರು. ಒಳ್ಳೆಯ ಆಲೋಚನೆ ಮತ್ತು ನಡವಳಿಕೆಗಳು ಸಮಾಜದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡುತ್ತವೆ. ಕಂಗೆಟ್ಟ ಮನಸ್ಸುಗಳಿಗೆ ಸ್ಪಷ್ಟತೆ ಮತ್ತು ಜ್ಞಾನದ ಬೆಳಕು ನೀಡಿದ ಕಾರಣಕ್ಕಾಗಿ ಅವರನ್ನು ಏಷ್ಯಾದ ಬೆಳಕು ಎಂದು ಕರೆಯಲಾಗುತ್ತದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಹೇಳಿದ ಮಾತುಗಳು ಇಲ್ಲಿ ನೆನಪಿಗೆ ಬರುತ್ತವೆ: ಭಗವಾನ್ ಗೌತಮ ಬುದ್ಧನ ಜೀವನ ಸಂದೇಶವು ಇಂದಿಗೂ ಪ್ರಸ್ತುತವಾಗಿದೆ. ಶಾಂತಿಯು ನಮ್ಮೊಳಗಿನಿಂದಲೇ ಶುರುವಾಗುತ್ತದೆ ಎಂದು ಅವರು ಕಲಿಸಿದರು. ನಮ್ಮನ್ನು ನಾವು ಗೆಲ್ಲುವುದೇ ಜಗತ್ತಿನ ಶ್ರೇಷ್ಠ ವಿಜಯ ಎಂದು ಅವರು ತೋರಿಸಿಕೊಟ್ಟರು. ಇಂದಿನ ಜಗತ್ತಿನ ಸಂಘರ್ಷ ಮತ್ತು ಉದ್ವಿಗ್ನತೆಗಳ ನಡುವೆ ಬುದ್ಧನ ಬೋಧನೆಗಳು ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿವೆ.

ಬುದ್ಧನ ಬೋಧನೆಗಳಿಗಿರುವ ಶಕ್ತಿಯು ಸಾಮ್ರಾಟ ಅಶೋಕನ ಜೀವನದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಒಬ್ಬ ಯುದ್ಧಕೋರ ಆಡಳಿತಗಾರನನ್ನು ಶಾಂತಿ ಮತ್ತು ಅಹಿಂಸೆಯ ಹರಿಕಾರನನ್ನಾಗಿ ಪರಿವರ್ತಿಸಿದ್ದು ಇದೇ ಬೋಧನೆಗಳು. ಸಾಮ್ರಾಟ ಅಶೋಕನು ದೇಶಾದ್ಯಂತ ಶಾಸನಗಳನ್ನು ಕೆತ್ತಿಸುವ ಮೂಲಕ ಮತ್ತು ಸ್ತೂಪಗಳನ್ನು ನಿರ್ಮಿಸುವ ಮೂಲಕ ಬೌದ್ಧ ಧರ್ಮದ ತತ್ವಗಳನ್ನು ಪ್ರಚಾರ ಮಾಡಿದನು. ಇಂದಿಗೂ ಸಾಂಚಿ ಮತ್ತು ಸಾರನಾಥದ ಸ್ತೂಪಗಳು ವಿಶ್ವದಾದ್ಯಂತ ಪ್ರವಾಸಿಗರನ್ನು ಸೆಳೆಯುತ್ತಿವೆ. ಸಾರನಾಥದ ಅಶೋಕ ಸ್ತೂಪದ 'ಸಿಂಹದ ಲಾಂಛನ'ವೇ ಇಂದು ಭಾರತದ ಅಧಿಕೃತ ರಾಷ್ಟ್ರೀಯ ಲಾಂಛನವಾಗಿದೆ. ಅಶೋಕನು ಕೇವಲ ದೇಶದೊಳಗೆ ಮಾತ್ರವಲ್ಲದೆ, ಬಿಕ್ಕುಗಳ ಸಹಾಯದೊಂದಿಗೆ ಏಷ್ಯಾದಾದ್ಯಂತ ಬೌದ್ಧ ಧರ್ಮವನ್ನು ಹರಡಿದನು. ಆತನ ಮಗ ಮಹಿಂದನು ಶ್ರೀಲಂಕಾಕ್ಕೆ ಬುದ್ಧನ ಸಂದೇಶಗಳನ್ನು ಕೊಂಡೊಯ್ದನು. ಬೌದ್ಧ ಬಿಕ್ಕುಗಳು ತಮಿಳುನಾಡಿನಲ್ಲೂ ಧರ್ಮ ಪ್ರಚಾರ ಮಾಡಿದ್ದರು ಎಂಬುದಕ್ಕೆ ಅಲ್ಲಿನ ಹಲವಾರು ಪ್ರದೇಶಗಳಲ್ಲಿ ಇಂದಿಗೂ ಕಂಡುಬರುವ ಬೌದ್ಧಧರ್ಮದ ಕುರುಹುಗಳೇ ಸಾಕ್ಷಿ.

ಬೌದ್ಧ ಬಿಕ್ಕುಗಳು ಯಾವುದೇ ತಾರತಮ್ಯವಿಲ್ಲದೆ ಜನರಿಗೆ ಉಚಿತವಾಗಿ ವೈದ್ಯಕೀಯ ನೆರವು ಮತ್ತು ಶಿಕ್ಷಣವನ್ನು ನೀಡುತ್ತಿದ್ದರು. ಅವರು ಪವಿತ್ರ 'ತ್ರಿಪಿಟಕ' ಗ್ರಂಥಗಳನ್ನು ಬೋಧಿಸುತ್ತಾ, ಆಕರ್ಷಕವಾದ 'ಜಾತಕ ಕಥೆ'ಗಳನ್ನು ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ಜನರಲ್ಲಿ ಅರಿವು ಮೂಡಿಸಲು ಮತ್ತು ಮಾನಸಿಕ ಶಾಂತಿಗಾಗಿ ಧ್ಯಾನದ ಅಭ್ಯಾಸಗಳನ್ನು ಕಲಿಸಿಕೊಡುತ್ತಿದ್ದರು.

ದಾನ ಮಾಡುವುದು, ಅದರಲ್ಲೂ ವಿಶೇಷವಾಗಿ ಹಸಿದವರಿಗೆ ಅನ್ನದಾನ ಮಾಡುವುದು ಒಂದು ಪರಮ ಧರ್ಮವೆಂದು ಪರಿಗಣಿಸಲಾಗಿತ್ತು. ಹಸಿದವರಿಗೆ ಊಟ ಹಾಕುವುದು ಎಂದರೆ ಅವರಿಗೆ ಮರುಜೀವ ನೀಡುವುದಕ್ಕೆ ಸಮಾನ ಎಂಬ ಉದಾತ್ತ ಚಿಂತನೆಯನ್ನು ತಮಿಳು ಸಾಹಿತ್ಯವು ಸಾರುತ್ತದೆ.

ನಮ್ಮ ಈ ಪುಣ್ಯಭೂಮಿಯಲ್ಲಿ ಸಾವಿರಾರು ವರ್ಷಗಳಿಂದ ವಿವಿಧ ಆಧ್ಯಾತ್ಮಿಕ ಚಿಂತನೆಗಳು ಮತ್ತು ತತ್ವಶಾಸ್ತ್ರಗಳು ಹುಟ್ಟಿ ಬೆಳೆದಿವೆ. ಅದು ಬೌದ್ಧಧರ್ಮವಿರಲಿ ಅಥವಾ ಜೈನಧರ್ಮವಿರಲಿ, ಯಾವುದೇ ಧರ್ಮವನ್ನಾದರೂ ಭಾರತದಾದ್ಯಂತ ಏಕತೆಯ ಭಾವದಿಂದ ಸ್ವೀಕರಿಸಲಾಗಿದೆ. ಇದು ನಮ್ಮ ದೇಶವು ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಮೊದಲಿನಿಂದಲೂ ಒಂದೇ ಎಂಬ ಸತ್ಯವನ್ನು ಸಾಬೀತುಪಡಿಸುತ್ತದೆ. ನಿರಂತರ ಕಲಿಕೆಗೆ ಒತ್ತು ನೀಡಿದ ಬೌದ್ಧಧರ್ಮವು, ಅತ್ಯಂತ ದೊಡ್ಡ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮತ್ತು ಗ್ರಂಥಾಲಯಗಳನ್ನು ನಿರ್ಮಿಸಿತು. ಸುಮಾರು 5 ಶತಮಾನದಷ್ಟು ಹಿಂದೆಯೇ, ನಳಂದಾ ವಿಶ್ವವಿದ್ಯಾನಿಲಯವು ಜಗತ್ತಿನ ಶ್ರೇಷ್ಠ ಕಲಿಕಾ ಕೇಂದ್ರವಾಗಿ ಹೊರಹೊಮ್ಮಿತ್ತು. ಅಲ್ಲಿ ಸುಮಾರು 10,000 ವಿದ್ಯಾರ್ಥಿಗಳು ಮತ್ತು 1,500 ಶಿಕ್ಷಕರು ಅಧ್ಯಯನ ಹಾಗೂ ಬೋಧನೆಯಲ್ಲಿ ತೊಡಗಿದ್ದರು ಎಂಬುದು ಹೆಮ್ಮೆಯ ವಿಷಯ.

ನಳಂದಾದಂತೆಯೇ, ತಮಿಳುನಾಡಿನ ಕಾಂಚೀಪುರಂನಲ್ಲೂ ಒಂದು ಸುಪ್ರಸಿದ್ಧ ವಿಶ್ವವಿದ್ಯಾನಿಲಯವಿತ್ತು ಎಂದು ಇತಿಹಾಸದ ದಾಖಲೆಗಳು ಹೇಳುತ್ತವೆ. ವಿಕ್ರಮಶಿಲಾ ಮತ್ತು ಓದಂತಪುರಿಯಂತಹ ವಿಶ್ವವಿದ್ಯಾನಿಲಯಗಳು ಹಾಗೂ ಅಲ್ಲಿ ರಚಿತವಾದ ಅಪಾರ ಸಾಹಿತ್ಯ ಕೃತಿಗಳು, ಭಾರತದ ಬೌದ್ಧಿಕ ಶಕ್ತಿಯನ್ನು ಇಡೀ ಜಗತ್ತಿಗೆ ಪರಿಚಯಿಸಿದವು. ಬೌದ್ಧ ಶಿಕ್ಷಣ ಕೇಂದ್ರಗಳಲ್ಲಿ ಕಲಿಯಲು ಏಷ್ಯಾದ ಮೂಲೆ ಮೂಲೆಗಳಿಂದ ವಿದ್ವಾಂಸರು ಭಾರತಕ್ಕೆ ಬರುತ್ತಿದ್ದರು. ಚೀನಾದ ಪ್ರಸಿದ್ಧ ಬಿಕ್ಕು ಫಾಹಿಯಾನ್, ಬೌದ್ಧಧರ್ಮದ ಅಧ್ಯಯನಕ್ಕಾಗಿಯೇ ಭಾರತದಲ್ಲಿ 15 ವರ್ಷಗಳ ಕಾಲ ಸಂಚರಿಸಿದ್ದರು. ಹಾಗೆಯೇ, ಮತ್ತೊಬ್ಬ ಚೀನೀ ಬಿಕ್ಕು ಹ್ಯುಯೆನ್ ತ್ಸಾಂಗ್ ಅವರು 16 ವರ್ಷಗಳ ಕಾಲ ಭಾರತದಲ್ಲಿದ್ದು, ನಳಂದಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿದ್ದಲ್ಲದೆ ಅಮೂಲ್ಯ ಗ್ರಂಥಗಳನ್ನು ಸಂಗ್ರಹಿಸಿ ತಮ್ಮ ದೇಶಕ್ಕೆ ಕೊಂಡೊಯ್ದರು. ಹ್ಯುಯೆನ್ ತ್ಸಾಂಗ್ ಬರೆದಿರುವ ಪ್ರವಾಸ ಕಥನಗಳ ಪ್ರಕಾರ, ಅವರು ತಮಿಳುನಾಡಿನ ಕಾಂಚೀಪುರಂಗೆ ಭೇಟಿ ನೀಡಿದ್ದರು. ಅಲ್ಲಿನ ಬೌದ್ಧ ವಿಶ್ವವಿದ್ಯಾನಿಲಯದಲ್ಲಿ ಉಳಿದುಕೊಂಡು ಹಸ್ತಪ್ರತಿಗಳನ್ನು ನಕಲು ಮಾಡಿಕೊಂಡಿದ್ದರು. ಅಷ್ಟೇ ಅಲ್ಲದೆ, ಅಲ್ಲಿನ ವಿದ್ಯಾರ್ಥಿಗಳಿಗಾಗಿ ಅವರು ವಿಶೇಷ ಉಪನ್ಯಾಸಗಳನ್ನು ನೀಡಿದ್ದರು ಎಂಬ ಮಾಹಿತಿ ಇದೆ.

ತೀವ್ರವಾದ ತಪಸ್ಸಿನಿಂದಾಗಿ ಬುದ್ಧನು ದೈಹಿಕವಾಗಿ ಬಹಳ ಬಳಲಿದ್ದನು. ಆತನ ಸ್ಥಿತಿಯನ್ನು ಕಂಡು ಕನಿಕರಗೊಂಡ ಸುಜಾತೆ, ಪ್ರೀತಿಯಿಂದ ಹಾಲಿನ ಪಾಯಸವನ್ನು (ಕ್ಷೀರಾನ್ನ) ಅರ್ಪಿಸಿದಳು. ಇದು ಬುದ್ಧನಿಗೆ ಪುನಶ್ಚೇತನ ನೀಡಿ ಪ್ರಾಣ ಉಳಿಸಿದ್ದಲ್ಲದೆ, ಬೋಧಿ ವೃಕ್ಷದ ಅಡಿಯಲ್ಲಿ ಜ್ಞಾನೋದಯಕ್ಕಾಗಿ ಧ್ಯಾನ ಮಾಡಲು ಬೇಕಾದ ಶಕ್ತಿಯನ್ನು ನೀಡಿತು. ಆಕೆಯ ಈ ಮಮತೆ ಮತ್ತು ದಯೆಯ ನೆನಪಿಗಾಗಿ, ಇಂದಿಗೂ ಬುದ್ಧ ಪೂರ್ಣಿಮೆಯ ದಿನದಂದು ಪಾಯಸವನ್ನು ತಯಾರಿಸಿ ಅರ್ಪಿಸುವ ಸಂಪ್ರದಾಯವಿದೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 287

ಸಮಾಚಾರ ಸಣ್ಣದಲ್ಲ

ಲಡಾಖ್‌ನಲ್ಲಿ 4.1 ತೀವ್ರತೆ ಭೂಕಂಪ

ಲೆಹ್: ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ ಗುರುವಾರ ಮುಂಜಾನೆ 3.54ರ ವೇಳೆಯಲ್ಲಿ ಭೂಕಂಪವಾಗಿದ್ದು, ರಿಕ್ಟರ್ ಮಾಪಕದಲ್ಲಿ 4.1ರಷ್ಟು ತೀವ್ರತೆ ದಾಖಲಾಗಿದೆ. ಲೆಹ್‌ನಲ್ಲಿ 150 ಕಿ.ಮೀ ಆಳದಲ್ಲಿ ಕಂಪನದ ಕೇಂದ್ರಬಿಂದು ಪತ್ತೆಯಾಗಿದೆ. ಇದೇ ಸಮಯದಲ್ಲಿ ಅಫ್ಘಾನಿಸ್ತಾನದಲ್ಲಿಯೂ 4.3 ತೀವ್ರತೆಯ ಭೂಕಂಪವಾಗಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ತಿಳಿಸಿದೆ. ಭೂಕಂಪವಾದಾಗ ಮನೆಗಳಲ್ಲಿ ಮಲಗಿದ್ದ ನಿವಾಸಿಗಳು ತಕ್ಷಣವೇ ಹೊರಗೆ ಓಡಿ ಬಂದಿದ್ದಾರೆ. ಮಧ್ಯಮ ಪ್ರಮಾಣದ ತೀವ್ರತೆಯ ಭೂಕಂಪ ಇದಾಗಿರುವುದರಿಂದ ಸುದೈವವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ.

ಕಚ್ಚಾತೈಲ ಧಾರಣೆ ಶೇ.6ರಷ್ಟು ಏರಿಕೆ

ಟೆಹರಾನ್: ಅಮೆರಿಕ-ಇರಾನ್ ನಡುವಿನ ಶಾಂತಿ ಮಾತುಕತೆ ಅನಿಶ್ಚಿತವಾಗಿದೆ. ಇನ್ನೊಂದೆಡೆ ಹೊರ್ಮುಜ್ ಜಲಸಂಧಿಯಲ್ಲಿನ ಅಮೆರಿಕ ನೌಕಾಪಡೆಯ ದಿಗ್ಬಂಧನ ಮುಂದುವರಿದಿದೆ. ಇವೆರಡೂ ಅಂಶಗಳು ಜಾಗತಿಕ ಕಚ್ಚಾತೈಲ ಮಾರುಕಟ್ಟೆಯ ಮೇಲೆಯೂ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕ್ರೂಡ್ ಆಯಿಲ್ ಬ್ಯಾರಲ್ ಧಾರಣೆ ಶೇ.6.08ರಷ್ಟು ಏರಿಕೆ ಕಂಡು 126 ಡಾಲರ್‌ಗಳಿಗೆ ಮುಟ್ಟಿದ್ದರೆ, ಯುಎಸ್ ಕ್ರೂಡ್ ಆಯಿಲ್ ಶೇ.6.95ರಷ್ಟು ಹೆಚ್ಚಳವಾಗಿದ್ದು, ಬ್ಯಾರಲ್‌ಗೆ 116 ಡಾಲರ್ ಲೆಕ್ಕದಲ್ಲಿ ವಹಿವಾಟು ನಡೆಸುತ್ತಿದೆ. 2 ತಿಂಗಳು ನಂತರದಲ್ಲಿ ಅಂದರೆ ಜೂನ್‌ಗೆ ಸರಬರಾಜಾಗುವ ಬ್ರೆಂಟ್ ಕ್ರೂಡ್ ಆಯಿಲ್ ಧಾರಣೆ ಗುರುವಾರದ ವಹಿವಾಟಿನಲ್ಲಿ ಬ್ಯಾರಲ್‌ಗೆ 119.94 ಡಾಲರ್‌ಗಳಿಗೆ ಮುಟ್ಟಿದ್ದರೆ, ಯುಎಸ್ ಕ್ರೂಡ್ ಆಯಿಲ್‌ಗೆ ಜೂನ್ ಮಾರಾಟ ದರ 107.51ಕ್ಕೆ ಏರಿಕೆ ಕಂಡಿತು.

ಜೀತು ಮುಂಡಾಗೆ ಸಿಕ್ಕ ಬ್ಯಾಂಕ್ ಠೇವಣಿ ಮೊತ್ತ

ಭುವನೇಶ್ವರ: ಒಡಿಶಾ ರಾಜ್ಯದ ಬುಡಕಟ್ಟು ಸಮುದಾಯದ ಅನಕ್ಷರಸ್ಥ ಜೀತು ಮುಂಡಾನ ದಿವಂಗತ ಅಕ್ಕ ಬ್ಯಾಂಕ್‌ನಲ್ಲಿ ಠೇವಣಿಯಾಗಿರಿಸಿದ್ದ ಹಣ 19,402 ರು. ಕಡೆಗೂ ಜೀತುವಿಗೆ ಸಿಕ್ಕಿದೆ. ಮರಣಪ್ರಮಾಣಪತ್ರ ಕೇಳಿದ್ದಕ್ಕೆ ಜೀತು ತನ್ನ ಅಕ್ಕನ ಶವವನ್ನೇ ಸ್ಮಶಾನದಿಂದ ಹೊರತೆಗೆದು ಹೆಗಲ ಮೇಲೆ ಹಾಕಿಕೊಂಡು ಬ್ಯಾಂಕ್ ಶಾಖೆಗೆ ಕೊಂಡೊಯ್ದಿದ್ದ. ಇದರಿಂದ ಬ್ಯಾಂಕ್ ಸಿಬ್ಬಂದಿ ಆಘಾತಕ್ಕೊಳಗಾಗಿದ್ದರು. ಈ ಘಟನೆ 3 ದಿನಗಳ ಹಿಂದೆ ದೇಶಾದ್ಯಂತ ಚರ್ಚೆಗೆ ಕಾರಣವಾಗಿತ್ತು.

ವಿಶ್ವದ ಹಲವು ದೇಶಗಳ ಸೇನಾಪಡೆಗಳಲ್ಲಿ ರೊಬೊ ಶ್ವಾನಗಳಿವೆ. ಜರ್ಮನಿ ಸಂಗ್ರಹಾಲಯದಲ್ಲಿನ ವಿಶೇಷವೆಂದರೆ ಆಟಿಕೆ ರೀತಿಯ ರೊಬೊ ಡಾಗ್ ಮುಖಭಾಗದಲ್ಲಿ ವಿಶ್ವದ ಸಿರಿವಂತ ಉದ್ಯಮಿಗಳು, ಟೆಕ್ ಜಗತ್ತಿನ ದಿಗ್ಗಜರನ್ನು ಹೋಲುವ ಫೈಬರ್ ಶಿರಗಳನ್ನು ಜೋಡಿಸಲಾಗಿದೆ. ಈ ರೊಬೊ ಶ್ವಾನಗಳ ಸೃಷ್ಟಿಕರ್ತ ಮೈಕ್ ವಿಂಕಲ್‌ಮನ್ ತಮ್ಮ ಯಾಂತ್ರಿಕ ಶ್ವಾನಗಳಿಗೆ ಎಲಾನ್ ಮಸ್ಕ್, ಮಾರ್ಕ್ ಝುಕರ್‌ಬರ್ಗ್, ಜೆಫ್ ಬಿಜೋಸ್ ಮೊದಲಾದವರನ್ನು ಹೋಲುವ ಮುಖಗಳನ್ನು ಅಳವಡಿಸಿದ್ದಾರೆ.

ಪಿಜಿಡಿಸಿಸಿಗೆ ಮಾನ್ಯತೆ: 'ಎನ್‌ಎಂಸಿ' ಸಮ್ಮತಿ

ದೆಹಲಿ: 'ಪೋಸ್ಟ್ ಗ್ರ್ಯಾಜುಯೇಷನ್ ಕ್ಲಿನಿಕಲ್ ಕಾರ್ಡಿಯಾಲಜಿ ಡಿಪ್ಲೊಮಾ'(ಪಿಜಿಡಿಸಿಸಿ) ಶಿಕ್ಷಣಕ್ಕೆ ಮಾನ್ಯತೆ ನೀಡುವುದಕ್ಕೆ ಕಡೆಗೂ 'ನ್ಯಾಷನಲ್ ಮೆಡಿಕಲ್ ಕೌನ್ಸಿಲ್'(ಎನ್‌ಎಂಸಿ) ಸಮ್ಮತಿಸಿದೆ. 20 ವರ್ಷಗಳಷ್ಟು ಸುದೀರ್ಘ ಕಾಯುವಿಕೆಯು ಕೊನೆಗೊಂಡಂತಾಗಿದೆ. ಎಂಎನ್‌ಸಿಯ ಈ ನಿರ್ಧಾರದಿಂದಾಗಿ 2006ರಿಂದ 2013ರ ನಡುವಿನ ಅವಧಿಯಲ್ಲಿ ಹೃದ್ರೋಗ ಚಿಕಿತ್ಸೆ ಸಂಬಂಧದ ಅಲ್ಪಾವಧಿಯ ಸ್ನಾತಕೋತ್ತರ ಡಿಪ್ಲೊಮಾ ವ್ಯಾಸಂಗ ಮಾಡಿದ್ದ 1700 ವೈದ್ಯರಿಗೆ ಪರಿಹಾರ ಸಿಕ್ಕಿದೆ. ಅವರ ಕಾರ್ಡಿಯಾಲಜಿ ಡಿಪ್ಲೊಮಾಗೆ ಮಾನ್ಯತೆ ಸಿಕ್ಕಿದೆ. 20 ವರ್ಷಗಳ ಹಿಂದೆ 'ಪಿಜಿಡಿಸಿಸಿ' ಕೋರ್ಸ್ ಆರಂಭಿಸಿದ್ದ ಇಂದಿರಾಗಾಂಧಿ ನ್ಯಾಷನಲ್ ಓಪನ್ ಯುನಿವರ್ಸಿಟಿ(ಮುಕ್ತ ವಿವಿ), ಬಳಿಕ 'ಎನ್‌ಎಂಸಿ'ಯಿಂದ ಡಿಪ್ಲೊಮಾ ಶಿಕ್ಷಣಕ್ಕೆ ಮಾನ್ಯತೆ ಸಿಗದೇ ಇದ್ದುದರಿಂದ ಆ ಕೋರ್ಸ್ ಅನ್ನೇ ಮುಕ್ತ ವಿವಿ 2013ರಲ್ಲಿ ಸ್ಥಗಿತಗೊಳಿಸಿತ್ತು.

{ ರಾಜನಾಥ್ ಸಿಂಗ್ } ರಕ್ಷಣಾ ಸಚಿವ

ಪಾಕಿಸ್ತಾನ ವಿರುದ್ಧ ಸುದೀರ್ಘ ಯುದ್ಧಕ್ಕೂ ಸಿದ್ಧವಾಗಿದ್ದೆವು. ಪಾಕ್‌ನ ಅಣ್ವಸ್ತ್ರ ದಾಳಿ ಬೆದರಿಕೆಗೇನೂ ಭಾರತ ಹೆದರಿರಲಿಲ್ಲ. ಒತ್ತಡಕ್ಕೆ ಮಣಿದು ಆಪರೇಷನ್ ಸಿಂದೂರ್ ನಿಲ್ಲಿಸಲಿಲ್ಲ. ಭಾರತದ್ದೇ ಸ್ವಂತ ನಿರ್ಧಾರ. ಷರತ್ತುಗಳನ್ನು ವಿಧಿಸಿಯೇ ಯುದ್ಧ ನಿಲ್ಲಿಸಿದೆವು. ಪಾಕ್ ಭಯೋತ್ಪಾದನೆ ಕೇಂದ್ರ. ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತೊಗೆಯಬೇಕಿದೆ.



132 ಕೋಟಿ ರು. ಮೌಲ್ಯದ ಅಪರೂಪದ ಕಲಾಕೃತಿಗಳು ಭಾರತಕ್ಕೆ | ಶ್ರೀ ಅವಲೋಕಿತೇಶ್ವರ, ನರ್ತನ ಗಣೇಶನ ಮರಳು ಶಿಲ್ಪ ವಾಪಸ್

ಭಾರತದಿಂದ ಕಳುವಾಗಿದ್ದ 657 ಕಲಾಕೃತಿ ಅಮೆರಿಕದಿಂದ ವಾಪಸ್

ದೆಹಲಿ: ಭಾರತದಿಂದ ದಶಕಗಳ ಅವಧಿಯಲ್ಲಿ ಕಳುವಾಗಿ ಅಮೆರಿಕದ ವಿವಿಧ ಸಂಗ್ರಹಾಲಯಗಳನ್ನು ಸೇರಿಕೊಂಡಿದ್ದ ಅಪರೂಪದ ಶಿಲ್ಪ-ಲೋಹದ 657 ಕಲಾಕೃತಿಗಳನ್ನು ಅಮೆರಿಕ ಸರಕಾರ ಹಿಂದಿರುಗಿಸಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ 1.40 ಕೋಟಿ ಡಾಲರ್(132 ಕೋಟಿ ರು.)ಗಳಷ್ಟು ಬೆಲೆ ಬಾಳುವ ಈ ವಿಶಿಷ್ಟ ಕಲಾಕೃತಿಗಳು, ಸ್ಮರಣಿಕೆಗಳನ್ನು ಸ್ನೇಹ ಸಂಬಂಧ ವೃದ್ಧಿಯ ಭಾಗವಾಗಿ ಅಮೆರಿಕ ಸರಕಾರ ಭಾರತಕ್ಕೆ ಉಡುಗೊರೆ ರೂಪದಲ್ಲಿ ಕಳುಹಿಸಿಕೊಟ್ಟಿದೆ.

ಸಾಂಸ್ಕೃತಿಕ ಆಸ್ತಿಗಳ ಜಾಗತಿಕ ಕಳ್ಳಸಾಗಣೆ ಜಾಲದ ವಿರುದ್ಧ ಅಮೆರಿಕ ಸರಕಾರ ಕಠಿಮ ಕ್ರಮ ತೆಗೆದುಕೊಂಡಿದ್ದರಿಂದ ಭಾರತಕ್ಕೆ ದೊಡ್ಡ ಪ್ರಮಾಣದ ಲಾಭವಾಗಿದೆ. ಅಮೆರಿಕ ಸರಕಾರ ತೆಗೆದುಕೊಂಡ ಈ ಮಹತ್ವದ ನಿರ್ಧಾರದಿಂದ ಭಾರತದ ಅಸ್ಮಿತೆ, ಸಂಸ್ಕೃತಿ, ಇತಿಹಾಸದ ಭಾಗವಾಗಿದ್ದ ಕಲಾಕೃತಿಗಳು ಕಡೆಗೂ ದೇಶಕ್ಕೆ ಮರಳಿದಂತಾಗಿದೆ.

ಅಮೆರಿಕದ ಮ್ಯಾನ್‌ಹಾಟನ್ ಡಿಸ್ಟ್ರಿಕ್ಟ್ ಅಟಾರ್ನಿ ಆಲ್ವಿನ್ ಬ್ರಾಗ್ ಅವರು, ಒಟ್ಟು 1.40 ಕೋಟಿ ಡಾಲರ್(132 ಕೋಟಿ ರು.) ಮೌಲ್ಯದ 657 ಪ್ರಾಚೀನ ವಸ್ತುಗಳನ್ನು ಭಾರತಕ್ಕೆ ಹಸ್ತಾಂತರಿಸಲಾಗುತ್ತಿದೆ. ಭಾರತದ ಸಾಂಸ್ಕೃತಿಕ ಪರಂಪರೆ ಗುರಿಯಾಗಿಸಿಕೊಂಡಿರುವ ಅಂತಾರಾಷ್ಟ್ರೀಯ ಮಟ್ಟದ ಕಳ್ಳಸಾಗಣೆ ಜಾಲ ಅದೆಷ್ಟು ಬಲವಾಗಿದೆ ಎಂಬುದಕ್ಕೆ ಒಂದೇ ಬಾರಿಗೆ 657 ಅಪರೂಪದ ಕಲಾಕೃತಿಗಳನ್ನು ಭಾರತಕ್ಕೆ ಹಿಂದಿರುಗಿಸಿರುವುದೇ ಸಾಕ್ಷಿ ಎಂದು ಮಂಗಳವಾರ ಆಯೋಜಿಸಿದ್ದ ಕಲಾಕೃತಿಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಹೇಳಿದರು.

ಈ ಸಂದರ್ಭ ನ್ಯೂಯಾರ್ಕ್ ನಗರದಲ್ಲಿನ ಭಾರತದ ಕಾನ್ಸುಲೇಟ್ ಜನರಲ್‌ನ ಕೌನ್ಸಲ್ ರಾಜಲಕ್ಷ್ಮಿ ಕದಂ ಅವರೂ ಹಾಜರಿದ್ದರು. ಈ ಕಲಾಕೃತಿಗಳನ್ನು ಮರಳಿ ಪಡೆದು ಭಾರತಕ್ಕೆ ಹಸ್ತಾಂತರಿಸುವುದಕ್ಕೆ ಹಲವು ವರ್ಷಗಳ ಕಾಲ ಅಂತರರಾಷ್ಟ್ರೀಯ ಮಟ್ಟದ ತನಿಖೆ ನಡೆಸಲಾಗಿದೆ. ಇದು ಇಷ್ಟಕ್ಕೆ ಮುಗಿದಿಲ್ಲ. ಭಾರತದಿಂದ ಕಳುವಾಗಿ ಅಮೆರಿಕಕ್ಕೆ ತಲುಪಿರುವ ಇನ್ನೂ ಹಲವಾರು ಕಲಾಕೃತಿಗಳನ್ನು ಮರಳಿ ನಮ್ಮ ದೇಶಕ್ಕೆ ತಲುಪಿಸಬೇಕಾದ ಕೆಲಸ ಬಾಕಿಯಿದೆ ಎಂದು ನ್ಯೂಯಾರ್ಕ್ ನಗರದಲ್ಲಿನ ಭಾರತದ ಕಾನ್ಸುಲೇಟ್ ಜನರಲ್‌ನ ಕೌನ್ಸಲ್ ಜನರಲ್ ಬಿನಯಾ ಪ್ರಧಾನ್ ಹೇಳಿದ್ದಾರೆ.

ಇದೇ ಮೊದಲಲ್ಲ: ಈ ಹಿಂದೆ 2022ರ ಅಕ್ಟೋಬರ್‌ನಲ್ಲಿಯೂ ಅಮೆರಿಕ ಸರಕಾರ ಭಾರತಕ್ಕೆ ಸೇರಿದ 307 ಪುರಾತನ ಕಲಾಕೃತಿಗಳನ್ನು ಹಿಂದಿರುಗಿಸಿತ್ತು. ಈ ಕಲಾಕೃತಿಗಳಲ್ಲಿ ಹೆಚ್ಚಿನವು ಅಂತಾರಾಷ್ಟ್ರೀಯ ಕಳ್ಳಸಾಗಣೆದಾರ ಸುಭಾಷ್ ಕಪೂರ್ ಸಂಗ್ರಹಾಲಯದಲ್ಲಿದ್ದವು. 2020ರಿಂದ 2024ರ ನಡುವಿನ 5 ವರ್ಷಗಳ ಅವಧಿಯಲ್ಲಿ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯ, ಕೆನಡಾ, ಇಟಲಿ, ಥಾಯ್ಲೆಂಡ್ ದೇಶಗಳಿಂದ 610 ಕಲಾಕೃತಿಗಳು ಭಾರತಕ್ಕೆ ವಾಪಸಾಗಿವೆ.

ಅಮೆರಿಕದ ಮ್ಯಾನ್‌ಹಾಟನ್ ಡಿಸ್ಟ್ರಿಕ್ಟ್ ಅಟಾರ್ನಿ ಅಲ್ವಿನ್ ಬ್ರಾಗ್ ಸುದ್ದಿಗೋಷ್ಠಿಯಲ್ಲಿ ಭಾರತಕ್ಕೆ ಅಪರೂಪದ ಕಲಾಕೃತಿಗಳನ್ನು ವಾಪಸ್ ಮಾಡುತ್ತಿರುವುದನ್ನು ಪ್ರಕಟಿಸಿದರು.

ಅವಲೋಕಿತೇಶ್ವರ ಪ್ರತಿಮೆ ಮೌಲ್ಯ 20 ಲಕ್ಷ ಡಾಲರ್

ಅಮೆರಿಕ ಸರಕಾರ ಈ ಬಾರಿ ಹಿಂದಿರುಗಿಸಿರುವ ಕಲಾಕೃತಿಗಳಲ್ಲಿಯೇ ಅವಲೋಕಿತೇಶ್ವರನ ಕಂಚಿನ ಪ್ರತಿಮೆ ಬಹಳ ಪ್ರಮುಖವಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದುರ ಮೌಲ್ಯ 20 ಲಕ್ಷ ಡಾಲರ್‌ಗಳಾಗಿದೆ. 1939ರಲ್ಲಿ ಲಕ್ಷ್ಮಣ ದೇವಾಲಯದ ಬಳಿ ಪತ್ತೆಯಾದ ನಿಧಿಯಲ್ಲಿಯೇ ಈ ಅಪರೂಪದ ಪ್ರತಿಮೆಯೂ ಸಿಕ್ಕಿತ್ತು. ನಂತರ ಅದನ್ನು ರಾಯಪುರದ ಮಹಾಂತ ಘಾಸಿದಾಸ್ ಸ್ಮಾರಕ ವಸ್ತುಸಂಗ್ರಹಾಲಯಕ್ಕೆ ಒಪ್ಪಿಸಲಾಗಿತ್ತು. 1982ರಲ್ಲಿ ವಸ್ತು ಸಂಗ್ರಹಾಲಯದಿಂದ ಅದು ಕಳುವಾಯಿತು. ಭಾರತದಿಂದ ಅಮೆರಿಕಕ್ಕೆ ಕಳ್ಳಸಾಗಣೆ ಜಾಲದಲ್ಲಿ ರವಾನೆಯಾಯಿತು. ಹಲವು ವರ್ಷಗಳ ನಂತರ ನ್ಯೂಯಾಕ್‌ರ್‌ನ ಖಾಸಗಿ ಸಂಗ್ರಹಾಗಾರದಲ್ಲಿ ಕಾಣಿಸಿಕೊಂಡಿತು. 2025ರಲ್ಲಿ ಕಾರ್ಯಾಚರಣೆಗಿಳಿದ ಅಮೆರಿಕ ಅಧಿಕಾರಿಗಳು ಅವಲೋಕಿತೇಶ್ವರ ಕಂಚಿನ ಪ್ರತಿಮೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಈ 656 ಕೃತಿಗಳ ಜತೆಗೆ ವಾಪಸ್ ಮಾಡಿದ್ದಾರೆ.

ವಿಗ್ರಹಚೋರ ಸುಭಾಷ್ ಕಪೂರ್ ತ.ನಾಡು ಜೈಲಲ್ಲಿ

ಭಾರತದಿಂದ ಅಪರೂಪದ ಕಲಾಕೃತಿಗಳನ್ನು ಕದ್ದು ಮಾರುವ ಜಾಲದ ಪ್ರಮುಖ ಕಳ್ಳಸಾಗಣೆದಾರ ಸುಭಾಷ್ ಕಪೂರ್ ಸದ್ಯ ತಮಿಳುನಾಡಿನ ಸೆರಮನೆಯಲ್ಲಿ 10 ವರ್ಷಗಳ ಜೈಲು ಶಿಕ್ಷೆ ಅನುಭವಿಸು ತ್ತಿದ್ದಾನೆ. ಸುಭಾಷ್ ಕಪೂರ್‌ನ ವಿರುದ್ಧ 2012ರಲ್ಲಿಯೇ ಬಂಧನ ವಾರಂಟ್ ಹೊರಡಿಸಲಾಗಿತ್ತು. ಆತನ 7 ಸಹಚರರನ್ನು 2019ರ ಡಿಸೆಂಬರ್‌ನಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಶಿಕ್ಷೆಗೊಳಪಡಿಸಲಾಗಿದೆ. ಆದರೆ, ಸುಭಾಷ್ ಕಪೂರ್ ಪ್ರಸ್ತುತ ಭಾರತದ ತಮಿಳುನಾಡಿನ ಸೆರೆಮನೆಯಲ್ಲಿರುವುದರಿಂದ ಆತನ ಗಡಿಪಾರಿಗಾಗಿ ಭಾರತಕ್ಕೆ ಮನವಿ ಮಾಡಲಾಗಿದೆ ಎಂದು ಮ್ಯಾನ್‌ಹಟನ್ ಡಿಸ್ಟ್ರಿಕ್ಟ್ ಅಟಾರ್ನಿ ಆಲ್ವಿನ್ ಬ್ರಾಗ್ ತಿಳಿಸಿದ್ದಾರೆ. ಇದೇ ಜಾಲದ ರಂಜೀತ್ ಕನ್ವರ್ ಭಾರತದ ಪುರಾತನ ದೇವಾಲಯಗಳಿಂದ ವಿಗ್ರಹಗಳನ್ನು ಕದಿಯುತ್ತಾನೆ, ವಾಮನ್ ಘಿಯಾ ಅಕ್ರಮ ಮಾರಾಟಕ್ಕೆ ನೆರವಾಗುತ್ತಾನೆ, ನ್ಯಾನ್ಸಿ ವೀನರ್ ಕಳವು ವಸ್ತುಗಳಿಗೆ ನಕಲಿ ದಾಖಲೆ ಸೃಷ್ಟಿಸಿಕೊಡುತ್ತಾನೆ. ಈ ತಂಡ ಭಾರತದಲ್ಲಿ ಕಳವು ಮಾಡಿದ ವಿಗ್ರಹಗಳನ್ನು ಮಧ್ಯವರ್ತಿಗಳ ಮೂಲಕ ಅಮೆರಿಕ ಮತ್ತಿತರ ದೇಶಗಳ ಖಾಸಗಿ ಸಂಗ್ರಹಾಗಾರಗಳಿಗೆ, ಗ್ಯಾಲರಿಗಳಿಗೆ, ಹರಾಜುಗೃಹಗಳಿಗೆ ತಲುಪಿಸಲಾಗುತ್ತದೆ. ಈ ಬೃಹತ್ ಕಳ್ಳಸಾಗಣೆ ಜಾಲದಿಂದ ಈವರೆಗೆ ಒಟ್ಟು 48.50 ಕೋಟಿ ಡಾಲರ್‌ಗೂ ಅಧಿಕ ಮೌಲ್ಯದ 6,200ಕ್ಕೂ ಹೆಚ್ಚು ಅಪರೂಪದ ಕಲಾಕೃತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಅದರಲ್ಲಿ 36 ದೇಶಗಳಿಗೆ ಸೇರಿದ 5,900 ಕಲಾಕೃತಿಗಳನ್ನು ಹಿಂದಿರುಗಿಸಲಾಗಿದೆ ಎಂದು ಬ್ರಾಗ್ ವಿವರಿಸಿದರು.

ಮರಳುಗಲ್ಲಿನಲ್ಲಿ ಕೆತ್ತಿದ ಶ್ರೀನರ್ತನ ಗಣೇಶ ಶಿಲ್ಪ

ಮರಳುಗಲ್ಲಿನಲ್ಲಿ ಕೆತ್ತಿರುವ ಬಲು ಅಪರೂಪದ ಶ್ರೀನರ್ತನ ಗಣೇಶ ಶಿಲ್ಪ ಮಧ್ಯಪ್ರದೇಶದ ಪುರಾತನ ದೇವಾಲಯದಿಂದ 2000ರಲ್ಲಿ ಕಳವಾಯಿತು. ಕಲಾಕೃತಿಗಳ ಕಳವು ಜಾಲದ ವರ್ತಕ



ವಾಮನ್ ಘಿಯಾ ಕೈಸೇರಿತು. ಬಳಿಕ ಹಲವು ಕೈಗಳಿಗೆ ಬದಲಾಗುತ್ತಾ ಕಡೆಗೆ ಅಮೆರಿಕ ಸೇರಿತು. ಕಳ್ಳಸಾಗಣೆ ಜಾಲದ ನ್ಯಾನ್ಸಿ ವೀನರ್ ಎಂಬಾತ ಈ ಕಲಾಕೃತಿಯ ಒಡೆತನಕ್ಕೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, 2012ರಲ್ಲಿ ಕ್ರಿಸ್ಟೀಸ್ ನ್ಯೂಯಾರ್ಕ್ ಹರಾಜು ಮನೆಯಲ್ಲಿ ಮಾರಾಟ ಮಾಡಿದ ಎಂದು ಅಮೆರಿಕದ ಪ್ರಾಚೀನ ವಸ್ತುಗಳ ಕಳವು ಜಾಲದ ಬೆನ್ನು ಹತ್ತಿರುವ ತನಿಖಾಧಿಕಾರಿಗಳು ಹೇಳಿದ್ದಾರೆ.

ಬುದ್ಧ ಪ್ರತಿಮೆ: 'ಅಭಯ ಮುದ್ರೆ'ಯ ಕೆಂಪು ಮರಳುಗಲ್ಲಿನ ಬುದ್ಧನ ಪ್ರತಿಮೆ ಈಗ ಭಾರತಕ್ಕೆ ವಾಪಸಾಗಿರುವ ಕಲಾಕೃತಿಗಳಲ್ಲಿ ಮತ್ತೊಂದು ಮಹತ್ವದ ಕಲಾಕೃತಿಯಾಗಿದೆ. ಇದರ ಮೌಲ್ಯ 75 ಲಕ್ಷ ಡಾಲರ್‌ಗಳಷ್ಟಿದೆ. ಸುಭಾಷ್ ಕಪೂರ್‌ನ ಕಳ್ಳಸಾಗಣೆ ಜಾಲ ಅಮೆರಿಕಕ್ಕೆ ಕದ್ದು ಸಾಗಿಸಿ ನ್ಯೂಯಾರ್ಕ್‌ನ ಗೋದಾಮಿನಲ್ಲಿ ಅಡಗಿಸಿಟ್ಟಿತ್ತು.

ಪವನ್ ಖೇರಾ ಜಾಮೀನು: ತೀರ್ಪು ಕಾಯ್ದಿರಿಸಿದ ಸುಪ್ರೀಂ

ದೆಹಲಿ: ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರು 3 ನಕಲಿ ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದಾರೆ ಎಂದು ಆರೋ ಪಿಸಿದ್ದ ಕಾಂಗ್ರೆಸ್



ನಾಯಕ ಪವನ್ ಖೇರಾ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಖೇರಾ ನಿರೀಕ್ಷಣಾ ಜಾಮೀನು ಕೋರಿ ಈಗ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ವಿಚಾರಣೆ ಗುರುವಾರ ನಡೆಸಿದ ನ್ಯಾಯಮೂರ್ತಿ ಜೆ.ಕೆ.ಮಾಹೇಶ್ವರಿ ಮತ್ತು ನ್ಯಾ.ಎ.ಎಸ್.ಚಂದೂರ್‌ಕರ್ ಅವರ ಪೀಠ ತೀರ್ಪು ಕಾಯ್ದಿರಿಸಿದೆ.

ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಸುಪ್ರೀಂ ಕೋರ್ಟ್‌ನಲ್ಲಿ ಖೇಡಾ ಪರ ವಾದಿಸಿದ್ದಾರೆ. 50ಕ್ಕೂ ಅಧಿಕ ಅಸ್ಸಾಂ ಪೊಲೀಸ್ ಸಿಬ್ಬಂದಿ ಖೇರಾರನ್ನು ಬಂಧಿಸಲೆಂದೇ ದೆಹಲಿಯ ನಿಜಾಮುದ್ದೀನ್‌ನಲ್ಲಿರುವ ಖೇರಾ ಅವರ ನಿವಾಸಕ್ಕೆ ಈ ಮೊದಲು ತೆರಳಿದ್ದರು. ಖೇರಾ ಸಾರ್ವಜನಿಕ ವ್ಯಕ್ತಿ, ಪಲಾಯನ ಮಾಡುವವರಲ್ಲ, ತನಿಖೆಗೆ ಪೂರ್ಣ ಸಹಕರಿಸಲು ಸಿದ್ಧರಿದ್ದಾರೆ. ಹಾಗಾಗಿ ಖೇರಾ ಅವರನ್ನು ಸಾರ್ವಜನಿಕವಾಗಿ ಬಂಧಿಸಿ ಅವಮಾನಿಸುವ ಅಗತ್ಯವಿಲ್ಲ ಎಂದು ಸಿಂಘ್ವಿ ವಾದಿಸಿದರು.

ಇದಕ್ಕೂ ಮುನ್ನ, ಗುವಾಹಟಿ ಪೊಲೀಸರು ಪವನ್ ಖೇರಾ ವಿರುದ್ಧ ಅಪರಾಧಿಕ ಮಾನಹಾನಿ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧನವಾಗುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಪವನ್ ಖೇರಾ ತೆಲಂಗಾಣ ರಾಜ್ಯದ ಹೈದರಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ನಿರೀಕ್ಷಣಾ ಜಾಮೀನು ಪಡೆದು ಕೊಂಡಿದ್ದರು. ಈ ನಿರೀಕ್ಷಣಾ ಜಾಮೀನು ವಿರುದ್ಧ ಗುವಾಹಟಿ ಪೊಲೀಸರು ಸುಪ್ರೀಂ ಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರಿಂದ ನ್ಯಾಯಾಲ ಯದ ತೆಲಂಗಾಣ ಹೈಕೋರ್ಟ್ ನೀಡಿದ್ದ ಜಾಮೀನು ಆದೇಶವನ್ನೇ ರದ್ದುಗೊಳಿಸಿತು. ಎಫ್‌ಐಆರ್ ಗುವಾಹಟಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವುದರಿಂದ ಅಸ್ಸಾಂ ಹೈಕೋರ್ಟ್‌ಗೇ ಅರ್ಜಿ ಸಲ್ಲಿಸುವಂತೆ ಸೂಚಿಸಿತು. ಖೇರಾ ವಕೀಲರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಗುವಾಹತಿ ಹೈಕೋರ್ಟ್ ತಿರಸ್ಕರಿಸಿತು.

ಡಾಲರ್ ಎದುರು ರು. ಮೌಲ್ಯ 95ಕ್ಕೆ ಕುಸಿತ

ಮುಂಬೈ: ದೇಶದ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಭಾರತದ ರೂಪಾಯಿ ಮೌಲ್ಯ ಅಮೆರಿಕದ ಡಾಲರ್ ಎದುರು 32 ಪೈಸೆಗಳಷ್ಟು ಗುರುವಾರದ ವಹಿವಾ ಟಿನಲ್ಲಿ ಕಡಿಮೆಯಾಗಿದೆ.

ಅಮೆರಿಕದ 1 ಡಾಲರ್‌ಗೆ ಭಾರತದ 95.20 ರು. ಲೆಕ್ಕದಲ್ಲಿ ವಿನಿಮಯ ಆಗುವಂತಾಗಿದೆ. ಇದು ಇತಿಹಾಸದಲ್ಲೇ ಭಾರತದ ಕರೆನ್ಸಿಯ ಕನಿಷ್ಠ ಮಟ್ಟವಾಗಿದೆ. ಜಾಗತಿಕ ಕಚ್ಚಾತೈಲ ಮಾರು ಕಟ್ಟೆಯಲ್ಲಿ ಬ್ರೆಂಟ್ ಕ್ರೂಡ್ ಆಯಿಲ್(ಕಚ್ಚಾ ತೈಲ) ಧಾರಣೆ ಬ್ಯಾರೆಲ್‌ಗೆ 126 ಡಾಲರ್‌ಗಳಷ್ಟು ಗರಿಷ್ಠ ಮಟ್ಟಕ್ಕೆ ಏರಿರುವ ಹಿನ್ನೆಲೆ ಅಮೆರಿಕದ ಕರೆನ್ಸಿ ಡಾಲರ್ ಮೌಲ್ಯೂ ಹೆಚ್ಚಿದೆ. ಪರಿಣಾಮ ರೂಪಾ ಯಿಗೆ ಒತ್ತಡ ಬಂದು ಮೌಲ್ಯ ತಗ್ಗುವಂತಾಗಿದೆ ಎಂದು ಹಣಕಾಸು ಮಾರುಕಟ್ಟೆ ತಜ್ಞರು ವಿಶ್ಲೇಷಣೆ ಮಾಡಿದ್ದಾರೆ. ವಿದೇಶಿ ಕರೆನ್ಸಿ ವಿನಿಮಯ ವಹಿವಾಟುದಾರರು ಡಾಲರ್ ಎದುರು ರೂ ಮೌಲ್ಯ ಇನ್ನಷ್ಟು ಕುಸಿಯುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದ್ದಾರೆ.

ಟರ್ಕಿಯಲ್ಲಿ ಸೆರೆ, ಭಾರತಕ್ಕೆ ಗಡಿಪಾರು, ಎನ್‌ಸಿಬಿ ವಶಕ್ಕೆ

ಡ್ರಗ್ಸ್: ಪಾತಕಿ ದೋಲಾ ಎನ್‌ಸಿಬಿ ವಶಕ್ಕೆ

ದೆಹಲಿ: ಘೋಷಿತ ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಆಪ್ತವಲಯದ ಹಾಗೂ ಅಂತಾರಾಷ್ಟ್ರೀಯ ಮಾದಕದ್ರವ್ಯ ಮಾರಾಟ ಜಾಲದ ಪ್ರಮುಖ ಸೂತ್ರಧಾರಿ ಮೊಹಮ್ಮದ್ ಸಲೀಂ ದೋಲಾ(59)ನನ್ನು ಭಾರತ ಸರಕಾರದ ಮನವಿ ಮೇರೆಗೆ ಟರ್ಕಿ ದೇಶದ ಪೊಲೀಸರು ಶನಿವಾರ ಬಂಧಿಸಿದ್ದಾರೆ. ಆ ಬಳಿಕ ಕಾನೂನು ಪ್ರಕ್ರಿಯೆ ಗಳನ್ನು ಪೂರ್ಣಗೊಳಿಸಿ ಭಾರತಕ್ಕೆ ಗಡಿಪಾರು ಮಾಡಿದ್ದಾರೆ.

ಟರ್ಕಿಯಿಂದ ವಿಮಾನದಲ್ಲಿ ಸೋಮವಾರ ಹೊರಟು ದೆಹಲಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬೆಳಗ್ಗೆ ಬಂದಿಳಿದ ದೋಲಾನನ್ನು 'ಎನ್‌ಸಿಬಿ' ಅಧಿಕಾರಿಗಳ ತಂಡ ತಮ್ಮ ವಶಕ್ಕೆ ಪಡೆದುಕೊಂಡಿದ್ದು, ತೀವ್ರ ವಿಚಾರಣೆ ಆರಂಭಿಸಿದೆ. ಅಂತಾರಾಷ್ಟ್ರೀಯ ಮಟ್ಟದ ಮಾದಕದ್ರವ್ಯ ಜಾಲದಲ್ಲಿರುವ ಪ್ರಮುಖ ಪಾತಕಿಗಳ ಪಟ್ಟಿ ತಯಾರಿಸಿರುವ 'ಎನ್‌ಸಿಬಿ' ಅಧಿಕಾರಿಗಳು, ಕೆಲವು ತಿಂಗಳ ಹಿಂದೆಯೇ ಪಟ್ಟಿಯನ್ನು ಕೇಂದ್ರ ಗೃಹ ಸಚಿವಾಲಯಕ್ಕೆ ಸಲ್ಲಿಸಿತ್ತು. ಟರ್ಕಿ, ದುಬೈ, ಕೆನಡಾ ಹಾಗೂ ಯೂರೋಪ್ ದೇಶಗಳು ಸೇರಿದಂತೆ ವಿವಿಧ ದೇಶಗಳಲ್ಲಿದ್ದುಕೊಂಡು ಭಾರತಕ್ಕೆ ಮಾದಕದ್ರವ್ಯವನ್ನು ಪೂರೈಸಿ ಮಾರಾಟ ಮಾಡುತ್ತಿದ್ದ ಈ ಪಾತಕಿಗಳ ಗಡಿಪಾರಿಗೆ ಕ್ರಮ ಕೈಗೊಳ್ಳುವಂತೆ ಗೃಹ ಸಚಿವಾಲಯಕ್ಕೆ ಮನವಿ ಮಾಡಿತ್ತು.

ಭಾರತದ ನಾರ್ಕೋಟಿಕ್ ಕ್ರೈಂ ಬ್ಯೂರೊದ(ಎನ್‌ಸಿಬಿ) ಅಧಿಕಾರಿಗಳು ಆರಂಭಿಸಿದ 'ಆಪರೇಷನ್ ಗ್ಲೋಬಲ್ ಹಂಟ್' ಕಾರ್ಯಾಚರಣೆಯ ಭಾಗವಾಗಿ ಟರ್ಕಿ ದೇಶದಲ್ಲ

ದೆಹಲಿ ವಿಮಾನ ನಿಲ್ದಾಣದಲ್ಲಿ ಎನ್‌ಸಿಬಿ ಅಧಿಕಾರಗಳ ವಶಕ್ಕೆ ಸಿಕ್ಕ ಅಂತಾರಾಷ್ಟ್ರೀಯ ಡ್ರಗ್ಸ್ ಪ್ರಪಂಚದ ಆರೋಪಿ ಮೊಹಮ್ಮದ್ ಸಲೀಂ ದೋಲಾ.

ದೋಲಾನ ಬಂಧನವಾಗಿದೆ ಮತ್ತು ಭಾರತಕ್ಕೆ ಗಡಿಪಾರು ಕೂಡಾ ನಡೆದು, ಎನ್‌ಸಿಬಿ ತನಿಖಾಧಿಕಾರಿಗಳ ವಶಕ್ಕೂ ಸಿಕ್ಕಾಗಿದೆ. ಈಗ ತನಿಖೆಯನ್ನು ಎನ್‌ಸಿಬಿ ವೇಗಗೊಳಿಸಿದೆ.

ದೋಲಾ ಎನ್‌ಸಿಬಿ ವಶಕ್ಕೆ ಸಿಕ್ಕ ಬಳಿಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ಮಾದಕದ್ರವ್ಯ ಜಾಲವನ್ನು ಇನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲ. ಡ್ರಗ್ಸ್ ಲೋಕದ ಪಾತಕಿಗಳು ಯಾವುದೇ ದೇಶದಲ್ಲಿದ್ದರೂ ಎಳೆತಂದು ಕಾನೂನು ಪ್ರಕ್ರಿಯೆಗೆ ಒಳಪಡಿಸಲಾಗುವುದು. ಈ ದಿಶೆಯಲ್ಲಿ ಎನ್‌ಸಿಬಿ ಬಹುದೊಡ್ಡ ಸಾಧನೆ ಮಾಡಿದೆ' ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಎಸ್‌ಯುವಿಗೆ ಪಿಕಪ್ ಟ್ರಕ್ ಡಿಕ್ಕಿ 15 ಸಾವು, 30 ಮಂದಿಗೆ ಗಾಯ

ಭೋಪಾಲ್: ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿ ಕೆಲಸದ ಸ್ಥಳದಿಂದ ಕಾರ್ಮಿಕರನ್ನು ವಾಪಸ್ ಮನೆಗೆ ಕರೆದೊಯ್ಯುತ್ತಿದ್ದ ಪಿಕಪ್ ಟ್ರಕ್, ರಸ್ತೆ ವಿಭಜಕವನ್ನೂ ದಾಟಿ ಎದುರಿನಿಂದ ಬರುತ್ತಿದ್ದ ಎಸ್‌ಯುವಿಗೆ ನೇರ ಡಿಕ್ಕಿ ಹೊಡೆದ ಪರಿಣಾಮ ಒಟ್ಟು 15 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

35 ಕಾರ್ಮಿಕರನ್ನು ಕೆಲಸದ ಸ್ಥಳದಿಂದ ಮನೆಗಳಿಗೆ ವಾಪಸ್ ಕರೆದೊಯ್ಯುತ್ತಿದ್ದ ಪಿಕಪ್ ಟ್ರಕ್ ಬುಧವಾರ ರಾತ್ರಿ 8.30ರಲ್ಲಿ ಪೆಟ್ರೋಲ್ ಬಂಕ್ ಬಳಿಯ ರಸ್ತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಡಿವೈಡರ್ ದಾಟಿ ಎದುರು ರಸ್ತೆಯಲ್ಲಿ ಚಲಿಸುತ್ತಿದ್ದ ಸ್ಪೋರ್ಟ್ ಯುಟಿಲಿಟಿ ವಾಹನಕ್ಕೆ(ಎಸ್‌ಯುವಿಗೆ) ರಭಸವಾಗಿ ಡಿಕ್ಕಿ ಹೊಡೆದು ತಲೆಕೆಳಗಾಗಿ ಬಿದ್ದಿದೆ.

ಪಿಕಪ್ ಟ್ರಕ್‌ನ ವೇಗ ಹೆಚ್ಚಿದ್ದ ಕಾರಣ ವಾಹನ 2-3 ಉರುಳು ಉರುಳುತ್ತಾ ಹೋಗಿದೆ. ಅಪಘಾತದ ತೀವ್ರತೆಯಿಂದಾಗಿ ಟ್ರಕ್‌ನ ಹಿಂಬದಿಯಲ್ಲಿ ನಿಂತುಕೊಂಡು ಪ್ರಯಾಣಿಸುತ್ತಿದ್ದ ಕಾರ್ಮಿಕರಲ್ಲಿ 10 ಮಹಿಳೆಯರು ಸೇರಿದಂತೆ 15 ಮಂದಿ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾರೆ. ಎರಡೂ ವಾಹನಗಳಲ್ಲಿದ್ದವರಲ್ಲಿ 30 ಮಂದಿ ಗಾಯಗೊಂಡಿದ್ದು, ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಗಂಭೀರ ಸ್ಥಿತಿಯಲ್ಲಿದ್ದವರನ್ನು ಇಂದೋರ್ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಧಾರ್‌ನ ಜಿಲ್ಲಾಧಿಕಾರಿ ಅಭಿಷೇಕ್ ಚೌಧರಿ ತಿಳಿಸಿದ್ದಾರೆ. ಪಿಕಪ್ ಟ್ರಕ್‌ನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಜನರನ್ನು ತುಂಬಿದ್ದುದು, ಹಾಗೂ ಚಾಲಕ ಅತ್ಯಂತ ವೇಗವಾಗಿ ವಾಹನ ಚಲಾಯಿಸುತ್ತಿದ್ದುದೇ ಹೀಗೆ ತಲೆಕೆಳಗಾಗಲು ಕಾರಣ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಅನಂತ ಅಂಬಾನಿಯ ವನತಾರ ವನ್ಯಮೃಗ ಉದ್ಯಾನ

ಕೊಲಂಬಿಯದ 80 ಹಿಪ್ಪೊಗಳ ರಕ್ಷಣೆಗೆ ಮುಂದಾದ 'ವನತಾರ'

ಜಾಮ್‌ನಗರ: ಕೊಲಂಬಿಯ ದೇಶದಲ್ಲಿ ಹತ್ಯೆಗೆ ಒಳಗಾಗಲಿರುವ 80 ಹಿಪೊಪೊಟಮಸ್‌ಗಳ ರಕ್ಷಣೆಗೆ ಗುಜರಾತ್ ರಾಜ್ಯದ



ಜಾಮ್ ನಗರದಲ್ಲಿನ 'ವನತಾರಾ' ವನ್ಯಮೃಗಗಳ ಸಂರಕ್ಷಣಾ ಕೇಂದ್ರ ಮುಂದಾಗಿದೆ. ಉದ್ಯಮಿ ಮುಕೇಶ್ ಅಂಬಾನಿ ಅವರ ಪುತ್ರ ಅನಂತ ಅಂಬಾನಿ ವನ್ಯಮೃಗಗಳ ಸಂರಕ್ಷಣೆಗಾಗಿ 'ವನತಾರಾ'ವನ್ನು ಅತ್ಯಾಧುನಿಕವಾಗಿ ನಿರ್ಮಿಸಿದ್ದಾರೆ. ಪ್ರಾಣಿಪ್ರಿಯರಾಗಿರುವ ಅನಂತ ಅಂಬಾನಿ, 80 ಹಿಪೊಪೊಟಮಸ್‌ಗಳನ್ನು ಕೊಲ್ಲದಂತೆ ಕೊಲಂಬಿಯ ಸರಕಾರಕ್ಕೆ ಮನವಿ ಮಾಡಿದ್ದಾರೆ. 80 ಹಿಪ್ಪೊಗಳ ನಿರ್ವಹಣೆಗಾಗಿ ಅಗತ್ಯ ಹಣಕಾಸು ನೆರವು ನೀಡುತ್ತೇವೆ. ವನ್ಯಪ್ರಾಣಿಗಳ ನಿರ್ವ ಹಣೆ, ಚಿಕಿತ್ಸೆಯಲ್ಲಿ ನುರಿತಿರುವ ಪಶುವೈದ್ಯ ರನ್ನು ಕಳುಹಿಸಿಕೊಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಈ

ಸಂಬಂಧ ಕೊಲಂಬಿಯ ಸರ ಕಾರದ ಜತೆಗೆ ಪತ್ರ ವ್ಯವಹಾರ ನಡೆಸಿದ್ದಾರೆ.

ಕೊಲಂಬಿಯಾ ದೇಶದ ಮಗ್ಡಲೇನಾ ನದಿ ಪಾತ್ರದಲ್ಲಿರುವ ಹಿಪ್ಪೊಗಳ ಗುಂಪಿನಲ್ಲಿ ಕೆಲವು ಆಕ್ರಮಣಕಾರಿಯಾಗಿವೆ ಎಂಬ ಕಾರಣಕ್ಕೆ 80 ಹಿಪೊಪೊಟಮಸ್‌ಗಳನ್ನು ಸಾಯಿಸುವುದಕ್ಕೆ ಅಲ್ಲಿನ ಸರಕಾರ ನಿರ್ಧರಿಸಿದೆ. ಹಿಪೊಪೊಟಮಸ್‌ಗಳ ಸಂಖ್ಯೆಯೂ ವಿಪರೀತವಾಗಿ ಹೆಚ್ಚಳವಾಗಿರುವುದರಿಂದ ಈ ಭಾಗದ ಜೀವವೈವಿಧ್ಯದ ಮೇಲೆ ಪ್ರತಿಕೂಲ ಪರಿಣಾಮವಾಗಲಿದೆ. ಇದು ಈ ಭಾಗದಲ್ಲಿನ ಜನಜೀವನದ ಮೇಲೆ ಅತ್ಯಂತ ಮಾರಕ ಪರಿಣಾಮ ಬೀರಲಿದೆ ಎಂದು ಕೊಲಂಬಿಯ ಸರಕಾರ, ಹಿಪ್ಪೊಗಳನ್ನು ಸಾಯಿಸಲು ನಿರ್ಧರಿಸಿದೆ.

ಭಾರತಕ್ಕೆ ಬೇಕಿದ್ದ ಜೆಇಎಂ ಹಿರಿಯ ಕಮಾಂಡರ್

ಪಾಕ್ ಜೈಶೆ ಹಿರಿಯ ಕಮಾಂಡರ್ ಮೌಲಾನಾ ಅಜರ್ ನಿಗೂಢ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿನ ಜೈಶ್ ಎ ಮೊಹಮ್ಮದ್(ಜೆಇಎಂ) ಉಗ್ರ ಸಂಘಟನೆಯ ಹಿರಿಯ ಕಮಾಂಡರ್ ಮೌಲಾನಾ ಸಲ್ಮಾನ್



ಅಜರ್ ಬಹಳ ನಿಗೂಢವಾಗಿ ಸಾವಿಗೀಡಾಗಿದ್ದಾನೆ. ಬಹಾವಲ್‌ಪುರದಲ್ಲಿ ಬುಧವಾರ ಅಪರಿಚಿತ ವಾಹನವೊಂದು ಅಜರ್‌ಗೆ ಡಿಕ್ಕಿ ಹೊಡೆದು ಪರಾರಿಯಾಗಿದೆ. ಗಂಭೀರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ರಸ್ತೆಯಲ್ಲಿ ಬಿದ್ದಿದ್ದ ಅಜರ್ ಸ್ಥಳದಲ್ಲೇ ಸಾವಿಗೀಡಾಗಿದ್ದಾನೆ. ಬುಧವಾರ ಸಂಜೆ 4ರ ವೇಳೆ ಬಹವಾಲ್‌ಪುರದ ಮಾರ್ಕಝ್ ಸುಭಾನಲ್ಲಾಹ್‌ನಲ್ಲಿ ಸಲ್ಮಾನ್‌ನ ಅಂತ್ಯಸಂಸ್ಕಾರವಾಗಿದೆ.

ಇದೊಂದು ಹಿಟ್ ಅಂಡ್ ರನ್ ಪ್ರಕರಣದಂತೆ ಮೇಲ್ನೋಟಕ್ಕೆ ಕಂಡುಬಂದಿದ್ದರೂ ಅಜರ್ ಸಾವು ಬಹಳ ನಿಗೂಢವಾಗಿದೆ. ಈತ ಭಾರತದ ವಿರುದ್ಧ ಸಂಚು ರೂಪಿಸುತ್ತಿದ್ದ ಎಂಬುದು ಉಲ್ಲೇಖಾರ್ಹ. ಇದಕ್ಕೆ 2 ದಿನಗಳ ಹಿಂದೆಯಷ್ಟೇ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಹಿರಿಯ ಕಮಾಂಡರ್ ಷೇಕ್ ಯೂಸುಫ್ ಅಫ್ರಿದಿ ಖೈಬರ್ ಫಖ್ತುನ್ಖ್ವಾ ಪ್ರಾಂತ್ಯದಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡೇಟಿನಿಂದ ಹತನಾಗಿದ್ದ.

ಮಸೂದ್ ಅಜರ್ ಸ್ಥಾಪಿತ ಜೈಶ್ ಎ ಮೊಹಮ್ಮದ್ ಸಂಘಟನೆಯಲ್ಲಿ ಮೌಲಾನಾ ಸಲ್ಮಾನ್ ಅಜರ್ ಪ್ರಮುಖ ಪಾತ್ರ ವಹಿಸಿದ್ದ. ಜೈಶೆ ಸಂಘಟನೆ 2001ರಲ್ಲಿ ಭಾರತದ ಸಂಸತ್ ಭವನದ ಮೇಲೆ ದಾಳಿ ನಡೆಸಿತ್ತು. 2019ರಲ್ಲಿ ಪುಲ್ವಾಮಾ ಸೈನಿಕರ ವಾಹನಗಳ ಮೇಲೆ ಆತ್ಮಹತ್ಯಾ ದಾಳಿ ನಡೆಸಿತ್ತು. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಭಾರತದ ವಿರುದ್ಧ ಬೆಂಕಿ ಕಾರುವಂತಹ ಭಾಷಣಗಳನ್ನು ಮಾಡುತ್ತಿದ್ದ. ಭಾರತದ ಗಡಿ ಭಾಗಗಳಲ್ಲಿನ ಹಲವು ಭಯೋತ್ಪಾದಕ ಕೃತ್ಯಗಳ ಹಿಂದೆ ಅಜರ್‌ನ ಕೈವಾಡವಿರುವುದು ಖಚಿತವಾಗಿದೆ. ಹಾಗಾಗಿ ಈತ ಭಾರತಕ್ಕೆ ಮೋಸ್ಟ್ ವಾಟೆಂಡ್‌ಗಳಲ್ಲಿ ಒಬ್ಬನಾಗಿದ್ದ ಎನ್ನಲಾಗಿದೆ.

ಯುದ್ಧಕ್ಕೆ 2 ಮಾಸ: ಪಾಕ್‌ಗೆ ಪರದಾಟ

ಇಸ್ಲಾಮಾಬಾದ್: ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ಯುದ್ಧಕ್ಕೀಗ ಭರ್ತಿ 2 ತಿಂಗಳು. ಈ ಯುದ್ಧ ಅಮೆರಿಕ, ಇಸ್ರೇಲ್, ಇರಾನ್ ಮತ್ತು ನೆರೆಯ ಗಲ್ಫ್



ದೇಶಗಳ ಮೇಲೆ ಆರ್ಥಿಕವಾಗಿ ಬಲು ದೊಡ್ಡ ಪರಿಣಾಮ ಬೀರಿದೆ. ಅಷ್ಟೇ ಅಲ್ಲದೇ, ಯುದ್ಧ ನಿಲುಗಡೆಗೆ, ಶಾಂತಿ ಮಾತುಕತೆಗೆ ಬಲು ಉತ್ಸಾಹದಿಂದ ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನದ ಆರ್ಥಿಕತೆಯನ್ನೂ ಈ ಯುದ್ಧ ತೀವ್ರವಾಗಿ ಹದಗೆಡೆಸಿದೆ. ಪಾಕ್‌ನ ಖಜಾನೆಯೂ ಖಾಲಿಯಾಗಿದೆ, ಪೆಟ್ರೋಲಿಯಂ ಉತ್ಪನ್ನಗಳೂ ಖಾಲಿಯಾಗಿದೆ. ಪರಿಸ್ಥಿತಿಯನ್ನು ತಹಬಂದಿಗೆ ತರಲು, ಆರ್ಥಿಕ ಪರಿಸ್ಥಿತಿ ಸುಧಾರಿಸಲು ಆಗದೇ ಪ್ರಧಾನಿ ಶಹಬಾಜ್ ಷರೀಫ್ ಸರಕಾರ ಪರದಾಡುತ್ತಿದೆ. 'ಪರಿಸ್ಥಿತಿ ಸುಧಾರಣೆಗೆ ಏನೆಲ್ಲ ಪ್ರಯತ್ನಗಳನ್ನು ಮಾಡಿದರೂ ಪ್ರಯೋಜನವಾಗುತ್ತಿಲ್ಲ. ಇರಾನ್ ಯುದ್ಧ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಗಣನೀಯವಾಗಿ ಹಾನಿಗೊಳಿಸಿದೆ. ಪಾಕ್‌ನ 1 ವಾರದ ಕಚ್ಚಾತೈಲ ವೆಚ್ಚ 30 ಕೋಟಿ ಅಮೆರಿಕನ್ ಡಾಲರ್‌ಗಳಷ್ಟಿತ್ತು. ಈಗ 80 ಕೋಟಿ ಡಾಲರ್‌ಗಳಿಗೆ ಏರಿಕೆ ಆಗಿದೆ ಎಂದು ಪಾಕ್ ಪ್ರಧಾನಿ ಶಹಬಾಜ್ ಷರೀಫ್ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಪರಿಸ್ಥಿತಿ ಮೇಲ್ವಿಚಾರಣೆಗೆ ಕಾರ್ಯಪಡೆ ರಚಿಸಲಾಗಿದೆ ಎಂದು ಹೇಳಿದ್ದಾರೆ.

ವಾರಕ್ಕೆ 6 ದಿನ ಸಂಚಾರ: ಪ್ರವಾಸೋದ್ಯಮಕ್ಕೆ ದೊಡ್ಡ ಲಾಭ

ಶ್ರೀನಗರ-ಜಮ್ಮು ಮಧ್ಯೆ ವಂದೇಭಾರತ್ ಎಕ್ಸ್‌ಪ್ರೆಸ್

ಶ್ರೀನಗರ: ಜಮ್ಮು-ಕಾಶ್ಮೀರದ ಶ್ರೀನಗರ ಮತ್ತು ಜಮ್ಮು ನಗರಗಳ ಮಧ್ಯೆ ಮೊದಲ ವಂದೇಭಾರತ್ ಎಕ್ಸ್‌ಪ್ರೆಸ್ ರೈಲು ಗುರುವಾರ ಸಂಚರಿಸಿದೆ. ಜಮ್ಮುವಿನ ತಾವಿ ರೈಲು ನಿಲ್ದಾಣದಲ್ಲಿ ಹೊಸ ರೈಲಿಗೆ ಹಸಿರು ನಿಶಾನೆ ತೋರಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಈ ಭಾಗದ ಜನರ ದಶಕಗಳ ಕನಸು ಗುರುವಾರ ನನಸಾಗಿದೆ ಎಂದರು.

20 ಬೋಗಿಗಳಿರುವ ಅತಿವೇಗದ ರೈಲು ಕಾಶ್ಮೀರ ಕಣಿವೆಯನ್ನು ದೇಶದ ಇತರ ಭಾಗಗಳಿಗೆ ಜೋಡಿಸಲಿದೆ. ಜಮ್ಮು-ಶ್ರೀನಗರ ನಡುವಿನ ರೈಲು ಪಯಣ ಅತಿ ವೇಗ ಮತ್ತು ಸರಾಗದ್ದಾಗಿದೆ. ಚಳಿಗಾಲದಲ್ಲಿ ಹಿಮಪಾತ ಕಾರಣ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿ ಮುಚ್ಚಿಹೋಗುತ್ತಿತ್ತು. ಆ ಸಂದರ್ಭದಲ್ಲಿ ರೈಲು ಸೇವೆ ಒದಗಲಿದೆ. ವಂದೇಭಾರತ್ ಎಕ್ಸ್‌ಪ್ರೆಸ್ ಕೇವಲ ಪ್ರಯಾಣಕ್ಕಷ್ಟೇ ಅಲ್ಲದೆ, ಈ ಭಾಗದ ಪ್ರವಾಸೋದ್ಯಮ ಮತ್ತು ವ್ಯಾಪಾರ ಚಟುವಟಿಕೆಗಳಿಗೂ ಉತ್ತೇಜನಕಾರಿಯಾಗಲಿದೆ ಎಂದು ಸಚಿವ ವೈಷ್ಣವ್ ಹೇಳಿದರು.

ವಂದೇಭಾರತ್‌ನಲ್ಲಿ ಅತ್ಯಾಧುನಿಕ ಸೌಲಭ್ಯಗಳಿವೆ. ಅಪಘಾತ ತಡೆಗೆ 'ಕವಚ್' ಸುರಕ್ಷತಾ ವ್ಯವಸ್ಥೆ ಮತ್ತು ಜಿಪಿಎಸ್ ಆಧಾರಿತ ಮಾಹಿತಿ ಪರದೆ ಇವೆ. ಅಧಿಕ ಚಳಿ ತಡೆಗೆ ಸಾಧ್ಯವಾಗುವಂತೆ ರೈಲಿನಲ್ಲಿ ವಿಶೇಷ ತಂತ್ರಜ್ಞಾನ ಬಳಸಲಾಗಿದೆ ಎಂದು ಸಚಿವರು ವಿವರಿಸಿದರು. ಮೊದಲ ರೈಲು ಗುರುವಾರ ಬೆಳಿಗ್ಗೆ 6.20ಕ್ಕೆ ಜಮ್ಮುವಿನಿಂದ ಹೊರಟು ಪೂರ್ವಾಹ್ನ 11.10ಕ್ಕೆ ಶ್ರೀನಗರ



ತಲುಪಿದೆ. ಅದೇ ರೈಲು ಮಧ್ಯಾಹ್ನ 2 ಗಂಟೆಗೆ ಶ್ರೀನಗರದಿಂದ ಹೊರಟು ಸಂಜೆ 6.50ಕ್ಕೆ ಜಮ್ಮು ತಲುಪಲಿದೆ. ಮಂಗಳವಾರ ಹೊರತುಪಡಿಸಿ ವಾರದ ಆರು ದಿನಗಳೂ ವಂದೇಭಾರತ್ ಸಂಚರಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2ನೇ ವಂದೇಭಾರತ್ ರೈಲು ಬುಧವಾರ ಹೊರತುಪಡಿಸಿ ವಾರದ ಉಳಿದ ದಿನಗಳಲ್ಲಿ ಸಂಚರಿಸಲಿದೆ. ಶ್ರೀನಗರದಿಂದ ಬೆಳಿಗ್ಗೆ 8 ಗಂಟೆಗೆ ಹೊರಟು ಮಧ್ಯಾಹ್ನ 12.40ಕ್ಕೆ ಜಮ್ಮು ತಲುಪಲಿದೆ. ಈ ರೈಲಿಗೆ ಶ್ರೀಮಾತಾ ವೈಷ್ಣೋದೇವಿಗೆ ತೆರಳುವವರಿಗಾಗಿ ಕತ್ರಾ ಮತ್ತು ಬನಿಹಾಲ್ ನಿಲ್ದಾಣಗಳಲ್ಲಿ ಕೂಡ ನಿಲುಗಡೆ ಇದೆ.

4 ಮಕ್ಕಳ ತಾಯಿಗೆ ತ್ರಿವಳಿ ಶಿಶು ಜನನ

ಭೋಪಾಲ್: ಮಧ್ಯಪ್ರದೇಶದ ಪನ್ನಾ ಜಿಲ್ಲೆಯ ಉಜ್ನೇಹಿ ಗ್ರಾಮದ 34 ವರ್ಷದ ಮಹಿಳೆ ಕಾಂಚನ್ ಸೋನಿ ನಾಲ್ಕು ಮಕ್ಕಳ ತಾಯಿ. ಆ ಮಕ್ಕಳುಗಳಿಗೆ ಈಗ 11 ಮತ್ತು 9 ಹಾಗೂ 7 ಮತ್ತು 5

ವರ್ಷ ಪ್ರಾಯ. ಕಾಂಚನ್ ಸೋನಿ ಮತ್ತೊಮ್ಮೆ ಗರ್ಭವತಿ ಯಾದರು. 5 ತಿಂಗಳಾಗಿದ್ದಾಗ ಪನ್ನಾ ಜಿಲ್ಲಾಸ್ಪತ್ರೆಯಲ್ಲಿ ಸ್ಕ್ಯಾನ್ ಮಾಡಿಸಿದಾಗ ಸೋನಿ ಉದರದಲ್ಲಿ ಒಟ್ಟು 3 ಭ್ರೂಣಗಳಿರುವುದು ಕಂಡು ಬಂದಿತು. ಇದು ಸವಾಲಿನ ಹೆರಿಗೆಯಾಗಲಿದೆ ಎಂಬ ಕಾರಣಕ್ಕೆ ಸೋನಿ ಅವರನ್ನು ಹೆಚ್ಚಿನ ತಪಾಸಣೆ, ಶುಶ್ರೂಷೆಗಾಗಿ ಪಕ್ಕದ ಸತ್ನಾ ಜಿಲ್ಲೆಯ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು. ಅಲ್ಲಿ ಪರಿಶೀಲಿಸಿದ ಪ್ರಸವ ತಜ್ಞೆ ಡಾ. ಮಂಜು ಸಿಂಗ್, ಏಪ್ರಿಲ್‌ವರೆಗೂ ನಿಗಾ ವಹಿಸಿದರು. ಏ.25ರಂದು ಆಸ್ಪತ್ರೆಗೆ ದಾಖಲಿಸಿಕೊಂಡರು. ಏ.27ರಂದು ಒಂದೂವರೆ ಗಂಟೆಗಳ ಅವಧಿಯಲ್ಲಿ ಸಹಜ ಹೆರಿಗೆಯಾಗಿದೆ. ರಾತ್ರಿ 1.34ಕ್ಕೆ ಮೊದಲ ಶಿಶು, 10.45ಕ್ಕೆ ಎರಡನೆಯದು, 11.57ಕ್ಕೆ 3ನೇ ಶಿಶು ಜನಿಸಿದೆ. 2 ಕಿಲೊ, 2.3 ಕಿಲೊ ಮತ್ತು 2.65 ಕಿಲೊ ತೂಕದ 3 ಶಿಶುಗಳು ಮತ್ತು ಬಾಣಂತಿ ಆರೋಗ್ಯವಾಗಿದ್ದಾರೆ ಎಂದು ವೈದ್ಯರು ಹೇಳಿದ್ದಾರೆ. ಸೋನಿ ಕುಟುಂಬದಲ್ಲೀಗ 7 ಮಕ್ಕಳು.

ಸಮಾಚಾರ ಸಣ್ಣದಲ್ಲ

ಎಸ್‌ಟಿಪಿ ಘಟಕದ ಅಸಮರ್ಪಕ ನಿರ್ವಹಣೆ

ಕೊಲ್ಹಾರ: ಪಟ್ಟಣ ಅತ್ಯಂತ ಸ್ವಚ್ಛವಾಗುವ ನಿಟ್ಟಿನಲ್ಲಿ ನಿರ್ಮಾಣಗೊಂಡಿರುವ ಪಟ್ಟಣದ ಒಳಚರಂಡಿಯ

ಎಸ್.ಟಿ.ಪಿ ಘಟಕದ ಸಮರ್ಪಕ ನಿರ್ವಹಣೆ ಇಲ್ಲದೇ ಅವ್ಯವಸ್ಥೆ ಆಗಿರವಾಗಿದೆ ಎಂದು ಪ.ಪಂ ಸದಸ್ಯ ನಿಂಗಪ್ಪ ಗಣಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು ಒಳಚರಂಡಿಯ ಎಸ್.ಟಿ.ಪಿ ಘಟಕದ ಸಮರ್ಪಕ ನಿರ್ವಹಣೆ ಇಲ್ಲದೇ ಪಟ್ಟಣದ ಬಹುತೇಕ ವಾರ್ಡ್‌ಗಳಲ್ಲಿ ರಸ್ತೆ ಮದ್ಯ ಇರುವ ಮ್ಯಾನ್‌ಹೋಲ್‌ಗಳಿಂದ ತ್ಯಾಜ್ಯ ನೀರು ಹೊರ ಬರುತ್ತಿದೆ. ಪ್ರತಿ ವಾರ್ಡಿನಲ್ಲಿ ಒಂದಿಲ್ಲೊಂದು ಕಡೆ ಒಳಚರಂಡಿ ಕಲುಷಿತ ತ್ಯಾಜ್ಯ ರಸ್ತೆಯ ಮೇಲೆ ಹರಿದು ನಾಗರಿಕರು ಅಸಹ್ಯಪಡುವಂತಾಗಿದೆ. ಈ ಕುರಿತು ಪುನರ್ವಸತಿ ಪುನರ್‌ನಿರ್ಮಾಣ ಇಲಾಖೆಯ ವಿಭಾಗ 6ರ ಅಧಿಕಾರಿಗಳಿಗೆ ಮೌಖಿಕ ಮನವಿ ಮಾಡಲಾಗಿದ್ದರೂ ಕೂಡ ಸ್ಪಂದನೆ ದೊರಕುತ್ತಿಲ್ಲ, ಕೆಲಬಾರಿ ತಾತ್ಕಾಲಿಕವಾಗಿ ಸಮಸ್ಯೆಯನ್ನು ಪರಿಹರಿಸುತ್ತಿದ್ದಾರೆ ವಿನಾ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಿ. ಎಂ. ಪಾಟೀಲ ಸ್ಕೂಲ್ ಉತ್ತಮ ಸಾಧನೆ

ವಿಜಯಪುರ : ಐ.ಸಿ.ಎಸ್.ಇ 10ನೇ ತರಗತಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ಮೊದಲ ಮೂರು ರ‍್ಯಾಂಕ್ ಗಳಿಸುವ ಮೂಲಕ ಕೀರ್ತಿ ತಂದಿದ್ದಾರೆ. ಇಂದು ಗುರುವಾರ ಫಲಿತಾಂಶ ಪ್ರಕಟವಾಗಿದ್ದು, ಶಾಲೆಯು ಶೇ. 100 ರಷ್ಟು ಫಲಿತಾಂಶ ದಾಖಲಿಸಿದೆ. ಶಾಲೆಯ ವಿದ್ಯಾರ್ಥಿಗಳಾದ ಗೌರಿ ಪಾಟೀಲ ಮತ್ತು ಸೂಫಿಯಾನ್ ಕಂದಗಲ ತಲಾ ಶೇ. 93.20 ಅಂಕ ಗಳಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಅದೇ ರೀತಿ ಪ್ರೇಕ್ಷಾ ಪಾಟೀಲ ಶೇ. 90.60 ಅಂಕ ಗಳಿಸಿ ದ್ವಿತೀಯ ಮತ್ತು ಮಲ್ಲಿಕಾರ್ಜುನ ಬಿರಾದಾರ ಶೇ. 89.80 ಅಂಕ ಗಳಿಸಿ ಜಿಲ್ಲೆಗೆ ತೃತೀಯ ಸ್ಥಾನ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಬಿ.ಎಲ್ .ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ. ಬಿ. ಪಾಟೀಲ, ವಿಧಾನ ಪರಿಷತ ಶಾಸಕ ಮತ್ತು ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ, ಶಾಲೆಯ ಕೋ- ಆರ್ಡಿನೇಟರ್‌ಜಯಾ ಗಲಗಲಿ ಸಂತಸ ವ್ಯಕ್ತಪಡಿಸಿದ್ದು, ಅಭಿನಂದನೆ ಸಲ್ಲಿಸಿದ್ದಾರೆ.

ಮೇ 4ರಿಂದ ಉಚಿತ ತಪಾಸಣೆ, ಚಿಕಿತ್ಸೆ ಶಿಬಿರ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸೆ ವಿಭಾಗದ ವತಿಯಿಂದ ಮೇ 4 ರಿಂದ ಮೇ 9ರ ವರೆಗೆ ಸೋಮವಾರದಿಂದ ಶನಿವಾರದ ವರೆಗೆ ಹಿರಿಯ ನಾಗರಿಕರಲ್ಲಿ ಕಂಡುಬರುವ ವಯೋಸಹಜವಾದ ನೆನಪಿನ ಶಕ್ತಿ ಸಮಸ್ಯೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ನಡೆಯಲಿದೆ. ಈ ಶಿಬಿರದಲ್ಲಿ ನೆನಪಿನ ಶಕ್ತಿ ಕ್ಷೀಣಿಸುವಿಕೆ, ಆಲೋಚನೆ ಮತ್ತು ನಿರ್ಧಾರದ ಸಮಸ್ಯೆ, ಸ್ಥಳ ಮತ್ತು ಸಮಯದ ಅರಿವು ಕಡಿಮೆಯಾಗುವುದು, ವರ್ತನೆ ಮತ್ತು ಮನಸ್ಥಿತಿಯಲ್ಲಿನ ಬದಲಾವಣೆ ಸಮಸ್ಯೆ ಎದುರಿಸುತ್ತಿರುವ 60 ರಿಂದ 75 ವರ್ಷದೊಳಗಿನ ಹಿರಿಯ ನಾಗರಿಕರು ಚಿಕಿತ್ಸೆ ಪಡೆಯಬಹುದಾಗಿದೆ. ಇಂಥ ಸಮಸ್ಯೆ ಎದುರಿಸುತ್ತಿರುವ ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಅವರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಸ್ಪತ್ರೆಯ ಮೊಬೈಲ್ ಸಂಖ್ಯೆ- 9513397413 ಸಂಪರ್ಕಿಸಬಹುದಾಗಿದೆ.

ಬುದ್ಧ ಜಯಂತಿ ಆಚರಣೆ ಇಂದು

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಮೇ 1, ಶುಕ್ರವಾರ ನಗರದಲ್ಲಿ ''ಭಗವಾನ್ ಬುದ್ಧ ಜಯಂತಿ''ಯನ್ನು ಅತ್ಯಂತ ಸಡಗರದಿಂದ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ,ನಂತರ ಬೆಳಿಗ್ಗೆ 8:30ಕ್ಕೆ ವಿಶ್ವಭೂಷಣ ಡಾ.ಬಿ.ಆರ್. ಅಂಬೇಡ್ಕರ್ ಭವನದಿಂದ ಜಿಲ್ಲಾ ಪಂಚಾಯತ್ ಆವರಣದಿಂದ ಬುದ್ಧ ವಿಹಾರದವರೆಗೆ ಭವ್ಯ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 10 ಗಂಟೆಗೆ ಬುದ್ಧ ವಿಹಾರದಲ್ಲಿ ಪ್ರಾರ್ಥನೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ. ಬಿ. ಪಾಟೀಲ ಅವರು ಉದ್ಘಾಟಿಸಲಿದ್ದಾರೆ. ನಗರ ಶಾಸಕರಾದ ಬಸನಗೌಡ ಆರ್. ಪಾಟೀಲ ಯತ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

{ಬಿ.ವೈ. ವಿಜಯೇಂದ್ರ,} ಬಿಜೆಪಿ ರಾಜ್ಯಾಧ್ಯಕ್ಷ

ನಮ್ಮದು ರಾಷ್ಟ್ರೀಯ ಪಕ್ಷ, ನಾಯಕತ್ವ ಬದಲಾವಣೆ ವಿಚಾರವನ್ನು ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ. ವರಿಷ್ಠರ ತೀರ್ಮಾನಕ್ಕೆ ನಾವೆಲ್ಲ ಬದ್ಧ. ರಾಜ್ಯದಲ್ಲಿ ಕುರ್ಚಿ ರಾಜಕೀಯ ತೀವ್ರಗೊಂಡಿದೆ. ಒಂದೊಂದು ತಂಡ ದೆಹಲಿ ಯಾತ್ರೆ ಮಾಡುತ್ತಿದೆ. ಮೇ 4ರ ನಂತರ ಕಾಂಗ್ರೆಸ್‌ನಲ್ಲಿ ಬದಲಾವಣೆ ನಿಶ್ಚಿತ.



ಕೃಷಿ ವಿವಿಯಲ್ಲಿ ವಿಚಾರ ಸಂಕಿರಣ | ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅಭಿಮತ

ಕೃಷಿಯಲ್ಲಿ ಹಸಿವಿದ್ದಾಗ ಒಕ್ಕಲುತನ ಪ್ರಗತಿ ಸಾಧ್ಯ

ವಿಶ್ವವಾಣಿ ಸುದ್ದಿಮನೆ ವಿಜಯಪುರ:

ಒಕ್ಕಲುತನದ ಬಗ್ಗೆ ಹಸಿವು ಬೇಕು. ಹಸಿವು ಇದ್ದಾಗ ಒಕ್ಕಲುತನದಲ್ಲಿ ಪ್ರಗತಿ ಸಾಧ್ಯ ಎಂದು ಕೃಷಿ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯ ಹಾಗೂ ಜಿಲ್ಲಾ ಕೃಷಿಕ ಸಮಾಜದ ಸಹಯೋಗದಲ್ಲಿ ಗುರುವಾರ ಕೃಷಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ನಡೆದ ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯುವುದು ಹೇಗೆ? ಎಂಬ ವಿಚಾರ ಸಂಕಿರಣವನ್ನು ಉದ್ದೇಶಿಸಿ ಅವರು ಮಾತನಾಡಿದರು. ಮಣ್ಣು ರೈತನ ಕಣ್ಣು ಹಾಗಾಗಿ ರೈತರು ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳಬೇಕು ಎಂದ ಅವರು, ಮಣ್ಣಿನ ಪೋಷಕಾಂಶಗಳ ಹೇರಳವಾಗಿರುವಂತೆ ನೋಡಿಕೊಳ್ಳಬೇಕು ಎಂದರು.

ಕಬ್ಬಿನ ಹೆಚ್ಚಿನ ಇಳುವರಿಗಾಗಿ ನಮ್ಮದು ಕಬ್ಬು ಬೆಳೆಯಲು ನಮ್ಮಲ್ಲಿನ ಮಣ್ಣು ಬಹು ಸೂಕ್ತವಾಗಿದೆ. ಮಣ್ಣಿನ ಸತ್ವ ನೋಡಿಕೊಂಡು ಕಬ್ಬಿನ ಸಾಲಿನಿಂದ ಸಾಲಿಗೆ ಇರುವ ಅಗಲ ಖಚಿತಗೊಳಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಕಲ್ಲೋಳಿ ಗ್ರಾಮದ ಬಾಳಪ್ಪ ಬೆಳಕೋಡ, ಇಂಡಿ ತಾಲೂಕಿನ ಶ್ರೀಮಂತ ಇಂಡಿ ಹಾಗೂ ಗೋಳಸಂಗಿಯ ನಾರಾಯಣ ಸಾಲುಂಕೆ ಅವರು ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯುವುದು ಹೇಗೆ?' ಎಂಬ ವಿಷಯದ ಕುರಿತು ತಮ್ಮ ಅನುಭವ ಹಂಚಿಕೊಂಡರು.

ವಿಜಯಪುರ: ಕೃಷಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯುವುದು ಹೇಗೆ ? ಎಂಬ ವಿಚಾರ ಸಂಕಿರಣ ಜರುಗಿತು.

ಕೃಷಿ ಮಹಾವಿದ್ಯಾಲಯದ ಮುಖ್ಯ ಕೀಟ ತಜ್ಞ ಎ.ಪಿ.ಬಿರಾದಾರ ಮಾತನಾಡಿ ಸವಳು ಜವಳು ಸಮಸ್ಯೆ ಮಣ್ಣಿನಲ್ಲಿ ಲವಣಾಂಶ ಹೆಚ್ಚಾಗುವುದು ಮತ್ತು ಅತಿಯಾದ ನೀರು ನಿಲ್ಲುವಿಕೆಯಿಂದ ಕಬ್ಬಿನ ಬೆಳವಣಿಗೆ ಕುಂಠಿತವಾಗುತ್ತಿದೆ. ಮಣ್ಣಿನ ಆರೋಗ್ಯ ಸುಧಾರಣೆಗೆ ರೈತರು ಗಮನ ಹರಿಸಬೇಕು.

ಬಿಳಿ ಕಸ (ಉರಮಲ್ಲಿಗೆ): ಕಬ್ಬಿನ ಗದ್ದೆಗಳಲ್ಲಿ ಕಂಡುಬರುವ ಈ ಪರಾವಲಂಬಿ ಕಳೆ ಗಿಡವು ಕಬ್ಬಿನ ಸತ್ವವನ್ನು ಹೀರಿಕೊಳ್ಳುತ್ತದೆ. ಇದು ಇಳುವರಿಯ ಮೇಲೆ ಭಾರಿ ಹೊಡೆತ ನೀಡುತ್ತಿದೆ.

ಗೊಣ್ಣೆ ಹುಳು: ಮಣ್ಣಿನ ಒಳಗಿರುವ ಈ ಹುಳುಗಳು ಕಬ್ಬಿನ ಬೇರುಗಳನ್ನು ತಿಂದು ಗಿಡವು ಒಣಗುವಂತೆ ಮಾಡುತ್ತವೆ. ಇದರ ಹತೋಟಿಗೆ ಸೂಕ್ತ ಕೀಟನಾಶಕಗಳ ಬಳಕೆ ಅಗತ್ಯ ಎಂದರು.

ಕಾಡಿಗೆ ರೋಗ: ಈ ರೋಗವು ಕಬ್ಬಿನ ಸುಳಿಯಲ್ಲಿ ಕಪ್ಪು ಬಣ್ಣದ ಚಾಟಿಯಂತಹ ರಚನೆಯನ್ನು ಉಂಟುಮಾಡುತ್ತದೆ. ಇದು ಇಡೀ ಬೆಳೆಗೆ ಹರಡುವ ಸಾಧ್ಯತೆ ಇರುವುದರಿಂದ ಪೀಡಿತ ಗಿಡಗಳನ್ನು ತಕ್ಷಣವೇ ನಾಶಪಡಿಸಬೇಕು.

ತಜ್ಞರ ಸಲಹೆ: ಈ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಸೂಕ್ತ ಕ್ರಮ ಕೈಗೊಳ್ಳುವುದರಿಂದ ರೈತರು ನಷ್ಟದಿಂದ ಪಾರಾಗಬಹುದು. ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳುವಂತೆ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳ ಮಾರ್ಗದರ್ಶನ ಪಡೆಯಬೇಕು ಎಂದರು.

ಸಂಕೇಶ್ವರದ ಕೃಷಿ ಸಂಶೋಧನಾ ಕೇಂದ್ರದ ಮುಖ್ಯ ವಿಜ್ಞಾನಿ ಡಾ. ಎಸ್.ಎಸ್.ನೂಲಿ ಅವರು ಕಬ್ಬಿನಲ್ಲಿ ಮಣ್ಣು ಪೋಷಕಾಂಶ ಹಾಗೂ ನೀರು ನಿರ್ವಹಣೆ ಕುರಿತು ಮಾತನಾಡಿದರು. ಕಾರ್ಯಾಗಾರದಲ್ಲಿ ಉಪ ಕೃಷಿ ನಿರ್ದೇಶಕರಾದ ಶರಣಗೌಡ ಪಾಟೀಲ ಹಾಗೂ ಚಂದ್ರಕಾಂತ ಪವಾರ, ವಿಜಯಪುರದ ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಜಾನಮಟ್ಟಿ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಶಿವನಗೌಡ ಬಿರಾದಾರ, ಎಸ್.ಬಿ ಜಗ್ಗಿನವರ, ಶಿವಪ್ಪಗೌಡ ಬಿರಾದಾರ, ಕೃಷಿಕ ಸಮಾಜದ ಸಿಂದಗಿ ತಾಲೂಕಾಧ್ಯಕ್ಷ, ಪ್ರಗತಿ ಪರ ರೈತರಾದ ಶ್ರೀಮಂತ ಇಂಡಿ, ಕೃಷಿ ಮಹಾವಿದ್ಯಾಲಯದ ವಿಜ್ಞಾನಿಗಳು, ರೈತರು ಉಪಸ್ಥಿತರಿದ್ದರು.

ಕೃಷಿಯಲ್ಲಿ ಖುಷಿ ಕಾಣಬೇಕು

ಬೆಳೆಯಲ್ಲಿ ವೈಜ್ಞಾನಿಕ ಜ್ಞಾನದ ಕೊರತೆಯಿಂದ ಇಳುವರಿಯಲ್ಲಿ ಕೊರತೆ ಕಾಣಬಹುದಾಗಿದೆ. ಇದು ವಾಣಿಜ್ಯ ಬೆಳೆಯೂ ಹೌದು. ಇದು ವಾರ್ಷಿಕ ಬೆಳೆಯೂ ಆಗಿದೆ. ಪೂರಕ ವಾತಾವರಣ ಒದಗಿಸಿಕೊಟ್ಟು ಬೆಳೆಯಲ್ಲಿ ಇಳುವರಿ ಹೆಚ್ಚಿಸಿಕೊಳ್ಳಬಹುದಾಗಿದೆ. ಆಸಕ್ತಿ ಹೊಂದಿ, ಜ್ಞಾನಾರ್ಜನೆ ಹಳೆ ಅನುಭವಗಳೊಂದಿಗೆ ಹೊಸತನ ಮೈಗೂಡಿಸಿಕೊಂಡು ಎಂದು ಕೃಷಿ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಹೇಳಿದರು.

ಅಬಕಾರಿ ಅಧಿಕಾರಿ ಸಭೆಗೆ ಗೈರು: ಆಕ್ರೋಶ

ಬಸವನಬಾಗೇವಾಡಿ: ಸಾರಾಯಿ ಎನ್ನುವುದು ಸಾಮಾಜಿಕ ಪಿಡುಗು ಸಾಮಾಜಿಕ ಪಿಡುಗುಗಳ ನಿರ್ಮೂಲನೆಯಲ್ಲಿ ಸಾರ್ವಜನಿಕರ ಜಾಗೃತಿ ಮತ್ತು ಸರಕಾರಿ ವ್ಯವಸ್ಥೆಗಳ ಪಾತ್ರ ಮುಖ್ಯವಾಗಿರುತ್ತದೆ ಎಂದು ಉಪ ವಿಭಾಗ ಅಧಿಕಾರಿ ಗುರುನಾಥ ದಡ್ಡೆ ಹೇಳಿದರು.

ಪಟ್ಟಣದ ಪುರಸಭೆ ಸಭಾಭವನದಲ್ಲಿ ಪೊಲೀಸ್ ಇಲಾಖೆಯಿಂದ ಹಮ್ಮಿಕೊಂಡ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದರು. ಇನ್ನೂ ಈ ವೇಳೆ ಸಭೆಗೆ ಆಗಮಿಸದ ಅಬಕಾರಿ ಇನ್ಸಪೆಕ್ಟರ್‌ಮೇಲೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿ ಸೂಕ್ತ ಕ್ರಮ ಜರುಗಿಸುವಂತೆ ಒತ್ತಾಯಿಸಿದರು. ಮುಖಂಡರ ಒತ್ತಾಯಕ್ಕೆ ಪ್ರತಿಕ್ರಿಯಿಸಿದ ಎಸಿ ದಡ್ಡೆ ದೂರವಾಣಿ ಮೂಲಕ ಅಬಕಾರಿ ಇನ್‌ಸ್ಪೆಕ್ಟರ್‌ನ್ನು ಸಂಪರ್ಕಿಸಿ ಸಭೆಗೆ ಗೈರಾಗಿರುವ ಬಗ್ಗೆ ಕಾರಣ ನೀಡಬೇಕು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಸೂಚನೆ ನೀಡಿದರು.

ಬಸವನಬಾಗೇವಾಡಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಕುಂದು ಕೊರತೆ ಸಭೆಯಲ್ಲಿಉಪ ವಿಭಾಗ ಅಧಿಕಾರಿ ಗುರನಾಥ ದಡ್ಡೆ ಮಾತನಾಡಿದರು.

ಮುಖಂಡ ಅರವಿಂದ ಸಾಲವಾಡಗಿ ಮಾತನಾಡಿ , ತಾಪಂ ಮುಂಭಾಗದಲ್ಲಿರುವ 18 ಮಳಿಗೆಗಳಲ್ಲಿ ಯಾವುದೇ ರೀತಿಯ ರೋಸ್ಟರ್‌ಮಾಡಿಲ್ಲ ಸುಮಾರು ವರ್ಷಗಳಿಂದ ಹರಾಜು ಮಾಡಿಲ್ಲ. ಲಕ್ಷ್ಮಣ ಯರನಾಳ ಎಂಬ ದಲಿತ ವ್ಯಕ್ತಿಯ ಮೇಲೆ ಅಬಕಾರಿ ಇಲಾಖೆಯವರು ಸುಳ್ಳು ಕೇಸ್ ದಾಖಲಿಸಿದ್ದಾರೆ ಕೂಡಲೇ ಆ ಅಧಿಕಾರಿಯ ಮೇಲೆ ಕ್ರಮ ಜರುಗಿಸಬೇಕು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಕುಂದು ಕೊರತೆ ಸಭೆಗೆ ಸಂಬಂಧ ಪಟ್ಟ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿರುವಂತೆ ಸೂಚನೆ ನೀಡಬೇಕು ಎಂದರು.

ಗ್ರಾಮೀಣ ಭಾಗದಲ್ಲಿ ಅಕ್ರಮ ಮದ್ಯ ಮಾರಾಟ ಮಾಡಲಾಗುತ್ತಿದೆ, ಮದ್ಯಪಾನದಿಂದ ಅನೇಕ ಕುಟುಂಬಗಳು ಆರ್ಥಿಕವಾಗಿ ಬೀದಿ ಪಾಲಾಗುತ್ತವೆ. ಗಂಡಸರು ದುಡಿದ ಹಣವನ್ನೆಲ್ಲಾ ಮದ್ಯಕ್ಕೆ ಸುರಿದು, ಸಂಸಾರ ನಿರ್ವಹಣೆಗೆ ಕಷ್ಟವಾಗುತ್ತದೆ.ಯುವಕರು ಮದ್ಯದ ದಾಸರಾಗಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ ಕೂಡಲೇ ಇದಕ್ಕೆಕಡಿವಾಣ ಹಾಕುವಂತೆ ಡಿಎಸ್ ಎಸ್ ಸಂಚಾಲಕ ಅವಿನಾಶ ಬಾಣಿಕೂಲ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ ವೈ ಎಸ್ ಸೋಮನಕಟ್ಟಿ, ಡಿವೈಎಸ್ ಪಿ ಇದ್ದರು.

ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಾಳೆ

ದೇವರಹಿಪ್ಪರಗಿ: ಮೇ 2ರಂದು ಪಟ್ಟಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ ಬಿ ಪಾಟೀಲ ಅವರು ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ ಜತೆಗೆ ಬ್ಲಾಕ್ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರ ಮಹತ್ವದ ಸಭೆ ನಡೆಸಲಿದ್ದಾರೆ ಎಂದು ಕೆಪಿಸಿಸಿ ರಾಜ್ಯ ಪ್ರಧಾನಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ ಹೇಳಿದರು.

ಗುರುವಾರ ಸಂಜೆ ಇಲ್ಲಿನ ಪ್ರವಾಸಿಮಂದಿರದಲ್ಲಿ ಏರ್ಪಡಿಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 9ಗಂಟೆಗೆ ಪಡಗಾನೂರ ಕ್ರಾಸ್ದಿಂದ ಡಾ. ಅಂಬೇಡ್ಕರ ವೃತ್ತದವರೆಗೆ ಬೈಕ್ ರ‍್ಯಾಲಿ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ ಬಿ ಪಾಟೀಲ ಅವರನ್ನು ದೇವರಹಿಪ್ಪರಗಿಗೆ ಕರೆತರಲಾಗುವುದು. ಡಾ. ಅಂಬೇಡ್ಕರ ಮೂರ್ತಿಗೆ ಮಾಲಾರ್ಪಣೆ ಮಾಡಿ, ನೂತನ ಪಟ್ಟಣ ಪಂಚಾಯತಿ ಕಟ್ಟಡ ಉದ್ಘಾಟಿಸಿ, ನಂತರ ಹೊಸನಗರದಲ್ಲಿ ನಿರ್ಮಿಸಿರುವ ನೂತನ ಸಮುದಾಯ ಆರೋಗ್ಯ ಕೇಂದ್ರದ ಉದ್ಘಾಟನೆ ಮಾಡಲಿದ್ದಾರೆ. ನಂತರ ಮಧ್ಯಾಹ್ನ ಒಂದು ಗಂಟೆಗೆ ಪರದೇಶಿಮಠದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ದೇವರಹಿಪ್ಪರಗಿ ಮತಕ್ಷೇತ್ರದ ಕಾರ್ಯಕರ್ತರ ಸಭೆ ನಡೆಯಲಿದೆ. ಸಭೆಯಲ್ಲಿ ಬ್ಲಾಕ್ ಘಟಕದ ವಿವಿಧ ಪದಾಧಿಕಾರಿಗಳು ಕಾರ್ಯಕರ್ತರು, ಬಿಎಲ್‌ಎಗಳ ಮಹತ್ವದ ಸಭೆ ನಡೆಸಲಿದ್ದಾರೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ವಿನಂತಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ರಾಜ್ಯ ಪ್ರಧಾನಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಗಡಿಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸುಭಾಷ ಛಾಯಾಗೋಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಶೀರಹಮ್ಮದ ಬೇಪಾರಿ, ಹೂವಿನಹಿಪ್ಪರಗಿ ಬ್ಲಾಕ್ ಅಧ್ಯಕ್ಷ ಬಾಳನಗೌಡ ಪಾಟೀಲ, ಮುಖಂಡರಾದ ಮುನೀರಹಮ್ಮದ ಬಿಜಾಪೂರ, ಮುರ್ತುಜ ತಾಂಬೋಳಿ ಸೇರಿದಂತೆ ಮತ್ತೀತರರು ಇದ್ದರು.

ಅನ್ನದಾನೇಶ್ವರ ಮಠದ ಜಾತ್ರೆ ಇಂದು

ಆಲಮಟ್ಟಿ: ಆಲಮಟ್ಟಿ ಪುರವರ ಹಿರೇಮಠದ ಅನ್ನದಾನೇಶ್ವರ ಶಿವಯೋಗಿಗಳ ಜಾತ್ರೆ ಇಂದು (ಬೌದ್ಧ ಪೂರ್ಣಿಮೆ) ನಡೆಯಲಿದೆ

ಅನ್ನದಾನೇಶ್ವರ ಶಿವ ಯೋಗಿಗಳ ಕರ್ತೃ ಗದ್ದುಗೆಗೆ ಮಹಾರುದ್ರಾಭಿ-ಷೇಕ, ಸಹಸ್ರ ಬಿಲ್ವಾರ್ಚನೆ ಮತ್ತು ಹಾಮಂಗಳಾರತಿ ನಡೆಯ ಲಿದೆ. ಬೆಳಿಗ್ಗೆ 8.30ಕ್ಕೆ ಬೆಳಿಗ್ಗೆ ಷಟಸ್ಥಲ ಧ್ವಜಾರೋಹಣವನ್ನು ನಿಡಗುಂದಿಯ ರುದ್ರಮುನಿ ಸ್ವಾಮೀಜಿ ಹಾಗೂ ರಾಷ್ಟ್ರೀಯ ಧ್ವಜಾರೋಹಣವನ್ನು ಭರತರಾಜ ದೇಶಮುಖ ನೆರವೇರಿಸುವರು. 9 ಕ್ಕೆ ಶಿವದೀಕ್ಷೆ ನಡೆಯಲಿದೆ.

ಮಧ್ಯಾಹ್ನ 3.30 ಪಲ್ಲಕ್ಕಿ ಉತ್ಸವವು ಆಲಮಟ್ಟಿ ಆರ್. ಎಸ್. ನ ಬಸವಣ್ಣ ದೇವಸ್ಥಾನದಿಂದ ಸಕಲ ವಾದ್ಯ ವೈಭವದೊಂದಿಗೆ ಹೊರಟು ಆಲಮಟ್ಟಿ ವೃತ್ತ ಮೂಲಕ ಶ್ರೀಮಠಕ್ಕೆ ಆಗಮಿಸಲಿದೆ.

ಧರ್ಮ ಸಭೆ: ಸಂಜೆ 5 ಕ್ಕೆ ನಡೆಯುವ ಧರ್ಮಸಭೆಯಲ್ಲಿ ನಿಡಗುಂದಿಯ ರುದ್ರಮುನಿ ಸ್ವಾಮೀಜಿ ಸ್ವಾಮೀಜಿ, ಗಿರಿಸಾಗರದ ರುದ್ರಮುನಿ ಸ್ವಾಮೀಜಿ,

ಮುತ್ತತ್ತಿಯ ಗುರುಲಿಂಗ ಸ್ವಾಮೀಜಿ, ಬಿಲ್ ಕೆರೂರಿನ ಸಿದ್ದಲಿಂಗ ಸ್ವಾಮೀಜಿ, ಕೊಣ್ಣೂರಿನ ವಿಶ್ವಪ್ರಭುದೇವ ಸ್ವಾಮೀಜಿ, ಚುಂಚನಹಳ್ಳಿಯ ಚನ್ನಬಸವ ಸ್ವಾಮೀಜಿ, ಹಲ್ಯಾಳದ ಹರ್ಷಾನಂದ ಸ್ವಾಮೀಜಿ, ಚಿಮ್ಮಲಗಿಯ ಸಿದ್ದರೇಣುಕ ಸ್ವಾಮೀಜಿ, ನಂದವಾಡಗಿಯ ಅಭಿನವ ಚನ್ನಬಸವ ಸ್ವಾಮೀಜಿ, ಹುನಗುಂದದ ಅಮರೇಶ್ವರ ದೇವರು ಪಾಲ್ಗೊಳ್ಳಲಿದ್ದಾರೆ. ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ.

ಶ್ರೀಮಠದ ಪೀಠಾಧಿಪತಿ ರುದ್ರಮುನಿ ಸ್ವಾಮೀಜಿಯವರು ಅನ್ನದಾನೇಶ್ವರ ಜಾತ್ರೆಯ ಸಕಲ ಧಾರ್ಮಿಕ ಕಾರ್ಯಕ್ರಮಗಳ ನೇತೃತ್ವ ವಹಿಸಲಿದ್ದಾರೆ. ಇಡೀ ದಿನ ಅನ್ನದಾಸೋಹ ಇರಲಿದೆ.

ಸಮಾನತೆ,ಸಾಮಾಜಿಕ ನ್ಯಾಯ ಒದಗಿಸಿದವರು ಅಂಬೇಡ್ಕರ್

ಇಂಡಿ: ಮಹಾನ್ ಮಾನವತಾವಾದಿ ಡಾ. ಬಿ. ಆರ್.ಅಂಬೇಡ್ಕರ ಆಧುನಿಕ ಭಾರತದ ನಿರ್ಮಾತೃ ಶೋಷಿತ ಸಮುದಾಯಗಳ ಬಿಡುಗಡೆಗಾಗಿ ಶ್ರಮಿಸಿದವರು. ಮಹಿಳೆಯರ ಸ್ವಾವಲಂಬನೆ ಬದುಕಿಗಾಗಿ ಹೋರಾಡಿದವರು.ಸ್ವಾತಂತ್ರ್ಯ,ಸಮಾನತೆ ಭ್ರಾತೃತ್ವ ಹಾಗೂ ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಭಾರತ ಸಂವಿಧಾನವನ್ನು ಬರೆಯುವ ಮೂಲಕ ಆಧುನಿಕ ಪ್ರಜಾಪ್ರಭುತ್ವ ಭಾರತವನ್ನು ರೂಪಿಸಿದವರು ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ನಗರದ ಅಂಬೇಡ್ಕರ ನಗರದಲ್ಲಿ ಗೌತಮ ಬುದ್ದರ 2570 ನೇ ಬುದ್ಧ ಪೂರ್ಣಿಮೆ ಮತ್ತು ಡಾ. ಬಾಬಾಸಾಹೇಬ ಅಂಬೇಡ್ಕರರ 135 ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಫೀಉಪನ್ಯಾಸ ನೀಡಿ ಮಾತನಾಡಿದ ಕಲಬುರಗಿ ಕರ್ನಾಟಕ ಕೇಂದ್ರೀಯ ವಿ ವಿಯ ಪ್ರಾಧ್ಯಾಪಕ ಡಾ. ಅಪ್ಪಗೆರೆ ಸೋಮಶೇಖರ ಮಾತನಾಡಿ ಬಾಬಾ ಸಾಹೇಬ ಅಂಬೇಡ್ಕರ ಅವರು ರಚಿಸಿದ ಭಾರತ ಸಂವಿಧಾನದ ಮೂಲಕ ಈ ದೇಶದ ಎಲ್ಲಾ ಜಾತಿ ಧರ್ಮ ಮತ ಪಂಥ ಸಮುದಾಯಗಳಿಗೂ ಶಿಕ್ಷಣ, ಉದ್ಯೋಗ ರಾಜಕೀಯ ಅಧಿಕಾರ ಮತದಾನ ಹಕ್ಕು ನ್ಯಾಯ ಮೂಲಭೂತ ಇತ್ಯಾದಿಗಳನ್ನು ಕಲ್ಪಿಸಿದವರು ಹಾಗಾಗಿ ಸಮಸ್ತ ಭಾರತೀಯರು ಡಾ. ಬಿ.ಆರ್‌ಅಂಬೇಡ್ಕರ ಹಾಗೂ ಭಾರತ ಸಂವಿಧಾನ ಋಣದ ಮಕ್ಕಳು ಎಂದರು.

ಇಂಡಿ ನಗರದ ಅಂಬೇಡ್ಕರ ನಗರದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲರು ಮಾತನಾಡಿದರು.

ಬುದ್ಧ ವಿಹಾರ ಸಿಂದಗಿಯ ಸಂಘಪಾಲ ಬಂತೇಜಿ ಮಾತನಾಡಿ, ಅಂಬೇಡ್ಕರ ಜಯಂತಿ ಆಚರಣೆಗಳಾಗುತ್ತಿವೆ, ಅನುಸರಣೆಗಳಾಗಬೇಕು, ಅಂಬೇಡ್ಕರ ಬದುಕಿದ್ದಾಗಲೂ ಅವರನ್ನು ಅವಮಾನಿಸಲಾಗಿದೆ. ಸತ್ತ ನಂತರವೂ ಅವಮಾನಿಸಲಾಗುತ್ತಿದೆ. ದಲಿತೇತರ ಸಮುದಾಯಗಳು ಅಂಬೇಡ್ಕರರ ಸಾದನೆ ಅರ್ಥ ಮಾಡಿಕೊಳ್ಳುವಲ್ಲಿ ಸೋತಿವೆ ಎಂದರು.

ವಿಕಾಸ ಗುಡಿಮನಿ, ಪ್ರೊ. ಎಸ್.ಜೆ. ಮಾಡ್ಯಾಳ, ಪ್ರಶಾಂತ ಕಾಳೆ, ಸಾದ್ವಿ ಬಸವರಾಜ ಮಾಶ್ಯಾಳ ಮಾತನಾಡಿದರು. ವೇದಿಕೆಯ ಮೇಲೆ ಬಿ.ಡಿ.ಪಾಟೀಲ ,ಡಿ.ವಾಯ್ ಎಸ್ ಪಿ ಸದಾಶಿವ ಕಟ್ಟಿಮನಿ, ಸತ್ತಾರ ಬಾಗವಾನ, ಅಯೂಬ ನಾಟಿಕಾರ, ಶಿವು ಬಗಲಿ,ಮಲ್ಲಪ್ಪ ಕಾಲೇಭಾಗ, ಭೀಮಾಶಂಕರ ಮೂರಮನ, ಬುದ್ದವ್ವ ಕಾಳೆ,ಮಿಲಿಂದ ಹೊಸಮನಿ,ಮೋಹನ ಕಾಳೆ, ಭೀಮಣ್ಣ ಕೌಲಗಿ, ಜಟ್ಟೆಪ್ಪ ರವಳಿ, ಅಜೀತ ಧನಶೆಟ್ಟಿ, ನಿಜಣ್ಣ ಕಾಳೆ ಮತ್ತಿತರಿದ್ದರು.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ವಿಜಯಪುರ: ತಿಕೋಟಾ ಪಟ್ಟಣದಲ್ಲಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಐಟಿಐ ಯಲ್ಲಿ 2026-27ನೇ ಸಾಲಿನ ಪ್ರವೇಶಾವಶಕ್ಕಾಗಿ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಎರಡು ವರ್ಷದ ಎಲೆಕ್ಟ್ರಿಷಿಯನ್, ಫಿಟ್ಟರ್,ವೃತ್ತಿಗಳಲ್ಲಿ ಪ್ರವೇಶ ಪಡೆಯಲು ಏ.27 ರಿಂದ ಅರ್ಜಿ ಪ್ರಕ್ರಿಯೆ ಪ್ರಾರಂಭವಾಗಿದ್ದು, 08-04-2026 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಟಾಟಾ ಯೋಜನೆ ಅಡಿಯಲ್ಲಿ ಮೆಕ್ಯಾನಿಕ್ ಎಲೆಕ್ಟ್ರಿಕ್ ವಾಹನ, ಇಂಡಸ್ಟ್ರಿಯಲ್ ರೊಬೋಟಿಕ್ ಡಿಸೈನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್, ಸಿಎನ್ಸಿ ಮ್ಯಾನುಫ್ಯಾಕ್ಚರಿಂಗ್ ಪ್ರೊಸೆಸ್, ಆಟೋನಾಮಸ್, ವರ್ಚುವಲ್



ಅನಾಲಿಸಿಸ್ ಅಂಡ್ ಡಿಸೈನರ್‌ಹಾಗೂ ಎಂಜಿನಿಯರಿಅಗ್ ಡಿಸೈನ್ ಟೆಕ್ನಿಷಿಯನ್ ಸೇರಿದಂತೆ ಒಟ್ಟು 06 ವೃತ್ತಿಗಳಲ್ಲೂ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ತಿತಿತಿ. ಛಿಇಣಡಿಜ.ಇಚಿಡಿ.ಟಿಜಿಛಿ.ಜಿಟಿ ಹಾಗೂ ತಿತಿತಿ. ಜಛಿಣಇಚಿಡಿಟಿಚಿಣಚಿಞಚಿ.ಟಡಿಜ.ಜಿಟಿ ವೆಬ್ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪೋ ಸಂಖ್ಯೆ: 9449501663, 9739985422, 9886247718, 9902109750. ಮೂಲಕ ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗರಿಕಾ ತರಬೇತಿ ಸಂಸ್ಥೆ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಬಸವಸೈನ್ಯ ಸಂಘಟನೆ ಕಾರ್ಯ ಶ್ಲಾಘನೀಯ

ಬಸವನಬಾಗೇವಾಡಿ: ಬಸವ ಜಯಂತಿಯಂತಹ ಪವಿತ್ರ ಸಂದರ್ಭದಲ್ಲಿ ಯುವಶಕ್ತಿಯನ್ನು ಒಗ್ಗೂಡಿಸಲು ಇಂತಹ ಪಂದ್ಯಾವಳಿಗಳು ಪೂರಕವಾಗಿವೆ, ಎಂದು ವಿಡಿಸಿಸಿ ಬ್ಯಾಂಕ್ ನಿರ್ದೇಶಕಿ ಸಂಯುಕ್ತ ಪಾಟೀಲ ಹೇಳಿದರು.

ಪಟ್ಟಣದ ಬಸವೇಶ್ವರ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ರಾಷ್ಟ್ರೀಯ ಬಸವಸೈನ್ಯ ಹಾಗೂ ಗೆಳೆಯರ ಬಳಗ ಆಯೋಜಿಸಿದ್ದ ಬಸವನಬಾಗೇವಾಡಿ ಪ್ರಿಮಿಯರ ಲೀಗ್ 2026 ಸೀಜನ್ 1 ರ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಷ್ಟ್ರೀಯ ಬಸವಸೈನ್ಯ ಸಂಘಟನೆಯು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗದೆ, ಯಾವಾಗಲೂ ಜನಪರ, ಸಾಮಾಜಿಕ, ಧಾರ್ಮಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ನಿರಂತರವಾಗಿ ಉತ್ತೇಜನ ನೀಡುತ್ತಾ ಬಂದಿರುವುದು ಹೆಮ್ಮೆಯ ವಿಷಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೀಯ ಬಸವಸೈನ್ಯ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಮಾತನಾಡಿ, ಬಸವನಬಾಗೇವಾಡಿ ಹಾಗೂ ದೇವರಹಿಪ್ಪರಗಿ ಮತಕ್ಷೇತ್ರದ ಯುವ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುವುದು ಮತ್ತು ಕ್ರೀಡೆಯ ಮೂಲಕ ಯುವಕರಲ್ಲಿ ಒಗ್ಗಟ್ಟು ಹಾಗೂ ಸಾಮಾಜಿಕ ಸೌಹಾರ್ದತೆಯನ್ನು ಬೆಳೆಸುವುದು ನಮ್ಮ ಸಂಘಟನೆಯ ಮುಖ್ಯ ಉದ್ದೇಶವಾಗಿದೆ. ರಾಷ್ಟ್ರೀಯ ಬಸವಸೈನ್ಯವು ಸದಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬೆಂಬಲವಾಗಿ ನಿಲ್ಲುತ್ತದೆ. ಆಟಗಾರರು ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಅತ್ಯುತ್ತಮ ಪ್ರದರ್ಶನ ನೀಡಿ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ.ಪಿ.ಎಲ್.ಡಿ ಬ್ಯಾಂಕಿನ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿದರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಡಾ. ಬಸವರಾಜ ಕೋಟಿ ಇದ್ದರು.

ಸುಮಾರು 2500 ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಡಲು ಸಂಕಲ್ಪ: ಪ್ರಭುಗೌಡ ಬಿರಾದಾರ

ಬಿಎಎಸ್ ಸಂಸ್ಥೆಯಿಂದ ಬೃಹತ್ ಉದ್ಯೋಗ ಮೇಳ 3ಕ್ಕೆ

ವಿಶ್ವವಾಣಿ ಸುದ್ದಿಮನೆ ಮುದ್ದೇಬಿಹಾಳ:

ಗ್ರಾಮೀಣ ಪ್ರತಿಭೆಗಳಿಗೆ ನಮ್ಮ ಸಂಸ್ಥೆಗೆ ಸಿಬಿಎಸ್ಸಿಯಿಂದ ಪರವಾನಗಿ ದೊರಕಿದ್ದು ಸಂತಸ ತಂದಿದೆ. ಇದರಿಂದ ಗ್ರಾಮೀಣ ಅಭ್ಯರ್ಥಿಗಳ ಕಲಿಕೆಗೆ ಇನ್ನೂ ಹೆಚ್ಚಿನ ಶಕ್ತಿ ದೊರಕಿದಂತಾಗುತ್ತದೆ ಎಂದು ಬಿಎಎಸ್ ಇಂಟರ್ನ್ಯಾಷನಲ್ ಸ್ಕೂಲ್ ಆಡಳಿತಾಧಿಕಾರಿ ಪ್ರಭುಗೌಡ ಬಿರಾದಾರ ಹೇಳಿದರು.

ತಾಲೂಕಿನ ಹಡಲಗೇರಿ ವ್ಯಾಪ್ತಿಯ ಬಿಎಎಸ್ ಇಂಟರ್ನ್ಯಾಷನಲ್ ಸ್ಕೂಲ್ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹುಮುಖ್ಯವಾಗಿ ನಮ್ಮ ಸಂಸ್ಥೆಯನ್ನು ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದೊಂದಿಗೆ ನಿಡುವುದರಲ್ಲಿ ನಮ್ಮ ಸಂಸ್ಥೆ ಯಶಸ್ವಿಯಾಗಿದೆ ಎಂದು ಹೇಳಿದರು.

ಶೈಕ್ಷಣಿಕ ಸಂಯೋಜಕ ಸತೀಶ ವಾಲಿಕಾರ ಮಾತನಾಡಿ, ಈ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅತೀ ಕಡಿಮೆ ಸಮಯದಲ್ಲಿ ಸಿಬಿಎಸ್ಸಿಯಿಂದ ಪವರಾಣಿಗೆ ದೊರಕಿದ್ದು ಇದರಿಂದ ಮಕ್ಕಳು ಶೈಕ್ಷಣಿಕವಾಗಿ ಸರ್ವೋತಮ ಬೆಳವಣಿಗೆಯಿಂದ ಬೆಳೆಯುತ್ತಾರೆ ಎನ್ನುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಆಡಳಿತಾಧಿಕಾರಿ ಪ್ರಭುಗೌಡ ಬಿರಾದಾರ ಮಾತನಾಡಿದರು.

ಮೇ 3 ರಂದು ಬಿಎಎಸ್ ಸಂಸ್ಥೆಯಿಂದ ಬೃಹತ್ ಉದ್ಯೋಗ ಮೇಳ: ಮುದ್ದೇಬಿಹಾಳ ತಾಲೂಕಿನ ಬಿಎಎಸ್ ಶಿಕ್ಷಣ ಸಂಸ್ಥೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡುವಲ್ಲಿ ಮಾತ್ರವಲ್ಲದೇ ಪ್ರತಿಭಾವಂತ ನಿರುದ್ಯೋಗಿ ಯುವಕರಿಗೆ ಅವರ ಪ್ರತಿಭೆ ತಕ್ಕವಾಗಿ ಉದ್ಯೋಗವನ್ನು ನೀಡುವಲ್ಲಿಯೂ ಸಂಕಲ್ಪವನ್ನು ಮಾಡಿದ್ದು ಬರುವ ಮೇ.3 ರಂದು ನಮ್ಮ ಸಂಸ್ಥೆಯಲ್ಲಿ ಸುಮಾರು 2500 ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಡಲು ಉದ್ಯೋಗ ಮೇಳವನ್ನು ಹಮ್ಮಿಕೋಳ್ಳಲಾಗಿದೆ ಎಂದು ಸಂಸ್ಥೆ ಆಡಳಿತಾಧಿಕಾರಿ ಪ್ರಭುಗೌಡ ಬಿರಾದಾರ ಹೇಳಿದರು.

ಮೇ ತಿಂಗಳಲ್ಲಿ ನಡೆಯುವ ಉದ್ಯೋಗ ಮೇಳದಲ್ಲಿ ಎಸ್‌ಎಸ್‌ಎಲ್ಸಿ,ಪಿಯುಸಿ,ಡಿಪ್ಲೋಮಾ ಅಥವಾ ಯಾವುದೇ ಪದವಿ ಉತ್ತೀರ್ಣವಾದರೂ ಇಲ್ಲವಾದರೂ ಅಂತಹ ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ನಮ್ಮ ಸಂಸ್ಥೆಯು ಈಗಾಗಲೇ ನೂರಾರು ಉನ್ನತ ಎಂಎನ್ಸಿ ಪಂಕನಿಗಳೊಂದಿಗೆ ಒಡನಾಟವಿದ್ದು ರಾಜ್ಯದ ದಕ್ಷಿಣ ಭಾಗದ ಬೆಂಗಳೂರು, ಕೋಲಾರ, ದೊಡ್ಡಬಳ್ಳಾಪೂರು, ಮೈಸೂರು ಸೇರಿದಂತೆ ಅನೇಕ ಜಿಲ್ಲೆಗಳಲ್ಲಿರುವ ವಿವಿಧ ಖಾಸಗಿ ಕಂಪನಿಗಳಲ್ಲಿ ಇರುವ ಉದ್ಯೋಗವನ್ನು ಉತ್ತರ ಕರ್ನಾಟಕ ಭಾಗದ ನಿರುದ್ಯೋಗಿ ಯುವಕರಿಗೆ ದೊರಕಿಸಿಕೊಡುವ ಸಂಕಲ್ಪವನ್ನು ಹೊಂದಿಗೆ. ಇದಕ್ಕಾಗಿ ನಮ್ಮ ಸಂಸ್ಥೆಯಲ್ಲಿ ಮೇ.3 ರಂದು ಬೆಳಿಗ್ಗೆ 9 ಗಂಟೆಯಿಂದ ಉದ್ಯೋಗ ಮೇಳದಲ್ಲಿ ಭಾಗವಹಿಸುವ ಎಲ್ಲಾ ನಿರುದ್ಯೋಗ ಯುವಕರು ತಮ್ಮ ಎಲ್ಲಾ ಮೂಲ ದಾಖಲೆಗಳೊಂದಿಗೆ ಆಗಮಿಸಿ ಉದ್ಯೋಗ ಮೇಳದಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡಲಾಗುತ್ತಿದೆ ಎಂದು ಸಂಸ್ಥೆ ಆಡಳಿತಾಧಿಕಾರಿ ಪ್ರಭುಗೌಡ ಬಿರಾದಾರ ಹೇಳಿದರು.

ಸ್ಥಳದಲ್ಲಿಯೇ ಉದ್ಯೋಗದ ಪ್ರಮಾಣಪತ್ರ: ಉದ್ಯೋಗ ಮೇಳದಲ್ಲಿ ಭಾಗವಹಿಸುವ ಎಲ್ಲಾ ನಿರುದ್ಯೋಗಿ ಯುವಕರಿಗೆ ಆಯಾ ಕಂಪನಿಗಳ ತೆಗೆದುಕೊಳ್ಳುವ ಸಂದರ್ಶನ ಮೂಲಕ ಅವರ ಕೆಲಸದ ಪ್ರಮಾಣ ಪತ್ರವನ್ನು ಸ್ಥಳದಲ್ಲಿಯೇ ನೀಡಲಾಗುತ್ತದೆ. ನಂತರ ಆಯಾ ಕಂಪನಿಗಳ ನಿಯಮದಂತೆ ಯುವಕರು ಕಂಪನಿಯ ಮೂಲ ಸ್ಥಾನಗಳಲ್ಲಿ ಉದ್ಯೋಗವನ್ನು ಮಾಡಬಹುದಾಗಿದೆ.

ಊಟ ವಸತಿಗೂ ಅನುಕೂಲ ಮಾಡಿರುವ ಬಿಎಎಸ್ ಸಂಸ್ಥೆ

ಉದ್ಯೋಗ ಮೇಳದಲ್ಲಿ ಸೇರುವ ಬಹುತೇಕ ಸುತ್ತಮುತ್ತಲಿನ ಜಿಲ್ಲೆಗಳ ಯುವಕ ಯುವತಿಯರಿಗೆ ಬಿಎಎಸ್ ಸಂಸ್ಥೆಯಿಂದ ಉಚಿತವಾಗಿ ಊಟ ಮತ್ತು ವಸತಿಯನ್ನು ಕಲ್ಪಿಸಲಾಗುತ್ತದೆ. ಇದರ ಸದುಪಯೋಗವನ್ನು ಯುವಕ ಯುವತಿಯರು ಪಡೆದುಕೊಳ್ಳಬೇಕು ಎಂದು ಸಂಸ್ಥೆ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 91 08445003,9187229281,9108445005,9353158101 ದೂರವಾಣಿಗಳಿಗೆ ಸಂಪರ್ಕಿಸಬಹುದಾಗಿದೆ.

ಅತೀ ಕಡಿಮೆ ಅವಧಿಯಲ್ಲಿಯೆ ನಮ್ಮ ಸಂಸ್ಥೆಗೆ ಕೇಂದ್ರದಿಂದ ಸಿಬಿಎಸ್ಸಿ ಪರವಾಣಿಗೆ ದೊರಕಿದ್ದು ನಮ್ಮ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ನೀಡಲಾದ ಸೌಲಭ್ಯ ಮತ್ತು ಸ್ಥಳೀಯ ಪಾಲಕರ ಉತ್ಸಾದಿಂದಾಗಿದೆ. ಇದರಿಂದ ನಮ್ಮ ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.''

-ಸುಮಂಗಲಾ ಬಿರಾದಾರ,
ಕಾರ್ಯದರ್ಶಿಗಳು, ಬಿಎಎಸ್ ಸಂಸ್ಥೆ,
ಮುದ್ದೇಬಿಹಾಳ.

ಪಂಚರಾಜ್ಯ ಪವರ್ ವಾರ್

ಆಗುವರೇ ಪಿಣರಾಯಿ ಹ್ಯಾಟ್ರಿಕ್ ವಿಜಯನ್?

ಎಲ್‌ಡಿಎಫ್ ಕನಸಿಗೆ ಯುಡಿಎಫ್ ಅಡ್ಡಗಾಲಾಗುವ ಸಾಧ್ಯತೆ

ಹಿನ್ನಡೆಗೆ ಆಡಳಿತವಿರೋಧಿ ಅಲೆಯೇ ಕಾರಣ ಎಂದಿದೆ ಸಮೀಕ್ಷೆ

ತಿರುವನಂತಪುರಂ: ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಮುಗಿದು, ಮತದಾರರು ಒತ್ತಿದ ಬೆರಳಮುದ್ರೆಗಳು ವಿದ್ಯುನ್ಮಾನ ಮತಯಂತ್ರದಲ್ಲಿ ಬೆಚ್ಚಗೆ ಕುಳಿತಿವೆ. ಈ ಚುನಾವಣೆಗಳಿಗೆ ಸಂಬಂಧಿಸಿ ಮತದಾನೋತ್ತರ ಸಮೀಕ್ಷೆಗಳೂ ಹೊರಬಿದ್ದಾಗಿದೆ. ಆದರೆ ಅಸಲಿಯತ್ತು ಬಯಲಾಗೋದು ಮತಗಳ ಎಣಿಕೆಯ ದಿನವಾದ ಮೇ 4ರಂದು.

ಕುತೂಹಲದ ಮೂಟೆ: ಈ ಪೈಕಿ, ಕೇರಳ ರಾಜ್ಯದಲ್ಲಿ ಹೊಮ್ಮಬಹುದಾದ ಫಲಿತಾಂಶ ಈಗಾಗಲೇ ಸಾಕಷ್ಟು ಕುತೂಹಲವನ್ನು ಹುಟ್ಟುಹಾಕಿದೆ. ಏಕೆಂದರೆ, ಪ್ರತಿ ಐದು ವರ್ಷಕ್ಕೊಮ್ಮೆ ಆಡಳಿತಾರೂಢ ರಾಜಕೀಯ ಪಕ್ಷವನ್ನು ಬದಲಿಸುವ ಪರಿಪಾಠವಿರುವ ಕೇರಳಿಗರು, 2021ರ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗಕ್ಕೆ (ಎಲ್‌ಡಿಎಫ್) ಎರಡನೇ ಬಾರಿಗೆ ಓಗೊಟ್ಟಿದ್ದರು, ವೋಟು ಕೊಟ್ಟಿದ್ದರು. ಇದು ಕೇರಳ ರಾಜಕೀಯ ಇತಿಹಾಸದಲ್ಲಿ ಒಂದು ಅನನ್ಯತೆಗೆ ಕಾರಣವಾಗಿತ್ತು. ಪಿಣರಾಯಿ ಜೈತ್ರಯಾತ್ರೆ ಈ ಸಲವೂ ಮುಂದುವರಿಯಲಿದೆ ಎಂಬುದು ಅವರ ಅಭಿಮಾನಿಗಳ ನಿರೀಕ್ಷೆಯಾಗಿದ್ದರೆ, ಕಾಂಗ್ರೆಸ್ ನೇತೃತ್ವದ 'ಯುಡಿಎಫ್' ಪಾಳಯ ಈ ನಿರೀಕ್ಷೆಗೆ ತೊಡರುಗಾಲು ನೀಡಲಿದೆ ಎಂದು ಬಹುತೇಕ ಸಮೀಕ್ಷೆಗಳು 'ಗಿಳಿಶಾಸ್ತ್ರ' ಹೇಳಿವೆ.

ಆಡಳಿತವಿರೋಧಿ ಅಲೆ: ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು 'ಸಾಂಪ್ರದಾಯಿಕ ಎದುರಾಳಿ'ಗಳಾಗಿರುವಂತೆಯೇ, ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಪಾಳಯಗಳು ಪ್ರತಿ ಚುನಾವಣೆಯಲ್ಲೂ ತೊಡೆ ತಟ್ಟುತ್ತವೆ. ಎರಡು ಬಾರಿ 'ಸಿಂಹಾಸನಸುಖ' ಕಂಡಿರುವ ಎಲ್‌ಡಿಎಫ್‌ನ ಪಿಣರಾಯಿ ವಿಜಯನ್‌ರ ಕನಸನ್ನು ಈ ಬಾರಿ ಯುಡಿಎಫ್ ಭಂಗಗೊಳಿಸಲಿದೆ ಎಂಬ ಗ್ರಹಿಕೆಗೆ ಕಾರಣವಾಗಿರುವುದು ಆಡಳಿತ ವಿರೋಧಿ ಅಲೆ. ಇದು ಸತತವಾಗಿ ಅಧಿಕಾರದಲ್ಲಿರುವವರಿಗೆ ಸಾಮಾನ್ಯವಾಗಿ ಒದಗುವ ಪರಿಸ್ಥಿತಿ. ವಿವಿಧ ಜನಕಲ್ಯಾಣ ಯೋಜನೆಗಳು, 'ನವಕೇರಳಂ' ಅಭಿವೃದ್ಧಿ ಮಾದರಿ ಮುಂತಾದವು ಎಡರಂಗ ಸರಕಾರದ ಪಾಲಿಗೆ 'ಟ್ರಂಪ್ ಕಾರ್ಡ್' ಆಗಿರುವುದೇನೋ ನಿಜ; ಆದರೆ ಕೃಷಿ ಕ್ಷೇತ್ರದಲ್ಲಿ ತಲೆದೋರಿರುವ ಬಿಕ್ಕಟ್ಟು, ರಾಜ್ಯದ ಹೆಗಲೇರಿರುವ ಸಾಲದ ಹೊರೆ, ನಿರುದ್ಯೋಗ ಸಮಸ್ಯೆ, ಬೆಲೆಯೇರಿಕೆ ಮುಂತಾದ ಅಂಶಗಳು ಪಿಣರಾಯಿ ಸರಕಾರದ 'ಹ್ಯಾಟ್ರಿಕ್' ಸಾಧನೆಯ ಓಟಕ್ಕೆ ಅಡ್ಡಗಾಲು ಹಾಕಲಿವೆ ಎನ್ನುತ್ತವೆ ಸಮೀಕ್ಷೆಗಳು.

ಸಮೀಕ್ಷಾಸಾರ

140 ಸದಸ್ಯಬಲದ ಕೇರಳ ವಿಧಾನಸಭೆಯಲ್ಲಿ ಪಕ್ಷವೊಂದು ಅಧಿಕಾರದ ಗದ್ದುಗೆಗೆ ಏರಲು ಬೇಕಿರುವ ಮ್ಯಾಜಿಕ್ ಸಂಖ್ಯೆ 71 ಆಗಿದೆ. 2021ರ ಚುನಾವಣೆಯಲ್ಲಿ ಎಲ್‌ಡಿಎಫ್‌ಗೆ 99, ಯುಡಿಎಫ್‌ಗೆ 41 ಸ್ಥಾನಗಳು ದಕ್ಕಿದ್ದವು. ಈ ಸಲ, ಬಹುತೇಕ ಸಮೀಕ್ಷೆಗಳು ನೀಡಿರುವ ಅಂಕಿಅಂಶಗಳನ್ನು ಗಮನಿಸಿದರೆ, ಮತದಾರರ ಮತದ ತಕ್ಕಡಿಯು ಯುಡಿಎಫ್ ಪಾಳಯದ ಕಡೆಗೆ ವಾಲುವ ನಿರೀಕ್ಷೆಯಿದೆ. ಅಂದರೆ ಸಮೀಕ್ಷೆಯಲ್ಲಿ, ಯುಡಿಎಫ್‌ಗೆ ಮ್ಯಾಟ್ರಿಜ್ ಮತ್ತು ಪಿಮಾರ್ಕ್ ಸಂಸ್ಥೆಗಳು ಸರಳ ಬಹುಮತವನ್ನು ನೀಡಿದ್ದರೆ, ಮಿಕ್ಕವು ಸ್ಪಷ್ಟ ಬಹುಮತವನ್ನು ನೀಡಿವೆ. ಈ ಸಮೀಕ್ಷಾ ಸಂಸ್ಥೆಗಳ ಗ್ರಹಿಕೆಯ ಪಕ್ಷಿನೋಟ ಇಲ್ಲಿದೆ ನೋಡಿ.

ಒಟ್ಟು ಸ್ಥಾನಗಳು: 140 ಮ್ಯಾಜಿಕ್ ಸಂಖ್ಯೆ: 71

ಸಮೀಕ್ಷಾ ಸಂಸ್ಥೆ	ಎಲ್‌ಡಿಎಫ್	ಯುಡಿಎಫ್	ಬಿಜೆಪಿ+	ಇತರರು
ಪೀಪಲ್ಸ್ ಪಲ್ಸ್	55-65	75-85	0-3	0
ಜೆವಿಸಿ	52-61	72-84	3-7	0
ಪಿಮಾರ್ಕ್	62-69	71-79	1-4	0-3
ಆಕ್ಸಿಸ್ ಮೈ ಇಂಡಿಯಾ	49-62	78-90	3-7	0
ಮ್ಯಾಟ್ರಿಜ್	60-65	70-75	3-5	2-4

ಕೈ ಪಕ್ಷಕ್ಕೆ ಅಸ್ತಿತ್ವದ್ದೇ ಸಮಸ್ಯೆ: ಸಾಕಷ್ಟು ರಾಜ್ಯಗಳಲ್ಲಿ ಕಾಣಬರುವಂತೆ ಕೇರಳ ಕಾಂಗ್ರೆಸ್ ಘಟಕದಲ್ಲೂ ನಾಯಕರೊಳಗಿನ ಕಿತ್ತಾಟ, ಅಸಹನೆಅಭಿಪ್ರಾಯ ಭೇದಗಳು ಕಣ್ಣಿಗೆ ರಾಚುವಂತಿವೆ. ಪಕ್ಷವು ಕಳೆದ ಬಾರಿ ಹಿನ್ನಡೆ ಅನುಭವಿಸುವುದಕ್ಕೆ ಈ ಪರಿಸ್ಥಿತಿಯೇ ಕಾರಣವಾಗಿತ್ತು. ಹೀಗಾಗಿ ಶತಾಯಗತಾಯ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸವಾಲು ಪಕ್ಷದೆದುರು ಇತ್ತು. ಈಗ ಹೊಮ್ಮಿರುವ ಚುನಾವಣೋತ್ತರ ಸಮೀಕ್ಷೆಗಳು ಈ ನಿಟ್ಟಿನಲ್ಲಿ ಕಾಂಗ್ರೆಸ್‌ಗೆ ಕೊಂಚ ನೆಮ್ಮದಿಯನ್ನು ತರುವ ಸಾಧ್ಯತೆಯಿದೆ. 'ಇಂದಿರಾ ಗ್ಯಾರಂಟಿ' ಯೋಜನೆಗಳ ಮೂಲಕ ಯುವಜನರು ಮತ್ತು ಮಹಿಳೆಯರನ್ನು ಸೆಳೆಯುವ ಕಾರ್ಯತಂತ್ರವು ಪಕ್ಷಕ್ಕೆ ಈ ಬಾರಿ ಸಫಲತೆಯನ್ನು ತಂದುಕೊಡಲಿದೆ ಎಂದಿದೆ ಸಮೀಕ್ಷೆ.

ಕಮಲದ ಕಸರತ್ತು: ಕಳೆದ ಬಾರಿ ಕಳೆದುಕೊಂಡಿದ್ದ ಸ್ಥಾನಗಳನ್ನು ಮತ್ತೆ ದಕ್ಕಿಸಿಕೊಳ್ಳಲು ಮತ್ತು ಮತಗಳಿಕೆಯ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ಬಿಜೆಪಿ ಈ ಬಾರಿ ಸಾಕಷ್ಟು ಸರ್ಕಸ್ ಮಾಡಿರುವುದುಂಟು. ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ ಬಿಜೆಪಿ ಈ ಬಾರಿ ತನ್ನ ಕ್ಷಮತೆಯನ್ನು ವರ್ಧಿಸಿಕೊಳ್ಳಲಿರುವುದರ ಜತೆಗೆ, ಹಲವು ಕ್ಷೇತ್ರಗಳಲ್ಲಿ ತೀವ್ರ ಸ್ಪರ್ಧೆಯನ್ನು ನೀಡಲಿದೆ.

ಅಸ್ಸಾಂ: ಬಿಜೆಪಿ, ಪುದುಚೇರಿ: ಎನ್‌ಡಿಎ

ಅಸ್ಸಾಂನಲ್ಲಿ ಸತತ 3ನೇ ಬಾರಿಗೆ ವಿಜಯ ಪತಾಕೆ ಹಾರಿಸಲಿರುವ ಬಿಜೆಪಿ ಸ್ಥಾನಗಳಿಕೆಯಲ್ಲೂ ಹೆಚ್ಚಳಕ್ಕೆ ಸಾಕ್ಷಿಯಾಗಲಿದೆ ಎಂದಿವೆ ಸಮೀಕ್ಷೆಗಳು. ಪುದುಚೇರಿಯಲ್ಲೂ ಬಿಜೆಪಿ ನೇತೃತ್ವದ ಎನ್‌ಡಿಎ ಪಾಳಯ ಗೆಲುವಿನ ನಗೆ ಬೀರಲಿದೆ ಎಂಬುದು ಈ ಸಮೀಕ್ಷೆಗಳ ಅಭಿಮತ. ಕೋಷ್ಟಕಗಳು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತವೆ.

ಪುದುಚೇರಿ

ಒಟ್ಟು ಸ್ಥಾನ: 30 ಮ್ಯಾಜಿಕ್ ಸಂಖ್ಯೆ: 16

ಸಮೀಕ್ಷಾ ಸಂಸ್ಥೆ	ಬಿಜೆಪಿ+	ಕಾಂಗ್ರೆಸ್+	ಇತರರು
ಆಕ್ಸಿಸ್ ಮೈ ಇಂಡಿಯಾ	16-20	68	37
ಪೀಪಲ್ಸ್ ಪಲ್ಸ್	16-19	10-12	1-2

ಅಸ್ಸಾಂ

ಒಟ್ಟು ಸ್ಥಾನ: 126 ಮ್ಯಾಜಿಕ್ ಸಂಖ್ಯೆ: 64

ಸಮೀಕ್ಷಾ ಸಂಸ್ಥೆ	ಬಿಜೆಪಿ+	ಕಾಂಗ್ರೆಸ್+	ಇತರರು
ಪಿಮಾರ್ಕ್	82-94	30-40	1-5
ಮ್ಯಾಟ್ರಿಜ್	85-95	25-32	6-12
ಪೀಪಲ್ಸ್ ಪಲ್ಸ್	68-72	22-26	19-28
ಆಕ್ಸಿಸ್ ಮೈ ಇಂಡಿಯಾ	88-100	24-36	0-3
ಪೋಲ್ ಡೈರಿ	86-101	15-26	3-7

ಬಂಗಾಳದಲ್ಲಿ ಅರಳುವುದೇ ಬಿಜೆಪಿ ಮುಖಕಮಲ?

ಕೋಲ್ಕತ್ತಾ: 'ಬಂಗಾಳಿ ಅಸ್ಮಿತೆ' 'ಪ್ರಾದೇಶಿಕತೆ', 'ಜೊಯ್ ಬಾಂಗ್ಲಾ' ಮುಂತಾದ ಪರಿಕಲ್ಪನೆಗಳು ಮತ್ತು ಘೋಷಣೆಗಳನ್ನು ಪಟ್ಟಾಗಿ ಹಿಡಿದುಕೊಂಡು ಸತತ ಮೂರು ಅವಧಿಗೆ, ಅಂದರೆ 2011ರಿಂದಲೂ ಪಶ್ಚಿಮ ಬಂಗಾಳದ ಸಿಂಹಾಸನವನ್ನು ಅಲಂಕರಿಸಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು, ಈ ಬಾರಿ 'ಕಮಲ ಪಾಳಯ'ಕ್ಕೆ ದಾರಿಯನ್ನು ಬಿಟ್ಟುಕೊಡಬೇಕಾಗುತ್ತದೆಯೇ? ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಗೆಲುವಿನ ನಾಗಾಲೋಟವನ್ನೇ ಉಸಿರಾಗಿಸಿಕೊಂಡಿರುವ ಮಮತಾ ಬ್ಯಾನರ್ಜಿ ಎಂಬ 'ಟಿಎಂಸಿ ಕುದುರೆ'ಗೆ ಬಿಜೆಪಿಯ ಅಭ್ಯರ್ಥಿ ಸುವೇಂದು ಅಧಿಕಾರಿ ಲಗಾಮು ಹಾಕುವರೇ? ಇವು ದೇಶದ ಉದ್ದಗಲಕ್ಕೂ ಇರುವ ರಾಜಕೀಯಾಸಕ್ತರನ್ನು ಬಿಟ್ಟೂಬಿಡದೆ ಕಾಡುತ್ತಿರುವ ಪ್ರಶ್ನೆಗಳು. ಅದಕ್ಕೆ ಸ್ಪಷ್ಟ ಉತ್ತರ ಸಿಗುವ ಕಾಲ ಇನ್ನೇನು ಸನ್ನಿಹಿತವಾಗಿದೆ. ಆದರೆ ಅದಕ್ಕೂ ಮುಂಚಿತವಾಗಿ ಒಂದಿಷ್ಟು ಸಂಸ್ಥೆಗಳು ಚುನಾವಣೋತ್ತರ ಸಮೀಕ್ಷೆಯನ್ನು ಕೈಗೊಂಡಿದ್ದು ಅವುಗಳ ಸಾರಸಂಗ್ರಹ ರೂಪವನ್ನು ಇಲ್ಲಿ ನೀಡಲಾಗಿದೆ.

ಅಲ್ಲಲ್ಲಿ ಅಪಸ್ವರ, ಹಿಂಸಾಚಾರ: ಬಂಗಾಳದ ಚುನಾವಣೆ ಎಂದರೆ ಗದ್ದಲಗಲಾಟೆ, ಹುಯಿಲು ಹಿಂಸಾಚಾರ ಮಾಮೂಲು ಎಂಬುದೊಂದು ಮಾತಿದೆ. ಈ ಬಾರಿಯೂ ವಿವಿಧ ಮತಗಟ್ಟೆಗಳ ಬಳಿ ಒಂದಿಷ್ಟು ಹುಯಿಲು, ದಾಳಿ ಕಂಡುಬಂದಿದ್ದು ಹೌದಾದರೂ, ಹಿಂದಿನ ವರ್ಷಗಳಿಗೆ ಹೋಲಿಸಿದಾಗ ಅವು ಕಡಿಮೆ ಪ್ರಮಾಣದಲ್ಲಿದ್ದವು ಎಂಬುದು ಸಮಾಧಾನಕರ ಸಂಗತಿ. ಮಿಕ್ಕಂತೆ ಈ ಬಾರಿ, ರಾಜ್ಯದ ಉದ್ದಗಲದ ಎಲ್ಲ ಮತಕ್ಷೇತ್ರಗಳಲ್ಲೂ

ಏನನ್ನುತ್ತವೆ ಸಮೀಕ್ಷೆಗಳು?

ಈ ಬಾರಿ ಬಿಜೆಪಿಯು ಟಿಎಂಸಿಗಿಂತ ಮುನ್ನಡೆ ಸಾಧಿಸಿ ಗದ್ದುಗೆಯೇರುವ ಅಥವಾ ಅದರಲ್ಲಿ ಕೊಂಚವೇ ಆಚೀಚೆಯಾದರೆ ಅತಂತ್ರ ವಿಧಾನಸಭೆ ರಚನೆಯಾಗುವ ಸಾಧ್ಯತೆಗಳನ್ನು ಚುನಾವಣೋತ್ತರ ಸಮೀಕ್ಷೆಗಳು ಬಿಂಬಿಸಿವೆ. ಕಾನೂನುಸುವ್ಯವಸ್ಥೆ ಹದಗೆಟ್ಟಿರುವಿಕೆ, ಮಮತಾ ಬ್ಯಾನರ್ಜಿ ಸರಕಾರವು ಹೊರಬೇಕಾಗಿ ಬಂದಿರುವ ಭ್ರಷ್ಟಾಚಾರದ ಆರೋಪಗಳು ಸೇರಿದಂತೆ ಆಡಳಿತವಿರೋಧಿ ಅಲೆಯು ಬಿಜೆಪಿಗೆ ಅನುಕೂಲವಾಗಿ ಪರಿಣಮಿಸಿವೆ ಎಂದಿವೆ ಈ ಸಮೀಕ್ಷೆಗಳು. ಕೆಳಗೆ ನೀಡಿರುವ ಕೋಷ್ಟಕವು ಸಂಭಾವ್ಯ ಫಲಿತಾಂಶದ ನಿಟ್ಟಿನಲ್ಲಿ ಬೆಳಕು ಚೆಲ್ಲಬಲ್ಲದು.

ಒಟ್ಟು ಸ್ಥಾನಗಳು: 294 ಮ್ಯಾಜಿಕ್ ಸಂಖ್ಯೆ: 148

ಸಮೀಕ್ಷಾ ಸಂಸ್ಥೆ	ಟಿಎಂಸಿ	ಬಿಜೆಪಿ	ಕಾಂಗ್ರೆಸ್	ಎಡಪಕ್ಷ	ಇತರರು
ಪೀಪಲ್ಸ್ ಪಲ್ಸ್	177-187	95-110	1-3	0-1	0
ಪಿಮಾರ್ಕ್	118-138	150-175	0	0	2-6
ಮ್ಯಾಟ್ರಿಜ್	125-140	146-161	0	0	6-10
ಚಾಣಕ್ಯ ಸ್ಟ್ರಾಟಜೀಸ್	130-140	150-160	0	0	6-10
ಪೋಲ್ ಡೈರಿ	99-127	142-171	3-5	2-3	0-1

'ಆಡಳಿತಾರೂಢ' ಟಿಎಂಸಿ ಮತ್ತು 'ಆಡಳಿತಾಕಾಂಕ್ಷಿ' ಬಿಜೆಪಿ ನಡುವೆ ನೇರ ಜಿದ್ದಾಜಿದ್ದಿಯೇ ಕಂಡುಬಂದಿದೆ. ಮಿಕ್ಕಂತೆ, ಕಾಂಗ್ರೆಸ್ ಹಾಗೂ ಎಡಪಕ್ಷಗಳು ಹೆಚ್ಚೇನೂ ಕಾರ್ಯಕ್ಷಮತೆ ಮೆರೆಯದೆ, ಕೇವಲ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುವಂಥ ಪರಿಸ್ಥಿತಿಗೆ ಬಂಗಾಳ ಚುನಾವಣೆ ಸಾಕ್ಷಿಯಾಗಿದೆ.

ಫಲಿತಾಂಶವನ್ನು ಪ್ರಭಾವಿಸಬಲ್ಲ ಅಂಶಗಳು: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಈ ಬಾರಿಯ ಚುನಾವಣೆಯಲ್ಲಿ ವ್ಯಾಪಕ ಮತ್ತು ತೀವ್ರ ಪರಿಣಾಮ ಬೀರಿರುವ ಸಾಧ್ಯತೆಯಿದೆ.

ಮಮತಾ ಬ್ಯಾನರ್ಜಿಯವರ ಸರಕಾರದ ವಿವಿಧ ಕಲ್ಯಾಣ ಯೋಜನೆಗಳು ಮಹಿಳಾ ಮತದಾರರನ್ನು ಸೆಳೆದಿರಬಹುದಾದರೂ, 'ಸಂದೇಶ್‌ಖಲಿ' ಪ್ರದೇಶದಲ್ಲಿ ನಡೆದ ವಿಲಕ್ಷಣ, ಅಸಹನೀಯ ಘಟನೆ ಗಳಿಂದ ಮಹಿಳೆಯರು ಟಿಎಂಸಿಯಿಂದ ಅಂತರ ಕಾಯ್ದುಕೊಂಡಿರುವ ಸಾಧ್ಯತೆಯೂ ಇದೆ.

ಶುರುವಂತೆ ಗುರುಬಲ: ಕ್ರಾಂತಿ ಮಾಡ್ತಾರಂತೆ ವಿಜಯ್

ಚೆನ್ನೈ: ಚಲನಚಿತ್ರವೊಂದರ ಮುಹೂರ್ತದ ಕಾರ್ಯಕ್ರಮವೇ ಆಗಲಿ, ಚುನಾವಣೆಗೆಂದು ನಾಮಪತ್ರವನ್ನು ಸಲ್ಲಿಸುವ ಬಾಬತ್ತೇ ಆಗಲಿ, ಸಂಬಂಧಪಟ್ಟವರು ಶುಭಶಕುನಗಳಿಗಾಗಿ ಮೊರೆಹೋಗುವುದುಂಟು. ಚಲನಚಿತ್ರದ ಬಿಡುಗಡೆ ಮತ್ತು ಚುನಾವಣಾ ಫಲಿತಾಂಶ ಹೊರಹೊಮ್ಮುವ ಆಸುಪಾಸಿನ ದಿನಗಳಲ್ಲೂ ಈ ಪರಿಪಾಠ ಪುನರಾವರ್ತನೆಯಾಗುವುದುಂಟು. ಹೀಗಿರುವಾಗ, ಚಲನಚಿತ್ರನಟ ಮತ್ತು ಉದಯೋನ್ಮುಖ ರಾಜಕಾರಣಿ ಎರಡೂ ಆಗಿರುವ, 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ನಾಯಕ ವಿಜಯ್ ಅವರು ಶುಭಶಕುನಕ್ಕಾಗಿ, ಗುರುದೈವಗಳ ಆಶೀರ್ವಾದಕ್ಕಾಗಿ ತವಕಿಸಿದ್ದರಲ್ಲಿ ಅಚ್ಚರಿಯೇನೂ ಇಲ್ಲ.

ವಿಜಯ್ ಅವರು ಮೂಲತಃ ಕ್ರೈಸ್ತ ಮತವನ್ನು ಅನುಸರಿಸುತ್ತಿರುವವರು ಹೌದಾದರೂ, ವಿಧಾನಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಚರ್ಚುಗಳ ಜತೆಜತೆಗೆ ಹಿಂದೂ ದೇಗುಲಗಳು ಮತ್ತು ಮಸೀದಿಗಳಿಗೂ ಭೇಟಿ ನೀಡಿದ್ದುಂಟು. ಜಾತಿಧರ್ಮದ ಭೇದವಿಲ್ಲದೆ ವಿಜಯ್ ಇಟ್ಟ ಈ ಹೆಜ್ಜೆಯನ್ನು ಕಂಡ ಸಾಕಷ್ಟು ಮಂದಿ 'ಇದೊಂದು ಚುನಾವಣಾ ಸ್ಟಂಟ್' ಎಂದು ಕರೆದಿದ್ದೂ ಉಂಟು. ಆದರೆ, ಚುನಾವಣೆಯ ನಂತರವೂ ಅವರು ಈ ಪರಿಪಾಠವನ್ನು ಮುಂದುವರಿಸಿರುವುದರ ಏನೋ ಬಲವಾದ ಕಾರಣವಿದೆ ಎಂದು ಊಹಿಸುತ್ತಿದ್ದಾರೆ ಕೆಲವರು.

ವಿಜಯ್ ಅವರು ತಿರುಚೆಂದೂರಿನ ಮುರುಗನ್ (ಸುಬ್ರಹ್ಮಣ್ಯ ಸ್ವಾಮಿ) ದೇವಸ್ಥಾನಕ್ಕೆ ಇತ್ತೀಚೆಗಷ್ಟೇ ಭೇಟಿ ನೀಡಿದ್ದು, ಅಲ್ಲಿ ಅವರಿಗೆ ಪೂರ್ಣಕುಂಭ ಸ್ವಾಗತ ದೊರಕಿದ್ದು ಇವೆಲ್ಲಾ ಗೊತ್ತಿರುವಂಥದ್ದೇ. ಈ ನಡೆಯ ಹಿಂದಿರುವ ಕಾರಣವನ್ನು ಬೆನ್ನತ್ತಿದವರಿಗೆ ರಹಸ್ಯವೊಂದು ಗೊತ್ತಾಗಿದೆಯಂತೆ. ಕ್ರೈಸ್ತರಾಗಿದ್ದರೂ ಎಲ್ಲಾ ಧರ್ಮಗಳನ್ನು ನಂಬುವ ವಿಜಯ್ ಅವರಿಗೆ 'ರಾಶಿ ಭವಿಷ್ಯ'ದ ಮೇಲೂ ವಿಶ್ವಾಸವಿದೆಯಂತೆ. ವಿಜಯ್ ಅವರದ್ದು ಕರ್ಕಾಟಕ ರಾಶಿ. ಮುಂಬರುವ ಜೂನ್ 2ರಿಂದ ಗುರುವು ಕರ್ಕಾಟಕ ರಾಶಿಯಲ್ಲಿ ಸಂಚರಿಸುವುದರಿಂದ ಆ ರಾಶಿಯ ಸಂಜಾತರಿಗೆ ಒಳ್ಳೆಯದಾಗುತ್ತದೆ ಎಂಬುದೊಂದು ಗ್ರಹಿಕೆಯಿದೆ. ತಿರುಚೆಂದೂರಿನಲ್ಲಿರುವ ಮುರುಗನ್ ದೇವರನ್ನು ಪೂಜಿಸುವುದರಿಂದ ಕರ್ಕಾಟಕ ರಾಶಿಯವರಿಗೆ ಅಮರಿಕೊಂಡಿರುವ ದುಷ್ಟಶಕ್ತಿಗಳು ದೂರವಾಗುತ್ತವೆ ಎಂದೂ ಹೇಳಲಾಗುತ್ತದೆ. ಕರ್ಕಾಟಕ ರಾಶಿಯಲ್ಲಿ ಹುಟ್ಟಿರುವ ಮತ್ತು ರಾಜಕೀಯದಲ್ಲಿ ಗಮನಾರ್ಹ ಸ್ಥಾನಮಾನವನ್ನು ಬಯಸುತ್ತಿರುವ ವಿಜಯ್ ಈ ದೇಗುಲಕ್ಕೆ ಭೇಟಿ ನೀಡಿದ್ದು ಇದೇ ಕಾರಣಕ್ಕೆ ಎಂದು ಕೆಲವರು ಹೇಳುತ್ತಿದ್ದಾರಂತೆ!

ಇದೇ ರೀತಿಯಲ್ಲಿ, ತಿರುವರೂರಿನ ತ್ಯಾಗರಾಜ, ತಿರುವಣ್ಣಾಮಲೈನ ಅಣ್ಣಾಮಲೈಯಾರ್, ಪಳನಿಯ ದಂಡಾಯುಧಪಾಣಿ ಸ್ವಾಮಿ, ಮೈಲಾಡುತುರೈನ ವೈದೀಶ್ವರನ್ ಹಾಗೂ ಕಾಳಿಕಾಂಬಾಳ್ ದೇಗುಲಗಳನ್ನೂ ವಿಜಯ್ ಸದ್ಯದಲ್ಲೇ ಸಂದರ್ಶಿಸಲಿದ್ದಾರಂತೆ. ರಾಜಕೀಯ ಅಧಿಕಾರವನ್ನು ದಕ್ಕಿಸಿಕೊಳ್ಳುವ, ಆಡಳಿತ ಕೌಶಲವನ್ನು ಹೆಚ್ಚಿಸಿಕೊಳ್ಳುವ, ನಾಯಕತ್ವಕ್ಕೆ ಮತ್ತಷ್ಟು ಬಲವನ್ನು ತುಂಬಿಕೊಳ್ಳುವ, ರಾಜಕೀಯದ ಗುಪ್ತ ಪಿತೂರಿಗಳಿಂದ ರಕ್ಷಿಸಿಕೊಳ್ಳುವ ಆಶಯವಿರುವವರು ಈ ಐದು ದೇಗುಲಗಳಿಗೆ ಭೇಟಿಯಿತ್ತು ಪ್ರಾರ್ಥನೆ ಸಲ್ಲಿಸುವುದನ್ನು ಮೇಲ್ಪಂಕ್ತಿಯಾಗಿ ಪರಿಗಣಿಸಲಾಗಿದೆಯಂತೆ. ಈ ದೇಗುಲಗಳಿಗೆ ಭೇಟಿ ನೀಡುವ ಬಗ್ಗೆ ವಿಜಯ್‌ರಿಂದ ಅಧಿಕೃತ ಪ್ರಕಟಣೆ ಹೊಮ್ಮಿಲ್ಲವಾದರೂ, ಅಂಥದೊಂದು ಸಾಧ್ಯತೆಯಿದೆ ಎನ್ನುತ್ತಾರೆ ಬಲ್ಲವರು.

ಯುವಕಯುವತಿಯರು, ಮೊದಲ ಬಾರಿಗೆ ಮತ ಚಲಾಯಿಸಿದವರು, ಬದಲಾವಣೆಯನ್ನು ಬಯಸಿರುವವರು ಸೇರಿದಂತೆ ಗಣನೀಯ ಸಂಖ್ಯೆಯ ಜನರು ವಿಜಯ್‌ರ ಪಕ್ಷಕ್ಕೆ ಮತ ಚಲಾಯಿಸಿದ್ದಾರೆ ಎನ್ನಲಾಗುತ್ತಿದೆ. ಇದರಿಂದಾಗಿ, ವಿಜಯ್‌ಗೆ ಮುಖ್ಯಮಂತ್ರಿ ಗದ್ದುಗೆ ಒಲಿದುಬಿಡುತ್ತದೆ ಎಂದು ಈಗಿಂದೀಗಲೇ ಹೇಳಲು ಸಾಧ್ಯವಿಲ್ಲವಾದರೂ, ತಮಿಳುನಾಡಿನ ರಾಜಕಾರಣದಲ್ಲಿ ಅವರೊಂದು ಪ್ರಬಲ ಶಕ್ತಿಯಾಗಿ ಹೊರಹೊಮ್ಮುವುದಂತೂ ಖರೆ ಎನ್ನಲಾಗುತ್ತಿದೆ.

ಒಟ್ಟಿನಲ್ಲಿ, ವಿಜಯ್‌ರ 'ರಾಶಿಫಲ' ಅವರಿಗೆ ಬಯಸಿದ ಗೆಲುವನ್ನು ತಂದುಕೊಡುತ್ತದೋ ಇಲ್ಲವೋ ಎಂಬುದನ್ನು ಕಾಣಲು ಮೇ 4ರವರೆಗೆ ಕಾಯಲೇಕು.

ಕಿಂಗ್‌ಮೇಕರ್ ಆಗ್ತಾರಾ ದಳಪತಿ? ಹೀಗನ್ನುತ್ತೆ ಸಮೀಕ್ಷೆ

ಚೆನ್ನೈ: ದಶಕಗಳಿಂದಲೂ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳ ದರ್ಬಾರನ್ನೇ ನೋಡಿಕೊಂಡು ಬಂದ ತಮಿಳುನಾಡಿನ ಜನರಿಗೆ ಈ ಸಲ ಹೊಸತೊಂದು ಪರ್ಯಾಯ ಕಾಣಿಸಲಿದೆಯೇ? 'ಉದಯೋನ್ಮುಖ ರಾಜಕಾರಣಿ' ಎನಿಸಿಕೊಂಡಿರುವ ನಟ ವಿಜಯ್ ಹುಟ್ಟುಹಾಕಿರುವ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಜನರ ಆಶೋತ್ತರಗಳನ್ನು ಈಡೇರಿಸುವ ಪಕ್ಷವಾಗಿ ಹೊರಹೊಮ್ಮಲಿದೆಯೇ? ಈ ಪ್ರಶ್ನೆಗಳು ರಾಜಕೀಯಾಸಕ್ತ ಜನಸಾಮಾನ್ಯರನ್ನೂ, ರಾಜಕೀಯ ಪಂಡಿತರನ್ನೂ ಏಕಪ್ರಕಾರವಾಗಿ ಕಾಡುತ್ತಿರುವುದುಂಟು.



'ಟಿವಿಕೆ ಪಕ್ಷವು ಒಂದೇ ಗುಕ್ಕಿಗೆ ಅಧಿಕಾರದ ಗದ್ದುಗೆಯೇರುವ ಸಾಧ್ಯತೆ ಇಲ್ಲವಾದರೂ, ಅದು ರಾಜ್ಯದಲ್ಲಿ ಹೊಸ ರಾಜಕೀಯ ಅಸ್ತಿತ್ವವಾಗಿ ತನ್ನ ಛಾಪುಮೂಡಿಸುವುದಂತೂ ಖಾತ್ರಿ' ಇದು ಬಹುತೇಕರಿಂದ ಕೇಳಿಬರುತ್ತಿರುವ ಅಭಿಮತ. ಈ ಹಿನ್ನೆಲೆಯಲ್ಲಿ 'ಆಕ್ಸಿಸ್ ಮೈ ಇಂಡಿಯಾ' ಹಾಗೂ 'ಕಾಮಾಖ್ಯ ಅನಾಲಿಟಿಕ್ಸ್' ಎಂಬೆರಡು ಸಂಸ್ಥೆಗಳು ಚುನಾವಣೋತ್ತರ ಸಮೀಕ್ಷೆ ನಡೆಸಿವೆ.

ತಮಿಳುನಾಡು ವಿಧಾನಸಭೆಯಲ್ಲಿರುವುದು 234 ಸ್ಥಾನಗಳು. 'ಆಕ್ಸಿಸ್ ಮೈ ಇಂಡಿಯಾ' ಸಮೀಕ್ಷೆ ಹೇಳುವಂತೆ 'ಟಿವಿಕೆ' ಪಕ್ಷವು ತನ್ನ ಮೊದಲ ಪ್ರಯತ್ನದಲ್ಲೇ 98ರಿಂದ 120 ಸ್ಥಾನಗಳನ್ನು ಗೆಲ್ಲುವ ಮೂಲಕ ದೊಡ್ಡ ಶಕ್ತಿಯಾಗಿ ಹೊರಹೊಮ್ಮಲಿದೆ. ಆದರೆ, 'ಟಿವಿಕೆ 67ರಿಂದ 81 ಸ್ಥಾನಗಳನ್ನು ತನ್ನದಾಗಿಸಿಕೊಳ್ಳಲಿದೆ' ಎನ್ನುತ್ತದೆ 'ಕಾಮಾಖ್ಯ ಅನಾಲಿಟಿಕ್ಸ್'ನ ವರದಿ. ಇವುಗಳ ಅನ್ವಯ 'ಟಿವಿಕೆ' ಪಕ್ಷವು ರಾಜ್ಯ ರಾಜಕಾರಣದಲ್ಲಿ 'ಕಿಂಗ್‌ಮೇಕರ್' ಆಗುವುದಂತೂ ಕಟ್ಟಿಟ್ಟಬುತ್ತಿ. ಒಂದೊಮ್ಮೆ 'ಆಕ್ಸಿಸ್ ಮೈ ಇಂಡಿಯಾ' ಸಮೀಕ್ಷೆಯಲ್ಲಿ ಬಿಂಬಿತವಾಗಿರುವ ಗರಿಷ್ಠ ಸಂಖ್ಯೆಯಾದ 120 ಸ್ಥಾನಗಳನ್ನು 'ಟಿವಿಕೆ' ಬುಟ್ಟಿಗೆ ಹಾಕಿಕೊಂಡಲ್ಲಿ, ಅದು ಸಂಚಲನಾತ್ಮಕ ಬೆಳವಣಿಗೆ ಮಾತ್ರವೇ ಅಲ್ಲ, ಆಡಳಿತಾರೂಢ ಡಿಎಂಕೆಗೆ ಹಾಗೂ ಅದರ ಮಿತ್ರಪಕ್ಷಗಳಿಗೆ ಒದಗುವ ದೊಡ್ಡ ಆಘಾತವೂ ಹೌದು. ಇದು ಎಐಎಡಿಎಂಕೆ ಮತ್ತು ಅದರ ಮಿತ್ರಪಕ್ಷಗಳಿಗೂ ಅನ್ವಯವಾಗುವ ಮಾತು. ಏಕೆಂದರೆ, ಹೊಸದಾಗಿ ಅಸ್ತಿತ್ವಕ್ಕೆ ಬಂದ ಪಕ್ಷವೊಂದು ಘಟಾನುಘಟಿಗಳ ಪೈಪೋಟಿಯ ನಡುವೆಯೂ ಈ ಮಟ್ಟಿಗಿನ ಸಾಧನೆ ಮಾಡುವುದು ಅಂದುಕೊಂಡಷ್ಟು ಸುಲಭವಲ್ಲ.

ಬಹುತೇಕರಿಗೆ ಗೊತ್ತಿರುವಂತೆ ತಮಿಳುನಾಡಿನಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ಡಿಎಂಕೆ ನೇತೃತ್ವದ 'ಜಾತ್ಯತೀತ ಪ್ರಗತಿಪರ ಒಕ್ಕೂಟ', ಎಐಎಡಿಎಂಕೆ ನೇತೃತ್ವದ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ' ಹಾಗೂ ವಿಜಯ್ ನೇತೃತ್ವದ 'ಟಿವಿಕೆ' ಅಖಾಡದಲ್ಲಿದ್ದವು. ಡಿಎಂಕೆ ಪಾಳಯದಲ್ಲಿ ಕಾಂಗ್ರೆಸ್, ಡಿಎಂಡಿಕೆ, ವಿಸಿಕೆ ಮುಂತಾದ ಮಿತ್ರಪಕ್ಷಗಳಿದ್ದರೆ, ಎಐಎಡಿಎಂಕೆಗೆ ಹೆಗಲು ಕೊಟ್ಟಿದ್ದು ಬಿಜೆಪಿ ಮತ್ತು ಪಿಎಂಕೆ ಪಕ್ಷಗಳು. ಇಂಥ ಅತಿರಥ ಮಹಾರಥರು ಇರುವ ಕಾಳಗದಲ್ಲಿ ವಿಜಯ್‌ರ 'ಟಿವಿಕೆ' ಈ ಬಾರಿ 'ಕಿಂಗ್‌ಮೇಕರ್' ಆದರೆ ಅದು ನಿಜಕ್ಕೂ ಸಾಧನೆಯೇ. ಹೀಗಾಗಿ, ಚುನಾವಣೆ ಫಲಿತಾಂಶ ಪ್ರಕಟವಾಗುವ ಮೇ 4ರ ಮೇಲೆಯೇ ಎಲ್ಲರ ಕಣ್ಣೂ ನೆಟ್ಟಿವೆ.

ಚುನಾವಣಾ ಅಕ್ರಮ: ಮರುಮತದಾನಕ್ಕೆ ಆಗ್ರಹ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ 2ನೇ ಹಂತದ ಮತದಾನದ ವೇಳೆ, ಫಾಲ್ಟಾ ಕ್ಷೇತ್ರ ಸೇರಿದಂತೆ ವಿವಿಧೆಡೆ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ತಿರುಚಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಇದನ್ನು ಚುನಾವಣಾ ಆಯೋಗವು ಗಂಭೀರವಾಗಿ ಪರಿಗಣಿಸಿದೆ. ಇವಿಎಂನಲ್ಲಿ ಕೆಲ (ವಿಶೇಷವಾಗಿ ಬಿಜೆಪಿ) ಅಭ್ಯರ್ಥಿಗಳ ಬಟನ್ ಅಥವಾ ಪಕ್ಷದ ಗುರುತಿನ ಮೇಲೆ ಸೆಲೋಫೇನ್ ಟೇಪ್ ಅಂಟಿಸುವ ಮೂಲಕ ಮತ ಚಲಾವಣೆಗೆ ಅಡ್ಡಿಪಡಿಸಲಾಗಿದೆ ಎಂಬುದು ಈ ಆರೋಪದ ತಿರುಳು.



ಇಂಥ ದೂರುಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ವೆಬ್‌ಕಾಸ್ಟಿಂಗ್ ವಿಡಿಯೋಗಳನ್ನು ಮತ್ತು ಪ್ರಿಸೈಡಿಂಗ್ ಅಧಿಕಾರಿಗಳ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದೆ. ಒಂದೊಮ್ಮೆ ಅಕ್ರಮ ನಡೆದಿರುವುದು ಸಾಬೀತಾದಲ್ಲಿ, ಅಂಥ ಮತಗಟ್ಟೆಗಳಲ್ಲಿ ಮರುಮತದಾನ ನಡೆಯಲಿದೆ ಎಂದು ತಿಳಿದುಬಂದಿದೆ. ಫಾಲ್ಟಾ ಕ್ಷೇತ್ರವೊಂದರಲ್ಲೇ ಅತಿಹೆಚ್ಚಿನ ಅಂದರೆ 32 ಮತಗಟ್ಟೆಗಳಿಗೆ ಸಂಬಂಧಿಸಿ ಇಂಥ ದೂರುಗಳು ಬಂದಿದ್ದು, ಆ ಪೈಕಿ ಸುಮಾರು 20 ಮತಗಟ್ಟೆಗಳಲ್ಲಿ ಮರುಮತದಾನ ಖಚಿತ ಎನ್ನಲಾಗಿದೆ. ಒಂದೊಮ್ಮೆ ಕ್ಷೇತ್ರದ ಹೆಚ್ಚಿನ ಸಂಖ್ಯೆಯ ಮತಗಟ್ಟೆಗಳಲ್ಲಿ ಇಂಥ ಅಕ್ರಮ ನಡೆದಿರುವುದು ಖಾತ್ರಿಯಾದಲ್ಲಿ, ಇಡೀ ವಿಧಾನಸಭಾ ಕ್ಷೇತ್ರವನ್ನೇ ಮರುಮತದಾನಕ್ಕೆ ಪರಿಗಣಿಸುವ ಬಗ್ಗೆಯೂ ಆಯೋಗ ಚಿಂತನೆ ನಡೆಸಿದೆ ಎನ್ನಲಾಗಿದೆ.

ದೂರುಗಳ ಮಹಾಪೂರ: ಮರು ಮತದಾನಕ್ಕೆ ಆಗ್ರಹಿಸಿ ಫಾಲ್ಟಾ ವಿಧಾನಸಭಾ ಕ್ಷೇತ್ರ ಮಾತ್ರವಲ್ಲದೆ ಡೈಮಂಡ್ ಹಾರ್ಬರ್, ಮಗ್ರಹತ್ ಮತ್ತು ಬಡ್ಜ್ ಬಡ್ಜ್ ಪ್ರದೇಶಗಳಿಂದಲೂ ದೂರುಗಳು ಬಂದಿವೆ ಎಂದು ತಿಳಿದುಬಂದಿದೆ. ಇವು ಏಪ್ರಿಲ್ 29ರಂದು ಎರಡನೇ ಹಂತದ ಮತದಾನ ನಡೆದ ದಕ್ಷಿಣ 24 ಪರಗಣ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಾಗಿವೆ ಮತ್ತು ಹೀಗೆ ಮರುಮತದಾನಕ್ಕೆ ಆಗ್ರಹಿಸಲ್ಪಟ್ಟಿರುವ ಮತಗಟ್ಟೆಗಳ ಸಂಖ್ಯೆ 77ನ್ನು ಮುಟ್ಟಿವೆ ಎಂಬುದು ಗಮನಾರ್ಹ.

ಇವಿಎಂನ ನಿರ್ದಿಷ್ಟ ಅಭ್ಯರ್ಥಿಗಳ ಹೆಸರು/ಲಾಂಛನದ ಮೇಲೆ ಸೆಲೋಫೇನ್ ಟೇಪ್ ಅಂಟಿಸಿರುವಿಕೆ ಮಾತ್ರವಲ್ಲದೆ, ಇವಿಎಂನ ಅಸಮರ್ಪಕ ಕಾರ್ಯನಿರ್ವಹಣೆ, ಮತದಾರರನ್ನು ಬೆದರಿಸಿರುವಿಕೆ, ಬೂತ್ ಕ್ಯಾಪ್ಚರಿಂಗ್ ಅಥವಾ ಮತದಾನದ ಗೌಪ್ಯತೆ ಉಲ್ಲಂಘನೆ ಮುಂತಾದ ಅಕ್ರಮಗಳನ್ನು ಉಲ್ಲೇಖಿಸಿ ರಾಜಕೀಯ ಪಕ್ಷಗಳು/ ಅಭ್ಯರ್ಥಿಗಳು, ಮತಗಟ್ಟೆಯ ಏಜೆಂಟರು ಅಥವಾ ಚುನಾವಣಾ ವೀಕ್ಷಕರು ಮರುಮತದಾನಕ್ಕೆ ಆಗ್ರಹಿಸಿದ್ದಾರೆ ಎನ್ನಲಾಗಿದೆ.

ಪ.ಬಂಗಾಳ: ಛೋಟೆ ನವಾಬ್ ಮತದಾನ ಮಾಡಲಿಲ್ಲ! ಇದು ಎಸ್‌ಐಆರ್ ಫಲಶ್ರುತಿ

ಕೋಲ್ಕತ್ತಾ: ಇದು ಪಶ್ಚಿಮ ಬಂಗಾಳದಿಂದ ಬಂದಿರುವ ಸುದ್ದಿ. ತಮ್ಮ ಬದುಕಲ್ಲಿ ಒಮ್ಮೆಯೂ ಮತದಾನವನ್ನು ತಪ್ಪಿಸಿಕೊಂಡವರಲ್ಲ ಸೈಯದ್ ಮೊಹಮ್ಮದ್ ರೆಜಾ ಅಲಿ ಮಿರ್ಜಾ. ಇವರು ಬಂಗಾಳದ ಮುರ್ಷಿದಾಬಾದ್‌ನಲ್ಲಿ 'ಛೋಟೆ ನವಾಬ್' ಎಂದೇ ಖ್ಯಾತರು. ಪ್ರತಿ ಚುನಾವಣೆ ಬಂದಾಗಲೂ ಬೆಳಗ್ಗೆಯೇ ಮತಗಟ್ಟೆಗೆ ತೆರಳಿ ತಮ್ಮ 'ಸಂವಿಧಾನದತ್ತ' ಹಕ್ಕನ್ನು ಚಲಾಯಿಸಿ ಬರುತ್ತಿದ್ದ ಅವರು ಈ ಬಾರಿ ತಮ್ಮ ನಿಯೋಜಿತ ಮತಗಟ್ಟೆಯತ್ತ ತೆರಳಲಿಲ್ಲ.

ಮಿರ್ಜಾರ ಪುತ್ರ ಸೈಯದ್ ಮೊಹಮ್ಮದ್ ಫಹೀಂ ಅಲಿ ಮಿರ್ಜಾ ಹಾಗೂ ಅವರ ಸುಮಾರು 200 ಮಂದಿ ಸಂಬಂಧಿಕರೂ ಈ ಬಾರಿ ಮತದಾನದಿಂದ ವಿಮುಖರಾಗಬೇಕಾಯಿತು. ಕಾರಣ, ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆಯು ಇವರೆಲ್ಲರ ಮತದಾನದ ಹಕ್ಕುಗಳನ್ನು ಕಸಿದುಕೊಂಡುಬಿಟ್ಟಿತು.

ಸೈಯದ್ ರೆಜಾ ಅಲಿ ಮಿರ್ಜಾ ಅವರು, ಬಂಗಾಳದ ನವಾಬರಾಗಿದ್ದ ಮೀರ್ ಜಾಫರ್ ಅವರ ವಂಶದ 15ನೇ ತಲೆಮಾರಿನವರಂತೆ. ಮೀರ್ ಜಾಫರ್ ಅವರು ಬಂಗಾಳದ ಕೊನೆಯ ಸ್ವತಂತ್ರ ನವಾಬರಾಗಿದ್ದ ಸಿರಾಜ್-ಉದ್-ದೌಲಾರಿಗೆ ವಂಚಿಸಿದ್ದರು ಮತ್ತು 1757ರ ಪ್ಲಾಸಿ ಕದನದಲ್ಲಿ ರಾಬರ್ಟ್ ಕ್ಲೈವ್ ಜತೆ ಕೈಜೋಡಿಸಿ, ಈಸ್ಟ್ ಇಂಡಿಯಾ ಕಂಪನಿಯ ಗೆಲುವಿಗೆ ನೆರವಾಗಿದ್ದರು. ಸಿರಾಜ್-ಉದ್-ದೌಲಾರ ಸಿಂಹಾಸನದ ಪತನ ಮತ್ತು ಅವರ ಮರಣದ ನಂತರ ಈಸ್ಟ್ ಇಂಡಿಯಾ ಕಂಪನಿಯು ಮೀರ್ ಜಾಫರ್ ಅವರನ್ನು ಬಂಗಾಳದ ನವಾಬರನ್ನಾಗಿ ನೇಮಿಸಿತು. ಅವರು 1757ರಿಂದ 1760ರವರೆಗೂ ಬಂಗಾಳವನ್ನು ಆಳಿದರು ಎನ್ನುತ್ತದೆ ಇತಿಹಾಸ.

ಅದೇನೇ ಇರಲಿ, ದಶಕಗಳಿಂದಲೂ ಪ್ರತಿ ಚುನಾವಣೆಯಲ್ಲಿ ಮತ ಚಲಾಯಿಸುತ್ತಾ ಬಂದಿದ್ದ ಸೈಯದ್ ರೆಜಾ ಅಲಿ ಮಿರ್ಜಾರ ಹೆಸರು 2002ರ ಮತದಾರರ ಪಟ್ಟಿಯಲ್ಲೂ ಇತ್ತು. ಅವರ ಬಳಿಯಲ್ಲಿ ಮತದಾರರ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ಕೂಡ ಇದ್ದವು. ಅಹವಾಲು ಸಲ್ಲಿಸಲು ತಮ್ಮನ್ನು ಕರೆದ ಚುನಾವಣಾ ಆಯೋಗದ ಅಧಿಕಾರಿಗಳಿಗೆ ಸೈಯದ್ ರೆಜಾ ಅವರು ಎಲ್ಲಾ ದಾಖಲೆಗಳನ್ನೂ ನೀಡಿದರಂತೆ. ಆದರೆ, 'ಸೂಕ್ತ ದಾಖಲೆ ಸಲ್ಲಿಸಿಲ್ಲ' ಎಂದು ಹೇಳಿ ಅವರ ಹೆಸರನ್ನು ಅಳಿಸಿ ಹಾಕಿದರಂತೆ.

ಮೀರ್ ಜಾಫರ್ ಅವರ ತಲೆಮಾರಿನವರಾದ ತಾವು ಮುರ್ಷಿದಾಬಾದ್‌ನ ಇತಿಹಾಸದ ಜತೆಗೆ ತಳಕು ಹಾಕಿಕೊಂಡಿದ್ದರೂ ಮತದಾನದ ಹಕ್ಕನ್ನು ಕಳೆದುಕೊಂಡಿದ್ದು ಬೇಸರದ ಸಂಗತಿ ಎಂದೇ ಅಳಲು ತೋಡಿಕೊಂಡಿರುವ ಸೈಯದ್ ರೆಜಾ, "ಮುರ್ಷಿದಾಬಾದ್‌ನಲ್ಲಿರುವ ಅರಮನೆ ಹಾಗೂ ಇತರ ಐತಿಹಾಸಿಕ ಸ್ಮಾರಕಗಳನ್ನು ನಮ್ಮ ಪೂರ್ವಜರು ನಿರ್ಮಿಸಿರುವುದರ ದಾಖಲೆಗಳಿದ್ದರೂ, ನಮ್ಮ ಕುಟುಂಬಿಕರ ಮತ್ತು ಮೀರ್ ಜಾಫರ್ ಅವರ ಇತರ ವಂಶಸ್ಥರ ಪೌರತ್ವವನ್ನು ಪ್ರಶ್ನಿಸಿದ್ದು ನೋವಿನ ಸಂಗತಿ'' ಎಂದು ಹೇಳಿಕೊಂಡಿದ್ದಾರೆ.

ಕೋಟ್ ಆಫ್ ದಿ ಡೇ

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರ ನಕಲಿ ಪಾಸ್‌ಪೋರ್ಟ್ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನನ್ನು ಬಂಧಿಸಿ ಅವಮಾನಿಸುವ ಅಗತ್ಯವಿಲ್ಲ.

- ಪವನ್‌ಖೇರಾ
ಕಾಂಗ್ರೆಸ್ ನಾಯಕ

ಬಾಬಾರಲ್ಲಿ ಮೊರೆಯಿಟ್ಟ ವಿಜಯ್

ಶಿರಡಿ: ತಮಿಳುನಾಡು ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾಗುವುದಕ್ಕೂ ಮುನ್ನ, 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ಮುಖ್ಯಸ್ಥ ನಟ ವಿಜಯ್ ಅವರು, ಮಹಾರಾಷ್ಟ್ರದ ಶಿರಡಿಗೆ ತೆರಳಿ ಶ್ರೀ ಸಾಯಿಬಾಬಾರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದಾರೆ ಎಂದು ತಿಳಿದುಬಂದಿದೆ.

ವಿಜಯ್‌ರ ದೇಗುಲ ಭೇಟಿಯ ಮತ್ತು ಪೂಜಾ ಸಲ್ಲಿಕೆಯ ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿವೆ. ಇದಕ್ಕೂ ಮುನ್ನ ವಿಜಯ್ ತಮಿಳುನಾಡಿನ ತಿರುಚೆಂದೂರಿನ ಮುರುಗನ್ ದೇಗುಲಕ್ಕೂ ಭೇಟಿಯಿತ್ತು ಪ್ರಾರ್ಥನೆ ಸಲ್ಲಿಸಿದ್ದರು ಎಂಬುದನ್ನಿಲ್ಲಿ ಸ್ಮರಿಸಬಹುದು.

ವಿಶ್ವವಾಣಿ ಬೆಂಗಳೂರು 01-05-2026 ಶುಕ್ರವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಗೊಂದಲಗಳ ನಡುವೆಯೇ ನಗುತ್ತಾ ಸಾಗೋಣ ಬನ್ನಿ....

• ಕುಶಾಂಗಿ ಪಟೇಲ್

ಬೆಳಗ್ಗೆ ಅಲಾರಂ ಹೊಡೆಯುತ್ತದೆ. ಎದ್ದು ಹೊಸ ದಿನವನ್ನು ಉತ್ಸಾಹದಿಂದ ಆರಂಭಿಸಬೇಕು ಎಂದು ಯೋಚಿಸುತ್ತೇವೆ. ಆದರೆ ನಮ್ಮ ಕೈ ಮೊದಲು ಹೋಗುವುದು ಫೋನ್ ಕಡೆಗೆ. ನೋಟಿಫಿಕೇಶನ್ ತೆರೆದು ನೋಡಿದ ಕ್ಷಣದಲ್ಲೇ ಮನಸ್ಸಿನ ಸ್ಥಿತಿ ಬದಲಾಗುತ್ತದೆ. 'ಗುಡ್ ಮಾರ್ನಿಂಗ್' ಎಂಬ ಶಾಂತಿ ಇಲ್ಲ, 'ಇವತ್ತು ಏನು ಸವಾಲುಗಳಿವೆ?' ಎಂಬ ಪ್ರಶ್ನೆಯೇ ಮೊದಲ ಮಾತು. 'ಜೀವನ ಸಿಂಪಲ್ ಜರ್ನಿ' ಎಂದು ಕೇಳುತ್ತಾ ಬೆಳೆದ ನಾವು, ಈಗ ನೋಡಿದಾಗ ಅದು ಒಂದು ರಿಯಾಲಿಟಿ ಶೋ ಆಗಿ ಕಾಣುತ್ತದೆ. ಇಲ್ಲಿ ಸ್ಕ್ರಿಪ್ಟ್ ಇಲ್ಲ, ರಿಹರ್ಸಲ್ ಇಲ್ಲ, ಆದರೆ ತಪ್ಪುಗಳಿಗೆ ಅಂತ್ಯವೇ ಇಲ್ಲ!



ಪ್ರತಿದಿನವೂ 'ಇವತ್ತು ಹೆಲ್ದಿ ಆಗಿರಬೇಕು' ಎಂದು ನಿರ್ಧಾರ ಮಾಡುತ್ತೇವೆ. ಬೆಳಗ್ಗೆ ತುಂಬಾ ಮೋಟಿವೇಶನ್ ಇರುತ್ತದೆ. ಆದರೆ ದಿನದ ಕೊನೆಯಲ್ಲಿ ಬಿರಿಯಾನಿ ಸ್ಮೆಲ್ ಬಂದಾಕ್ಷಣ ಆ ನಿರ್ಧಾರಗಳು ಎಲ್ಲವೂ ಮಾಯವಾಗುತ್ತವೆ. ಡಯೆಟ್ ಪ್ಲಾನ್ ನಮ್ಮ WhatsApp statusನಲ್ಲಿ ಮಾತ್ರ ಪರ್ಫೆಕ್ಟ್ ಆಗಿರುತ್ತದೆ, ಆದರೆ ನಿಜಜೀವನದಲ್ಲಿ ಅದು ಪಾಲನೆ ಆಗುವುದೇ ಇಲ್ಲ. ಈ ಸಣ್ಣ-ಸಣ್ಣ ಘಟನೆಗಳು ನಮಗೆ ನಗುವನ್ನು ತರಿಸುತ್ತವೆ, ಆದರೆ ಅದೇ ಸಮಯದಲ್ಲಿ ನಮ್ಮ ಶಿಸ್ತಿನ ಬಗ್ಗೆ ಪ್ರಶ್ನೆ ಕೂಡ ಕೇಳಿಕೊಳ್ಳುವಂತೆ ಮಾಡುತ್ತವೆ.

ವಯಸ್ಸು ಹೆಚ್ಚಾಗುತ್ತಾ ಬಂದಂತೆ ಸಮಸ್ಯೆಗಳೂ ಕೂಡ ಅಪ್‌ಗ್ರೇಡ್ ಆಗುತ್ತವೆ. ಒಂದು ಕಾಲದಲ್ಲಿ ಹೋಮ್‌ವರ್ಕ್ ದೊಡ್ಡ ಸಮಸ್ಯೆಯಾಗಿತ್ತು. ಈಗ ಜೀವನವೇ ಒಂದು ದೊಡ್ಡ ಪ್ರಶ್ನೆಪತ್ರಿಕೆಯಾಗಿದೆ. ಇಪ್ಪತ್ತೈದು ವರ್ಷಕ್ಕೆ ಕನ್ನಡಿಯಲ್ಲಿ ನೋಡಿದಾಗ ಕೂದಲು ನಿಧಾನವಾಗಿ ಬಿಳಿಯಾಗುತ್ತಿರುವುದು ಕಾಣುತ್ತದೆ. ಗಡ್ಡ ಕೂಡ salt-pepper ನೋಟವನ್ನು ತಾಳುತ್ತದೆ. ಹೊರಗಿನಿಂದ ನೋಡಿದವರು ಎಕ್ಸ್‌ಪೀರಿಯನ್ಸ್ ಜಾಸ್ತಿ ಆಗಿದೆ ಎಂದು ಹೇಳಬಹುದು, ಆದರೆ ಒಳಗೆ ನಮಗೆ ಗೊತ್ತಿರುತ್ತದೆ ಉತ್ತರ. ನಾವು ಇನ್ನೂ ಸೆಟ್ಲ್ ಆಗುವ ಪ್ರಯತ್ನದಲ್ಲಿದ್ದೇವೆ, ಆದರೆ ಕಾಲ ನಮ್ಮನ್ನು ಮುಂದೆ ತಳ್ಳುತ್ತಲೇ ಇದೆ.

ಸಂಬಂಧಗಳ ವಿಷಯದಲ್ಲಿ ನಮ್ಮ ನಿರೀಕ್ಷೆಗಳು ಮತ್ತು ವಾಸ್ತವದ ನಡುವೆ ದೊಡ್ಡ ಅಂತರವಿದೆ. ನಾವು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವ ವ್ಯಕ್ತಿ ಪರ್ಫೆಕ್ಟ್ ಆಗಿರುತ್ತಾರೆ, ಅಂದರೆ-caring, understanding, always available. ಆದರೆ ನಿಜ ಜೀವನದಲ್ಲಿ ವಾಟ್ಸಾಪ್‌ನ 'Seen' ಎಂಬ ಒಂದು ಪದವೇ ಸಾಕು, ಮನಸ್ಸಿನಲ್ಲಿ ಸಾವಿರ ಪ್ರಶ್ನೆಗಳು ಹುಟ್ಟುತ್ತವೆ. ನಾವು ಏನಾದರೂ ತಪ್ಪು ಮಾಡಿದ್ದೇವೆಯೇ? ಅವರು ದೂರವಾಗುತ್ತಿದ್ದಾರೆಯೇ? ಎಂಬ ಯೋಚನೆಗಳು ನಮ್ಮನ್ನು ಬಿಡುವುದೇ ಇಲ್ಲ. ಆದರೂ ನಾವು ಮತ್ತೆಮತ್ತೆ ಅದೇ ಸಂಭಾಷಣೆಯನ್ನು ತೆರೆದು ನೋಡುತ್ತೇವೆ. ಕೆಲವೊಮ್ಮೆ ಏಕಾಂಗಿತನ ಕೂಡ ನಮ್ಮ ಜತೆ ನಿಶ್ಯಬ್ದವಾಗಿ ಬದುಕಲು ಶುರುಮಾಡುತ್ತದೆ. ಜನ ತುಂಬಾ ಇದ್ದರೂ, ಮನಸ್ಸಿಗೆ ಹತ್ತಿರವಾಗೋರು ಕಡಿಮೆ ಅನ್ನಿಸುವ ಕ್ಷಣಗಳು ಬರುತ್ತವೆ.

ಹಣದ ಸಮಸ್ಯೆಗಳು ನಮ್ಮ ಜೀವನದಲ್ಲಿ ಸದಾ ಇದ್ದೇ ಇರುತ್ತವೆ. ಜಿಮ್ ಸೇರಬೇಕು, ಜೀವನವನ್ನು ಬದಲಾಯಿಸಬೇಕು ಎಂಬ ಆಸೆ ಇರುತ್ತದೆ. ಆದರೆ ಜಿಮ್ ಶುಲ್ಕ ಕೇಳಿದಾಗ ಆ ಆಸೆಗಳು ಸ್ವಲ್ಪ ಕಡಿಮೆಯಾಗುತ್ತವೆ. ಲೈಫ್ ಪಾರ್ಟ್‌ನರ್ ಬಗ್ಗೆ ನಮ್ಮ ನಿರೀಕ್ಷೆಗಳು ತುಂಬಾ ದೊಡ್ಡದಾಗಿರುತ್ತವೆ, ಆದರೆ ನಮ್ಮ ಬ್ಯಾಂಕ್ ಬ್ಯಾಲೆನ್ಸ್ ನಮಗೆ ವಾಸ್ತವವನ್ನು ನೆನಪಿಸುತ್ತದೆ.

ಸಾಮಾಜಿಕ ಒತ್ತಡವೂ ಕಡಿಮೆಯಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಇತರರ ಜೀವನ ನೋಡಿದಾಗ 'ಎಲ್ಲರಿಗೂ ಎಲ್ಲ ಸರಿಯಿದೆ, ನನ್ನ ಬದುಕು ಮಾತ್ರ ಏಕೆ ಹೀಗಿದೆ?' ಎಂಬ ಭಾವನೆ ಆವರಿಸುತ್ತದೆ. ಅದು ಸುಳ್ಳು ಎಂದು ಮನಸ್ಸಿಗೆ ತಿಳಿದಿದ್ದರೂ, ಹೋಲಿಕೆಯ ಅಭ್ಯಾಸ ಬಿಡಲಾರದ ಚಟದಂತೆ ಇರುತ್ತದೆ.

ಕೆಲಸ ಸಿಕ್ಕಿದೆಯೇ? ಮದುವೆ ಯಾವಾಗ? ಮಕ್ಕಳೆಷ್ಟು? ಎಂಬ ಪ್ರಶ್ನೆಗಳು ನಿರಂತರವಾಗಿ ಕೇಳಲ್ಪಡುತ್ತವೆ. ಇದು ಜೀವನವೇ ಅಥವಾ rapid fire ಸುತ್ತೇ? ಎಂದು ಅನುಮಾನವಾಗುತ್ತದೆ. ಈ ಒತ್ತಡವು ಯುವಕ-ಯುವತಿಯರಿಗೆ ಮಾತ್ರವಲ್ಲ, ಎಲ್ಲ ವಯಸ್ಸಿನವರಿಗೂ ಇದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಹಂತದಲ್ಲಿ ಒಂದಿಲ್ಲೊಂದು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಇದರ ನಡುವೆ ಸಣ್ಣ ವಿಷಯಗಳೂ ದೊಡ್ಡದಾಗಿ ಕಾಣುತ್ತವೆ. ಸ್ಕೂಟರ್ ಅಥವಾ ಕಾರ್ ಚಲಾಯಿಸಲು ಬಾರದಿದ್ದರೂ ನಾವು ನಮ್ಮನ್ನು 'ಕಡಿಮೆ' ಎಂದು ಚಿತ್ರಿಸಿಕೊಂಡುಬಿಡುತ್ತೇವೆ. ಆದರೆ ನಿಜವಾಗಿ ಜೀವನವನ್ನು ನಿರ್ವಹಿಸುವುದು ಡ್ರೈವಿಂಗ್‌ಗಿಂತಲೂ ಕಷ್ಟ. ಇಲ್ಲಿ ಯಾವುದೇ signals ಇಲ್ಲ, shortcuts ಇಲ್ಲ, ಪ್ರತಿಯೊಂದು ನಿರ್ಧಾರಕ್ಕೂ ನಾವೇ ಜವಾಬ್ದಾರರು.

ಈ ಎಲ್ಲ ಗೊಂದಲಗಳ ನಡುವೆ ಒಂದು ಸತ್ಯ ಸ್ಪಷ್ಟವಾಗುತ್ತದೆ. ಅದೆಂದರೆ- ನಾವು ಒಬ್ಬರೇ ಹೋರಾಟ ಮಾಡುತ್ತಿಲ್ಲ. ನಮ್ಮ ಸುತ್ತಲೂ ಇರುವ ಪ್ರತಿಯೊಬ್ಬರೂ ತಮ್ಮ ತಮ್ಮ ಸಮಸ್ಯೆಗಳ ಜತೆ ಬದುಕುತ್ತಿದ್ದಾರೆ. ಕೆಲವರು ಅದನ್ನು ಹೊರಗೆ ತೋರಿಸುತ್ತಾರೆ, ಇನ್ನು ಕೆಲವರು ಮೌನವಾಗಿ ಹೊತ್ತಿರುತ್ತಾರೆ. ಹೊರಗಿನಿಂದ ಎಲ್ಲರೂ ಸಂತೋಷವಾಗಿರುವಂತೆ ಕಾಣಬಹುದು, ಆದರೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಅವರದೇ ಕಥೆ ಇರುತ್ತದೆ.

ಹೀಗಾಗಿ ಜೀವನವನ್ನು ತುಂಬಾ ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ. ಸ್ವಲ್ಪ ಹಾಸ್ಯಭಾವದಿಂದ ನೋಡಿದರೆ ಅದು ಹಗುರವಾಗುತ್ತದೆ. ಪರಿಪೂರ್ಣವಾಗಿರಬೇಕು ಎಂಬ ಒತ್ತಡ ಬೇಡ. ನಾವು ನಿಧಾನವಾಗಿ ಮುಂದೆ ಸಾಗುತ್ತಿದ್ದರೆ ಸಾಕು. ಹೋಲಿಕೆ ಮಾಡುವುದನ್ನು ಕಡಿಮೆ ಮಾಡಬೇಕು, ಏಕೆಂದರೆ ನಾವು ನೋಡುತ್ತಿರುವುದು ಇತರರ ಯಶಸ್ಸಿನ ಕ್ಷಣಗಳನ್ನು ಮಾತ್ರ, ಅದರ ಹಿಂದಿರುವ ಅವರ ಹೋರಾಟವನ್ನಲ್ಲ.

ಜೀವನ ನಮ್ಮನ್ನು ಪ್ರತಿದಿನ ಪರೀಕ್ಷಿಸುತ್ತದೆ, ಆದರೆ ಧೈರ್ಯ, ಸಹನೆ ಮತ್ತು ಸ್ವಲ್ಪ ಹಾಸ್ಯ ಮನೋಭಾವದೊಂದಿಗೆ ನಾವು ಉತ್ತರವನ್ನು ಕೊಡಬೇಕು ಹಾಗೂ ನಗುತ್ತಾ ಮುಂದೆ ಸಾಗಬೇಕು. ಪರಿಪೂರ್ಣವಾಗಿರಬೇಕೆಂಬ ಒತ್ತಡ ಬಿಟ್ಟು, ನಿಧಾನವಾಗಿ ಆದರೆ ಖಚಿತವಾಗಿ ಮುಂದೆ ಸಾಗಿದರೆ ಸಾಕು. ಜೀವನದ ಅತ್ಯುತ್ತಮ ಅಧ್ಯಾಯಗಳು ಇನ್ನೂ ಬರದಿದ್ದರೂ, ಅದಕ್ಕಾಗಿ ನಗುತ್ತಾ ಕಾಯಬೇಕು, ನಡೆಯುತ್ತಾ ಸಾಗಬೇಕು.

ನಮ್ಮೊಳಗಿನ ಮಗುವನ್ನು ಎಚ್ಚರಿಸೋಣ..!

• ಹೊಸ್ಮನೆ ಮುತ್ತು

'ಆರಂಭಿಕ ಮನಸ್ಸಿನಲ್ಲಿ ಅನೇಕ ಸಾಧ್ಯತೆಗಳಿವೆ; ತಜ್ಞರ ಮನಸ್ಸಿನಲ್ಲಿ ಕೆಲವೇ ಕೆಲವು' ಎನ್ನುತ್ತದೆ ಪ್ರಸಿದ್ಧ ಝೆನ್ ಗಾದೆ. ಕವಿಯೊಬ್ಬರು ಕೂಡ ಇದನ್ನೇ ಧ್ವನಿಸುತ್ತಾ, 'ಮಗುವಾಗು ಮಗುವಾಗು ಮನಸ್ಸೇ, ಎಂದೂ ಮುದಿ ಇಲ್ಲದ ಹಸಿರ ಹುಲ್ಲಾಗು' ಎಂದು ಹಾರೈಸುತ್ತಾ, 'ದೊಡ್ಡವರೆಲ್ಲರ ಹೃದಯದಿ ನಿದ್ರಿಸುತಿಹ ಕಿಶೋರತೆ ಮಕ್ಕಳ ಸಂಘದೊಳೆಚ್ಚರಗೊಂಡು, ಹಾಡಲಿ, ಕುಣಿಯಲಿ, ಹಾರಲಿ, ಆ ಆನಂದದ ದಿವ್ಯಶಿಶು' ಎನ್ನುತ್ತಾರೆ.

ಬದುಕಿನ ಜಂಜಾಟದಲ್ಲಿ ಬಳಲಿ ಬೆಂಡಾದಾಗಲೆಲ್ಲಾ, 'ಮಗುವಾಗಿದ್ದರೆ ಎಷ್ಟು ಚೆಂದ' ಎಂಬ ಆಲೋಚನೆ ಬರುವುದು ಸಹಜ. ಆವಾಗ 'ಮತ್ತೆ ಧೂಳಾಟವಾಡುವುದ ಕಲಿಸೆನಗೆ ಕಂದ, ಬಳಲಿ ಬಂದಿಹೆ ಜಗದ ಮರುಳು ರಣದಿಂದ! ಕೋಲ ಕುದುರೆಯ ಮಾಡಿ ಓಡಿಸುವುದ ಕಲಿಸು, ಕೋಗಿಲೆಯನಣಕಿಸುವ ಕಂಠವನು ಕಲಿಸು' ಎನ್ನುವ ಸಾಲುಗಳನ್ನು ಮೆಲುಕುಹಾಕುತ್ತಾ ನಾವು ದೊಡ್ಡವರಾದೆವೆಂದೋ, ಮಗುತನ ಕಳೆದುಕೊಂಡೆವೆಂದೋ ಹಳಹಳಿಸುತ್ತೇವೆ. 'ಜಗದ ಹಗೆ-ಹೊಗೆಯನ್ನು ದೂರವಾಗಿಸಿ, ನಗುವ ಮಗುವಿನ ಬಾಳ ಬಗೆಯನ್ನು ಮಿಗೆ ಎನಗೆ ಕರುಣಿಸು' ಎಂದು ಗೋಗರೆಯುತ್ತೇವೆ.

ಜೀವನವು ಒಂದು ಸುಂದರ ಪಯಣ. ಬಾಲ್ಯ, ಯೌವನ, ವೃದ್ಧಾಪ್ಯದಂಥ ವಿವಿಧ ಹಂತಗಳನ್ನು ದಾಟುತ್ತಾ ಕಾಲಚಕ್ರ ಉರುಳುತ್ತಲೇ ಇರುತ್ತದೆ. ಆದರೆ ಈ ಪಯಣದಲ್ಲಿ ಮಗುವಿನ ಮುಗ್ಧತೆ, ನಿಷ್ಕಲ್ಮಶ ಪ್ರೀತಿ ಮತ್ತು ಕುತೂಹಲವನ್ನು ಉಳಿಸಿಕೊಳ್ಳುವುದು ಒಂದು ಸವಾಲೇ ಸರಿ. ಬದುಕಿನ ಓಟದಲ್ಲಿ ಎದುರಾಗುವ ಕಠಿಣ ವಾಸ್ತವತೆಗಳು, ಒತ್ತಡ, ತಂತ್ರ, ದ್ವೇಷ ಹಾಗೂ ಸ್ವಾರ್ಥದಂಥ ಗುಣಗಳು ನಮ್ಮನ್ನು ನಮಗೇ ಅರಿಯದಂತೆ ಪರಿವರ್ತಿಸುತ್ತವೆ. ಈ ಬಾಹ್ಯ ಪ್ರಭಾವಗಳಿಂದ ನಮ್ಮ ಮನಸ್ಸು ಕಲ್ಮಶಗೊಂಡು, ನಮ್ಮೊಳಗಿನ ಸಹಜ ಗುಣಗಳಾದ ಪ್ರೀತಿ, ಕರುಣೆ ಮತ್ತು ಸಹಾನುಭೂತಿಗಳು ಮಾಯವಾಗತೊಡಗುತ್ತವೆ. ಇಂದು ಜಗತ್ತಿನಲ್ಲಿ ಹೆಚ್ಚುತ್ತಿರುವ ಹಿಂಸೆ ಮತ್ತು ಅಸೂಯೆಗೆ ಮನುಷ್ಯ ತನ್ನೊಳಗಿನ ಮಗುವನ್ನು ತಾನೇ ಕೊಂದುಕೊಂಡಿರುವುದೇ ಮುಖ್ಯ ಕಾರಣವಾಗಿದೆ.

ಮುಗ್ಧತೆಯು ಜೀವನದ ಗುಟ್ಟು: ಮುಗ್ಧತೆ ಕೇವಲ ಮಕ್ಕಳಿಗೆ ಸೀಮಿತವಾದುದಲ್ಲ. ಪಾರದರ್ಶಕ ಬದುಕು ಮತ್ತು ಸಾಮಾಜಿಕ ಸಜ್ಜನಿಕೆಗಳು ಮಾಯವಾಗುತ್ತಿರುವ ಈ ಕಾಲಘಟ್ಟದಲ್ಲಿ, ನಾವೆಲ್ಲರೂ ಮತ್ತೆ ನಮ್ಮೊಳಗಿನ ಮಗುವನ್ನು ಎಚ್ಚರಿಸಬೇಕಿದೆ. ಮಗುವು, ಹೂವಿನ ಅರಳುವಿಕೆ, ಬೀಳುವ ಎಲೆ, ಮಳೆಬಿಲ್ಲು, ಹರಿವ ನೀರು, ಚಲಿಸುವ ಮೋಡ, ಹಾರುವ ಚಿಟ್ಟೆ, ಹಕ್ಕಿಯ ಹಾರಾಟ, ಎಲ್ಲವನ್ನೂ ಅಚ್ಚರಿಯ ಕಣ್ಣುಗಳಲ್ಲಿ ನೋಡುತ್ತದೆ. ಮುಗ್ಧತೆಯ ಕನ್ನಡಕದ ಮೂಲಕ ಜಗತ್ತನ್ನು ಅರ್ಥಮಾಡಿಕೊಳ್ಳುವುದರಿಂದ ನಮಗೆ ವಿಭಿನ್ನ ದೃಷ್ಟಿಕೋನಗಳು ಮತ್ತು ಹೊಸ ಅನುಭವಗಳು ಲಭಿಸುತ್ತವೆ.

ಮತ್ತೊಂದು ಮುಖ್ಯ ಅಂಶವೆಂದರೆ, ಮಕ್ಕಳಿಗೆ ಇತರರನ್ನು ಟೀಕಿಸುವ, ಅವರ ಕುರಿತು ತೀರ್ಪು ನೀಡುವ ಅಭ್ಯಾಸವಿರುವುದಿಲ್ಲ. ಅವರು ಎಲ್ಲರನ್ನೂ ಸಮಾನವಾಗಿ ಪ್ರೀತಿಸುತ್ತಾರೆ. ನಾವು ಅಪ್ರಸ್ತುತ ವಿಷಯಗಳ ಬಗ್ಗೆ ಆತಂಕಪಡುತ್ತಾ, ಅಸೂಯೆಯಿಂದ ಇತರರನ್ನು ಟೀಕಿಸುತ್ತಾ ನಮ್ಮ ಅಮೂಲ್ಯ ಸಮಯ ಹಾಗೂ ಶಾಂತಿಯನ್ನು ಹಾಳುಮಾಡಿಕೊಳ್ಳುತ್ತೇವೆ. ಇದರ ಬದಲು ಮಗುವಿನಂತೆ ಪ್ರೀತಿ ಮತ್ತು ನಂಬಿಕೆಯಿಂದ ಪ್ರಪಂಚವನ್ನು ನೋಡಿದರೆ, ಹಿಂಸೆ ಮತ್ತು ತಾರತಮ್ಯವಿಲ್ಲದ ಸಮಾಜ ನಿರ್ಮಾಣವಾಗಬಲ್ಲದು.

ನಾವೆಲ್ಲರೂ ಮತ್ತೆ ಮಗುವಾಗಲು ಸಾಧ್ಯವೇ? ಎಂಬ ಪ್ರಶ್ನೆ ಕಾಡಬಹುದು. ಖಂಡಿತ ಸಾಧ್ಯ! ಪ್ರತಿ ಕ್ಷಣದಲ್ಲೂ ಹೊಸತನ್ನು ಕಂಡುಹಿಡಿಯುವ ಉತ್ಸಾಹ, ಸಹಜ ನಗು, ನಿರಾಳತೆ ಮತ್ತು ಷರತ್ತುಗಳಿಲ್ಲದ ಪ್ರೀತಿಯನ್ನು ಜೀವನದ ಭಾಗವಾಗಿಸಿಕೊಂಡರೆ ನಾವೂ ಮಗುವಾಗಬಹುದು. ಮುಗ್ಧತೆಯನ್ನು ಅಳವಡಿಸಿಕೊಳ್ಳುವುದು ಎಂದರೆ ಅಜ್ಞಾನವಲ್ಲ; ಅದು ಪ್ರಜ್ಞಾಪೂರ್ವಕ ಆಯ್ಕೆ. ಹೊರಜಗತ್ತಿನ ಕತ್ತಲೆಯಲ್ಲಿಯೂ ಒಳಗಿನ ಬೆಳಕನ್ನು ರಕ್ಷಿಸಿಕೊಳ್ಳುವ ಜಾಣ್ಮೆ ಅದು.

ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ಒಂದು ಮಗುವಿರುತ್ತದೆ. ನಮ್ಮ ಕನಸು, ಉತ್ಸಾಹ ಮತ್ತು ನಿಷ್ಕಪಟ ಪ್ರೀತಿಯಲ್ಲಿ ಅದು ಪ್ರತಿಫಲಿಸುತ್ತಿರುತ್ತದೆ. ಸಮಾಜದ ಒತ್ತಡಗಳು ಆ ನಿಷ್ಕಪಟತೆಯನ್ನು ಅಳಿಸಲು ಪ್ರಯತ್ನಿಸಿದರೂ, ಅದನ್ನು ಜಾಗೃತವಾಗಿರಿಸಿಕೊಂಡರೆ ಬದುಕು ಇನ್ನಷ್ಟು ಸುಂದರವಾಗುತ್ತದೆ. ನಮ್ಮ ಮನಸ್ಸು ಶುದ್ಧವಾಗಿದ್ದಷ್ಟೂ ಜೀವನವು ಆನಂದಮಯವಾಗಿರುತ್ತದೆ. ಮಾನವ ನಿರ್ಮಿತ ಈ ಕಾಲಯಂತ್ರದ ಓಟದಲ್ಲಿ, ಒಂದಿಷ್ಟು ಕಾಲವಾದರೂ ಮಗುವಾಗಿ ಸಂಭ್ರಮಿಸುವ ಬಿಡುವು ಎಲ್ಲರಿಗೂ ಸಿಗಲಿ. ಎಲ್ಲರ ಮನದಲ್ಲೂ ಆ ಮುಗ್ಧತೆಯ ಮಗು ಮರುಜನ್ಮ ತಾಳಲಿ.

ದೊಡ್ಡ ಸುದ್ದಿ

• ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ವಠಾರದಲಿ
ದೊಡ್ಡ ಸುದ್ದಿ
ಶಾಂತಿ ವಾಂತಿ
ಮಾಡಿದಳಂತೆ,
ಮದುವೆಗೆ ಮೊದಲೇ
ಮೂರು ತಿಂಗಳಂತೆ!
ಅವರಿಗೇನು ಗೊತ್ತು?
ಕಳೆದ ರಾತ್ರಿ, ಶಾಂತಿ
ಹಳಸಲು ಪಾನಿಪೂರಿ
ತಿಂದು ಮಲಗಿದ್ದು!

ಅಹುದಹುದು

'ಪ್ರಿಯೆ, ನನ್ನರಸಿ
ನೀ ನನ್ನ ಭಾಗ್ಯಜ್ಯೋತಿ'
ಎಂದಾಗ,
'ಅಹುದು ಅಹುದು'
ಎಂದುಸುರಿದ ಪತ್ನಿ
'ಚಿನ್ನಾ, ಬೀರುವಿನಲ್ಲಿಟ್ಟ
5000 ಏನಾಯಿತೇ?'
ಎಂದಾಗ
'ಯಾವುದು? ಯಾವುದು?'
ಎಂದಳು...

ಇಂದ್ರಿಯಗಳ ಪೈಪೋಟಿಯಲ್ಲಿ ಗೆದ್ದವರಾರು?

• ವಿದ್ಯಾಶಂಕರ ಶರ್ಮ, ಸಿದ್ದಾಪುರ

ಇಂದಿನ ಜೀವನದಲ್ಲಿ ಪೈಪೋಟಿಯದೇ ಕಾರುಬಾರು. ಒಬ್ಬರನ್ನೊಬ್ಬರು ಮೀರಿಸುವ ತವಕದಲ್ಲಿ ಬದುಕಿನ ಬಹುಪಾಲು ಸಮಯವನ್ನು ಕಳೆಯುತ್ತಾರೆ. ಹೋಲಿಕೆಯ ಸುಳಿಯಲ್ಲಿ ಸಿಲುಕಿ ಒಂದರ ನಂತರ ಒಂದು ಬಯಕೆಯನ್ನು ತಮ್ಮ ಗುರಿಯನ್ನಾಗಿ ಮಾಡಿಕೊಂಡು ಅದರ ಸಾಧನೆಗಾಗಿ ಪ್ರಯತ್ನದಲ್ಲಿ ತೊಡಗುವುದಕ್ಕೆ 'ಜೀವನ' ಎಂಬ ಹೆಸರನ್ನಿಟ್ಟಿದ್ದಾರೆ. ಮಾನವರ ಕತೆ ಹೀಗಾದರೆ, ಇಂದ್ರಿಯಗಳು ಕೂಡ ಒಮ್ಮೆ ಇದೇ ರೀತಿ ಸ್ಪರ್ಧೆಗೆ ಬಿದ್ದ ಕತೆಯೂ ಇದೆ. ಬಾಯಿ, ಕಣ್ಣು, ಕಿವಿ, ಮೂಗು, ಮನಸ್ಸು ಮತ್ತು ಜನನೇಂದ್ರಿಯಗಳು ತಮ್ಮ ಶ್ರೇಷ್ಠತೆಯನ್ನು ನಿರೂಪಿಸಲು ಹೊರಟವಂತೆ. ಅವೆಲ್ಲವೂ ಬ್ರಹ್ಮ ದೇವರ ಬಳಿ ಹೋದವು. 'ತಮ್ಮಲ್ಲಿ ಯಾರು ಶ್ರೇಷ್ಠರೆಂದು ಹೇಗೆ ನಿರ್ಧರಿಸುವುದು?' ಎಂಬ ಅವುಗಳ ಪ್ರಶ್ನೆಗೆ, ಬ್ರಹ್ಮ ದೇವರು ಪರಿಹಾರವೊಂದನ್ನು ಹೇಳಿದರು. 'ಯಾವುದರ ನಿರ್ಗಮನದಿಂದ ಜೀವಿಯ ದೇಹವು ಜಡವಾಗುವುದೋ ಅದೇ ಎಲ್ಲಕ್ಕಿಂತ ಶ್ರೇಷ್ಠ' ಎಂದರಂತೆ ಬ್ರಹ್ಮ ದೇವರು.

ಇದನ್ನು ಕೇಳಿದ ನಂತರ ಇಂದ್ರಿಯಗಳು ತಮ್ಮ ಸ್ಪರ್ಧೆಯನ್ನು ಆರಂಭಿಸಿದವು. ಮೊದಲು 'ಮಾತು' ದೇಹದಿಂದ ಹೊರಗೆ ಹೋಗಿ ಒಂದು ವರ್ಷದ ನಂತರ ತಿರುಗಿ ಬಂದಿತಂತೆ. ಒಂದು ವರ್ಷಕಾಲ ಜೀವಿಯು ಮೂಕನಂತೆ ವ್ಯವಹರಿಸುತ್ತ ಇತರ ಇಂದ್ರಿಯಗಳ ಸಹಾಯದಿಂದ ಬದುಕನ್ನು ನಡೆಸಿದ್ದನು. ನಂತರ ಕಣ್ಣುಗಳು ಒಂದು ವರ್ಷ ಹೊರಗೆ ಹೋಗಿ ತಿರುಗಿ ಬಂದವು. ಆ ಅವಧಿಯಲ್ಲಿ ಜೀವಿಯು ಕುರುಡನಾಗಿ ತನ್ನ ಜೀವನವನ್ನು ಕಳೆಯುತ್ತಿದ್ದನು. ತದನಂತರ ಕಿವಿಯು ಹೊರಗೆ ಹೋಗಿ, ಒಂದು ವರ್ಷದ ನಂತರ ದೇಹಕ್ಕೆ ಹಿಂತಿರುಗಿತು. ಆ ಸಮಯದಲ್ಲಿ ಕಿವುಡತನ ಕೂಡಿದ ಜೀವನ ನಡೆಸುತ್ತಿದ್ದ ಜೀವಿ. ನಂತರದ ಬಾರಿ ಮನಸ್ಸಿನದು. ಅದು ಕೂಡ ಹೊರಗೆ ಹೋಗಿ ಒಂದು ವರ್ಷದ ನಂತರ ಬಂದಿತು. ಜೀವಿಯು ಮುಗ್ಧನಂತೆ, ಏನೂ ತಿಳಿಯದನವಂತೆ ಇತರ ಇಂದ್ರಿಯಗಳ ಸಹಾಯದಿಂದ ಬದುಕಿದ್ದನು. ಇದೇ ರೀತಿ ಜನನೇಂದ್ರಿಯವು ಕೂಡ ಹೊರಗಿ ಹೋಗಿ ಒಂದು ವರ್ಷದ ನಂತರ ತಿರುಗಿ ಬಂದಿತು. ಆಗ ಜೀವಿಯು ಸಂತಾನೋತ್ಪತ್ತಿ ಇಲ್ಲದೆ ಇತರ ಇಂದ್ರಿಯಗಳ ಸಹಾಯದಿಂದ ಬದುಕಿದ್ದನು.

ಹೀಗೆ ಎಲ್ಲ ಇಂದ್ರಿಯಗಳು ತಮ್ಮ ಸರದಿಯನ್ನು ಮುಗಿಸಿದ ನಂತರ, ಪ್ರಾಣವು ಹೊರಗೆ ಹೋಗಲು ಅಣಿಯಾಯಿತು. ಆಗ, ಹೇಗೆ ಮನೆಯ ಆಧಾರವನ್ನು ಕೆಡವಿದಾಗ ಮೇಲ್ಭಾಗವು ಉರುಳಿ ಬೀಳುತ್ತದೆಯೋ, ಎಲ್ಲ ಇಂದ್ರಿಯಗಳೂ ತಮ್ಮ ಇರುವಿಕೆಯನ್ನು ಕಳೆದುಕೊಂಡವು. ಇದರಿಂದ ಪ್ರಾಣವೇ ಮಹತ್ತರವಾದುದು ಎಂಬುದನ್ನು ಇಂದ್ರಿಯಗಳು ಅರಿತವು. ಪ್ರಾಣ ಎಂದರೆ ದೇಹವನ್ನು ವ್ಯಾಪಿಸಿ, ಇಡೀ ಜಗದಲ್ಲಿ ತುಂಬಿರುವ ಆತ್ಮ ಚೈತನ್ಯವೇ ಆಗಿದೆ. ದೇಹ, ಇಂದ್ರಿಯಗಳು ಜಡ, ಅವು ಸ್ವತಂತ್ರವಾಗಿ ಕಾರ್ಯಗಳನ್ನು ಮಾಡಲಾರವು. ಆತ್ಮ ಚೈತನ್ಯದ ಬೆಳಕು ಅವುಗಳಿಗೆ ಚೇತನವನ್ನು ನೀಡಿ ಅವುಗಳನ್ನು ಕಾರ್ಯಸಮರ್ಥರನ್ನಾಗಿ ಮಾಡುತ್ತದೆ. ನಾವು ನಮ್ಮನ್ನು ದೇಹ ಎಂದು ಗುರುತಿಸಿಕೊಂಡಿದ್ದೇವೆ, ಆದರೆ ಇದು ಆತ್ಯಂತಿಕವಾದ ಸತ್ಯವಲ್ಲ ಎಂದು ವೇದಶಾಸ್ತ್ರಗಳು ಹೇಳುತ್ತವೆ. ಪ್ರತ್ಯಕ್ಷ ದೇವತೆಯಾದ ಸೂರ್ಯನು ಹೇಗೆ ಸ್ವಯಂಪ್ರಕಾಶಮಾನನಾಗಿ ಇಡೀ ಜಗತ್ತನ್ನು ಬೆಳಗುವನೋ, ಅದೇ ರೀತಿಯಲ್ಲಿ ಆತ್ಮನು ಸ್ವಯಂ ಪ್ರಕಾಶನು. ತಾನು ಪ್ರಕಾಶಿಸುತ್ತ ಸಕಲ ಚರಾಚರಗಳನ್ನು ಬೆಳಗುತ್ತಿರುವ ಶುದ್ಧ ಚೈತನ್ಯ ವಸ್ತುವೇ ಆತ್ಮನು.

ಪ್ರಾಣವು ದೇಹದಲ್ಲಿ ಇದೆಯೆಂದರೆ ಅದು ಆತ್ಮದ ಬೆಳಕಿನಿಂದ ಚೇತನಮಯವಾಗಿದೆ ಎಂದರ್ಥ. ಇದೇ ಕಾರಣಕ್ಕಾಗಿಯೇ ಉಳಿದ ಎಲ್ಲ ಇಂದ್ರಿಯಗಳು ಚ್ಯುತಿಯಾದರೂ, ಜೀವಿಯ ಇರುವಿಕೆಯು ಅಬಾಧಿತವಾಗಿತ್ತು. ಯಾವಾಗ ಪ್ರಾಣನು ಹೊರಟನೋ ಆಗ ಉಳಿದ ಎಲ್ಲ ಇಂದ್ರಿಯಗಳು ತಮ್ಮ ಶಕ್ತಿಯನ್ನು ಕಳೆದುಕೊಂಡವು. ಬ್ರಹ್ಮ ದೇವರ ಸಂದೇಶದ ಗೂಢಾರ್ಥ ಇದೇ ಆಗಿತ್ತು.

ಇಂದ್ರಿಯಗಳು ತಾವೇ ಶ್ರೇಷ್ಠರು ಎಂದು ಅಹಂನಿಂದ ಬೀಗುತ್ತಿದ್ದವು. ಇದು ಮನುಜನ ಅಹಂಕಾರದ ಪ್ರತಿರೂಪವೂ ಹೌದು. ಪ್ರಪಂಚದ ವ್ಯವಸ್ಥೆಯನ್ನು ಅಗೋಚರ ಶಕ್ತಿಯೊಂದು ನಿಯಂತ್ರಿಸುತ್ತಿದೆ ಎಂಬುದನ್ನು ಒಪ್ಪಲು ಮನುಷ್ಯನಿಗೆ ಅವನ ಗರ್ವವು ಅಡ್ಡಗಾಲಾಗಿದೆ. ಇಂದ್ರಿಯಗಳ ಪೈಪೋಟಿಯ ಕತೆಯಿಂದ ಪಾಠ ಕಲಿಯುವ ಅವಶ್ಯಕತೆ ಇದೆ. ತನ್ನದೇ ಸತ್ಕರ್ಮ ಮತ್ತು ದುಷ್ಕರ್ಮಗಳ ಕಾರಣದಿಂದ ಸುಖ, ಯಶಸ್ಸು, ದುಃಖ, ಸೋಲುಗಳು ತನಗೆ ಫಲಗಳಾಗಿ ಬರುತ್ತಿವೆ ಎಂಬುದನ್ನು ಮನುಷ್ಯ ಅರಿತರೆ ಅಹಂಕಾರದ ಪೊರೆಯು ಕಳಚಿ ಬೀಳುವುದು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

5. ಯಾವ ವಸ್ತು ಕೊಳ್ಳಬೇಕಾದರೂ ಬೇಕಾದಧನ (2)
6. ಎತ್ತು, ಕೋಣ ಮೊದಲಾದವುಗಳ ಹೆಗಲಿನ ಮೇಲೆ ಹೇರುವ ಮರದ ದಿಂಡು (2)
7. ಹೆಂಗಸು, ಮಾನಿನಿ (3)
10. ಮರ ಹತ್ತಿತೇ ಮೊಸಳೆ (3)
12. ಬೆಳಗಿನ ಜಾವ (3)
14. ಉಪಕಾರ ಮಾಡಿದವನಿಗೂ ಕೆಡುಕುಂಟುಮಾಡುವುದು (4)
15. ತಾಯಿಯ ತಂದೆ (4)
16. ಮರಿ ಬಿದ್ದಿರುವುದು ಆಳವಾದ ಪ್ರಪಾತಕ್ಕೆ (3)
18. ಮನಸ್ಸಿನ ಅಭಿಪ್ರಾಯ (3)
20. ಉದಯ ಕಾಲದಲ್ಲಿ ಕಂಡಿತು ನೀರು (3)
22. ರಾಕ್ಷಸರ ಶಿಲ್ಪಿ (2)
23. ದಾನ ಅಥವಾ ತೊರೆಯುವುದು (2)

ಮೇಲಿಂದ ಕೆಳಕ್ಕೆ

1. ವಿರಳವಾಗಿ ಬಂದಿರುವ ಹುಟ್ಟು (3)
2. ಉದ್ದವಾಗಿ ಬಾಗಿರುವ ತುತ್ತೂರಿಯಿದು (3)
3. ಎರಡು ಅಥವಾ ಹೆಚ್ಚು ನದಿಗಳು ಸೇರುವ ಸ್ಥಳ (3)
4. ನಿರುತ್ಸಾಹದಲ್ಲಿ ಮತ್ತೊಂದು ಹಾರವಿದೆ (3)
8. ಒಳ್ಳೆಯ ಸಲಹೆಯನ್ನು ಹೀಗೆನ್ನಬಹುದು (5)
9. ಬಿಸಿಮಾಡು ಎನ್ನುತ್ತಾ ಬಂದಿದೆ ದುಡ್ಡು (2)
11. ಗಾಂಧಿಯವರ ಪೂರ್ಣ ಹೆಸರಿನ ಉತ್ತರಾರ್ಧ (5)
12. ಸ್ವರ್ಗದ ವಿರುದ್ಧ ಪದ (3)
13. ಕುರಿಯ ನಡುವೆ ಇರುವ ಮಗಳು (3)
17. ಇದ್ದಿಲಿನಂತೆ ಕಾಣುವ ಶಾಯಿ (2)
18. ಆಹಾ, ಇದೇನು ಸಂತೋಷ (3)
19. ಮೃತ್ಯುದೇವನೊಂದಿಗೆ ಬಂದಿರುವ ಜೋಡಿ (3)
20. ಪುತ್ರ ತಿರುಗಿಬಿದ್ದಿರುವ ಹುಟ್ಟು (3)
21. ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 5.ಹಣ 6.ನೊಗ 7.ಮಹಿಳೆ 10.ಮಕರ 12.ನಸುಕು 14.ಅಪಕಾರ 15.ಮಾತಾಮಹ 16.ಕಮರಿ 18.ಆಶಯ 20.ಉದಕ 22.ಮಯ 23.ತ್ಯಾಗ

ಮೇಲಿಂದ ಕೆಳಕ್ಕೆ: 1.ಜನುಮ 2.ಕಹಳೆ 3.ಸಂಗಮ 4.ಬೇಸರ 8.ಹಿತೋಪದೇಶ 9.ಕಾಸು 11.ಕರಮಚಂದ 12.ನರಕ 13.ಕುಮಾರಿ 17.ಮಸಿ 18.ಆಹ್ಲಾದ 19.ಯಮಕ 20.ಉಗಮ 21.ಕಡಗ

ರಾಮಚರಿತ ಮಾನಸ: ಜ್ಞಾನದ ಸೂರ್ಯಾಸ್ತ ಮತ್ತು ರಾಮನ ಸಂದೇಶ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಯುದ್ಧಭೂಮಿಯಲ್ಲಿ ರಾವಣನು ರಕ್ತಸಿಕ್ತನಾಗಿ ಬಿದ್ದಿದ್ದಾನೆ. ಅವನ ಹತ್ತು ತಲೆಗಳ ಅಹಂಕಾರ ಮಣ್ಣು ಪಾಲಾಗಿದೆ. ಆದರೆ, ಆ ದೇಹದೊಳಗೆ ದಶೋಪನಿಷತ್ತುಗಳ ಸಾರವಿತ್ತು, ನಾಲ್ಕು ವೇದಗಳ ಪಾಂಡಿತ್ಯವಿತ್ತು. ದೂರದಿಂದಲೇ ಈ ದೃಶ್ಯವನ್ನು ನೋಡಿದ ಶ್ರೀರಾಮನು ಮರುಕಪಟ್ಟನು. ಶತ್ರುವಿನ ಸಾವು ಆತನಿಗೆ ವಿಜಯದ ಹಮ್ಮು ತರಲಿಲ್ಲ, ಬದಲಾಗಿ ಅತೀವ ವಿಷಾದವನ್ನು ತಂದಿತು.

ರಾಮನು ತನ್ನ ತಮ್ಮ ಲಕ್ಷ್ಮಣನನ್ನು ಕರೆದು ಹೀಗೆ ಹೇಳಿದನು: ''ಲಕ್ಷ್ಮಣ, ಅಲ್ಲಿ ನೋಡು, ರಾವಣನು ಪ್ರಾಣಬಿಡುತ್ತಿದ್ದಾನೆ. ಅವನು ರಾಕ್ಷಸನಾಗಿರಬಹುದು, ಆದರೆ ಅವನಂಥ ಮೇಧಾವಿ, ಶಿವಭಕ್ತ ಮತ್ತು ರಾಜನೀತಿಜ್ಞ ಈ ಭೂಮಿಯ ಮೇಲೆ ಮತ್ತೊಬ್ಬನಿಲ್ಲ. ಅವನು ಇತಿಹಾಸದ ಪುಟ ಸೇರುವ ಮುನ್ನ, ಅವನಲ್ಲಿರುವ ಜ್ಞಾನದ ಒಂದು ಕಿಡಿಯನ್ನಾದರೂ ನೀನು ಪಡೆದುಕೊಳ್ಳಬೇಕು. ಹೋಗು, ಆ ಜ್ಞಾನವೃದ್ಧನ ಪಾದದ ಬಳಿ ವಿನಮ್ರನಾಗಿ ನಿಂತು ಉಪದೇಶ ಕೇಳು''.

ತುಳಸೀದಾಸರು ರಾಮನ ಈ ಮನಸ್ಥಿತಿಯನ್ನು ಹೀಗೆ ವರ್ಣಿಸುತ್ತಾರೆ:

ಜೌಂ ಪ್ರಭು ದೀನ್ಹ ದಯಾ ಕರ ಮತಿಹೀ ।
ಸೋ ಜಾನಹಿಂ ಜೇಹಿ ದೇಹಿ ಪ್ರತೀತಿಹೀ ॥
ಗುಣ ಗ್ರಾಹಕ ರಾಮ ಕೃಪಾಲಾ ।
ರಿಪುಹು ಸಿಖಾವನ ದೀನ್ಹ ಬಿಶಾಲಾ ॥

ಭಾವಾರ್ಥ: ದಯಾಮಯಿಯಾದ ರಾಮನು ಎಷ್ಟು ಗುಣಗ್ರಾಹಿಯೆಂದರೆ, ಶತ್ರುವಿನ ಬಳಿಯೂ ಜ್ಞಾನವಿದ್ದರೆ ಅದನ್ನು ಗೌರವಿಸುವಂತೆ ತನ್ನ ಅನುಜನಿಗೆ ಸೂಚಿಸಿದನು. ಅಣ್ಣನ ಆಜ್ಞೆಯಂತೆ ಲಕ್ಷ್ಮಣನು ಹೋಗಿ ರಾವಣನ ತಲೆಯ ಹತ್ತಿರ ನಿಂತನು. ರಾವಣನು ಕಣ್ಣು ತೆರೆ ಯಲಿಲ್ಲ. ಲಕ್ಷ್ಮಣನು ಮರಳಿ ಬಂದು 'ಅಣ್ಣ, ಅವನು ಏನನ್ನೂ ಹೇಳುತ್ತಿಲ್ಲ' ಎಂದಾಗ, ರಾಮನು ಮಂದಹಾಸ ಬೀರಿ ಹೇಳಿದನು, 'ತಮ್ಮ, ಜ್ಞಾನವನ್ನು ಪಡೆಯುವವನು ಪಾದದ ಬಳಿ ವಿನಯದಿಂದ ನಿಲ್ಲಬೇಕೇ ಹೊರತು ತಲೆಯ ಬಳಿಯಲ್ಲ'.

ಲಕ್ಷ್ಮಣನು ಮರಳಿ ಹೋಗಿ ಪಾದದ ಬಳಿ ಕೈಮುಗಿದು ನಿಂತಾಗ, ರಾವಣನು ಕಣ್ಣು ಬಿಟ್ಟು ಅಂತಿಮ ಪಾಠಗಳನ್ನು ನೀಡಿದನು:

1. **ಶುಭಸ್ಯ ಶೀಘ್ರಮ್: ಲಕ್ಷ್ಮಣ, ಒಳ್ಳೆಯ ಕೆಲಸ ಮಾಡಬೇಕೆಂಬ ಆಲೋಚನೆ ಬಂದ ಕೂಡಲೇ ಅದನ್ನು ಮಾಡಿಬಿಡು. ಕೆಟ್ಟ ಕೆಲಸವನ್ನು ಮುಂದೂಡುತ್ತಾ ಹೋಗು. ನಾನು ಸ್ವರ್ಗಕ್ಕೆ ಮೆಟ್ಟಿಲು ಕಟ್ಟಬೇಕೆಂದಿದ್ದೆ, ಆದರೆ ಕಾಲಹರಣ ಮಾಡಿದೆ. ಸೀತೆಯನ್ನು ಅಪಹರಿಸುವ ಕೆಟ್ಟ ನಿರ್ಧಾರವನ್ನು ತಕ್ಷಣ ಮಾಡಿಬಿಟ್ಟೆ. ಇದೇ ನನ್ನ ಪತನಕ್ಕೆ ಕಾರಣ.**
2. **ಶತ್ರುವನ್ನು ಕಡೆಗಣಿಸಬೇಡ: ನಾನು ಮನುಷ್ಯರನ್ನು ಮತ್ತು ವಾನರರನ್ನು ತುಚ್ಛವಾಗಿ ಕಂಡೆ. ಇದೇ ನನ್ನ ಅತಿ ದೊಡ್ಡ ತಪ್ಪು. ಯಾರನ್ನೂ ಎಂದೂ ಸಣ್ಣವರೆಂದು ಭಾವಿಸಬೇಡ.**
3. **ಸಾರಥಿ ಮತ್ತು ಸೋದರ: ನನ್ನನ್ನು ಸೋಲಿಸಿದ್ದು ರಾಮನ ಬಾಣಗಳಿಗಿಂತ ಹೆಚ್ಚಾಗಿ, ನನ್ನ ಸ್ವಂತ ಸೋದರ ವಿಭೀಷಣ ನೀಡಿದ ರಹಸ್ಯಗಳು. ಮನೆಯವರನ್ನು ಮತ್ತು ಸಾರಥಿಯನ್ನು ಎಂದೂ ವಿರೋಧಿಸಿಕೊಳ್ಳಬಾರದು.**

ರಾವಣನು ಪ್ರಾಣ ಬಿಡುವಾಗ ರಾಮನಾಮವನ್ನು ಸ್ಮರಿಸಿದನು. ರಾಮನು ಆತನ ಬಳಿ ಬಂದು ಆತನ ಹಣೆಯನ್ನು ಸವರಿ, ಒಬ್ಬ ಗುರುವನ್ನು ಕಳೆದುಕೊಂಡ ಗೌರವವನ್ನು ಸಲ್ಲಿಸಿದನು. ಇದು ರಾಮನ 'ಮರ್ಯಾದಾ ಪುರುಷೋತ್ತಮ'ತ್ವ.

ನಮ್ಮ ಬದುಕಿನಲ್ಲೂ ನಾವು ಅನೇಕರನ್ನು ದ್ವೇಷಿಸುತ್ತೇವೆ. ಆದರೆ ಅವರಲ್ಲಿರುವ ಕಲೆ, ಜ್ಞಾನ ಅಥವಾ ಶ್ರಮವನ್ನು ಗೌರವಿಸುವುದನ್ನು ಕಲಿಯಬೇಕು. ವೈಯಕ್ತಿಕ ಭಿನ್ನಾಭಿಪ್ರಾಯಗಳು ಜ್ಞಾನದ ಹಾದಿಗೆ ಅಡ್ಡಿಯಾಗಬಾರದು. ರಾವಣನ ಅಂತ್ಯವು ನಮಗೆ ಹೇಳುವುದು ಇಷ್ಟೇ: ಅಹಂಕಾರವು ಎಂಥ ಜ್ಞಾನಿಯನ್ನೂ ನಾಶ ಮಾಡಬಲ್ಲದು, ಆದರೆ ವಿನಯವು ಸಾಮಾನ್ಯನನ್ನೂ ದೇವನನ್ನಾಗಿಸಬಲ್ಲದು.

ಸೀತಾ ರಾಮ ಚರಣ ರತಿ ಮೋರೆ ।
ಅನುದಿನ ಬಢವು ಅನುಗ್ರಹ ತೋರೆ ॥

ನಮ್ಮೊಳಗಿನ ರಾವಣತ್ವ ಅಳಿಯಲಿ, ರಾಮತ್ವದ ಗುಣಗ್ರಾಹಿ ದೃಷ್ಟಿ ಬೆಳಗಲಿ. ಸತ್ಯದ ಹಾದಿಯಲ್ಲಿ ನಡೆಯುವಾಗ ಸಿಗುವ ಪ್ರತಿಯೊಂದು ಅನುಭವವೂ ನಮ್ಮನ್ನು ರಾಮ ತತ್ವದ ಕಡೆಗೆ ನಡೆಸಲಿ....

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಅಭಿಷೇಕ್ ಶರ್ಮಾ
ಹೈದರಾಬಾದ್

ಪರ್ಪಲ್ ಕ್ಯಾಪ್
ಇಶಾನ್ ಮಾಲಿಂಗ
ಹೈದರಾಬಾದ್

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	8	6	1	13
ಬೆಂಗಳೂರು	8	6	2	12
ಹೈದರಾಬಾದ್	9	6	3	12
ರಾಜಸ್ಥಾನ್	9	6	3	12
ಗುಜರಾತ್	8	4	4	8
ಚೆನ್ನೈ	8	3	5	6
ಡೆಲ್ಲಿ	8	3	5	6
ಕೋಲ್ಕತಾ	8	2	5	5
ಮುಂಬೈ	8	2	6	4
ಲಖನೌ	8	2	6	4

ಗುಜರಾತ್ ಬೌಲಿಂಗ್ ದಾಳಿಗೆ ತತ್ತರಿಸಿದ ಆರ್‌ಸಿಬಿ | ತಂಡಕ್ಕೆ ಆಸರೆಯಾದ ಕನ್ನಡಿಗ ಪಡಿಕ್ಕಲ್

ಗುಜರಾತ್‌ಗೆ 156 ರನ್‌ಗಳ ಗುರಿ

ಅಹಮದಾಬಾದ್: ಇಲ್ಲಿನ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 155 ರನ್‌ಗಳಿಗೆ ಆಲೌಟ್ ಆಗಿ, ಗುಜರಾತ್ ಟೈಟಾನ್ಸ್‌ಗೆ 156 ರನ್‌ಗಳ ಗೆಲುವಿನ ಗುರಿ ನೀಡಿತು.

ಟಾಸ್ ಗೆದ್ದ ಗುಜರಾತ್ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿತು. ಇನ್ನಿಂಗ್ಸ್ ಆರಂಭಿಸಿದ ಆರ್‌ಸಿಬಿ ತಂಡವು ಸ್ಫೋಟಕ ಆರಂಭ ಪಡೆಯಿತಾದರೂ, ಕೊನೆಯ ವರೆಗೂ ಅದನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ. ವಿರಾಟ್ ಕೊಹ್ಲಿ ಮತ್ತು ಜೇಕಬ್ ಬೆಥೆಲ್ ನಡುವೆ ಮೊದಲ ವಿಕೆಟ್‌ಗೆ 34 ರನ್ ಗಳ ಜತೆಯಾಟ ಬಂದಿತು. ಬೆಥೆಲ್ ಕೇವಲ 5 ರನ್ ಗಳಿಸಿ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು.

ಕೊಹ್ಲಿ 13 ಎಸೆತಗಳಲ್ಲಿ 28 ರನ್ ಗಳಿಸಿದ್ದಾಗ ರಬಾಡ ಬೌಲಿಂಗ್‌ನಲ್ಲಿ ರಶೀದ್ ಖಾನ್‌ಗೆ ಕ್ಯಾಚ್ ನೀಡಿದರು. ಬಳಿಕ ನಾಯಕ ರಜತ್ ಪಾಟೀದಾರ್ 15 ಎಸೆತಗಳಲ್ಲಿ 19 ರನ್ ಗಳಿಸಿ ಔಟಾದರು. ಕಳಪೆ ಫಾರ್ಮ್‌ನಲ್ಲಿರುವ ಜಿತೇಶ್ ಕೇವಲ 1 ರನ್‌ಗಳಿಸಿ ವಿಕೆಟ್ ಒಪ್ಪಿಸಿ ನಿರಾಶೆ ಮೂಡಿಸಿದರು. ಸ್ಫೋಟಕ ಆಟಗಾರ ಟಿಮ್ ಡೇವಿಡ್ ಕೇವಲ ಒಂಬತ್ತು ರನ್ ಗಳಿಸಿದರು. ಕೃನಾಲ್ 4 ರನ್ ಗಳಿಸಿದರೆ, ದೇವದತ್ ಪಡಿಕ್ಕಲ್ 24 ಎಸೆತಗಳಲ್ಲಿ 40 ರನ್ ಗಳಿಸಿ ಆರ್‌ಸಿಬಿ ತಂಡಕ್ಕೆ ಆಸರೆಯಾದರು. ಗುಜರಾತ್ ಟೈಟಾನ್ಸ್ ಪರ ಅರ್ಷದ್ ಖಾನ್ 22 ರನ್‌ಗಳಿಗೆ 3 ವಿಕೆಟ್, ರಶೀದ್ ಖಾನ್ 19 ರನ್ ಗಳಿಗೆ 2 ವಿಕೆಟ್, ಜೇಸನ್ ಹೋಲ್ಡರ್ 29 ರನ್‌ಗಳಿಗೆ 2 ವಿಕೆಟ್, ಮೊಹಮ್ಮದ್ ಸಿರಾಜ್, ಕಗಿಸೋ ರಬಾಡ ತಲಾ ಒಂದು ವಿಕೆಟ್ ಪಡೆದರು.


ಆರ್‌ಸಿಬಿಗೆ ಆಸರೆಯಾದ ಪಡಿಕ್ಕಲ್.

ಕೊಹ್ಲಿ ಅಸಮಾಧಾನ

ಪಂದ್ಯದಲ್ಲಿ ರಜತ್ ಪಾಟಿದಾರ್ ಅವರ ವಿವಾದಾತ್ಮಕ ಕ್ಯಾಚ್ ಬಗ್ಗೆ ಆರ್‌ಸಿಬಿ ಮಾಜಿ ನಾಯಕ ವಿರಾಟ್ ಕೊಹ್ಲಿ ಅವರು ಫೀಲ್ಡ್ ಅಂಪೈರ್‌ಗಳ ವಿರುದ್ಧ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ತನ್ನ ತಂಡದ ನಾಯಕನ ಕ್ಯಾಚ್ ಪಡೆಯುವ ವೇಳೆ ಜೇಸನ್ ಹೋಲ್ಡರ್ ಚೆಂಡನ್ನು ನೆಲಕ್ಕೆ ತಾಗಿಸಿರುವ ದೃಶ್ಯ ಟಿ.ವಿ ರೀಪ್ಲೇನಲ್ಲಿ ಕಾಣುತ್ತಿತ್ತು, ಆದರೆ ಔಟ್ ತೀರ್ಪು ನೀಡಿರುವ ಬಗ್ಗೆ ಕೊಹ್ಲಿ ಅಂಪೈರ್‌ಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

3 ವಿಕೆಟ್ ಪಡೆದ ಅರ್ಷದ್ ಖಾನ್.

ಜೂ.12ರಿಂದ ಟಿ20 ಮಹಿಳಾ ವಿಶ್ವಕಪ್ ಕ್ರಿಕೆಟ್ | ಪಾಕ್ ವಿರುದ್ಧ ಮೊದಲ ಪಂದ್ಯ

ವಿಶ್ವಕಪ್ ಮಹಿಳಾ ತಂಡ ಘೋಷಣೆ

ದೆಹಲಿ: ಮುಂಬರುವ ಮಹಿಳಾ ಟಿ20 ವಿಶ್ವಕಪ್‌ಗಾಗಿ ಭಾರತದ ತಂಡವನ್ನು ಶನಿವಾರ ಪ್ರಕಟಿಸಲಾಗುವುದು ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ದೃಢಪಡಿಸಿದೆ. ಸಾಮಾಜಿಕ ಮಾಧ್ಯಮ ಮೂಲಕ ಈ ವಿಷಯವನ್ನು ದೃಢಪಡಿಸಿದೆ. ಟಿ20 ವಿಶ್ವಕಪ್ ತಂಡದ ಜತೆಗೆ, ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಟಿ 20 ಸರಣಿಗೂ ಬಿಸಿಸಿಐ ತಂಡವನ್ನು ಘೋಷಿಸಲಿದೆ. ಇದು ವಿಶ್ವಕಪ್ ಪ್ರದರ್ಶನದ ಮೊದಲು ತಂಡಕ್ಕೆ ಅಂತಿಮ ತಯಾರಿಗೆ ವೇದಿಕೆಯಾಗಿದೆ.

ಇತ್ತೀಚೆಗೆ ದಕ್ಷಿಣ ಆಫ್ರಿಕಾ ವಿರುದ್ಧ 4-1 ಅಂತರದ ಸೋಲನ್ನು ಅನುಭವಿಸಿದರೂ, ಈ ಸರಣಿಯಲ್ಲಿ ಆಡಿದ ಬಹುತೇಕ ಆಟಗಾರ್ತಿಯರು ತಂಡದಲ್ಲಿ ಸ್ಥಾನ ಉಳಿಸಿಕೊಳ್ಳುವ ಸಾಧ್ಯತೆಯಿದೆ, ಒಂದೆರಡು ಬದಲಾವಣೆಯ ಸಾಧ್ಯತೆ ಕಾಣಿಸಬಹುದು. ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂಧಾನಾ, ಶಫಾಲಿ ವರ್ಮಾ, ರಿಚಾ ಘೋಷ್, ದೀಪ್ತಿ ಶರ್ಮಾ ಮತ್ತು ಜೆಮಿಮಾ ರೋಡ್ರಿಗಸ್ ಮುಂತಾದ ಪ್ರಮುಖ ಆಟಗಾರ್ತಿಯರ ಜತೆ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ದೀಪ್ತಿ, ಅರುಂಧತಿ ರೆಡ್ಡಿ, ಶ್ರೀಚರಣಿ, ರಾಧಾ ಯಾದವ್ ಮತ್ತು ಕಾಶ್ವಿ ಗೌತಮ್ ಸ್ಥಾನ ಪಡೆಯಬಹುದು. ಬೌಲಿಂಗ್ ವಿಭಾಗದಲ್ಲಿ ರೇಣುಕಾ ಸಿಂಗ್ ಠಾಕೂರ್, ಕ್ರಾಂತಿ ಗೌಡ್ ಕಾಣಿಸಿಕೊಳ್ಳುವ ಸಾಧ್ಯತೆಯಿದೆ.

ಎ ಗುಂಪಿನಲ್ಲಿ ಭಾರತ: ಟಿ20 ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ನೆದರ್ಲೆಂಡ್ಸ್ ಮತ್ತು ಬಾಂಗ್ಲಾ ದೇಶ ತಂಡಗಳೊಂದಿಗೆ ಎ ಗುಂಪಿನಲ್ಲಿ ಸ್ಥಾನ ಪಡೆದಿದೆ. ಭಾರತ ತಂಡವು ಜೂನ್ 14ರಂದು ಪಾಕಿಸ್ತಾನ ವಿರುದ್ಧ ತನ್ನ ಅಭಿಯಾನವನ್ನು ಆರಂಭಿಸಲಿದ್ದು, ಜೂನ್ 17ರಂದು ಹೆಡಿಂಗ್ಲಿಯಲ್ಲಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ. ಜೂನ್ 21ರಂದು ದಕ್ಷಿಣ ವಿರುದ್ಧ ಮತ್ತು ಜೂನ್ 25ರಂದು ಬಾಂಗ್ಲಾದೇಶ ವಿರುದ್ಧದ ಮತ್ತೊಂದು ಪಂದ್ಯಕ್ಕಾಗಿ ಓಲ್ಡ್ ಟ್ರಾಫರ್ಡ್‌ಗೆ ತೆರಳಲಿದ್ದಾರೆ. ತಂಡವು ಜೂನ್ 28ರಂದು ಲಂಡನ್‌ನ ಲಾರ್ಡ್ಸ್‌ನಲ್ಲಿ ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧ ಪಂದ್ಯವನ್ನಾಡುವ ಮೂಲಕ ತನ್ನ ಲೀಗ್ ಅಭಿಯಾನವನ್ನು ಕೊನೆಗೊಳಿಸಲಿದೆ.

ಸಮಾಚಾರ ಸಣ್ಣದಲ್ಲ

ಬ್ಯಾಟ್‌ನಲ್ಲಿ ಇರೋದು ದೇವರು ನೀಡಿದ ಚಿಪ್

ದೆಹಲಿ: ನನ್ನ ಬ್ಯಾಟ್‌ಗೆ ದೇವರೇ ಎ.ಐ ಚಿಪ್ ಅಂಟಿಸಿದ್ದಾನೆ, ಈಗ ಅದನ್ನೇ ಬಳಸ್ತಿದ್ದೀನಿ ಎಂದು ಪಾಕ್ ಕ್ರಿಕೆಟ್ ತಜ್ಞ ನೌಮನ್ ಮಾತಿಗೆ ರಾಜಸ್ಥಾನ್ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ ಕೌಂಟರ್ ಕೊಟ್ಟಿದ್ದಾರೆ.

ನಿನ್ನ ಬ್ಯಾಟಿಗೆ ಏನೋ ಒಂದನ್ನು ಅಂಟಿಸಿದ್ದೇನೆ ಎಂದು ದೇವರು ನನಗೆ ಹೇಳಿಯೇ ಕಳಿಸಿದ್ದ, ಈಗ ಅದನ್ನೇ ಬಳಸುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ. ಇತ್ತೀಚೆಗಷ್ಟೇ ಪಾಕಿಸ್ತಾನದಲ್ಲಿ ನಡೆದ ಟಿ.ವಿ ಕ್ರಿಕೆಟ್ ಚರ್ಚೆಯ ಸಂದರ್ಭದಲ್ಲಿ ಪಾಕಿಸ್ತಾನ ಕ್ರಿಕೆಟ್ ತಜ್ಞ ನೌಮನ್ ನಿಯಾಜ್ ಅವರು ಹೇಳಿಕೆಯೊಂದನ್ನು ನೀಡಿದ್ದರು. ಇತ್ತೀಚಿನ ದಿನಗಳಲ್ಲಿ ಭಾರತದ ಯುವ ಕ್ರಿಕೆಟಿಗ ವೈಭವ್ ಸೂರ್ಯವಂಶಿ ತಮ್ಮ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದಿಂದಾಗಿ ಎಲ್ಲೆಡೆ ಪ್ರಶಂಸೆ ಪಡೆದಿದ್ದಾರೆ, ಆ ಬಾಲಕ ಆಟವಾಡುವಾಗ ಬ್ಯಾಟಿಂಗ್ ಶಕ್ತಿ ಹೆಚ್ಚಿಸಿಕೊಳ್ಳಲು ಬ್ಯಾಟ್‌ನಲ್ಲಿ ಎ.ಐ ಚಿಪ್ ಬಳಸಿರಬಹುದು, ಹೀಗಾಗಿ ಆತನನ್ನು ಲ್ಯಾಬ್ ಟೆಸ್ಟ್‌ಗೆ ಕಳುಹಿಸಿ ಎಂದು ಹಾಸ್ಯಮಯವಾಗಿ ಹೇಳಿದ್ದರು.

ಕಾಂಬ್ಳಿ ಐಪಿಎಲ್ ಪಂದ್ಯ ವೀಕ್ಷಣೆ

ಮುಂಬೈ: ಇಲ್ಲಿನ ವಾಂಖೆಡೆ ಸ್ಟೇಡಿಯಂನಲ್ಲಿ ಬುಧವಾರ ನಡೆದ ಮುಂಬೈ ಇಂಡಿಯನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ನಡುವೆ ನಡೆದಿದ್ದ ಐಪಿಎಲ್ ಪಂದ್ಯ ಹೃದಯಸ್ಪರ್ಶಿ ಕ್ಷಣವೊಂದಕ್ಕೆ ಸಾಕ್ಷಿಯಾಯಿತು. ಹಿಂದೊಮ್ಮೆ ಈ ಮೈದಾನದಲ್ಲಿ



ಅದ್ಭುತವಾದ ಬ್ಯಾಟಿಂಗ್ ಮೂಲಕ ಪ್ರಾಬಲ್ಯ ಸಾಧಿಸಿದ್ದ ದಿಗ್ಗಜ ವಿನೋದ್ ಕಾಂಬ್ಳಿ ಈ ಪಂದ್ಯ ವೀಕ್ಷಣೆಗೆ ವಾಂಖೆಡೆ ಸ್ಟೇಡಿಯಂಗೆ ಆಗಮಿಸಿದ ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ. ಇತ್ತೀಚೆಗಷ್ಟೇ ಅನಾರೋಗ್ಯದಿಂದ ಕಾಂಬ್ಳಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಅವರ ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿರುವುದು ಪತ್ತೆಯಾಗಿತ್ತು. ಕಳೆದ ವರ್ಷ ಮೂತ್ರಪಿಂಡದ ಸೋಂಕು ಮತ್ತು ಸ್ನಾಯು ನೋವಿನ ಚಿಕಿತ್ಸೆಗಾಗಿ ಅವರು ಥಾಣೆಯ ಆಸ್ಪತ್ರೆ ಯೊಂದರಲ್ಲಿ ದಾಖಲಾಗಿದ್ದರು. ಸುನಿಲ್ ಗವಾಸ್ಕರ್ ಮತ್ತು ಕಪಿಲ್ ದೇವ್ ಅವರಂತಹ ದಿಗ್ಗಜ ಆಟಗಾರರೂ ಸಹ ಕಾಂಬ್ಳಿಗೆ ಆರ್ಥಿಕ ನೆರವು ನೀಡಿದ್ದರು. ಬುಧವಾರ ಸಂಜೆ ಕಾಂಬ್ಳಿ ಬಿಳಿ ಬಣ್ಣದ ಚೆಕ್ಸ್ ಇರುವ ಶರ್ಟ್, ಕಂದು ಬಣ್ಣದ ಪ್ಯಾಂಟ್ ಮತ್ತು ಸ್ಪೋರ್ಟ್ಸ್ ಶೂಗಳನ್ನು ಧರಿಸಿದ್ದರು. 54 ವರ್ಷದ ಅವರು ದುರ್ಬಲವಾಗಿ ಕಾಣುತ್ತಿದ್ದು, ಕ್ರೀಡಾಂಗಣದ ಆವರಣದಲ್ಲಿ ಇಬ್ಬರು ಸಹಾಯಕರ ಸಹಾಯದ ಮೂಲಕ ನಡೆದಾಡಿದರು.

ಟಿ20: ಬಾಬರ್ ದಾಖಲೆ ಶತಕ

ಲಾಹೋರ್: ಪಾಕಿಸ್ತಾನದಲ್ಲಿ ನಡೆಯುತ್ತಿರುವ ಸೂಪರ್ ಲೀಗ್‌ನಲ್ಲಿ ಬಾಬರ್ ಅಜಂ ತಮ್ಮ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸುವ ಮೂಲಕ ಪೇಶಾವರ್ ಝುಲ್ಮಿ ತಂಡವನ್ನು ಫೈನಲ್‌ಗೆ ಕೊಂಡೊಯ್ದಿದ್ದಾರೆ. ಟೂರ್ನಿಯಲ್ಲಿ ಗರಿಷ್ಠ ಸ್ಕೋರರ್ ಆಗಿರುವ ಬಾಬರ್ ಇದೀಗ 2 ಅದ್ಭುತ ಶತಕ ಗಳಿಸಿದಂತಾಗಿದೆ.

ಈ ಶತಕದೊಂದಿಗೆ ನಾಯಕನಾಗಿ ಅತೀ ಹೆಚ್ಚು ಟಿ20 ಶತಕಗಳನ್ನು ಬಾರಿಸಿದ ವಿಶ್ವದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಬಾಬರ್ ಪಾತ್ರರಾಗಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಬಾಬರ್ ಅಜಂ 13 ಶತಕ ಪೂರ್ಣಗೊಳಿಸಿದ್ದಾರೆ, ಈ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕ ಸಿಡಿಸಿದ 2ನೇ ಬ್ಯಾಟರ್ ಎನಿಸಿಕೊಂಡಿದ್ದಾರೆ. ಕ್ರಿಸ್ ಗೇಲ್ 22 ಶತಕ ಸಿಡಿಸಿ ಅಗ್ರಸ್ಥಾನದಲ್ಲಿದ್ದರು, ಡೇವಿಡ್ ವಾರ್ನರ್ 10 ಶತಕ ಸಿಡಿಸಿ 3ನೇ ಸ್ಥಾನದಲ್ಲಿದ್ದಾರೆ.



ಮಂಗಳವಾರ ನಡೆದ ಕ್ವಾಲಿಫೈಯರ್-1 ಪಂದ್ಯದಲ್ಲಿ ಬಾಬರ್ ಅದ್ಭುತ ಶತಕ ಗಳಿಸಿ ಇಸ್ಲಾಮಾಬಾದ್ ಯುನೈಟೆಡ್ ತಂಡವನ್ನು 70 ರನ್‌ಗಳಿಂದ ಸೋಲಿಸಲು ನೆರವಾದರು. ಬಾಬರ್ ಅವರ ಇನ್ನಿಂಗ್ಸ್‌ನಿಂದಾಗಿ ಪೇಶಾವರ್ ಝುಲ್ಮಿ ಐದು ಋತುಗಳ ಬಳಿಕ ಮೊದಲ ಬಾರಿಗೆ ಪಿಎಸ್‌ಎಲ್ ಫೈನಲ್ ತಲುಪಿದೆ. ಅವರು ಕೇವಲ 59 ಎಸೆತಗಳಲ್ಲಿ 12 ಬೌಂಡರಿ ಮತ್ತು 4 ಸಿಕ್ಸರ್‌ಗಳ ನೆರವಿನಿಂದ 103 ರನ್ ಗಳಿಸಿದರು. ಮೊಹಮ್ಮದ್ ಹ್ಯಾರಿಸ್ ಅವರೊಂದಿಗೆ 72 ರನ್‌ಗಳ ಆರಂಭಿಕ ಜತೆಯಾಟವನ್ನು ಪ್ರದರ್ಶಿಸುವ ಮೂಲಕ ತಂಡಕ್ಕೆ ಬಲವಾದ ಆರಂಭವನ್ನು ನೀಡಿದರು.

ಮೊದಲು ಬ್ಯಾಟಿಂಗ್ ಮಾಡಿದ ಪೇಶಾವರ್ ಝುಲ್ಮಿ, ಬಾಬರ್ ಅಜಂ ಅವರ ಶತಕದ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 221 ಸ್ಕೋರ್ ಗಳಿಸಿತು, ಆದರೆ ಇಸ್ಲಾಮಾಬಾದ್ ಯುನೈಟೆಡ್ ತಂಡವು ಕೇವಲ 151 ರನ್‌ಗಳಿಗೆ ಆಲೌಟ್ ಆಯಿತು.

ಮುಂಬೈ ಸೋಲು: ರೋಹಿತ್ ನಿರಾಶೆ

ಮುಂಬೈ: ಬುಧವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಮುಂಬೈ ಇಂಡಿಯನ್ಸ್ ತಂಡ 6 ವಿಕೆಟ್‌ಗಳಿಂದ ಸೋಲು ಅನುಭವಿಸಿದ ಬಳಿಕ ಗಾಯದಿಂದ ಹೊರಗುಳಿದಿರುವ ಮಾಜಿ ನಾಯಕ ರೋಹಿತ್ ಶರ್ಮಾ ಡಗೌಟ್‌ನಲ್ಲಿ ಮುಖವನ್ನು ಕೈಯಿಂದ ಮುಚ್ಚಿಕೊಂಡ ಪ್ರಸಂಗ ನಡೆದಿದೆ.

ತಮ್ಮ ನಾಯಕತ್ವದಲ್ಲಿ ಐದು ಬಾರಿ ಚಾಂಪಿಯನ್ಸ್ ಮಾಡಿರುವ ತಂಡದ ಸತತ ಸೋಲುಗಳನ್ನು ನೋಡಲು ಸಾಧ್ಯವಾಗದೆ, ಅವರು ಈ ರೀತಿ ಬೇಸರ ತೋರಿಸಿದ್ದಾರೆ. 243 ರನ್‌ಗಳ ಗುರಿಯನ್ನು ನೀಡಿದರೂ ಎದುರಾಳಿ ತಂಡವನ್ನು ಕಟ್ಟಿ ಹಾಕಲು ಸಾಧ್ಯವಾಗಲಿಲ್ಲವೆಂದು ಅವರು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಪಂದ್ಯವನ್ನು ನೋಡುತ್ತಾ ಡಗೌಟ್‌ನಲ್ಲಿ ಕುಳಿತಿದ್ದ ರೋಹಿತ್ ಶರ್ಮಾ ಅಸಹಾಯಕರಾಗಿ ಕಾಣಿಸಿದ್ದರು. ಪ್ರಸ್ತುತ ನಾಯಕ ಹಾರ್ದಿಕ್ ಪಾಂಡ್ಯ ಕೂಡ ಬೌಲರ್‌ಗಳನ್ನು ಬೆಂಬಲಿಸಿ, ತಂಡವು ಬೌಲರ್‌ಗಳ ಕಾರಣದಿಂದ ವಿಫಲವಾಗಿಲ್ಲ, ಬದಲಾಗಿ ತಂಡದೊಳಗಿನ ಏಕತೆಯ ಕೊರತೆಯಿಂದ ಸಮಸ್ಯೆ ಉಂಟಾಗಿದೆ ಎಂದು ಹೇಳಿದ್ದಾರೆ.

ಪರಾಗ್‌ಗೆ ದಂಡ

ದೆಹಲಿ: ರಾಜಸ್ಥಾನ್ ರಾಯಲ್ಸ್ (ಆರ್‌ಆರ್) ತಂಡದ ನಾಯಕ ರಿಯಾನ್ ಪರಾಗ್ ಅವರಿಗೆ ಬಿಸಿಸಿಐ ದಂಡ ವಿಧಿಸಿದೆ.

ಪಂಜಾಬ್ ಕಿಂಗ್ಸ್ ವಿರುದ್ಧದ ಐಪಿಎಲ್ ಟೂರ್ನಿಯ 40ನೇ ಪಂದ್ಯದ ವೇಳೆ ಅವರು ಡ್ರೆಸ್ಸಿಂಗ್ ರೂಮ್‌ನಲ್ಲಿ ವ್ಯಾಪಿಂಗ್ (ಇ-ಸಿಗರೇಟ್ ಬಳಕೆ) ಮಾಡುತ್ತಿರುವುದು ಕಂಡುಬಂದಿತ್ತು, ಆ ಘಟನೆ ಟಿ.ವಿಯಲ್ಲೂ ಪ್ರಸಾರವಾಗಿತ್ತು. ಐಪಿಎಲ್ ನಿಯಮಗಳ ಅಡಿಯಲ್ಲಿ ಆಟಗಾರರು ಮತ್ತು ತಂಡದ ಅಧಿಕಾರಿಗಳಿಗೆ ಸಂಬಂಧಿಸಿದ ಲೆವೆಲ್-1 ನೀತಿಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿ ಅವರು ತಪ್ಪಿತಸ್ಥರೆಂದು ಕಂಡುಬಂದಿದ್ದು, ಅವರಿಗೆ ಪಂದ್ಯ ಶುಲ್ಕದ 25% ದಂಡ ವಿಧಿಸಿದೆ ಅಲ್ಲದೇ ಒಂದು ಡೀಮೆರಿಟ್ ಪಾಯಿಂಟ್ ಅನ್ನು ಸಹ ನೀಡಲಾಗಿದೆ. ಈ ಕುರಿತು ತನ್ನ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿರುವ ಐಪಿಎಲ್, ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.21 ಅನ್ನು ಉಲ್ಲಂಘಿಸಿದ್ದಾರೆ ಎಂದು ಕಂಡುಬಂದಿದೆ, ಇದು ಆಟಕ್ಕೆ ಅಪಖ್ಯಾತಿ ತರುವ ನಡವಳಿಕೆಗೆ ಸಂಬಂಧಿಸಿದೆ. ಅವರು ತಮ್ಮ ಅಪರಾಧವನ್ನು ಒಪ್ಪಿಕೊಂಡು ಮ್ಯಾಚ್ ರೆಫರಿ ಅಮಿತ್ ಶರ್ಮಾ ವಿಧಿಸಿದ ಶಿಕ್ಷೆಯನ್ನು ಸ್ವೀಕರಿಸಿದ್ದಾರೆ' ಎಂದು ಹೇಳಿದೆ.

ಇಂದು ರಾಜಸ್ಥಾನ್-ಡೆಲ್ಲಿ ಸೆಣಸಾಟ

ಜೈಪುರ: ಇಲ್ಲಿನ ಸವಾಲ್ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ರಾಜಸ್ಥಾನ್ ರಾಯಲ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ.

ಈ ಐಪಿಎಲ್ ಆವೃತ್ತಿಯಲ್ಲಿ 9 ಪಂದ್ಯಗಳನ್ನು ಆಡಿ 6 ಪಂದ್ಯಗಳನ್ನು ಗೆದ್ದು, 3 ಪಂದ್ಯಗಳಲ್ಲಿ ಸೋತು ಒಟ್ಟು 12 ಅಂಕಗಳನ್ನು ಪಡೆದಿರುವ ರಿಯಾನ್ ಪರಾಗ್ ನಾಯಕತ್ವದ ರಾಜಸ್ಥಾನ ತಂಡವು ಅಂಕಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದೆ. ತಾನಾಡಿದ 8 ಪಂದ್ಯಗಳ ಪೈಕಿ ಕೇವಲ 3ರಲ್ಲಿ ಗೆದ್ದು, 5 ಪಂದ್ಯಗಳಲ್ಲಿ ಸೋತು 6 ಅಂಕಗಳನ್ನಷ್ಟೇ ಪಡೆದಿರುವ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ.

ರಾಜಸ್ಥಾನ ತಂಡದ ಬಹುತೇಕ ಆಟಗಾರರು

ಉತ್ತಮ ಫಾರ್ಮ್‌ನಲ್ಲಿದ್ದಾರೆ. ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ-ಯಶಸ್ವಿ ಜೈಸ್ವಾಲ್ ಜೋಡಿ ಉತ್ತಮ ರನ್‌ಗಳನ್ನು ಮೊದಲ ವಿಕೆಟ್‌ಗೆ ಕಲೆ ಹಾಕುತ್ತಿದ್ದಾರೆ. ಆ ಕ್ರಮಾಂಕದ ನಂತರ ಧ್ರುವ್ ಜ್ಯುರೆಲ್ ಕೂಡಾ ಒಂದೆರಡು ಪಂದ್ಯಗಳಲ್ಲಿ ಈಗಾಗಲೇ ಮಿಂಚಿದ್ದಾರೆ. ಅದೇ ರೀತಿ ಬೌಲರ್‌ಗಳಾದ ನಾಂಡ್ರೆ ಬರ್ಗರ್ ಮತ್ತು ಜೋಫ್ರಾ ಆರ್ಚರ್ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಡೆಲ್ಲಿ ತಂಡ ಈ ಐಪಿಎಲ್ ಆವೃತ್ತಿಯಲ್ಲಿ ಇದುವರೆಗೂ ತೀರಾ ಕಳಪೆ ಮಟ್ಟದ ಪ್ರದರ್ಶನವನ್ನು ಮುಂದುವರಿಸಿದೆ. ಕೆಎಲ್ ರಾಹುಲ್, ಸಮೀರ್ ರಿಝ್ವಿ ಒಂದೆರಡು ಪಂದ್ಯಗಳಲ್ಲಷ್ಟೇ ಮಿಂಚಿದ್ದಾರೆ. ನಾಯಕ ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್ ಸೇರಿದಂತೆ ಹಲವು ಆಟಗಾರರಿಗೆ ಒಂದೇ ಒಂದು ಪಂದ್ಯದಲ್ಲಿ ಇದುವರೆಗೂ ಮಿಂಚಲು ಸಾಧ್ಯವಾಗಿಲ್ಲ. ಈ ಒಂದು ಪಂದ್ಯವನ್ನು ಕೈ ಚೆಲ್ಲಿದರೆ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಪ್ಲೇ ಆಫ್ ಪ್ರವೇಶ ಕಠಿಣವಾಗಲಿದೆ.

ಮುಖಾಮುಖಿ: ಐಪಿಎಲ್‌ನಲ್ಲಿ ಎರಡೂ ತಂಡಗಳು ಈ ವರೆಗೆ 30 ಸಲ ಮುಖಾಮುಖಿ ಆಗಿವೆ. ಆ ಪೈಕಿ 15 ಪಂದ್ಯವನ್ನು ರಾಜಸ್ಥಾನ್ ಗೆದ್ದಿದ್ದರೆ, 15 ಪಂದ್ಯವನ್ನು ಡೆಲ್ಲಿ ಗೆದ್ದಿವೆ.

ಇಂದಿನ ಪಂದ್ಯ

ರಾಜಸ್ಥಾನ್ vs ಡೆಲ್ಲಿ

ಸ್ಥಳ	:	ಸವಾಲ್ ಮಾನ್ ಸಿಂಗ್ ಸ್ಟೇಡಿಯಂ, ಜೈಪುರ
ಸಮಯ	:	ರಾತ್ರಿ 7.30 ಗಂಟೆ
ನೇರಪ್ರಸಾರ	:	ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್	:	ಜಿಯೋ ಹಾಟ್‌ಸ್ಟಾರ್

ಕಾಳಿದಾಸನ ಉಗ್ರಾವತಾರ

ಚಿತ್ರ	:	ಕೆಡಿ
ನಿರ್ದೇಶನ	:	ಜೋಗಿ ಪ್ರೇಮ್
ನಿರ್ಮಾಣ	:	ಕೆವಿಎನ್ ಪ್ರೊಡಕ್ಷನ್ಸ್
ತಾರಾಗಣ	:	ಧ್ರುವ ಸರ್ಜಾ ರೀಷ್ಮಾ ನಾಣಯ್ಯ ಶಿಲ್ಪಾ ಶೆಟ್ಟಿ, ಸಂಜಯ್ ದತ್ ರವಿಚಂದ್ರನ್, ರಮೇಶ್ ಅರವಿಂದ್, ರವಿಶಂಕರ್ ಮುಂತಾದವರು.
ರೇಟಿಂಗ್	:	★★★★

ಜೋಗಿ ಪ್ರೇಮ್ ಹಾಗೂ ಧ್ರುವ ಸರ್ಜಾ ಕಾಂಬಿನೇಷನ್‌ನ ಕೆಡಿ ಅದ್ದೂರಿಯಾಗಿ ತೆರೆಗೆ ಬಂದಿದೆ. ಕೆಡಿ ಶೀರ್ಷಿಕೆಯಂತೆ ಸಿನಿಮಾವೂ ಮಾಸ್, ಕ್ಲಾಸ್ ಆಗಿದೆ. ಆತ ಕಾಳಿದಾಸ. ಅವನಿಗೆ ತನ್ನ ಕುಟುಂಬವೇ ಸರ್ವಸ್ವ. ಅಣ್ಣನೆಂದರೆ ಕಾಳಿಗೆ ಭಯ, ಭಕ್ತಿ, ಗೌರವ. ಅಂತೆಯೇ ಡಾಕ್ ದೇವನ ಮೇಲೆಯೂ ಅಪಾರ ಅಭಿಮಾನ. ಸೀಮೆಎಣ್ಣೆ ಮಾರಿ ಜೀವನ ನಡೆಸುವ ಕಾಳಿಗೆ ಲಕ್ಷ್ಮಿಯ ಪರಿಚಯವಾಗುತ್ತದೆ. ಅದು ಮುಂದೆ ಪ್ರೀತಿಗೆ ತಿರುಗುತ್ತದೆ. ಲಕ್ಷ್ಮಿ ಬಲು ಗಯ್ಯಾಳಿ. ದೇವನ ಬಂಟನ ಕೆಂಗಣ್ಣಿಗೆ ಗುರಿಯಾಗುವ ಲಕ್ಷ್ಮಿ ಅವಮಾನಕ್ಕೀಡಾಗುತ್ತಾಳೆ. ಇದು ಕಾಳಿಯನ್ನು ರೊಚ್ಚಿಗೇಳುವಂತೆ ಮಾಡುತ್ತದೆ. ಈ ನಡುವೆಯೇ ಡಾಕ್ ದೇವ ಕೂಡ ಕಾಳಿಯ ವಿರುದ್ಧ ಮುನಿಯುತ್ತಾನೆ. ಇಡೀ ಕುಟುಂಬವನ್ನು ಕೊಲೆ ಮಾಡುವ ಬೆದರಿಕೆ ಹಾಕುತ್ತಾನೆ. ಅಷ್ಟಕ್ಕೂ ದೇವ, ಕಾಳಿದಾಸನ ವಿರುದ್ಧ ಮುನಿದಿದ್ದೇಕೆ, ಕಾಳಿ ಡಾಕು ಗ್ಯಾಂಗ್‌ನಿಂದ ತನ್ನ ಕುಟುಂಬವನ್ನು ಹೇಗೆ ಕಾಪಾಡುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಕಾಳಿದಾಸ ಯಾಕೆ ಕೆಡಿಯಾದ ಎಂಬ ಕಥೆಯನ್ನು ನಿರ್ದೇಶಕ ಪ್ರೇಮ್ ಆ್ಯಕ್ಷನ್, ಎಮೋಷನ್, ಲವ್ ಕಾಮಿಡಿ ಎಲ್ಲಾ ಅಂಶಗಳನ್ನು ಬೆರೆಸಿ ಕಟ್ಟಿಕೊಟ್ಟಿದ್ದಾರೆ. ಅಸರ ಜತೆಗೆ ಹಾಡುಗಳಿಗೂ ಪ್ರಾಮುಖ್ಯತೆ ನೀಡಿದ್ದಾರೆ. ಧ್ರುವ ಕೆಡಿಯಾಗಿ ಅಕ್ಷರಶಃ ಅಬ್ಬರಿಸಿದ್ದಾರೆ. ಚಿತ್ರದ ಮೊದಲಾರ್ಧದಲ್ಲಿ ಹಳ್ಳಿಹುಡುಗನಾಗಿ ಮುಗ್ಧತೆ ಯಲ್ಲಿ ಮನಗೆಲ್ಲುವ ಧ್ರುವ, ದ್ವಿತೀಯಾದಲ್ಲಿ ಆ್ಯಕ್ಷನ್‌ನಲ್ಲಿ ಆರ್ಭಟಿಸಿದ್ದಾರೆ. ಜತೆಗೆ ಈ ಹಿಂದಿನ ಸಿನಿಮಾದಂತೆ ಡೈಲಾಗ್ ಹೊಡೆದು ರಂಜಿಸುತ್ತಾರೆ. ಅಂತೆಯೇ ಹಾಡಿನಲ್ಲಿಯೂ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಇನ್ನು ಡಾಕ್ ದೇವನಾಗಿ ಸಂಜು ಬಾಬ ಮನಗೆಲ್ಲುತ್ತಾರೆ. ಸಂಜು ಪಾತ್ರ ಇಡೀ ಚಿತ್ರದುದ್ದಕ್ಕೂ ಸಾಗುತ್ತದೆ. ಶಿಲ್ಪಾ ಶೆಟ್ಟಿ ಕೆಲವೇ ಸನ್ನಿವೇಶಗಳಲ್ಲಿ ಕಾಣಿಸಿಕೊಂಡರೂ ಸತ್ಯವತಿಯಾಗಿ ಖದರ್ ತೋರಿದ್ದಾರೆ. ಇಡೀ ಚಿತ್ರದ ಕಥೆಗೆ ತಿರುವು ನೀಡುವ ಪಾತ್ರ ಇದಾಗಿದೆ. ರಮೇಶ್ ಅರವಿಂದ್ ಹಾಗೂ ರವಿಚಂದ್ರನ್ ಪಾತ್ರ ಗಳು ಇಲ್ಲಿ ಪ್ರಮುಖವಾಗಿದ್ದು, ಈ ಹಿಂದಿನ ಸಿನಿಮಾಗಳಿಗಿಂತ ಅವರ ಲುಕ್ ವಿಭಿನ್ನವಾಗಿದೆ. ಕಾಲಭೈರವನಾಗಿ ಕಿಚ್ಚ ಎಂಟ್ರಿಕೊಡುವ ಸನ್ನಿವೇಶ ವಂತೂ ಅದ್ಭುತವಾಗಿದೆ.

ಅರ್ಜುನ್‌ಜನ್ಯ ಸಂಗೀತ ಚಿತ್ರಕ್ಕೆ ಹೊಸತನ ತಂದಿದೆ. ಹಾಡುಗಳಂತೂ ಸಿನಿಮಾ ನೋಡಿ ಹೊರ ಬಂದ ಮೇಲೂ ಮನದಲ್ಲಿ ಗುನುಗುನಿಸು ತ್ತವೆ. ಇದು ಐವತ್ತರ ದಶಕದಲ್ಲಿ ನಡೆಯುವ ಕಥೆಯಾಗಿದ್ದು, ರೆಟ್ರೋ ಶೈಲಿಯಲ್ಲಿ ಮೂಡಿಬಂದಿದೆ. ಸಿನಿಮಾದ ಛಾಯಾಗ್ರಹಣ ಅದಕ್ಕೆ ಪೂರಕವಾಗಿದೆ. ಕೆಡಿ ಮುಂದಿನ ಭಾಗವೂ ಮೂಡಿಬರಲಿದೆ. ಒಟ್ಟಾರೆ ಕೆಡಿ ಆ್ಯಕ್ಷನ್ ಗೆ ಸೀಮಿತವಾಗಿಲ್ಲ, ಇಲ್ಲಿ ಕೌಟುಂಬಿಕ ಕಥೆಯೂ ಬೆರೆತಿದ್ದು, ಇಡೀ ಕುಟುಂಬ ಸಮೇತ ಕುಳಿತು ನೋಡಬಹುದಾಗಿದೆ.

ಜೂನ್‌ನಲ್ಲಿ ಮ್ಯಾಂಗೋ ಪಚ್ಚ



ಕಿಚ್ಚ ಸುದೀಪ್ ಅಳಿಯ ಸಂಚಿತ್ ಸಂಜೀವ್ ಅಭಿನಯದ ಬಹುನಿರೀಕ್ಷೆಯ ಮ್ಯಾಂಗೋ ಪಚ್ಚ ಸಿನಿಮಾದ ರಿಲೀಸ್ ಡೇಟ್ ಅನೌನ್ಸ್ ಆಗಿದೆ. ಸಿನಿಮಾ ಯಾವಾಗ ಎಂದು ಅಭಿಮಾನಿಗಳು ಪ್ರಶ್ನಿಸುತ್ತಿದ್ದರು. ಇದೀಗ ಅಭಿಮಾನಿಗಳ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಭಾರಿ ನಿರೀಕ್ಷೆ ಮೂಡಿಸಿರುವ ಮ್ಯಾಂಗೋ ಪಚ್ಚ ಜೂನ್ 5ಕ್ಕೆ ಬಿಡುಗಡೆಯಾಗಲಿದೆ. ಈಗಾಗಲೇ ಟೀಸರ್ ಮತ್ತು ಫಸ್ಟ್‌ಲುಕ್ ಮೂಲಕ ಅಭಿಮಾನಿಗಳ ನಿರೀಕ್ಷೆ ಹೆಚ್ಚಿಸಿರುವ ಸಂಚಿತ್‌ನನ್ನು ದೊಡ್ಡ ಪರದೆ ಮೇಲೆ ನೋಡಲು ಸಿನಿಪ್ರಿಯರು ಕಾತರದಿಂದ ಕಾಯುತ್ತಿದ್ದಾರೆ. ಮ್ಯಾಂಗೋ ಪಚ್ಚ ಕ್ರೈಂ ಥ್ರಿಲ್ಲರ್ ಸಿನಿಮಾವಾಗಿದ್ದು, ಮೈಸೂರಿನಲ್ಲಿ ನಡೆದ ನೈಜ ಘಟನೆಗಳು ಆಧರಿಸಿ ಸಿನಿಮಾರ ಕಥೆ ಹೆಣೆಯಲಾಗಿದೆ. ವಿವೇಕ ನಿರ್ದೇಶನದದಲ್ಲಿ ಸಿನಿಮಾ ಮೂಡಿಬಂದಿದೆ. ಮ್ಯಾಂಗೋ ಪಚ್ಚ, ಕೆಆರ್‌ಜಿ ಮತ್ತು ಕಿಚ್ಚ ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ಸ್‌ನಲ್ಲಿ ಜಂಟಿಯಾಗಿ ನಿರ್ಮಾಣವಾಗಿದೆ. ಸಂಚಿತ್‌ಗೆ ನಾಯಕಿಯಾಗಿ ಕಾಜಲ್ ಕುಂದರ್ ಕಾಣಿಸಿಕೊಳ್ಳುತ್ತಿದ್ದಾರೆ. ಉಳಿದಂತೆ ಮಯೂರ್ ಪಟೇಲ್, ಭಾವನಾ, ಹರಿಣಿ ಶ್ರೀಕಾಂತ್, ಜೈ ಗೋಪಿನಾಥ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಶೇಖರ್ ಚಂದ್ರ ಛಾಯಾಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಪ್ರಳಯ ರುದ್ರನಾದ ರಣವೀರ್ ಸಿಂಗ್

ಧುರಂಧರ್ ಯಶಸ್ಸಿನ ಖುಷಿಯಲ್ಲಿರುವ ರಣವೀರ್ ಸಿಂಗ್ ಮುಂದೆ ಯಾವ ಸಿನಿಮಾದಲ್ಲಿ ನಟಿಸಲಿದ್ದಾರೆ ಎಂಬ ಕುತೂಹಲ ಎಲ್ಲರನ್ನು ಕಾಡುತ್ತಿತ್ತು. ಈಗ ಅದಕ್ಕೆ ಉತ್ತರ ಸಿಕ್ಕಿದೆ. ರಣವೀರ್ ಸಿಂಗ್ ಪ್ರಳಯ್ ಚಿತ್ರದಲ್ಲಿ ನಟಿಸುವುದು ಬಹುತೇಕ ಖಚಿತವಾಗಿದೆ. ಹಾಗಾಗಿ ಧರಂಧರ್ ಬಳಿಕ ಪ್ರಳಯ ರುದ್ರನಾಗಿ ಅವತಾರ ತಾಳಲಿದ್ದಾರೆ. ಇದು ಜಾಂಬಿ ಮಾದರಿಯ ಕಥೆಯಾಗಿದ್ದು ಜೈ ಮೆಹ್ತಾ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಲಿದ್ದಾರೆ. ಪ್ರಳಯ್ ಬರೋಬ್ಬರಿ ಮುನ್ನೂರು ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ.

ಇದೇ ಆಗಸ್ಟ್‌ನಲ್ಲಿ ಸಿನಿಮಾ ಸೆಟ್ಟೇರಲಿದ್ದು, ಮುಂದಿನ ವರ್ಷದ ಅಕ್ಟೋಬರ್ ವೇಳೆಗೆ ಸಿನಿಮಾ ತೆರೆಗೆ ಬರಲಿದೆ. ದೊಡ್ಡ ತಾರಾಬಳಗವೇ ಚಿತ್ರದಲ್ಲಿರಲಿದೆ.

ಮತ್ತೆ ಒಂದಾಗಲಿದೆ ಧುರಂಧರ್ ಜೋಡಿ: ಭಾರತೀಯ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆದ ಧುರಂಧರ್ ಸಾವಿರಾರು ಕೋಟಿ ಗಳಿಸಿತು. ಈ ಸಿನಿಮಾದಲ್ಲಿ ನಟಿಸಿದ ಎಲ್ಲರಿಗೂ ಬಿಗ್ ಬ್ರೇಕ್ ಸಿಕ್ಕಿತು. ಆದಿತ್ಯ ಧಾರ್ ನಿರ್ದೇಶನದ ಈ ಚಿತ್ರದಲ್ಲಿ ರಣವೀರ್ ಸಿಂಗ್ ಮೋಡಿ ಮಾಡಿದರು. ಈಗ ಆದಿತ್ಯ ಧಾರ್ ಹಾಗೂ ರಣವೀರ್ ಸಿಂಗ್ ಮತ್ತೆ ಜತೆಯಾಗಲಿದ್ದಾರೆ. ಧುರಂಧರ್ ಬಳಿಕ ನಿರ್ದೇಶಕ ಆದಿತ್ಯ ಧಾರ್ ಮತ್ತೊಂದು ಕಥೆ ಹೆಣೆದಿದ್ದು ಅದನ್ನು ರಣವೀರ್ ಸಿಂಗ್ ಅವರಿಗೂ ಹೇಳಿದ್ದಾರೆ. ಕಥೆ ಕೇಳಿ ಮೆಚ್ಚಿರುವ ರಣವೀರ್ ಸಿನಿಮಾದಲ್ಲಿ ನಟಿಸಲು ಸಂತಸದಿಂದ ಸಮ್ಮತಿಸಿದ್ದಾರೆ. ಹಾಗಾಗಿ ಈ ವರ್ಷಾಂತ್ಯಕ್ಕೆ ಸಿನಿಮಾ ಸೆಟ್ಟೇರುವ ನಿರೀಕ್ಷೆ ಇದೆ.